ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

ಮಾರ್ಚ್ 21 ಶುಕ್ರವಾರ 2025

₹4

ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23
ನಗರ ಕಚೇರಿಗಳು: ಕೆ.ಆರ್. ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695
ಸುದ್ದಿ ಜಾಹೀರಾತಿಗಾಗಿ–ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871

ಸಂಪುಟ: 45 | ಸಂಚಿಕೆ: 331 | ಪುಟಗಳು: 12

ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com, website: www.mysurumithra.com

ಮೈಸೂರು ಮಿತ್ರ ಶುಕ್ರವಾರ 21 ಮಾರ್ಚ್ 2025

ಎಷ್ಟೇ ವಿರೋಧಿಸಿದರೂ ಅಲ್ಪಸಂಖ್ಯಾತರಿಗೆ ಗುತ್ತಿಗೆಯಲ್ಲಿ ಶೇ.4ರಷ್ಟು ಮೀಸಲಾತಿ

ವಿಪಕ್ಷಗಳಿಗೆ ಕೆಪಿಸಿಸಿ ವಕ್ತಾರ ಲಕ್ಷ್ಮಣ್ ಟಾಂಗ್



ಮೈಸೂರು, ಮಾ.20 (ಬಿಎಲ್‌ಯು)– ಯಾರು ಎಷ್ಟೇ ವಿರೋಧ ಮಾಡಿದರೂ ಅಲ್ಪಸಂಖ್ಯಾತರಿಗೆ ಗುತ್ತಿಗೆಯಲ್ಲಿ ಶೇ.4ರಷ್ಟು ಮೀಸಲಾತಿ ನೀಡೇ ನೀಡುತ್ತೇವೆ ಎಂದು ಕೆಪಿಸಿಸಿ ವಕ್ತಾರ ಎಂ.ಲಕ್ಷ್ಮಣ ವಿರೋಧ ಪಕ್ಷಗಳಿಗೆ ಟಾಂಗ್ ನೀಡಿದ್ದಾರೆ.

ನಗರದ ಕಾಂಗ್ರೆಸ್ ಭವನದಲ್ಲಿ ಇಂದು ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಅಲ್ಪಸಂಖ್ಯಾತರಲ್ಲಿ ಮುಸ್ಲಿಂರು ಮಾತ್ರವಲ್ಲದೆ ಕ್ರಿಶ್ಚಿಯನ್, ಜೈನರು, ಬೌದ್ಧರು ಸೇರಿದಂತೆ ಹಲವು ಧರ್ಮದವರು ಇದ್ದಾರೆ. ಆದರೆ ಇದರಲ್ಲಿ ಮುಸ್ಲಿಂ ಸಮುದಾಯಕ್ಕೆ ಮಾತ್ರ ಮೀಸಲಾತಿ ನೀಡಲಾಗುತ್ತಿದೆ ಎಂದು ಬಿಜೆಪಿ ಹಾಗೂ ಜೆಡಿಎಸ್ ಅಪಪ್ರಚಾರ ಮಾಡುತ್ತಿವೆ ಎಂದು ಆರೋಪಿಸಿದರು.

ಮೇಲ್ವರ್ಗದವರಿಗೆ ಮೀಸಲಾತಿ ನೀಡಿದ ಬಿಜೆಪಿ ನಾಯಕರು, ಈಗ ಅಹಿಂದ ವರ್ಗಗಳಿಗೆ ಮೀಸಲಾತಿ ನೀಡುವುದಕ್ಕೆ ವಿರೋಧ ಮಾಡುತ್ತಿದ್ದಾರೆ. ರಾಜಕೀಯ ಲಾಭಕ್ಕಾಗಿ ಇಂತಹ ಆಪಾದನೆ ಮಾಡುತ್ತಿದ್ದಾರೆ ಎಂದು ಲಕ್ಷ್ಮಣ್ ದೂರಿದರು.

ಬಿಡದಿಯ ಕೇತಗಾನಹಳ್ಳಿಯಲ್ಲಿ ಹೆಚ್.ಡಿ.ಕುಮಾರಸ್ವಾಮಿ ಅವರು ಅತಿಕ್ರಮಿಸಿಕೊಂಡಿದ್ದ ಭೂಮಿ ತೆರವುಗೊಳಿಸಲಾಗುತ್ತಿದೆ. ಇದಕ್ಕೂ ಸಿದ್ದರಾಮಯ್ಯ ಹಾಗೂ ಡಿ.ಕೆ.ಶಿವಕುಮಾರ್‌ಗೆ ಯಾವುದೇ ಸಂಬಂಧ ಇಲ್ಲ. ಹೈಕೋರ್ಟ್ ನಿರ್ದೇಶನದ ಮೇರೆಗೆ ಅಧಿಕಾರಿಗಳು ಒತ್ತುವರಿ ತೆರವು ಮಾಡುತ್ತಿದ್ದಾರೆ ಎಂದು ಸ್ಪಷ್ಟಪಡಿಸಿದರು.

ಸಿದ್ದರಾಮಯ್ಯ ಅವರ ಪತ್ನಿ ಪಾರ್ವತಿ ಅವರಿಗೆ ಮಂಜೂರಾಗಿದ್ದ 14 ನಿವೇಶನ ಸಂಬಂಧ ಬಿಜೆಪಿ ಹಾಗೂ ಜೆಡಿಎಸ್ ನಾಯಕರು ಬೊಬ್ಬೆ ಹೊಡೆದರು. ಆದರೆ ಈಗ ಕುಮಾರಸ್ವಾಮಿ ಅವರು ಸರ್ಕಾರಿ ಭೂಮಿ ಅತಿಕ್ರಮಿಸಿಕೊಂಡಿರುವ ಬಗ್ಗೆ ಚಕಾರ ಎತ್ತುತ್ತಿಲ್ಲ ಎಂದು ಆಕ್ರೋಶ ವ್ಯಕ್ತಪಡಿಸಿದರು.

ಕಾಂಗ್ರೆಸ್ ನಾಯಕರ ವಿರುದ್ಧದ ಪ್ರಕರಣಗಳಲ್ಲಿ ಪ್ರಾಸಿಕ್ಯೂಷನ್‌ಗೆ ಅನುಮತಿ ನೀಡಲು ರಾಜ್ಯಪಾಲರು ತುದಿಗಾಲಲ್ಲಿ ನಿಂತಿರುತ್ತಾರೆ. ಆದರೆ ಬಿಜೆಪಿ ಮತ್ತು ಜೆಡಿಎಸ್ ನಾಯಕರ ಅಕ್ರಮಗಳಿಗೆ ಸಂಬಂಧಿಸಿದಂತೆ ಯಾವುದೇ ಕಾನೂನು ಪ್ರಕ್ರಿಯೆಗೆ ಮುಂದಾಗುವುದಿಲ್ಲ ಎಂದು ಕಿಡಿಕಾರಿದರು.

ಕಾನೂನುಬಾಹಿರ ಮಳಿಗೆಗಳ ತೆರವಿಗೆ ಕರ್ನಾಟಕ ದಲಿತ ಪ್ಯಾಂಥರ್ಸ್ ಪಾಲಿಕೆ ವಲಯ ಆಯುಕ್ತರಿಗೆ ಮನವಿ

ಮೈಸೂರು, ಮಾ.20–ಮೈಸೂರಿನ ಲಷ್ಕರ್ ಮೊಹಲ್ಲಾ, ಈರನಗೆರೆಯ ಮೈಸೂರು–ಬೆಂಗಳೂರು ರಸ್ತೆಯಲ್ಲಿರುವ ಮಹದೇವಮ್ಮನವರ ದೇವಸ್ಥಾನದ ಪಕ್ಕದ ಖಾಲಿ ಜಾಗದಲ್ಲಿ ಕೆಲವರು ಕಾನೂನು ಬಾಹಿರವಾಗಿ ಸುಮಾರು 10 ವಾಣಿಜ್ಯ ಮಳಿಗೆಗಳನ್ನು ನಿರ್ಮಿಸಿಕೊಂಡು ಬಾಡಿಗೆ ಪಡೆಯುತ್ತಿದ್ದಾರೆ ಎಂದು ಆರೋಪಿಸಿರುವ ಕರ್ನಾಟಕ ದಲಿತ ಪ್ಯಾಂಥರ್ಸ್, ಸದರಿ ಜಾಗದಿಂದ ಅವರನ್ನು ತೆರವುಗೊಳಿಸಿ ಜಾಗವನ್ನು ಗಾಂಧಿನಗರದ ಆದಿಕರ್ನಾಟಕ ಜನಾಂಗದವರಿಗೆ ಹಸ್ತಾಂತರ ಮಾಡಬೇಕೆಂದು ನಗರ ಪಾಲಿಕೆ ವಲಯ ಕಚೇರಿ 7ರ ವಲಯ ಆಯುಕ್ತರಿಗೆ ಮನವಿ ಮಾಡಿದ್ದಾರೆ.

ಮಹದೇವಮ್ಮ ದೇವಸ್ಥಾನದ ಪಕ್ಕದಲ್ಲಿರುವ ಖಾಲಿ ಜಾಗವನ್ನು ದೇವಸ್ಥಾನದ ಜೀರ್ಣೋದ್ಧಾರಕ್ಕೆ ಬಳಸಿಕೊಳ್ಳತಕ್ಕದ್ದು. ಹಾಗೂ ಈರನಗೆರೆಯ ಸರ್ವೆ ನಂ.50ರಲ್ಲಿ ವಾಸವಾಗಿರುವ ಆದಿಕರ್ನಾಟಕ ಬಲಗೈ ಜನಾಂಗದವರ ಅಭಿವೃದ್ಧಿಗೆ ಬಳಕೆಯಾಗಬೇಕು ಎಂದು ಮೈಸೂರು ಮುನ್ಸಿಪಲ್‌ನ ಹಿಂದಿನ ಅಧ್ಯಕ್ಷರಾಗಿದ್ದ ಆರ್.ರಾಮಚಂದ್ರ ಬಾಂಬೋರೆ ಆದೇಶಿಸಿದ್ದರು ಎಂದಿರುವ ದಲಿತ ಪ್ಯಾಂಥರ್ಸ್, ಈ ಸರ್ವೆ ನಂಬರ್‌ನಲ್ಲಿ 1800ನೇ ಇಸವಿಯಿಂದಲೂ ಆದಿಕರ್ನಾಟಕ ಬಲಗೈ ಜನಾಂಗದವರು ಕಳೆದ ಮೂರ್‍ನಾಲ್ಕು ತಲೆಮಾರುಗಳಿಂದಲೂ ಇಲ್ಲಿಯೇ ವಾಸವಿದ್ದಾರೆ. ಆದಿಕರ್ನಾಟಕ ಜನಾಂಗವನ್ನು ಹಳೇ ಜಲಪುರಿ ಮತ್ತು ಗಾಂಧಿನಗರಕ್ಕೆ ಸ್ಥಳಾಂತರಿಸಿದ್ದರೂ, ಸಾಂಸ್ಕೃತಿಕ ಆಚರಣೆಗಳಲ್ಲಿ ಈರನಗೆರೆಯ ವೀರಾಂಜನೇಯ, ನರಿತಲೆ ಮಾರಮ್ಮ, ಮಾದೇಶ್ವರ, ಮಹದೇವಮ್ಮ ದೇವಸ್ಥಾನಗಳಿಗೆ ಪೂಜೆ–ಪುನಸ್ಕಾರಗಳು ನಡೆದುಕೊಂಡು ಬರುತ್ತಿರುವ ಪದ್ಧತಿ ಈಗಲೂ ಚಾಲ್ತಿಯಲ್ಲಿದೆ ಎಂದಿದ್ದಾರೆ.

ಮಹದೇವಮ್ಮನವರ ದೇವಸ್ಥಾನ ಮತ್ತು ಖಾಲಿ ಜಾಗವು ಮೂಲ ವಾರಸುದಾರರಾದ ಈರನಗೆರೆ ಊರಿನ ಆದಿಕರ್ನಾಟಕ ಜನಾಂಗದವರು, ಯಜಮಾನರು, ದೊಡ್ಡ ಯಜಮಾನರು, ಚಿಕ್ಕ ಯಜಮಾನರು, ನಗರಿ ಮನೆ ಉಸ್ತಾದರು, ಖಲೀಫರು, ಮೂಲನಿವಾಸಿಗಳು, ಹೆಬ್ಬಾರೆ ಕೂಸಯ್ಯನವರು, ಸಂಘ–ಸಂಸ್ಥೆಗಳು ಹಾಗೂ ಆದಿಕರ್ನಾಟಕ ಜನಾಂಗಕ್ಕೆ ಸೇರಿದ್ದಾಗಿದ್ದು, ಈ ಜಾಗದಲ್ಲಿ ಅನಧಿಕೃತವಾಗಿ ವಾಣಿಜ್ಯ ಕಟ್ಟಡಗಳನ್ನು ನಿರ್ಮಿಸಿಕೊಂಡು ಬಾಡಿಗೆ ಪಡೆಯುತ್ತಿರುವವರನ್ನು ತೆರವುಗೊಳಿಸಿ ಸದರಿ ಜಾಗವನ್ನು ಗಾಂಧಿನಗರ ಆದಿಕರ್ನಾಟಕ ಜನಾಂಗದವರಿಗೆ ಹಸ್ತಾಂತರ ಮಾಡಬೇಕೆಂದು ಆಗ್ರಹಿಸಿದ್ದಾರೆ.

ಕಾಸ್ಮೋಪಾಲಿಟನ್ ಕ್ಲಬ್‌ನಲ್ಲಿ ಈಜು ತರಬೇತಿ

ಮೈಸೂರು,ಮಾ.20–ಮೈಸೂರಿನ ಕಾಸ್ಮೋಪಾಲಿಟನ್ ಕ್ಲಬ್ ಆವರಣದ ಈಜು ಕೊಳದಲ್ಲಿ ಮಾ.26ರಿಂದ ಮೇ 18ರವರೆಗೆ ಈಜು ತರಬೇತಿ ಶಿಬಿರ ಹಮ್ಮಿಕೊಳ್ಳಲಾಗಿದೆ. ಕ್ಲಬ್ ಸದಸ್ಯರು, ಮಕ್ಕಳು, ಅತಿಥಿ ಪುರುಷರು, ಮಹಿಳೆ ಯರು, 8 ವರ್ಷ ಮೇಲ್ಪಟ್ಟ ಮಕ್ಕಳು ಭಾಗವಹಿಸಬಹುದು. ಮೊದಲನೇ ಬ್ಯಾಚ್: ಮಾ.26ರಿಂದ ಏ.19, ಬೆಳಗ್ಗೆ 9ರಿಂದ 10ರವರೆಗೆ (21 ದಿನ); 2ನೇ ಬ್ಯಾಚ್: ಮಾ.26 ರಿಂದ ಏ.19ರವರೆಗೆ, ಸಂಜೆ 4ರಿಂದ 5ರವರೆಗೆ; 3ನೇ ಬ್ಯಾಚ್: ಏ.24ರಿಂದ ಮೇ 18ರವರೆಗೆ, ಬೆಳಗ್ಗೆ 9ರಿಂದ 10ರವರೆಗೆ; 4ನೇ ಬ್ಯಾಚ್: ಏ.24ರಿಂದ ಮೇ 18ರವರೆಗೆ, ಸಂಜೆ 4ರಿಂದ 5ರವರೆಗೆ. ಮಾಹಿತಿಗೆ ದೂ. 0821–2423881, 2422355 ಸಂಪರ್ಕಿಸಬಹುದು.

ಸಿ.ಮಂಜುನಾಥ್‌ಗೆ ಪ್ರಶಸ್ತಿ ಪ್ರದಾನ...



ಕರ್ನಾಟಕ ಜಾನಪದ ಅಕಾಡೆಮಿಯ 2024ನೇ ಸಾಲಿನ ವಾರ್ಷಿಕ ಪ್ರಶಸ್ತಿ ಪುರಸ್ಕೃತ, ಮೈಸೂರಿನ ಚರ್ಮವಾದ್ಯ ನಗಾರಿ ಕಲಾವಿದ ಸಿ.ಮಂಜುನಾಥ್ ಅವರಿಗೆ ಬೀದರ್‌ನಲ್ಲಿ ನಡೆದ ಸಮಾರಂಭದಲ್ಲಿ ಜಾನಪದ ಅಕಾಡೆಮಿ ಅಧ್ಯಕ್ಷ ಗೊಲ್ಲಹಳ್ಳಿ ಶಿವಪ್ರಸಾದ್, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಜಂಟಿ ನಿರ್ದೇಶಕ ಬಸವರಾಜ ಹೂಗಾರ ಪ್ರಶಸ್ತಿ ಪ್ರದಾನ ಮಾಡಿದರು. ಜಾನಪದ ಅಕಾಡೆಮಿ ಸದಸ್ಯ ಮೈಸೂರಿನ ಗುರುರಾಜ್ ಇದ್ದಾರೆ.

ನಿಧನ



ಕೋಟೇರ ಚೆಂಗಪ್ಪ

ಮೈಸೂರು, ಮಾ.20– ತಮಿಳುನಾಡು ಎಲೆಕ್ಟ್ರಿಸಿಟಿ ಬೋರ್ಡ್‌ನ ನಿವೃತ್ತ ಚೀಫ್ ಇಂಜಿನಿಯರ್, ಮೈಸೂರಿನ ಬೃಂದಾವನ ಬಡಾವಣೆ ನಿವಾಸಿ ಕೋಟೇರ ಚೆಂಗಪ್ಪ (97) ಅವರು ಗುರುವಾರ ನಿಧನರಾದರು. ಮೃತರು ಪತ್ನಿ, ಇಬ್ಬರು ಪುತ್ರರು, ಪುತ್ರಿ ಹಾಗೂ ಅಪಾರ ಬಂಧು ವರ್ಗ ಅಗಲಿದ್ದು, ಮೃತರ ಅಂತ್ಯಕ್ರಿಯೆ ನಾಳೆ (ಮಾ.21) ಮಧ್ಯಾಹ್ನ 1 ಗಂಟೆಗೆ ಮೈಸೂರಿನ ಗೋಕುಲಂನ ಚಿರಶಾಂತಿಧಾಮದಲ್ಲಿ ನೆರವೇರವೇರಿಸಲಾಗುವುದು ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಡಾ.ಎಸ್.ಕೆ.ತಮ್ಮೇಗೌಡ



ಮೈಸೂರಿನ ಸುಭಾಷ್‌ನಗರದ ನಿವಾಸಿ ಡಾ.ಎಸ್.ಕೆ.ತಮ್ಮೇಗೌಡ (75) ಅವರು ಬುಧವಾರ ರಾತ್ರಿ ನಿಧನರಾದರು.

ಮೃತರು ಪತ್ನಿ, ಓರ್ವ ಪುತ್ರ ಸೇರಿದಂತೆ ಅಪಾರ ಬಂಧು–ಬಳಗ ಅಗಲಿದ್ದಾರೆ. ಇವರ ಅಂತ್ಯಕ್ರಿಯೆ ಅವರ ಸ್ವಗ್ರಾಮ ಶ್ರೀರಂಗಪಟ್ಟಣ ತಾಲೂಕಿನ ಸಬ್ಬನಕುಪ್ಪೆಯಲ್ಲಿ ಗುರುವಾರ ಮಧ್ಯಾಹ್ನ ನೆರವೇರಿಸಲಾಯಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.



ಬೊಕ್ಕಳ್ಳಿ ಉರಿಯಯ್ಯ


ಕಂದಾಯ ಇಲಾಖೆ ನಿವೃತ್ತ ನೌಕರ, ನಂಜನಗೂಡು ತಾಲೂಕು ಬೊಕ್ಕಳ್ಳಿ ಗ್ರಾಮದ ಉರಿಯಯ್ಯ (80) ಅವರು ಇಂದು ನಿಧನರಾದರು. ಮೃತರು ಪತ್ನಿ, ಓರ್ವ ಪುತ್ರ, ಪುತ್ರಿ ಸೇರಿದಂತೆ ಅಪಾರ ಬಂಧು–ವರ್ಗ ಅಗಲಿದ್ದಾರೆ. ಮೃತರ ಅಂತ್ಯಕ್ರಿಯೆ ಶುಕ್ರವಾರ ಮಧ್ಯಾಹ್ನ 12 ಗಂಟೆಗೆ ಗ್ರಾಮದಲ್ಲಿ ನೆರವೇರಲಿದೆ ಎಂದು ಕುಟುಂಬ ವರ್ಗ ತಿಳಿಸಿದೆ. ಜಿಲ್ಲಾ ದಲಿತ ಸಂಘರ್ಷ ಸಮಿತಿಯ ಸಂಚಾಲಕ ಬೊಕ್ಕಳ್ಳಿ ಲಿಂಗಯ್ಯ, ರೈತ ಸಂಘದ ಬೊಕ್ಕಳ್ಳಿ ನಂಜುಂಡಸ್ವಾಮಿ ಮೃತರ ನಿಧನಕ್ಕೆ ಸಂತಾಪ ಸೂಚಿಸಿದ್ದಾರೆ.

ರೈತ ಕುಟುಂಬದ ಅದರಲ್ಲೂ ಗ್ರಾಮೀಣ ಹಿನ್ನೆಲೆಯುಳ್ಳ ಅಧಿಕಾರಿಗಳ ಕೃಷಿ ಇಲಾಖೆಗೆ ನಿಯೋಜಿಸಿ

ಸರ್ಕಾರಕ್ಕೆ ಹಿರಿಯ ಶಾಸಕ ಜಿ.ಟಿ.ದೇವೇಗೌಡ ಆಗ್ರಹ

ಬೆಂಗಳೂರು, ಮಾ.20– ನೆರೆ ರಾಜ್ಯಗಳ ಮಾದರಿಯಲ್ಲಿ ಕೃಷಿ ಇಲಾಖೆ ಕಾರ್ಯದರ್ಶಿ ಹಾಗೂ ಆಯುಕ್ತರನ್ನಾಗಿ ರೈತ ಕುಟುಂಬದಿಂದ ಬಂದಂತಹವರು, ಗ್ರಾಮೀಣ ಹಿನ್ನೆಲೆಯುಳ್ಳ ಐಎಎಸ್ ಅಧಿಕಾರಿಗಳನ್ನೇ ನಿಯೋಜಿಸುವಂತೆ ಚಾಮುಂಡೇಶ್ವರಿ ಕ್ಷೇತ್ರದ ಶಾಸಕ ಜಿ.ಟಿ.ದೇವೇಗೌಡರು, ರಾಜ್ಯ ಸರ್ಕಾರವನ್ನು ಒತ್ತಾಯಿಸಿದ್ದಾರೆ.

ಅಧಿವೇಶನದಲ್ಲಿ ಬಜೆಟ್ ಮೇಲಿನ ಚರ್ಚೆಯಲ್ಲಿ ಪಾಲ್ಗೊಂಡು ಮಾತಾಡಿದ ಅವರು, ಅಧಿಕಾರಿಗಳು ರೈತರೊಂದಿಗೆ ನೇರವಾಗಿ ಮಾತನಾಡಿ ಅವರ ಕಷ್ಟಗಳಿಗೆ ಸ್ಪಂದಿಸುವಂತಿರಬೇಕು. ಆದರೆ ಕೆಲ ಅಧಿಕಾರಿಗಳಿಗೆ ಸರಿಯಾಗಿ ಕನ್ನಡವೇ ಬರುವುದಿಲ್ಲ. ಗ್ರಾಮೀಣ ಜೀವನದ ಬಗ್ಗೆ ಅರಿವಿಲ್ಲದ ಅಧಿಕಾರಿಗಳೂ ಸಾಕಷ್ಟು ಮಂದಿ ಇದ್ದಾರೆ. ಆದ್ದರಿಂದ ರೈತರು ಸಂಕಷ್ಟವನ್ನು ಅರಿತು ಅವರಿಗೆ ಉಪಯುಕ್ತ ಸಲಹೆ, ಮಾರ್ಗದರ್ಶನ ನೀಡುಲ್ಲ ಗ್ರಾಮೀಣ ಹಿನ್ನೆಲೆಯುಳ್ಳ ಅಧಿಕಾರಿಗಳನ್ನೇ ಆಂಧ್ರಪ್ರದೇಶ, ತಮಿಳುನಾಡು ಮಾದರಿ ಕೃಷಿ ಇಲಾಖೆಗೆ ನಿಯೋಜಿಸುವುದು ಸೂಕ್ತ ಎಂದು ಒತ್ತಾಯಿಸಿದರು.



ರೈತರಿಗೆ ಗೊಬ್ಬರ, ಬಿತ್ತನೆ ಬೀಜ, ಕೀಟನಾಶಕ ಹಾಗೂ ಕೃಷಿ ಪರಿಕರಗಳು ಸಕಾಲಕ್ಕೆ ಲಭ್ಯವಾಗಬೇಕು. ಈ ನಿಟ್ಟಿನಲ್ಲಿ ರೈತರ ಅಂಗಡಿ ಅಥವಾ ಸಹಕಾರ ಸಂಘಗಳನ್ನು ಹಳ್ಳಿಗಳಲ್ಲಿ ಪ್ರಾರಂಭಿಸಿ, ಆ ಮೂಲಕ ವಿತರಣೆಗೆ ಕ್ರಮ ಕೈಗೊಳ್ಳಬೇಕು. ಬೆಳೆಗಳಿಗೆ ಸೂಕ್ತ ಬೆಲೆ ಸಿಗುವಂತಾಗಬೇಕು. ಮಾರುಕಟ್ಟೆಯಲ್ಲಿ ಬೆಲೆ ಕುಸಿದಾಗ ತಕ್ಷಣವೇ ಸರ್ಕಾರ ರೈತರ ರಕ್ಷಣೆಗೆ ನಿಲ್ಲಬೇಕು. ಇದರಿಂದ ದಲ್ಲಾಳಿಗಳ ನಿಯಂತ್ರಣದ ಜೊತೆಗೆ ರೈತರಿಗೆ ಆತ್ಮ ಸ್ಥೈರ್ಯ ತುಂಬಿದಂತಾಗುತ್ತದೆ. ಒಟ್ಟಾರೆ ರೈತ ಮಾರುಕಟ್ಟೆ ವ್ಯವಸ್ಥೆಯಲ್ಲಿ ಅಮೂಲಾಗ್ರ ಬದಲಾವಣೆ ತರಬೇಕು ಎಂದು ಮನವಿ ಮಾಡಿದರು.

ಕೃಷಿ ತಾಂತ್ರಿಕ ವರ್ಗಾವಣೆ ಇತ್ತೀಚೆಗೆ ನಿರೀಕ್ಷಿತ ಮಟ್ಟದಲ್ಲಿ ಆಗುತ್ತಿಲ್ಲ. ಹಿಂದೆ ಕೃಷಿ ಸಹಾಯಕರು ಹಳ್ಳಿಗಳಿಗೆ ಭೇಟಿ ನೀಡಿ ಹೊಸ ತಳಿ, ತಂತ್ರಜ್ಞಾನದ ಬಗ್ಗೆ ಪ್ರಾತ್ಯಕ್ಷತೆ, ಕ್ಷೇತ್ರೋತ್ಸವಗಳ ಮೂಲಕ ಮನವರಿಕೆ ಮಾಡಿಕೊಡುತ್ತಿದ್ದರು. ಆದರೆ ಈಗಿನ ಪರಿಸ್ಥಿತಿಯೇ ಬೇರೆ. ಕೇವಲ ರೈತ ಸಂಪರ್ಕ ಕೇಂದ್ರಗಳಲ್ಲಿ ಲಭ್ಯವಿರುವ ಕೃಷಿ ಪರಿಕರಗಳ ಮಾರಾಟಕ್ಕೆ ಸೀಮಿತವಾಗಿದ್ದಾರೆ. ರೈತರ ಜಮೀನಿಗೆ ಭೇಟಿ ನೀಡುವುದೇ ಇಲ್ಲ. ಸದ್ಯ ರೈತರೂ ಮೊಬೈಲ್ ಬಳಸುವುದರಿಂದ ಕೃಷಿಗೆ ಸಂಬಂಧಿಸಿದ ಮಾಹಿತಿಯನ್ನು ಸುಲಭವಾಗಿ ತಲುಪಿಸುವ ಅವಕಾಶವಿದ್ದು, ಈ ನಿಟ್ಟಿನಲ್ಲಿ ತಂತ್ರಜ್ಞರನ್ನು ಬಳಸಿಕೊಂಡು ಪರಿಣಾಮಕಾರಿ ಕ್ರಮ ಕೈಗೊಳ್ಳಬೇಕು ಎಂದು ಒತ್ತಾಯಿಸಿದರು.

ಸೇವಾ ಕೇಂದ್ರಗಳು ನಿರುಪಯುಕ್ತ: ಎತ್ತುಗಳ ಮೂಲಕ ಕೃಷಿ ಮಾಡುವವರು ವಿರಳಾತಿವಿರಳ. ರಾಜ್ಯದಲ್ಲಿ ಎತ್ತುಗಳ ಸಾಕಾಣಿಕೆಯೇ ಕಡಿಮೆಯಾಗಿದೆ. ಈ ಹಿಂದೆ ನಾನು ಈ ಬಗ್ಗೆ ಸದನದ ಗಮನ ಸೆಳೆದು, ಸಣ್ಣ ಮತ್ತು ಅತೀ ಸಣ್ಣ ರೈತರಿಗೆ ಬೆಲೆಬಾಳುವ ಕೃಷಿ ಯಂತ್ರೋಪಕರಣಗಳನ್ನು ಖರೀದಿಸಲು ಸಾಧ್ಯವಾಗುವುದಿಲ್ಲ. ಅಂತಹವರಿಗೆ ಬಾಡಿಗೆ ಆಧಾರದ ಮೇಲೆ ಕೃಷಿ ಯಂತ್ರೋಪಕರಣ ಒದಗಿಸುವ ಅಗತ್ಯ ತಿಳಿಸಿದ್ದೆ. ಆಗ ಕೃಷಿ ಸಚಿವರಾಗಿದ್ದ ಕೃಷ್ಣಭೈರೇಗೌಡರು ಹಂತ ಹಂತವಾಗಿ ಇಡೀ ರಾಜ್ಯದಲ್ಲಿ ಕೃಷಿ ಯಂತ್ರಧಾರ ಸೇವಾ ಕೇಂದ್ರ ತೆರೆಯಲು ಮುತುವರ್ಜಿ ವಹಿಸಿದ್ದರು. ಆದರೆ ಇಂದು ಆ ಸೇವಾ ಕೇಂದ್ರಗಳು ನಿರುಪಯುಕ್ತವಾಗಿದ್ದು, ಹಲವಾರು ಕಡೆ ಬಂದ್ ಆಗಿವೆ. ಈ ಕೇಂದ್ರಗಳನ್ನು ಪುನಶ್ಚೇತನಗೊಳಿಸಲು ಕೃಷಿ ಸಚಿವರು ಕ್ರಮ ಕೈಗೊಳ್ಳಬೇಕಿದೆ ಎಂದರು.

ಸಾವಯವ ಕೃಷಿಗೆ ಆದ್ಯತೆ: ಸಾವಯವ ಕೃಷಿ ಪ್ರೋತ್ಸಾಹಕ್ಕೆ ಆರ್ಥಿಕ ವೆಚ್ಚವಾಗುತ್ತಿದೆಯೇ ಹೊರತು ನಿರೀಕ್ಷಿತ ಪ್ರಗತಿ ಸಾಧ್ಯವಾಗಿಲ್ಲ. ಅತ್ಯಗತ್ಯವಾದ ಕೊಟ್ಟಿಗೆ ಗೊಬ್ಬರ ಉತ್ಪತ್ತಿಗಾಗಿ ಹಸುಗಳ ಸಾಕಾಣಿಕೆಗೆ ಪ್ರೋತ್ಸಾಹ ನೀಡಿ, ಸಾವಯವ ಉತ್ಪನ್ನಗಳಿಗೆ ಸಮರ್ಪಕ ಮಾರುಕಟ್ಟೆ ವ್ಯವಸ್ಥೆ ಮಾಡಬೇಕು. ಇತ್ತೀಚಿನ ದಿನಗಳಲ್ಲಿ ನಗರ ಪ್ರದೇಶಗಳಲ್ಲಿ ಸಾವಯವ ಪದಾರ್ಥಗಳಿಗೆ ಹೆಚ್ಚಿನ ಬೇಡಿಕೆ ಇದೆ. ಇದನ್ನೇ ದುರುಪಯೋಗಪಡಿಸಿಕೊಂಡು ಸಾವಯವ ಹೆಸರಿನಲ್ಲಿ ಜನರನ್ನು ಮೋಸ ಮಾಡುತ್ತಿರುವುದು ಗಮನಕ್ಕೆ ಬಂದಿದೆ. ಆದ್ದರಿಂದ ಗ್ರಾಮೀಣ ಪ್ರದೇಶಗಳಲ್ಲಿ ಯುವಕರಿಗೆ ಸೂಕ್ತ ತರಬೇತಿ ನೀಡಿ, ಸಾವಯವ ಉತ್ಪನ್ನಗಳಿಗೆ ಮಾರುಕಟ್ಟೆ ಕಲ್ಪಿಸುವತ್ತ ಗಮನ ಹರಿಸಬೇಕು ಎಂದು ಆಗ್ರಹಿಸಿದರು.

ಟ್ರೀ ಬೋರ್ಡ್ ತೆರೆಯಿರಿ: ಕೃಷಿ ಅರಣ್ಯ ಬಹಳ ಮುಖ್ಯ. ರೈತ ಯಾವುದೇ ಮರಗಳನ್ನು ಬೆಳೆಸಿ, ಮಾರಾಟ ಮಾಡಲು ಮುಕ್ತ ಅವಕಾಶ ನೀಡಬೇಕು. ಆದರೆ ತೇಗ ಬೆಳೆದರೆ ರೈತ ಅರಣ್ಯ ಇಲಾಖೆಯ ಅನುಮತಿ ಪಡೆಯಬೇಕಿದೆ. ಇಂತಹ ನಿಬಂಧನೆಗಳನ್ನು ತೆಗೆದು ರೈತರಿಗೆ ಮುಕ್ತ ಅವಕಾಶ ಮಾಡಿಕೊಡಬೇಕು. ಇದಕ್ಕಾಗಿ ಟ್ರೀ ಬೋರ್ಡ್ ತೆರೆದು, ಮರಗಳನ್ನು ಬೆಳೆಸಲು ಪ್ರೋತ್ಸಾಹಿಸುವ ಜೊತೆಗೆ ಮಾರಾಟ ಮಾಡಲು ಸೂಕ್ತ ವ್ಯವಸ್ಥೆ ಕಲ್ಪಿಸಬೇಕು ಎಂದರು.

ರೈತರ ಕಲ್ಯಾಣ ನಿಧಿ ಬೇಕು: ಆರ್ಮಿ (ಸೈನ್ಯ) ಫಂಡ್ ಮಾದರಿಯಲ್ಲಿ ರೈತರ ನಿಧಿ ಸ್ಥಾಪಿಸುವ ಅಗತ್ಯವಿದೆ. ರೈತರು ಅಪಘಾತವಾದಾಗ, ರೈತರ ಮಕ್ಕಳ ವಿದ್ಯಾಭ್ಯಾಸ, ವಿವಾಹ, ವೈದ್ಯಕೀಯ ವೆಚ್ಚ ಭರಿಸಲು ಕಡಿಮೆ ಬಡ್ಡಿ ದರದಲ್ಲಿ ಸಾಲ ಸೌಲಭ್ಯ ಅಥವಾ ಸಹಾಯ ಧನ ನೀಡಲು ಈ ನಿಧಿಯನ್ನು ಬಳಸಿಕೊಳ್ಳಬಹುದು. ಇದಕ್ಕೆ ಪ್ರತ್ಯೇಕವಾದ ಲೆಕ್ಕ ಶೀರ್ಷಿಕೆ ನೀಡಿ ಈ ನಿಧಿಗೆ ಮಠಗಳಿಗೆ ಅಥವಾ ಅನುದಾನ ನೀಡುವ ವ್ಯಕ್ತಿ–ಸಂಸ್ಥೆಗಳಿಗೆ ಆದಾಯ ತೆರಿಗೆಯಲ್ಲಿ ವಿನಾಯ್ತಿ ಕಲ್ಪಿಸಬೇಕು. ರೈತರು ಜಮೀನಿನಿಂದ ಹಣ್ಣು ತರಕಾರಿಗಳನ್ನು ನೇರವಾಗಿ ಎಪಿಎಂಸಿಗೆ ತರಲು ವಾಹನದ ವ್ಯವಸ್ಥೆ ಮಾಡಲು ಸಹಾಯವಾಣಿ ಸ್ಥಾಪಿಸಬೇಕು ಎಂದು ಆಗ್ರಹಿಸಿದರು.

ಮುಡಾದಿಂದ ಬಡವರಿಗೆ ನಿವೇಶನ, ಮನೆ ಸಿಗುವಂತಾಗಲಿ

ಮೈಸೂರು ಮಹಾರಾಜರು 115 ವರ್ಷಗಳ ಹಿಂದೆ ಸ್ಥಾಪಿಸಿದ ಸಿಐಟಿಬಿ ನಂತರ ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರ(ಮುಡಾ) ಆಗಿದೆ. ಮುಡಾ ಮೂಲಕ ಬಡವರು ಹಾಗೂ ಮಧ್ಯಮ ವರ್ಗದವರಿಗೆ ನಿವೇಶನಗಳ ಹಂಚಿಕೆ ಮಾಡಿದ್ದರಿಂದ ಮೈಸೂರು ಸುಂದರ ನಗರವಾಗಿ ನಿರ್ಮಾಣವಾಗಿದೆ. ಆದರೆ, ಇತ್ತೀಚೆಗೆ ಪ್ರಾಧಿಕಾರಗಳು ರಿಯಲ್ ಎಸ್ಟೇಟ್ ಮಾಡುವವರನ್ನು ಬೆಂಬಲಿಸುತ್ತಿವೆಯೇ ಹೊರತು ಬಡವರಿಗೆ, ನಿವೇಶನ ಹಾಗೂ ಮನೆಗಳನ್ನು ನೀಡುವಲ್ಲಿ ಸಂಪೂರ್ಣ ವಿಫಲವಾಗಿವೆ. ಪರಿಣಾಮ ಮುಡಾದಲ್ಲೇ ಸುಮಾರು 90 ಸಾವಿರ ಅರ್ಜಿಗಳು ಬಾಕಿ ಇವೆ. ಸ್ಥಳೀಯ ಸಂಸ್ಥೆಗಳಿಗೆ ಬಡಾವಣೆ ವರ್ಗಾವಣೆ ಮಾಡಿರುವುದರಿಂದ ಮುಡಾದ 21 ಇಂಜಿನಿಯರ್‌ಗಳಿಗೆ ಕೆಲಸವೇ ಇಲ್ಲ. ಬಡಾವಣೆ ಅಭಿವೃದ್ಧಿ, ನಿರ್ವಹಣೆ ಜವಾಬ್ದಾರಿ ಇಲ್ಲದೆ ಕೈಕಟ್ಟಿ ಕುಳಿತಿದ್ದಾರೆ. ಸರ್ಕಾರವು ಕೂಡ ಕೈಕಟ್ಟಿ ಕುಳಿತಂತೆ ಕಾಣುತ್ತಿದೆ. ಈಗಲಾದರೂ ಸರ್ಕಾರದಿಂದ ಬಡಾವಣೆಗಳನ್ನು ನಿರ್ಮಾಣ ಮಾಡಿ ಬಡವರು ಹಾಗೂ ಮಧ್ಯಮ ವರ್ಗದವರಿಗೆ ನಿವೇಶನ, ಮನೆಗಳನ್ನು ಕಲ್ಪಿಸಲು ಕ್ರಮ ಕೈಗೊಳ್ಳಬೇಕು. ಇನ್ನು 3 ವರ್ಷದಲ್ಲಿ ನಿವೇಶನ ಇಲ್ಲದವರಿಗೆ ನಿವೇಶನ, ಮನೆ ಇಲ್ಲದವರಿಗೆ ಮನೆ ಕಲ್ಪಿಸಿಕೊಡಲು ಮುಖ್ಯಮಂತ್ರಿಗಳು ಹಾಗೂ ನಗರಾಭಿವೃದ್ಧಿ ಸಚಿವರು ಕ್ರಮಕೈಗೊಳ್ಳುತ್ತಾರೆ ಎಂದು ಆಶಿಸುತ್ತೇನೆ.

ಕೂಲಿಗಾಗಿ, ಮಕ್ಕಳ ಶಿಕ್ಷಣಕ್ಕಾಗಿ ನಗರ ಪ್ರದೇಶಕ್ಕೆ ವಲಸೆ ಬಂದವರು ಸೇರಿದಂತೆ ಆರ್ಥಿಕವಾಗಿ ದುರ್ಬಲ ವರ್ಗದವರಿಗೆ ಬಡಾವಣೆಯ ಒಟ್ಟು ನಿವೇಶನದಲ್ಲಿ ಶೇ.10ರಷ್ಟು ನಿವೇಶನವನ್ನು ಶೇ.50ರಷ್ಟು ರಿಯಾಯಿತಿ ದರದಲ್ಲಿ ಹಂಚಲು ನಾನು ಗೃಹ ಮಂಡಳಿ ಅಧ್ಯಕ್ಷನಾಗಿದ್ದಾಗ ಬೋರ್ಡ್‌ನಲ್ಲಿ ತೀರ್ಮಾನ ಮಾಡಿ ಜಾರಿಗೆ ತರಲಾಗಿತ್ತು. ಹಾಗೆಯೇ ರಾಜ್ಯದಲ್ಲಿರುವ ಎಲ್ಲಾ ಪ್ರಾಧಿಕಾರಗಳು ಆರ್ಥಿಕವಾಗಿ ದುರ್ಬಲ ವರ್ಗದವರಿಗೆ ಬಡಾವಣೆಯ ಒಟ್ಟು ನಿವೇಶನದಲ್ಲಿ ಶೇ.10ರಷ್ಟು ನಿವೇಶನವನ್ನು ಶೇ.50ರಷ್ಟು ರಿಯಾಯಿತಿ ದರದಲ್ಲಿ ನೀಡುವಂತಾಗಬೇಕು.

ಹಾಗೆಯೇ ನಾನು ಪ್ರತಿನಿಧಿಸುವ ಚಾಮುಂಡೇಶ್ವರಿ ವಿಧಾನಸಭಾ ಕ್ಷೇತ್ರದಲ್ಲಿ ಒಟ್ಟು 18 ಗ್ರಾಮ ಪಂಚಾಯ್ತಿ, 4 ಪಟ್ಟಣ ಪಂಚಾಯ್ತಿ, 1 ನಗರ ಸಭೆ ಹಾಗೂ ಮಹಾನಗರ ಪಾಲಿಕೆಯ ಐದು ವಾರ್ಡ್‌ಗಳಿವೆ. ದೊಡ್ಡ ಕ್ಷೇತ್ರಕ್ಕೆ ಸರಿಯಾಗಿ ಅಧಿಕಾರಿಗಳಿಲ್ಲ. ಪಟ್ಟಣ ಪಂಚಾಯ್ತಿಗಳಲ್ಲಿ ಇಂಜಿನಿಯರ್‌ಗಳಿಲ್ಲದೆ ಸಾರ್ವಜನಿಕರ ಕೆಲಸಗಳಾಗುತ್ತಿಲ್ಲ. ಅಭಿವೃದ್ಧಿ ಕೆಲಸಗಳು ಕುಂಠಿತವಾಗಿವೆ. ಆದ್ದರಿಂದ ಕೂಡಲೇ ಇಂಜಿನಿಯರ್‌ಗಳನ್ನು ನೇಮಿಸಲು ಕ್ರಮ ಕೈಗೊಳ್ಳುವಂತೆ ಜಿ.ಟಿ.ದೇವೇಗೌಡರು ಮನವಿ ಮಾಡಿದರು.

ರೋಟರಿ ಸೈನಿಕ್ ದೇಶ ರತ್ನ ಪ್ರಶಸ್ತಿ ಪ್ರದಾನ

ಕ್ಯಾಪ್ಟನ್ ಎಂ.ವಿ.ಪ್ರಾಂಜಲ್ ಪೋಷಕರಿಂದ ಪ್ರಶಸ್ತಿ ಸ್ವೀಕಾರ



ಎಂ.ವೆಂಕಟೇಶ್ ಮತ್ತು ಅನುರಾಧ ಅವರಿಗೆ ರೋಟರಿ ಸೈನಿಕ್ ದೇಶ ರತ್ನ ಪ್ರಶಸ್ತಿ ಪ್ರದಾನ ಮಾಡಲಾಯಿತು.

ಮೈಸೂರು,ಮಾ.20(ಪಿಎಂ)– ರೋಟರಿ ಮೈಸೂರು ಮಿಡ್‌ಟೌನ್ ಮತ್ತು ಶ್ರೀಸೈನಿಕ್ ಫೌಂಡೇಷನ್ ಜಂಟಿ ಆಶ್ರಯದಲ್ಲಿ 2023ರಲ್ಲಿ ಹುತಾತ್ಮರಾದ ಕ್ಯಾಪ್ಟನ್ ಎಂ.ವಿ.ಪ್ರಾಂಜಲ್ ಅವರಿಗೆ ಮರಣೋತ್ತರವಾಗಿ ರೋಟರಿ ಸೈನಿಕ್ ದೇಶ ರತ್ನ ಪ್ರಶಸ್ತಿ ನೀಡಲಾಯಿತು.

ಮೈಸೂರಿನ ಜೆಎಲ್‌ಬಿ ರಸ್ತೆಯಲ್ಲಿರುವ ರೋಟರಿ ಸಭಾಂಗಣದಲ್ಲಿ ಹಮ್ಮಿಕೊಂಡಿದ್ದ ಸಮಾರಂಭದಲ್ಲಿ ಕ್ಯಾಪ್ಟನ್ ಎಂ.ವಿ. ಪ್ರಾಂಜಲ್ ಅವರ ತಂದೆ ಎಂ.ವೆಂಕಟೇಶ್ ಮತ್ತು ತಾಯಿ ಅನುರಾಧ ಅವರಿಗೆ ಪ್ರಶಸ್ತಿ ಪ್ರದಾನ ಮಾಡಲಾಯಿತು.

1995ರಲ್ಲಿ ಜು.18ರಂದು ಬೆಂಗಳೂರಿನಲ್ಲಿ ಜನಿಸಿದ ಕ್ಯಾಪ್ಟನ್ ಪ್ರಾಂಜಲ್, ಬೆಳೆದಿದ್ದು ಮಂಗಳೂರಿನಲ್ಲಿ. ಚಿಕ್ಕಂದಿನಲ್ಲಿ ಪ್ರಾಂಜಲ್ ಕಬ್ಸ್ ಹಾಗೂ ಸ್ಕೌಟ್ಸ್‌ನಲ್ಲಿ ಸಕ್ರಿಯವಾಗಿ ತೊಡಗಿಸಿಕೊಂಡಿದ್ದರು. ಆಗಲೇ ಅವರಿಗೆ ಭಾರತೀಯ ಸೇನೆ ಸೇರುವ ಗುರಿಯೂ ಇತ್ತು. 2023ರ ನವೆಂಬರ್‌ನಲ್ಲಿ ಜಮ್ಮು–ಕಾಶ್ಮೀರದ ರಜೌರಿಯಲ್ಲಿ ಭಯೋತ್ಪಾದಕರೊಂದಿಗೆ ಸೆಣಸಾಡಿ ಹುತಾತ್ಮರಾದ ಕ್ಯಾಪ್ಟನ್ ಎಂ.ವಿ. ಪ್ರಾಂಜಲ್ ಅವರಿಗೆ ಮರಣೋತ್ತರವಾಗಿ 'ಶೌರ್ಯ ಚಕ್ರ ಪ್ರಶಸ್ತಿ' ನೀಡಿ ಗೌರವಿಸಲಾಗಿದೆ. ಇಂದಿನ ಕಾರ್ಯಕ್ರಮದಲ್ಲಿ ವಿಡಿಯೋ ತುಣುಕುಗಳ ಮೂಲಕ ಕ್ಯಾಪ್ಟನ್ ಪ್ರಾಂಜಲ್ ಅವರ ಬಾಲ್ಯ ಸೇರಿದಂತೆ ಬದುಕಿನ ಚಿತ್ರಣವನ್ನು ಅನಾ ವರಣಗೊಳಿಸಲಾಯಿತು. ನಿವೃತ್ತ ವಿಂಗ್ ಕಮಾಂಡರ್ ಗಿರೀಶ್ ಮುಖ್ಯ ಅತಿಥಿ ಯಾಗಿ ಪಾಲ್ಗೊಂಡಿದ್ದರು.

ರೋಟರಿ ಚುನಾಯಿತ ಡಿಸ್ಟ್ರಿಕ್ ಗೌರ್ನರ್ ಪಿ.ಕೆ.ರಾಮಕೃಷ್ಣ, ರೋಟರಿ ಮೈಸೂರು ಮಿಡ್‌ಟೌನ್ ಅಧ್ಯಕ್ಷ ಕೆ.ಕುಮಾರಸ್ವಾಮಿ, ಕಾರ್ಯದರ್ಶಿ ಎಲಿಝುರ್ ವಿಲ್ಸನ್, ಸದಸ್ಯರಾದ ನವೀನ್‌ಚಂದ್ರ, ಅಭಿಲಾಷ್, ರಾಕೇಶ್, ಪ್ರಶಸ್ತಿ ಸ್ಥಾಪಕ ಕೆ.ವಿ.ಭಾಸ್ಕರ್ ಮತ್ತಿತರರು ಹಾಜರಿದ್ದರು.

ನಾಳೆ ಬಂಧು ಮಿಲನ

ಮೈಸೂರು,ಮಾ.20(ಬಿಎಲ್‌ಯು)– ಮೈಸೂರಿನ ಕೃಷ್ಣಮೂರ್ತಿಪುರಂನ ಶ್ರೀರಾಮಮಂದಿರದಲ್ಲಿ ಮಾ.22ರಂದು ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾ ಬಂಧು ಮಿಲನ ಕಾರ್ಯಕ್ರಮ ಆಯೋಜಿಸಿದೆ ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾಗೆ 2025–26ನೇ ಸಾಲಿನ ಅಧ್ಯಕ್ಷೀಯ ಚುನಾವಣೆ ಏ.13ರಂದು ನಡೆಯಲಿದೆ ಈ ಹಿನ್ನೆಲೆ ಚುನಾವಣಾ ಪ್ರಚಾರ ಸಭೆಗೆ ಮಹಾಸಭಾದ ಅಜೀವ ಸದಸ್ಯರು, ಮಿತ್ರ ಬಂಧುಗಳು ಹಾಗೂ ವಿಪ್ರ ಸಂಘ ಸಂಸ್ಥೆಗಳ ಪದಾಧಿಕಾರಿಗಳು, ಕಾರ್ಯಕಾರಿ ಸಮಿತಿ ಸದಸ್ಯರು ಭಾಗವಹಿಸಬೇಕೆಂದು ಕೋರಲಾಗಿದೆ. ಅಂದು ಸಂಜೆ 4 ಗಂಟೆಗೆ ಸಭೆ ಆರಂಭವಾಗುವ ಕಾರ್ಯಕ್ರಮವನ್ನು ಅಧ್ಯಕ್ಷೀಯ ಅಭ್ಯರ್ಥಿ ಎಸ್.ರಘುನಾಥ್ ಉದ್ಘಾಟಿಸಲಿದ್ದಾರೆ. ಹೊಯ್ಸಳ ಕರ್ನಾಟಕ ಸಂಘದ ಕಟ್ಟಡ ಸಮಿತಿ ಮಾಜಿ ಅಧ್ಯಕ್ಷ ಎನ್.ಲಕ್ಷ್ಮಿ ನರಸಿಂಹ, ಮಹಾಸಭಾದ ಮಾಜಿ ಉಪಾಧ್ಯಕ್ಷರಾದ ಎಂ.ನರಸಿಂಹನ್, ಆರ್.ಲಕ್ಷ್ಮಿ ಕಾಂತ್, ವಿಪ್ರ ಮಹಿಳಾ ಸಂಗಮದ ಅಧ್ಯಕ್ಷೆ ಡಾ.ಕೆ.ವಿ.ಲಕ್ಷ್ಮಿದೇವಿ ಕಾರ್ಯಕ್ರಮದಲ್ಲಿ ಹಾಜರಿರುತ್ತಾರೆ.

ಮೈಸೂರು ಹಾಗೂ ಸುತ್ತಮುತ್ತ ಇಂದು...



ಇಂದಿನ ಪಂಚಾಂಗ

21.03.2025 ಶುಕ್ರವಾರ, ಮಳೆ ನಕ್ಷತ್ರ: ಉತ್ತರಭಾದ್ರಾ 17.03.2025 ರಿಂದ 30.03.2025
ಕ್ರೋಧಿನಾಮ ಸಂವತ್ಸರ, ಉತ್ತರಾಯಣ, ಶಿಶಿರ ಋತು, ಫಾಲ್ಗುಣ ಮಾಸ, ಕೃಷ್ಣ ಪಕ್ಷ,
ತಿಥಿ: ಸಪ್ತಮಿ, ನಕ್ಷತ್ರ: ಜ್ಯೇಷ್ಠ, ರಾಹುಕಾಲ: ಬೆಳಗ್ಗೆ 10.30 ರಿಂದ 12 ರವರೆಗೆ

■ **ಜೆಎಸ್‌ಎಸ್ ಆಯುರ್ವೇದ ಆಸ್ಪತ್ರೆ:** ಬೆಳಗ್ಗೆ 9ರಿಂದ ಮೂಲವ್ಯಾಧಿ/ಪೈಲ್ಸ್ ರೋಗ ಚಿಕಿತ್ಸಾ ಶಿಬಿರ, ವಸಂತ ವೇಮನ ದೇಹ ಶುದ್ಧಿ ಚಿಕಿತ್ಸಾ ಶಿಬಿರ, ಇಸುಬು ತಪಾಸಣಾ ಶಿಬಿರ, ಒಟೋಮೈಕೋಸಿಸ್ – ಕಿವಿಯ ಫಂಗಲ್ ಸೋಂಕಿಗೆ ಚಿಕಿತ್ಸಾ ಶಿಬಿರ, ಸ್ಥಳ: ಜೆಎಸ್‌ಎಸ್ ಆಯುರ್ವೇದ ಆಸ್ಪತ್ರೆ, ಲಲಿತಾದ್ರಿ ರಸ್ತೆ, ಆಲನಹಳ್ಳಿ.

■ **ಎಂಎಂಕೆ ಮತ್ತು ಎಸ್‌ಡಿಎಂ ಮಹಿಳಾ ವಿದ್ಯಾಲಯ :** ಪ್ರಭಿಗ್ಯಾನ್, ಅಂತರ ಕಾಲೇಜು ಉತ್ಸವ, ಉದ್ಘಾಟನೆ : ಪತ್ರಕರ್ತೆ ರಶ್ಮಿ ಕೋಟಿ, ಮುಖ್ಯ ಅತಿಥಿಗಳು : ಲೇಖಕಿ ಕುಸುಮಾ ಆಯರಹಳ್ಳಿ, ಸ್ಥಳ: ವಿದ್ಯಾಲಯ ಆವರಣ, ಬೆಳಗ್ಗೆ 9.30ಕ್ಕೆ.

■ **ರಾಮ್‌ಸನ್ಸ್ ಪ್ರತಿಷ್ಠಾನ :** ಬೊಂಬೆ ಮನೆ, ದಸರೆ ಬೊಂಬೆ ಪ್ರದರ್ಶನ, ಸ್ಥಳ: ರಾಮ್‌ಸನ್ಸ್ ಬೊಂಬೆ ಮನೆ, 91, ಆಮ್ರಪಾಲಿ ಸೀರೆ ಮಳಿಗೆ ಮೇಲೆ, ನಜರ್‌ಬಾದ್ ಮುಖ್ಯರಸ್ತೆ, ಬೆಳಗ್ಗೆ 10ಕ್ಕೆ.

■ **ಮೈಸೂರು ವಿಶ್ವವಿದ್ಯಾನಿಲಯ ರಾಷ್ಟ್ರೀಯ ಸೇವಾ ಯೋಜನೆ, ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ, ಕರ್ನಾಟಕ ಸರ್ಕಾರ :** ರಾಜ್ಯ ಮಟ್ಟದ ಯುವ ಜನೋತ್ಸವದ ಸಮಾರೋಪ ಸಮಾರಂಭ, ಅಧ್ಯಕ್ಷತೆ: ಮೈಸೂರು ವಿವಿ ಕುಲಸಚಿವರಾದ ಶ್ರೀಮತಿ ಎಂ.ಕೆ. ಸವಿತಾ, ಸಮಾರೋಪ ಭಾಷಣ : ರಾಸೇಯೋ ಪ್ರಾದೇಶಿಕ ನಿರ್ದೇಶಕ ಡಿ. ಕಾರ್ತಿಕೇಯನ್, ಉಪಸ್ಥಿತರು : ಸಿಂಡಿಕೇಟ್ ಸದಸ್ಯರಾದ ಪ್ರೊ. ಶಬ್ಬೀರ್ ಮೊಹಮ್ಮದ್ ಮುಸ್ತಫಾ, ಮಹಾದೇಶು, ಸ್ಥಳ: ಎನ್‌ಎಸ್‌ಎಸ್ ಭವನ, ಸಾಹುಕಾರ್ ಚನ್ನಯ್ಯ ರಸ್ತೆ, ಬೆಳಗ್ಗೆ 11ಕ್ಕೆ.

■ **ಯುವ ವ್ಯವಹಾರಗಳು ಹಾಗೂ ಕ್ರೀಡಾ ಸಚಿವಾಲಯ, ನೆಹರು ಯುವ ಕೇಂದ್ರ :** ಅಂತರ ಜಿಲ್ಲಾ ಯುವ ವಿನಿಮಯ ಕಾರ್ಯಕ್ರಮದ ಸಮಾರೋಪ ಸಮಾರಂಭ, ಸಮಾರೋಪ ಭಾಷಣ : ಅಪರ ಜಿಲ್ಲಾಧಿಕಾರಿ ಡಾ. ಪಿ. ಶಿವರಾಜು, ಅಧ್ಯಕ್ಷತೆ : ನೆಹರು ಯುವ ಕೇಂದ್ರದ ರಾಜ್ಯ ನಿರ್ದೇಶಕ ಅಶೋಕ್ ಕುಮಾರ್ ದಾಸ್, ಮುಖ್ಯ ಅತಿಥಿಗಳು : ಡಾ. ಪ್ರಸಾದ್, ಇಮ್ರಾನ್ ಅಹ್ಮದ್ ಬೇಗ್, ಬಿ.ಎಸ್. ಗುರುಪ್ರಸಾದ್, ಸ್ಥಳ: ಸರ್ಕಾರಿ ಯೂತ್ ಹಾಸ್ಟೆಲ್, ಸರಸ್ವತಿಪುರಂ, ಮಧ್ಯಾಹ್ನ 12ಕ್ಕೆ.

■ **ಜೆಎಸ್‌ಎಸ್ ಕಾನೂನು ಕಾಲೇಜು :** ಭಾರತದಲ್ಲಿ ಸ್ಪರ್ಧಾ ಕಾನೂನು : ಪ್ರವೃತ್ತಿಗಳು ಮತ್ತು ಭವಿಷ್ಯದ ಒಳನೋಟಗಳು ಕುರಿತು ವಿಚಾರ ಸಂಕಿರಣ, ಸಂಪನ್ಮೂಲ ವ್ಯಕ್ತಿ : ನವದೆಹಲಿ ಕಾಂಪಿಟೇಷನ್ ಕಮಿಷನ್ ಆಫ್ ಇಂಡಿಯಾ ನಿರ್ದೇಶಕ ಡಾ. ಕೆ.ಡಿ. ಸಿಂಗ್, ಉಪಸ್ಥಿತರು : ಚೀಫ್ ಎಕ್ಸಿಕ್ಯೂಟಿವ್ ಪ್ರೊ. ಕೆ.ಎಸ್. ಸುರೇಶ್, ಪ್ರಿನ್ಸಿಪಾಲ್ ಡಾ. ಎನ್. ವಾಣಿಶ್ರೀ, ಸ್ಥಳ: ಸಿಲ್ವರ್ ಜ್ಯೂಬಿಲಿ ಹಾಲ್, ಮಧ್ಯಾಹ್ನ 3ಕ್ಕೆ.

■ **ಕಾಲೇಜಿನ ಆಂತರಿಕ ಗುಣಮಟ್ಟದ ಭರವಸೆ ಕೋಶ (ಐಕ್ಯುಎಸಿ), ಕರ್ನಾಟಕ ರಾಜ್ಯ ಪತ್ರಾಗಾರ, ವಿಭಾಗೀಯ ಪತ್ರಾಗಾರ ಕಚೇರಿ :** ಮೈಸೂರು ಸಂಸ್ಥಾನದಲ್ಲಿ ಮಹಿಳೆಯರ ಸಬಲೀಕರಣ ಐತಿಹಾಸಿಕ ಒಳನೋಟಗಳು, ಸಾಮಾಜಿಕ ಬದಲಾವಣೆ ಮತ್ತು ಭವಿಷ್ಯದ ನಿರೀಕ್ಷೆಗಳು ಕುರಿತು ಎರಡು ದಿನಗಳ ಬಹು–ಶಿಸ್ತಿನ ರಾಷ್ಟ್ರೀಯ ಸಮ್ಮೇಳನದ ಸಮಾರೋಪ ಸಮಾರಂಭ, ಮುಖ್ಯ ಅತಿಥಿಗಳು : ನವದೆಹಲಿಯ ಜೆಎನ್‌ಯುನ ನಿವೃತ್ತ ಇತಿಹಾಸ ಪ್ರಾಧ್ಯಾಪಕ ಪ್ರೊ. ಹಿರಿಸಾವೆ ಶ್ರೀನಿವಾಸ್ ರಾವ್ ಪ್ರಭಾಕರ್, ವಿಭಾಗೀಯ ಪತ್ರಾಗಾರ ಇಲಾಖೆಯ ಹಿರಿಯ ಸಹಾಯಕ ನಿರ್ದೇಶಕ ಡಾ.ಮಂಜುನಾಥ್ ಹೆಚ್.ಎಲ್, ಅಧ್ಯಕ್ಷತೆ : ಕಾಲೇಜಿನ ಪ್ರಾಂಶುಪಾಲ ಜಿ.ಆರ್. ನಟರಾಜ, ಸ್ಥಳ: ವಿಜಯನಗರ ಸರ್ಕಾರಿ ಮಹಿಳಾ ಪ್ರಥಮ ದರ್ಜೆ ಕಾಲೇಜು, ಮಧ್ಯಾಹ್ನ 3.45ಕ್ಕೆ.

■ **ಮಹಾರಾಣಿ ಮಹಿಳಾ ವಾಣಿಜ್ಯ ಮತ್ತು ವ್ಯವಸ್ಥಾಪನಾ ಕಾಲೇಜು :** ಮಾಸ್ಟರಿಂಗ್ ಸಂಶೋಧನಾ ವಿಧಾನ ಕುರಿತು ಕಾರ್ಯಾಗಾರದ ಸಮಾರೋಪ, ಮುಖ್ಯ ಅತಿಥಿಗಳು : ಪ್ರೊ. ಆರ್. ಮಹೇಶ್, ಅಧ್ಯಕ್ಷತೆ : ಕಾಲೇಜು ಪ್ರಿನ್ಸಿಪಾಲ್ ಪ್ರೊ. ಸೋಮಣ್ಣ, ಸ್ಥಳ: ಕಾಲೇಜು ಸಭಾಂಗಣ, ಸಂಜೆ 5ಕ್ಕೆ.

■ **ಗಾನಭಾರತೀ :** ವಿದುಷಿ ಸುಮಾ ರಾಜೇಶ್ ಅವರಿಂದ ಭರತನಾಟ್ಯ, ಸ್ಥಳ: ವೀಣೆ ಶೇಷಣ್ಣ ಭವನ, ಆದಿಚುಂಚನಗಿರಿ ರಸ್ತೆ, ಕುವೆಂಪುನಗರ, ಸಂಜೆ 6ಕ್ಕೆ.

■ **ರಂಗಾಯಣ :** ಭಾರತೀಯ ರಂಗ ಶಿಕ್ಷಣ ಕೇಂದ್ರದ ಕಲಾವಿದರಿಂದ ಆ ಊರು ಈ ಊರು ನಾಟಕ ಪ್ರದರ್ಶನ, ನಿರ್ದೇಶನ : ಯತೀಶ್ ಎನ್. ಕೊಳ್ಳೇಗಾಲ, ಸ್ಥಳ: ಭೂಮಿಗೀತ, ರಂಗಾಯಣ, ಸಂಜೆ 6.30ಕ್ಕೆ.

■ **ನೇಪಥ್ಯ ರಂಗ ತಂಡ :** ನೇಪಥ್ಯ ರಂಗ ತಂಡದ ಕಲಾವಿದರಿಂದ ರಾಷ್ಟ್ರಕವಿ ಕುವೆಂಪು ಅವರ ವಿರಚಿತ ಸ್ಮಶಾನ ಕುರುಕ್ಷೇತ್ರಂ ನಾಟಕ ಪ್ರದರ್ಶನ, ನಿರ್ದೇಶನ :ಮಂಜುನಾಥ್ ಬ್ಯಾಟೆ, ಸ್ಥಳ: ಕಿರುರಂಗಮಂದಿರ ಆವರಣ, ರಂಗಾಯಣ, ಸಂಜೆ 6.30ಕ್ಕೆ.

ಮೈಸೂರು ಆಕಾಶವಾಣಿ



ಬೆಳಗ್ಗೆ: 6.10 ಚಿಂತನ, 6.15 ಗೀತಾರಾಧನ, 6.35 ಮತ್ತು ಸಂಜೆ 6.10 ಬಣ್ಣದ ಬಾನಾಡಿಗಳು–ಬಾನುಲಿ ಸರಣಿ, ರಚನೆ : ಡಾ. ಕಲೀಂವುಲ್ಲ, ಪ್ರಸ್ತುತಿ : ಜಿ.ಶಾಂತಕುಮಾರ್, 6.40 ಅರಿವಿನ ಶಿಖರ –ಸರ್ವಜ್ಞನ ತ್ರಿಪದಿಗಳನ್ನಾಧರಿಸಿದ ಬಾನುಲಿ ಸರಣಿ, ಗಾಯನ – ಟಿ.ಎನ್.ಅಶ್ವಿನಿ, ವ್ಯಾಖ್ಯಾನ– ಡಾ. ಪ್ರದೀಪ್ ಕುಮಾರ್ ಹೆಬ್ರಿ, 6.50 ರೈತರಿಗೆ ಸಲಹೆ, 7.15 KABHI-ಕರ್ನಾಟಕ–ಮೆದುಳು ಆರೋಗ್ಯ ಕುರಿತ ಪ್ರಾಯೋಜಿತ ಕಾರ್ಯಕ್ರಮ, ಪ್ರಾಯೋಜಕರು : ನಿಮ್ಹಾನ್ಸ್ ಸಂಸ್ಥೆ, ಬೆಂಗಳೂರು, 8.30 ಕನ್ನಡ ಚಿತ್ರಗೀತೆಗಳು, 9.00 ನಮ್ಮ ಆರೋಗ್ಯ–ವಿಶ್ವ ಡೌನ್ ಸಿಂಡ್ರೋಮ್ ಜಾಗೃತಿ ದಿನಾಚರಣೆಯ ಸಂದರ್ಭದಲ್ಲಿ ಡೌನ್ ಸಿಂಡ್ರೋಮ್ ಕುರಿತು ಡಾ. ಅನುಷಾ ರಾಜ್. ಕೆ ಅವರೊಂದಿಗೆ ಮಾತುಕತೆ ಮತ್ತು ಮಕ್ಕಳ ಮೂತ್ರಪಿಂಡಗಳ ಆರೈಕೆ ಕುರಿತು ಡಾ. ಕೆ.ಬಿ.ಶಶಿಕಿರಣ್ ಅವರೊಂದಿಗೆ ಮಾತುಕತೆ. ಇವರೊಂದಿಗೆ ಭಾಗವಹಿಸುತ್ತಾರೆ–ಬೇದ್ರೆ ಮಂಜುನಾಥ್, 9.30 ಗಾಂಧಿ ಸ್ಮೃತಿ, 10.00 ಕರ್ನಾಟಕ ಶಾಸ್ತ್ರೀಯ ಸಂಗೀತ, 11.00 ನಿಮ್ಮೊಂದಿಗೆ ಮೈಸೂರು ಆಕಾಶವಾಣಿ, ಸೈಕಲ್ ಸವಾರಿ ಮಾತಿನ ಲಹರಿ, ಪ್ರಸ್ತುತಿ : ಜಾಂಪಣ್ಣ ಆಶೀಹಾಳ್

ಮಧ್ಯಾಹ್ನ: 12.35 ದೇವರನಾಮ, 12.45 ಕಾದಂಬರಿ ವಿಹಾರ– ಎಂ. ಆರ್. ಶ್ರೀನಿವಾಸಮೂರ್ತಿಯವರ ರಂಗಣ್ಣನ ಕನಸಿನ ದಿನಗಳು ಕಾದಂಬರಿಯ ಬಾನುಲಿ ಓದು. ಪ್ರಸ್ತುತಿ : ಉಮೇಶ್. ಎಸ್. ಎಸ್., 1.00 ಪ್ರಗತಿ ಪಥ – ಕೇಂದ್ರ ಸರ್ಕಾರದ ವಿವಿಧ ಅಭಿವೃದ್ಧಿ ಯೋಜನೆಗಳ ಸರಣಿ, 1.20 ಭಾವಗೀತೆಗಳು, 1.30 ಸಂದೇಶ ಆಧಾರಿತ ಶ್ರೋತೃಗಳ ಮೆಚ್ಚಿನ ಚಿತ್ರಗೀತೆಗಳ ಕಾರ್ಯಕ್ರಮ, 2.40 ದಾರಿ ದೀಪ –ಪ್ರಾಯೋಜಿತ ಕಾರ್ಯಕ್ರಮ, ಪ್ರಾಯೋಜಕರು: FEBA India, 2.55 ಸಿರಿಗನ್ನಡಂ ಗೆಲ್ಗೆ, ಪ್ರಸ್ತುತಿ :ಜಿ. ಕೆ. ರವೀಂದ್ರಕುಮಾರ್, 3.00 ಕರ್ನಾಟಕ ಶಾಸ್ತ್ರೀಯ ಸಂಗೀತ, 4.00 ಮಹಿಳಾರಂಗ, 4.30 ವೃತ್ತಿ ಮಾರ್ಗದರ್ಶನ, ಆರ್ಕಿಟೆಕ್ಚರ್ ಅಂಡ್ ಪ್ಲಾನಿಂಗ್ ವಿಷಯದಲ್ಲಿ ಇರುವ ಅಧ್ಯಯನ ಹಾಗೂ ವೃತ್ತಿಪರ ಅವಕಾಶಗಳು ಕುರಿತು ಮೈಸೂರು ವಿಶ್ವವಿದ್ಯಾಲಯದ ಸ್ಕೂಲ್ ಆಫ್ ಆರ್ಕಿಟೆಕ್ಚರ್ ಅಂಡ್ ಪ್ಲಾನಿಂಗ್‌ನ ಫ್ಯಾಕಲ್ಟಿ ಡಾ. ಗೌತಮ್ ಕೊನಿಕರ್ ಮತ್ತು ಪ್ರಥಮ ರ್‍ಯಾಂಕ್‌ನೊಂದಿಗೆ 16 ಚಿನ್ನದ ಪದಕ ಗಳಿಸಿದ ಕಾವ್ಯಶ್ರೀ. ಯು.ಎ ಅವರೊಂದಿಗೆ ಮಾತುಕತೆ, ಇವರೊಂದಿಗೆ ಭಾಗವಹಿಸುತ್ತಾರೆ–ಬೇದ್ರೆ ಮಂಜುನಾಥ್, 6.50 ಕೃಷಿರಂಗ, ಮೈಸೂರಿನ ಕೇಂದ್ರ ರೇಷ್ಮೆ ಸಂಶೋಧನೆ ಹಾಗೂ ತರಬೇತಿ ಸಂಸ್ಥೆಯ ಆವರಣದಲ್ಲಿ ನಡೆದ ರೇಷ್ಮೆ ಐಸಿರಿ ಬಾನುಲಿ ಸರಣಿಯ ಸಮಾರೋಪ ಸಮಾರಂಭದ ಬಾನುಲಿ ವರದಿ. ಪ್ರಸ್ತುತಿ: ಆರ್. ಲೋಕೇಶ್ವರಿ, 7.45 ವಿಧಾನಮಂಡಲದಲ್ಲಿ ಇಂದು, 8.00 ಸಂಸತ್ ಸಮೀಕ್ಷಾ, 8.15 ರಸಮಂಜರಿ, 9.30 ಕರ್ನಾಟಕ ಶಾಸ್ತ್ರೀಯ ಸಂಗೀತ, 10.00–ಸಂಸತ್ತಿನ ಪ್ರಶ್ನೋತ್ತರ ಕಲಾಪಗಳ ಧ್ವನಿಮುದ್ರಣದ ಪ್ರಸಾರ

ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

45

ಮಾರ್ಚ್ 21 ಶುಕ್ರವಾರ 2025

ಸಂಪುಟ: 45 | ಸಂಚಿಕೆ: 331 | ಪುಟಗಳು: 12

ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23
ನಗರ ಕಚೇರಿಗಳು: ಕೆ.ಆರ್.ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695
ಸುದ್ದಿ ಜಾಹೀರಾತಿಗಾಗಿ–ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871

ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com, website: www.mysurumithra.com

₹4

ವಿಧಾನಸಭೆಯಲ್ಲಿ ಸದ್ದು ಮಾಡಿದ ಸಚಿವರು, ಶಾಸಕರು, ಮುಖಂಡರ ಹನಿಟ್ರ್ಯಾಪ್

ಉನ್ನತ ಮಟ್ಟದ ತನಿಖೆಗೆ ನಿರ್ಧಾರ

■ ಗೃಹ ಸಚಿವ ಡಾ. ಪರಮೇಶ್ವರ್ ಘೋಷಣೆ ■ ಬೆಕ್ಕಿಗೆ ಗಂಟೆ ಕಟ್ಟುವವರು ಯಾರು ಎಂಬಂತಿದ್ದ ಪ್ರಕರಣಕ್ಕೆ ರೋಚಕ ತಿರುವು ನೀಡಿದ ಯತ್ನಾಳ್ ■ ಸಹಕಾರ ಸಚಿವ ರಾಜಣ್ಣ ಅವರ ಮೇಲೆಯೇ ಹನಿಟ್ರ್ಯಾಪ್ ಆಗಿದೆ; ಸರ್ಕಾರ ಮಾಡಿಸುತ್ತಿದೆಯೇ; ಸರ್ಕಾರದಲ್ಲಿರುವವರು ಮಾಡುತ್ತಿದ್ದಾರೆಯೇ; ಏರುಧನಿಯಲ್ಲಿ ಯತ್ನಾಳ್ ಪ್ರಶ್ನೆ ■ ಕರ್ನಾಟಕ ಪೆನ್‌ಡ್ರೈವ್, ಸಿಡಿ ಫ್ಯಾಕ್ಟರಿ ಎಂಬ ಕುಖ್ಯಾತಿ ಆಗಿದೆ; ಆಡಳಿತ, ವಿಪಕ್ಷ, ರಾಷ್ಟ್ರ ಮಟ್ಟದ ರಾಜಕಾರಣದ 48 ಮಂದಿಯ ಹನಿಟ್ರ್ಯಾಪ್ ಆಗಿದೆ–ರಾಜಣ್ಣ ಆಕ್ರೋಶ

ಬೆಂಗಳೂರು, ಮಾ.20(ಕೆಎಂಶಿ)– ರಾಜಕಾರಣಿಗಳ ಹನಿಟ್ರ್ಯಾಪ್ ಪ್ರಕರಣಗಳಿಗೆ ಸಂಬಂಧಿಸಿದಂತೆ ಉನ್ನತ ಮಟ್ಟದ ತನಿಖೆ ನಡೆಸುವುದಾಗಿ ಗೃಹ ಸಚಿವ ಡಾ.ಜಿ.ಪರಮೇಶ್ವರ್ ವಿಧಾನಸಭೆಯಲ್ಲಿಂದು ಘೋಷಿಸಿದರು.

ಹನಿಟ್ರ್ಯಾಪ್ ಪ್ರಕರಣಗಳು ಸಾರ್ವಜನಿಕ ಜೀವನದಲ್ಲಿರುವ ರಾಜಕಾರಣಿಗಳ ಬದುಕಿಗೆ ಹಾನಿ ಉಂಟು ಮಾಡುತ್ತಿದೆ ಎಂದು ತೀವ್ರ ಅಸಮಾಧಾನ ವ್ಯಕ್ತಪಡಿಸಿದರು.

ಪ್ರಕರಣಕ್ಕೆ ಸಂಬಂಧಿಸಿದಂತೆ ಸಹಕಾರ ಸಚಿವ ಕೆ.ಎನ್.ರಾಜಣ್ಣ, ಬಸನಗೌಡ ಪಾಟೀಲ್ ಯತ್ನಾಳ್, ಸುನೀಲ್ ಕುಮಾರ್ ಹಾಗೂ ಮುನಿರತ್ನ ಅವರು ಸದನದಲ್ಲಿ ಮಾಡಿರುವ ಪ್ರಸ್ತಾಪವನ್ನು ಸರ್ಕಾರ ಗಂಭೀರವಾಗಿ ತೆಗೆದುಕೊಂಡಿದೆ. ಸಚಿವ ರಾಜಣ್ಣ ತಮಗೆ ಲಿಖಿತ ದೂರು ನೀಡುವುದಾಗಿ ಹೇಳಿದ್ದಾರೆ. ಅವರ ದೂರನ್ನು ಆಧರಿಸಿ ಉನ್ನತ ಮಟ್ಟದ ತನಿಖೆ ನಡೆಸಿ, ಸತ್ಯಾಸತ್ಯತೆ ಬಯಲು ಮಾಡುತ್ತೇನೆ.

ಸದನದ ಪ್ರತಿಯೊಬ್ಬ ಸದಸ್ಯರ ಹಕ್ಕು ಕಾಪಾಡುವುದು ನಮ್ಮ ಕರ್ತವ್ಯ, ಹನಿಟ್ರ್ಯಾಪ್ ಮೂಲಕ ಜನಪ್ರತಿನಿಧಿಗಳ ಗೌರವಕ್ಕೆ ಚ್ಯುತಿ ತರುವುದನ್ನು ಕೊನೆಗಾಣಿಸುತ್ತೇನೆ.

ರಾಜ್ಯ ವಿಧಾನಮಂಡಲಕ್ಕೆ ರಾಷ್ಟ್ರಮಟ್ಟದಲ್ಲಿ ದೊಡ್ಡ ಗೌರವ ಇದೆ. ಅದಕ್ಕೆ ಚ್ಯುತಿ ತರಲು ಬಿಡುವುದಿಲ್ಲ, ಈ ಸದನದಲ್ಲಿ ದೊಡ್ಡ ಮಹನೀಯರು ತಮ್ಮ ಆದರ್ಶ ಮತ್ತು ಛಾಪು ಮೂಡಿಸಿದ್ದಾರೆ. ಹನಿಟ್ರ್ಯಾಪ್ ಮೂಲಕ ಸದಸ್ಯರ ಗೌರವಕ್ಕೆ ಚ್ಯುತಿ ತಂದು ಅವರುಗಳ ಕುಟುಂಬದ ಮಾನ ತೆಗೆಯುತ್ತಿರುವವರ ವಿರುದ್ಧ ಕಠಿಣ ಕ್ರಮ ತಗೆದುಕೊಳ್ಳುವುದಾಗಿ ತಿಳಿಸಿದರು.



ಗೃಹ ಸಚಿವ ಡಾ. ಜಿ.ಪರಮೇಶ್ವರ್.

ಇದಕ್ಕೂ ಮುನ್ನ ಬಜೆಟ್ ಮೇಲಿನ ಚರ್ಚೆ ವೇಳೆ ಬಸನಗೌಡ ಪಾಟೀಲ್ ಯತ್ನಾಳ್ ಮಾತನಾಡಿ, ಸಚಿವರು, ಶಾಸಕರನ್ನು ಹನಿಟ್ರ್ಯಾಪ್ ಮಾಡಲಾಗಿದೆ.

ಸಹಕಾರ ಸಚಿವ ರಾಜಣ್ಣ ಅವರ ಮೇಲೆಯೇ ಹನಿಟ್ರ್ಯಾಪ್ ಆಗಿದೆ. ಇದನ್ನು ಸರ್ಕಾರ ಮಾಡಿಸುತ್ತಿದೆಯೇ ಅಥವಾ ಸರ್ಕಾರದಲ್ಲಿರುವವರು ಮಾಡುತ್ತಿದ್ದಾರೆಯೇ ಎಂದು ಖಾರವಾಗಿ ಪ್ರಶ್ನಿಸಿದರು.

ಗೃಹ ಸಚಿವರೂ ಸದನದಲ್ಲಿದ್ದಾರೆ, ಅವರು ಉತ್ತರ ನೀಡಬೇಕು ಮತ್ತು ಹನಿಟ್ರ್ಯಾಪ್ ಮಾಡುವವರನ್ನು ಪತ್ತೆ ಹಚ್ಚಿ ಕಠಿಣ ಕ್ರಮ ಕೈಗೊಳ್ಳಬೇಕು, ಇದಕ್ಕೆ ಉನ್ನತ ಮಟ್ಟದ ತನಿಖೆ ನಡೆಸಿ ಎಂದು ಆಗ್ರಹಿಸಿದರು.

ಸದನದಲ್ಲೇ ಇದ್ದ ರಾಜಣ್ಣ, ನನ್ನ ಹೆಸರನ್ನು ಪ್ರಸ್ತಾಪಿಸಿರುವುದರಿಂದ ನಾನು ವಾಸ್ತವಾಂಶ ತಿಳಿಸಲೇಬೇಕು. ಕರ್ನಾಟಕ ಎಂದರೆ, ಪೆನ್‌ಡ್ರೈವ್ ಮತ್ತು ಸಿ.ಡಿ. ಫ್ಯಾಕ್ಟರಿ ಎಂಬ ಕುಖ್ಯಾತಿ ಆಗಿದೆ, ಸದನದಲ್ಲಿರುವ ಆಡಳಿತ ಹಾಗೂ ಪ್ರತಿಪಕ್ಷ ಸದಸ್ಯರಲ್ಲದೆ, ರಾಷ್ಟ್ರಮಟ್ಟದ ರಾಜಕಾರಣದ 48 ಮಂದಿಯ ಹನಿಟ್ರ್ಯಾಪ್ ನಡೆದಿದೆ.

ಇದರ ಹಿಂದಿರುವವರು ಬಹಿರಂಗಗೊಳ್ಳಬೇಕು. ಇದಕ್ಕೆ ಸಂಬಂಧಿಸಿದಂತೆ ನಾನು, ಗೃಹ ಸಚಿವರಿಗೆ ಲಿಖಿತ ದೂರು ನೀಡುತ್ತೇನೆ. ಈ ಸಿ.ಡಿ. ಮತ್ತು ಪೆನ್‌ಡ್ರೈವ್‌ಗಳ ನಿರ್ಮಾಪಕರು, ನಿರ್ದೇಶಕರು, ನಟರು ಸೇರಿದಂತೆ ಯಾರೆಲ್ಲಾ ಭಾಗಿಯಾಗಿದ್ದಾರೆ ಅವರನ್ನು ಹೊರಗೆಳೆಯಬೇಕು.

ನನ್ನ ಬಳಿ ಕೆಲವು ಮಹತ್ವದ ದಾಖಲೆಗಳಿವೆ. ಅವುಗಳನ್ನು ಗೃಹ ಸಚಿವರಿಗೆ ದೂರು ಪ್ರತಿಯ ಜೊತೆ ನೀಡುತ್ತೇನೆ. ಹಾಸನದಲ್ಲಿ ನಡೆದ ಸಿಡಿ ಮತ್ತು ಪೆನ್‌ಡ್ರೈವ್ ಪ್ರಕರಣ ಬಯಲಾಗಿ ನೂರಾರು ಹೆಣ್ಣುಮಕ್ಕಳ ಬಾಳು ಹಾಳಾಗಿದೆ. ಇನ್ನು ಮುಂದೆ ಇಂತಹ ಕೃತ್ಯಗಳು ರಾಜ್ಯದಲ್ಲಿ ನಡೆಯಬಾರದು.

ಈ ಪಿತೂರಿ ಹಿಂದೆ ಯಾರೆಲ್ಲಾ ಇದ್ದಾರೋ ಅವರ ಮುಖವಾಡ ಕಳಚಬೇಕು, ಗೃಹ ಸಚಿವರು ಇದರತ್ತ ತಕ್ಷಣ ಕಾರ್ಯಮಗ್ನರಾಗಬೇಕು ಎಂದು ಮನವಿ ಮಾಡಿದರು.

ನನ್ನ ಮನೆ ಹಾಳು ಮಾಡಿದರು: ರಾಜಣ್ಣ ಮಾತು ಮುಗಿಸುತ್ತಿದ್ದಂತೆ ಹನಿಟ್ರ್ಯಾಪ್‌ಗೆ ಒಳಗಾಗಿ ಜೈಲು ಸೇರಿದ್ದ ಬಿಜೆಪಿ ಶಾಸಕ ಮುನಿರತ್ನ ಮಾತನಾಡಿ, ರಾಜಕೀಯ ದ್ವೇಷದಿಂದ ಸಿ.ಡಿ. ಮಾಡಿ ನನ್ನ ಮನೆ ಹಾಳು ಮಾಡಿದರು. ನಾನೊಬ್ಬನೇ ಅಲ್ಲ, ರಮೇಶ್ ಜಾರಕಿಹೊಳಿ, ಎಚ್.ಡಿ.ರೇವಣ್ಣ ಕುಟುಂಬವನ್ನು ಸಿ.ಡಿ. ಮತ್ತು ಪೆನ್‌ಡ್ರೈವ್ ಫ್ಯಾಕ್ಟರಿ ಮಾಲೀಕ ನಾಶ ಮಾಡಿದ. ನನ್ನ ಮೇಲೆ ಸುಳ್ಳು ರೇಪ್ ಕೇಸ್ ಹಾಕಿಸಿ ಜೈಲಿಗೆ ಹೋಗುವಂತೆ ಮಾಡಿದ. ■ 6ನೇ ಪುಟಕ್ಕೆ

ಸಚಿವರೊಬ್ಬರ ಮೇಲೆ 2 ಬಾರಿ ಹನಿಟ್ರ್ಯಾಪ್ ಪ್ರಯತ್ನ

ಬೆಂಗಳೂರು, ಮಾ.20– ವಿಧಾನಮಂಡಲ ಅಧಿವೇಶನದಲ್ಲಿ ಬಜೆಟ್ ಮೇಲಿನ ಚರ್ಚೆಗಿಂತಲೂ ಹನಿಟ್ರ್ಯಾಪ್ ಪ್ರಕರಣ ಭಾರಿ ಸದ್ದು ಮಾಡುತ್ತಿದ್ದು, ಸಚಿವರೊಬ್ಬರ ಮೇಲೆ ಎರಡು ಬಾರಿ ಹನಿಟ್ರ್ಯಾಪ್‌ಗೆ ಯತ್ನ ನಡೆದಿದೆ. ಆದರೆ ಅವರ ಪ್ರಯತ್ನ ವಿಫಲವಾಗಿದೆ ಎಂದು ಲೋಕೋಪಯೋಗಿ ಸಚಿವ ಸತೀಶ್ ಜಾರಕಿಹೊಳಿ ಸ್ಫೋಟಕ ಹೇಳಿಕೆ ನೀಡಿದ್ದಾರೆ. ವಿಧಾನಸೌಧದಲ್ಲಿ ಗುರುವಾರ ■ 6ನೇ ಪುಟಕ್ಕೆ



ಹನಿಟ್ರ್ಯಾಪ್‌ಗೆ ಒಳಗಾಗಿದ್ದರೆ ದೂರು ನೀಡಲಿ: ಡಿಕೆಶಿ

ಬೆಂಗಳೂರು, ಮಾ.20– ಸಿಎಂ ಸಿದ್ದರಾಮಯ್ಯ ಸಂಪುಟದ ಕೆಲವು ಸಚಿವರ ಹನಿಟ್ರ್ಯಾಪ್ ನಡೆದಿದ್ದರೆ, ಈ ವಿಚಾರವಾಗಿ ಪೊಲೀಸರಿಗೆ ದೂರು ನೀಡಲಿ ಎಂದು ಪ್ರದೇಶ ಕಾಂಗ್ರೆಸ್ ಅಧ್ಯಕ್ಷರೂ ಆಗಿರುವ ಡಿಸಿಎಂ ಡಿ.ಕೆ ಶಿವಕುಮಾರ್ ಇಂದಿಲ್ಲಿ ತಿಳಿಸಿದ್ದಾರೆ. ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ನನಗೆ ಅದರ ಬಗ್ಗೆ ಮಾಹಿತಿ ಇಲ್ಲ, ಯಾವುದಾದರೂ ಮಂತ್ರಿ ಹನಿಟ್ರ್ಯಾಪ್‌ನಲ್ಲಿ ಸಿಲುಕಿದ್ದರೆ ಅಥವಾ ಸಂಚಿಗೆ ಒಳಗಾಗಿದ್ದರೆ, ಅಂತಹವರು ಪೊಲೀಸರಿಗೆ ದೂರು ನೀಡಲಿ, ಇದರ ಬಗ್ಗೆ ತನಿಖೆ ಮಾಡಿಸೋಣ ಎಂದರು.

ನಿವೃತ್ತ ನ್ಯಾಯಾಧೀಶರ ನೇತೃತ್ವದಲ್ಲಿ ತನಿಖೆಗೆ ಕೆ.ಎನ್.ರಾಜಣ್ಣ ಆಗ್ರಹ

ಬೆಂಗಳೂರು, ಮಾ.20– ಸಚಿವ ಸತೀಶ್ ಜಾರಕಿಹೊಳಿ, ಪ್ರಜ್ವಲ್ ರೇವಣ್ಣ ಸೇರಿ 48 ಮುಖಂಡರ ವಿರುದ್ಧ ಪೆನ್‌ಡ್ರೈವ್ ತಯಾರು ಮಾಡಲಾಗಿದೆ. ಇದರಲ್ಲಿ ಬೇರೆ ರಾಜ್ಯದ ಸಚಿವರು, ಜಡ್ಜ್‌ಗಳು ಇದ್ದಾರೆ. ಇಂತಹ ಬ್ಲ್ಯಾಕ್ ಮೇಲ್ ಸಂಪೂರ್ಣ ಅಂತ್ಯವಾಗಬೇಕು. ಅದಕ್ಕಾಗಿ ಈ ಪ್ರಕರಣ ನಿವೃತ್ತ ನ್ಯಾಯಾಧೀಶರ ನೇತೃತ್ವದಲ್ಲಿ ತನಿಖೆ ಆಗಬೇಕು ಎಂದು ಸಚಿವ ಕೆ.ಎನ್. ರಾಜಣ್ಣ ಆಗ್ರಹಿಸಿದರು. ■ 6ನೇ ಪುಟಕ್ಕೆ



ಸಿಎಂಗೆ ದೂರು ನೀಡಿದ ಸಚಿವ ರಾಜಣ್ಣ ಪುತ್ರ

ಬೆಂಗಳೂರು, ಮಾ.20– ನನ್ನ ಮತ್ತು ನನ್ನ ತಂದೆ ಮೇಲೆ ಹನಿಟ್ರ್ಯಾಪ್ ಯತ್ನ ನಡೆದಿದೆ ಎಂದು ಸಚಿವ ಕೆ.ಎನ್. ರಾಜಣ್ಣ ಪುತ್ರ ರಾಜೇಂದ್ರ ರಾಜಣ್ಣ ಹೊಸ ಬಾಂಬ್ ಸಿಡಿಸಿದ್ದಾರೆ. ವಿಧಾನಸಭೆಯ ಅಧಿವೇಶನದಲ್ಲಿಂದು ತಮ್ಮ ವಿರುದ್ಧ ಹನಿಟ್ರ್ಯಾಪ್ ಯತ್ನ ನಡೆದಿರುವುದಾಗಿ ಸಚಿವ ರಾಜಣ್ಣ ಬಹಿರಂಗಪಡಿಸಿದರು. ಈ ಬೆನ್ನಲ್ಲೇ ಮಾಧ್ಯಮದ ಜೊತೆಗೆ ಮಾತನಾಡಿದ ಸಚಿವ ರಾಜಣ್ಣ ಪುತ್ರ, ನನ್ನ ತಂದೆ ಮತ್ತು ನನ್ನ ■ 6ನೇ ಪುಟಕ್ಕೆ



ತನಿಖೆ ಎಸ್‌ಐಟಿಯಿಂದ ಅಸಾಧ್ಯ; ಸಿಬಿಐಗೆ ನೀಡಲಿ

ಬೆಂಗಳೂರು, ಮಾ.20– ಸಚಿವ ಕೆ.ಎನ್. ರಾಜಣ್ಣ ಹಾಗೂ ಇತರರ ಮೇಲೆ ಹನಿಟ್ರ್ಯಾಪ್ ಪ್ರಯತ್ನ ನಡೆದಿರುವ ಪ್ರಕರಣವನ್ನು ಭೇದಿಸಲು ಎಸ್‌ಐಟಿಯಿಂದ ಅಸಾಧ್ಯ ಬದಲಾಗಿ ಈ ಕೇಸ್ ಅನ್ನು ಸಿಬಿಐಗೆ ನೀಡಿ ಎಂದು ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ.ವಿಜಯೇಂದ್ರ ಆಗ್ರಹಿಸಿದ್ದಾರೆ. ವಿಧಾನಸೌಧದಲ್ಲಿ ಗುರುವಾರ ಮಾತನಾಡಿದ ಅವರು, ಹನಿಟ್ರ್ಯಾಪ್ ಬಗ್ಗೆ ಸದನದಲ್ಲಿ ರಾಜಣ್ಣ ಗಂಭೀರವಾದ ■ 6ನೇ ಪುಟಕ್ಕೆ



ನನ್ನ ಮೇಲೆ ರೇಪ್ ಕೇಸ್ ಹಾಕಿಸಿದ್ದು ಡಿಸಿಎಂ ಡಿಕೆಶಿ

ಬೆಂಗಳೂರು, ಮಾ.20– ನನ್ನ ಮೇಲೆ ರೇಪ್ ಕೇಸ್ ಹಾಕಿಸಿದ್ದು ಡಿಸಿಎಂ ಡಿಕೆ ಶಿವಕುಮಾರ್ ಎಂದು ಶಾಸಕ ಮುನಿರತ್ನ ಇಂದಿಲ್ಲಿ ಆರೋಪಿಸಿದ್ದಾರೆ. ವಿಧಾನಸೌಧದಲ್ಲಿ ಮಾಧ್ಯಮಗಳೊಂದಿಗೆ ಮಾತನಾಡಿದ ಅವರು, ಪೊಲೀಸ್ ಕಮೀಷನರ್‌ಗೆ ಹೇಳಿ ಡಿಸಿಎಂ ಡಿ.ಕೆ.ಶಿವಕುಮಾರ್ ನನ್ನ ಮೇಲೆ ರೇಪ್ ಕೇಸ್ ಹಾಕಿಸಿದ್ದರು. ಅಟ್ರಾಸಿಟಿ ಕೇಸಲ್ಲಿ ಕೋರ್ಟ್‌ಗೆ ಹೋಗಿದ್ದಾಗ ■ 6ನೇ ಪುಟಕ್ಕೆ



ಪಾಕಿಸ್ತಾನಕ್ಕೆ ಬೇಹುಗಾರಿಕೆ; ಬೆಂಗಳೂರಿನ ಬಿಇಎಲ್ ಉದ್ಯೋಗಿ ಬಂಧನ

ಬೆಂಗಳೂರು, ಮಾ.20– ದೇಶದ ಗುಪ್ತ ರಕ್ಷಣಾ ಮಾಹಿತಿಗಳನ್ನು ಸಂಗ್ರಹಿಸಿ ಪಾಕಿಸ್ತಾನಕ್ಕೆ ರವಾನಿಸುತ್ತಿದ್ದ ಗೂಢಚಾರನೊಬ್ಬನನ್ನು ಬೆಂಗಳೂರಿನಲ್ಲಿ ಬಂಧಿಸಲಾಗಿದೆ. ಗುಪ್ತಚರ ಇಲಾಖೆ ಹಾಗೂ ಸೇನಾ ಇಂಟಲಿಜೆನ್ಸ್ ವಿಭಾಗ ನಡೆಸಿದ ಮಹತ್ವದ ಕಾರ್ಯಾಚರಣೆಯೊಂದರಲ್ಲಿ ಈತನನ್ನು ಸೆರೆಹಿಡಿಯಲಾಗಿದೆ. ಬಂಧಿತನನ್ನು ದೀಪ್‌ರಾಜ್ ಚಂದ್ರ ಎಂದು ಗುರುತಿಸಲಾಗಿದ್ದು, ಈತ ಭಾರತ್ ಎಲೆಕ್ಟ್ರಾನಿಕ್ಸ್‌ನಲ್ಲಿ ಕೆಲಸ ಮಾಡುತ್ತಿದ್ದ. ■ 6ನೇ ಪುಟಕ್ಕೆ



ಕುಮಾರಸ್ವಾಮಿ ಮರ್ಯಾದೆಯಿಂದ ಇದ್ದರೆ ಕ್ಷೇಮ...!

● ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಎಚ್ಚರಿಕೆ ● ಕೇತಗಾನಹಳ್ಳಿ ಸರ್ಕಾರಿ ಭೂಮಿ ಒತ್ತುವರಿ ವಿವಾದ ಸಂಬಂಧ ಪ್ರತಿಕ್ರಿಯೆ ● ದ್ವೇಷ ರಾಜಕಾರಣ ಎಂಬುದು ಅವರ ಡಿಎನ್‌ಎನಲ್ಲಿದೆ; ಭೂಮಿ ಒತ್ತುವರಿ ಸಂಬಂಧ ಕೇಸ್ ಹಾಕಿರುವುದು ನಾನಲ್ಲ; ಸಾಮಾಜಿಕ ಕಾರ್ಯಕರ್ತ ಎಸ್.ಆರ್.ಹಿರೇಮಠ್

ಬೆಂಗಳೂರು, ಮಾ.20(ಕೆಎಂಶಿ)– ಕೇಂದ್ರ ಸಚಿವ ಎಚ್.ಡಿ.ಕುಮಾರಸ್ವಾಮಿ ಮರ್ಯಾದೆಯಾಗಿ ಇದ್ದರೆ ಕ್ಷೇಮ ಎಂದು ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಇಂದಿಲ್ಲಿ ಎಚ್ಚರಿಕೆ ನೀಡಿದ್ದಾರೆ.

ದೆಹಲಿಯಿಂದ ಹಿಂತಿರುಗಿದ ನಂತರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಕೇತಗಾನಹಳ್ಳಿ ಸರ್ಕಾರಿ ಜಮೀನು ಒತ್ತುವರಿ ವಿವಾದ ಕುರಿತು ಪ್ರತಿಕ್ರಿಯಿಸಿ, ಅದಕ್ಕೂ ನನಗೂ ಸಂಬಂಧವಿಲ್ಲ, ಸುಖಾಸುಮ್ಮನೆ ಕುಮಾರಸ್ವಾಮಿ ಸರ್ಕಾರದ ಮೇಲೆ ಆರೋಪ ಮಾಡುತ್ತಿದ್ದಾರೆ. ಇನ್ನು ಮುಂದೆ ಇಂತಹ ಆರೋಪ ಮಾಡುವುದನ್ನು ಬಿಟ್ಟು ಮರ್ಯಾದೆಯಿಂದ ಇದ್ದರೆ ಕ್ಷೇಮ ಎಂದು ಹೇಳಿ, ತಮ್ಮ ಆಕ್ರೋಶ ಹೊರಹಾಕಿದರು.

ನನ್ನ ವಿರುದ್ಧ ಕುಮಾರಸ್ವಾಮಿ ಮೈಸೂರಿನಲ್ಲಿ ಏನೆಲ್ಲಾ ಮಾತನಾಡಿದರು, ಅವರ ತಂದೆ ಏನು ಮಾತನಾಡಿದ್ದಾರೆ,



ನನ್ನ, ಪತ್ನಿ, ತಂಗಿ ಹಾಗೂ ಸಹೋದರನ ಮೇಲೆ ಏನೆಲ್ಲಾ ಮೊಕದ್ದಮೆ ಹೂಡಿದ್ದರು. ನನಗೂ ಬಳ್ಳಾರಿಗೂ ಸಂಬಂಧವಿಲ್ಲ, ಆದರೂ ಅದಿರು ಕಳ್ಳತನ ಮಾಡಿದ್ದೇನೆಂದು ಆರೋಪಿಸಿ ತನಿಖೆ ಮಾಡಿಸಿರಲಿಲ್ಲವೇ ಎಂದು ಪ್ರಶ್ನಿಸಿದರು. ಅವರ ಜೊತೆ ಸರ್ಕಾರ ಮಾಡಿದ್ದೇವೆ ಎಂಬ ಕಾರಣಕ್ಕೆ ನಾವು ಸುಮ್ಮನಿದ್ದೇವೆ. ಅವರು ಮರ್ಯಾದೆಯಿಂದಿದ್ದರೆ ಕ್ಷೇಮ ಎಂದು ಹರಿಹಾಯ್ದರು. ■ 6ನೇ ಪುಟಕ್ಕೆ

ಮರ್ಯಾದೆಗೇಡಿ, ಕಿಡಿಗೇಡಿ...

ನವದೆಹಲಿ, ಮಾ.20–ಕುಮಾರಸ್ವಾಮಿ ಮರ್ಯಾದೆಯಿಂದ ಇದ್ದರೆ ಕ್ಷೇಮ ಎಂದು ಎಚ್ಚರಿಸಿದ್ದವರಿಗೆ ಕೇಂದ್ರ ಸಚಿವ ಹೆಚ್.ಡಿ.ಕುಮಾರಸ್ವಾಮಿ ಅವರು ತಿರುಗೇಟು ನೀಡಿದ್ದಾರೆ.



ಈ ಬಗ್ಗೆ ಮಾಧ್ಯಮ ಹೇಳಿಕೆ ನೀಡಿರುವ ಅವರು, ಮರ್ಯಾದೆಗೇಡಿ, ಕಿಡಿಗೇಡಿ ನನ್ನ ಮೇಲೆ ಮತ್ತೆ ವಿಷ ಕಕ್ಕಿರುವುದು ಹತಾಶೆ ಅಷ್ಟೇ. ಆಕಾಶಕ್ಕೆ ಉಗಿದರೆ ಮುಖದ ಮೇಲೆಯೇ ಬೀಳುತ್ತದೆ ಮಂಕೆ..! ಇಷ್ಟು ಸಾಮಾನ್ಯಜ್ಞಾನವೂ ಇಲ್ಲವೇ! ಕುಂಬಳಕಾಯಿ ಕಳ್ಳನಿಗೆ ಕೋಪ ಬಂದಿದೆ! ಎಂದು ಟಾಂಗ್ ನೀಡಿದ್ದಾರೆ. ಅಹೋರಾತ್ರಿಯೂ ದ್ರೋಹ ಚಿಂತನೆ, ವಿಶ್ವಾಸದ್ರೋಹ, ಉಂಡ ಮನೆಗೆ ಕನ್ನ, ಸ್ವಪಕ್ಷೀಯರಿಗೇ ಗುನ್ನ.. ■ 6ನೇ ಪುಟಕ್ಕೆ

ರಾಜ್ಯದ ಜನತೆಗೆ ಮತ್ತೆ ವಿದ್ಯುತ್ ಶಾಕ್

ಏ.1ರಿಂದ ಪ್ರತಿ ಯೂನಿಟ್‌ಗೆ 36 ಪೈಸೆ ಹೆಚ್ಚಳ



● ಮಾರ್ಚ್ ತಿಂಗಳ ಬಿಲ್‌ಗೆ ದರ ಏರಿಕೆ ಪೂರ್ವಾನ್ವಯ ● ಕೆಪಿಟಿಸಿಎಲ್ ಕಂಪನಿ ಸಿಬ್ಬಂದಿ ಪಿಂಚಣಿ, ಗ್ರ್ಯಾಚುಟಿಗೆ ಗ್ರಾಹಕರಿಗೆ ಬರೆ

ಬೆಂಗಳೂರು, ಮಾ.20(ಕೆಎಂಶಿ)– ಹಾಲು, ನೀರು, ರಸ್ತೆ ಸಾರಿಗೆ ಬಸ್ ಪ್ರಯಾಣ ದರ ಹೆಚ್ಚಳ ಮಾಡಿದ ಸರ್ಕಾರ ಇದೀಗ ವಿದ್ಯುತ್ ದರ ಹೆಚ್ಚಿಸಿ ರಾಜ್ಯದ ಜನರ ಗಾಯದ ಮೇಲೆ ಬರೆ ಎಳೆದಿದೆ.

ವಿದ್ಯುತ್ ಪ್ರಸರಣ ಮತ್ತು ಸರಬರಾಜು ಕಂಪನಿಗಳ ಸಿಬ್ಬಂದಿಯ ಪಿಂಚಣಿ ಹಾಗೂ ಗ್ರ್ಯಾಚುಟಿಗೆ ನೀಡುವ ಹಣವನ್ನು ಸರ್ಕಾರ ವಿದ್ಯುತ್ ಬಳಕೆದಾರರ ಮೇಲೆ ಹಾಕಿದೆ. ಸರ್ಕಾರದ ಈ ನಿರ್ಧಾರದಿಂದ ಪ್ರತಿ ಯೂನಿಟ್‌ಗೆ 36 ಪೈಸೆ ಹೆಚ್ಚಳವನ್ನು ಏಪ್ರಿಲ್ 1ರಿಂದಲೇ ಗ್ರಾಹಕರು ತೆರಬೇಕಾಗುತ್ತದೆ. ಅಂದರೆ, ಮಾರ್ಚ್ ತಿಂಗಳಲ್ಲಿ ಬಳಕೆಯಾಗುವ ವಿದ್ಯುತ್‌ಗೆ ಏಪ್ರಿಲ್ ತಿಂಗಳ ಬಿಲ್‌ನಲ್ಲಿ ಈ ಹೆಚ್ಚಳ ದರ ಪಾವತಿಸಬೇಕಾಗುತ್ತದೆ.

ಈ ಕಂಪನಿಗಳ ಸಿಬ್ಬಂದಿಯ ಪಿಂಚಣಿ ಮತ್ತು ಗ್ರ್ಯಾಚುಟಿಯನ್ನು ಸರ್ಕಾರ ಭರಿಸದಿರುವುದರಿಂದ ಕರ್ನಾಟಕ ವಿದ್ಯುತ್ ನಿಯಂತ್ರಣ ಆಯೋಗ ಅದರ ■ 6ನೇ ಪುಟಕ್ಕೆ

ಮೈಸೂರು ಮಹಾ ನಗರಪಾಲಿಕೆ ಬಜೆಟ್; ಹಲವು ಹೊಸ ಯೋಜನೆಗಳ ಪ್ರಸ್ತಾಪ

9.70 ಕೋಟಿ ರೂ. ಉಳಿತಾಯ ಬಜೆಟ್; ಆಸ್ತಿ ತೆರಿಗೆ, ನೀರಿನ ಕರದಿಂದ ಅಧಿಕ ಆದಾಯ ನಿರೀಕ್ಷೆ

● ಪಾಲಿಕೆ ಆಡಳಿತಾಧಿಕಾರಿ ರಮೇಶ್ ಅವರಿಂದ ಬಜೆಟ್ ಮಂಡನೆ ● ಕಾರ್ಪೋರೇಟರ್‌ಗಳಿಲ್ಲ; ಯಾವ ತಕರಾರು ಇಲ್ಲ; ಚರ್ಚೆಯೂ ಇಲ್ಲ ● ಕಾಂಕ್ರೀಟ್ ರಸ್ತೆ ಭಾಗ್ಯ, ಯುಟಿಲಿಟಿ ಕಾರಿಡಾರ್ ನಿರ್ಮಾಣ ● ಜೆಎಲ್‌ಬಿ ರಸ್ತೆಯಲ್ಲಿ ಸ್ಕೈ ವಾಕ್ ಪ್ರಸ್ತಾಪ; ತ್ಯಾಜ್ಯ ಸಂಸ್ಕರಣೆಗೆ ಆಧುನಿಕ ಯಂತ್ರ ಖರೀದಿ

ಮೈಸೂರು, ಮಾ.20(ಬಿಎಲ್‌ಯು)– ಖ್ಯಾತ ಅಂಕಣಕಾರ ಆರ್.ಕೆ.ನಾರಾಯಣ್ ನಿವಾಸ ಪ್ರವಾಸಿ ತಾಣವಾಗಿ ಪರಿವರ್ತನೆ, ಸುಸಜ್ಜಿತ ಈಜುಕೊಳ ಹಾಗೂ ಕಾಂಕ್ರೀಟ್ ರಸ್ತೆಗಳ ನಿರ್ಮಾಣ, ಬೆಂಗಳೂರು ಮಾದರಿ ಸ್ಕೈ ವಾಕ್ ಸೇರಿದಂತೆ 2025–26ನೇ ಸಾಲಿನ ಮೈಸೂರು ಮಹಾನಗರ ಪಾಲಿಕೆಯ 9.70 ಕೋಟಿ ರೂ. ಉಳಿತಾಯ ಬಜೆಟ್ ಅನ್ನು ಪ್ರಾದೇಶಿಕ ಆಯುಕ್ತರೂ, ಮೈಸೂರು ಪಾಲಿಕೆ ಆಡಳಿತಾಧಿಕಾರಿ ಡಿ.ಎಸ್. ರಮೇಶ್ ಇಂದು ಮಂಡಿಸಿದರು.

ನಗರಪಾಲಿಕೆಯ ಕೌನ್ಸಿಲ್ ಹಾಲ್‌ನಲ್ಲಿ ಇಂದು ರಮೇಶ್, ಬಜೆಟ್ ಮಂಡಿಸಿ ಪ್ರಸಕ್ತ ಆರ್ಥಿಕ ವರ್ಷದ ಹೊಸ ಯೋಜನೆ ವಿವರಿಸಿದರು.

1–4–2025 ಕ್ಕೆ 310.51 ಕೋಟಿ ಪ್ರಾರಂಭಿಕ ಶಿಲ್ಕು ಇದ್ದು, 2025–26 ಕ್ಕೆ 918.20 ಕೋಟಿ ಜಮೆ ಆಗಲಿದೆ. ಈ ಮೂಲಕ 1228.72 ಕೋಟಿ ಆದಾಯವಿದ್ದು, 12190.88 ಕೋಟಿ ಪಾವತಿಯಾದರೆ 9.70 ಕೋಟಿ ಉಳಿತಾಯವಾಗಲಿದೆ ಎಂದು ರಮೇಶ್ ಆಯ–ವ್ಯಯದ ಅಂಕಿ–ಅಂಶಗಳ ವಿವರ ನೀಡಿದರು.

2025–26 ನೇ ಸಾಲಿನಲ್ಲಿ ನಗರಪಾಲಿಕೆಯ ಸ್ವಂತ ಸಂಪನ್ಮೂಲಗಳಿಂದ 329.29 ಕೋಟಿ ಹಾಗೂ ಸರ್ಕಾರದ ಅನುದಾನದಿಂದ 525.91 ಕೋಟಿ ಸೇರಿ ಒಟ್ಟು 918.20 ಕೋಟಿ ನಿರೀಕ್ಷಿಸಲಾಗಿದೆ ಎಂದು ತಿಳಿಸಿದರು. ಯಾವುದೇ ಸಂಸ್ಥೆ ಪರಿಣಾಮಕಾರಿ ಹಾಗೂ ದಕ್ಷತೆಯಿಂದ ಕಾರ್ಯ ನಿರ್ವಹಿಸಲು ಹಣಕಾಸಿನ ಲಭ್ಯತೆ ಬಹಳ ಮುಖ್ಯವಾಗಿದೆ. ಈ ಹಿನ್ನೆಲೆ ಆಸ್ತಿ ತೆರಿಗೆ, ನೀರಿನ ತೆರಿಗೆ, ಒಳಚರಂಡಿ ನಿರ್ವಹಣಾ ಕರದಿಂದ ಆದಾಯ ನಿರೀಕ್ಷಿಸಲಾಗಿದೆ ಎಂದು ರಮೇಶ್ ಹೇಳಿದರು. 2025–26 ನೇ ಸಾಲಿನಲ್ಲಿ ■ 6ನೇ ಪುಟಕ್ಕೆ

ಸದ್ದು ಗದ್ದಲವಿಲ್ಲದೆ ಬಜೆಟ್ ಸಭೆ ಮುಕ್ತಾಯ

ಮೈಸೂರು ನಗರಪಾಲಿಕೆ ಆಡಳಿತಾಧಿಕಾರಿ ರಮೇಶ್, ಅರ್ಧ ಗಂಟೆ ಅವಧಿಯಲ್ಲಿ ಈ ಸಾಲಿನ ಬಜೆಟ್ ಮಂಡಿಸಿ ಸಭೆ ಬರಖಾಸ್ತುಗೊಳಿಸಿದರು. ಕಾರ್ಪೊರೇಟರ್‌ಗಳು ಶಾಸಕರಿದ್ದಾಗ ಬಜೆಟ್ ಮಂಡನೆ ವೇಳೆ ತಕರಾರು, ಆಕ್ಷೇಪ ಕೇಳಿಬರುತ್ತಿತ್ತು. ಬಜೆಟ್‌ನಲ್ಲಿ ಪ್ರಸ್ತಾಪಗಳ ಬಗ್ಗೆ ಚರ್ಚೆಗಳು ನಡೆಯುತ್ತಿದ್ದವು. ಆದರೆ ಈಗ ಜನಪ್ರತಿನಿಧಿಗಳು ಇಲ್ಲದ ಕಾರಣ ಯಾವುದೇ ಚರ್ಚೆ, ಆಕ್ಷೇಪ ಇಲ್ಲದೆ ಸಭೆ ಮುಕ್ತಾಯಗೊಂಡಿತು.



ಮೈಸೂರು ನಗರಪಾಲಿಕೆಯ ಕೌನ್ಸಿಲ್ ಸಭಾಂಗಣದಲ್ಲಿ ಗುರುವಾರ ಪ್ರಾದೇಶಿಕ ಆಯುಕ್ತರೂ ಆದ ಮೈಸೂರು ಪಾಲಿಕೆ ಆಡಳಿತಾಧಿಕಾರಿ ಡಿ.ಎಸ್.ರಮೇಶ್, 2025–26ನೇ ಸಾಲಿನ ಪಾಲಿಕೆ ಬಜೆಟ್ ಮಂಡಿಸಿದರು. ಪಾಲಿಕೆ ಆಯುಕ್ತ ಶೇಖ್ ತನ್ವೀರ್ ಆಸೀಫ್ ಚಿತ್ರದಲ್ಲಿದ್ದಾರೆ.

ದೇವರಾಜ ಅರಸ್ ರಸ್ತೆಯಲ್ಲಿ ಸುಸಜ್ಜಿತ ಪಾರ್ಕಿಂಗ್ ವ್ಯವಸ್ಥೆ

ನಗರ ಪಾಲಿಕೆಯ ಆದಾಯ ಕ್ರೋಢೀಕರಣ, ಖರ್ಚು ವೆಚ್ಚ ಸೇರಿದಂತೆ ಇತರೆ ಅಂಕಿ ಅಂಶಗಳ ವಿವರ ನೀಡಿದ ರಮೇಶ್, ಪ್ರಸಕ್ತ ಸಾಲಿನಲ್ಲಿ ಅನುಷ್ಠಾನಗೊಳಿಸುವ ಹೊಸ ಯೋಜನೆಗಳ ಬಗ್ಗೆ ವಿವರ ನೀಡಿದರು.

ಬಯಲು ರಂಗಮಂದಿರ: ರಂಗಭೂಮಿ ಕಲಾವಿದರಿಗೆ ಅನುಕೂಲ ಕಲ್ಪಿಸಲು ಹಾಗೂ ಸಾರ್ವಜನಿಕರ ಮನೋರಂಜನೆಗಾಗಿ ನಗರದ ಪುರಭವನದಲ್ಲಿ ಬಯಲು ರಂಗಮಂದಿರ ನಿರ್ಮಾಣ ಮಾಡಲು ಉದ್ದೇಶಿಸಲಾಗಿದೆ ಎಂದರು.

ದೇವರಾಜ ಅರಸ್ ರಸ್ತೆಯಲ್ಲಿ ಪಾರ್ಕಿಂಗ್: ಇತ್ತೀಚೆಗೆ ನಗರದಲ್ಲಿ ವಾಹನ ■ 6ನೇ ಪುಟಕ್ಕೆ

ಆರ್.ಕೆ.ನಾರಾಯಣ್ ನಿವಾಸ ಸಂಗ್ರಹಾಲಯ ಮೇಲ್ದರ್ಜೆಗೆ



ದೇಶದ ಪ್ರಮುಖ ಪ್ರವಾಸಿ ತಾಣಗಳಲ್ಲಿ ಒಂದಾಗಿರುವ ಮೈಸೂರಿಗೆ ವರ್ಷವಿಡೀ ಅಸಂಖ್ಯಾತ ಪ್ರವಾಸಿಗರು ಭೇಟಿ ನೀಡುತ್ತಾರೆ. ಆದರೆ ಕೆಲವೇ ಜನರಿಗೆ ಮಾತ್ರ ಆರ್.ಕೆ. ನಾರಾಯಣ್ ಅವರ ನಿವಾಸದ ಬಗ್ಗೆ ಮಾಹಿತಿ ಇದೆ. ಇದರಿಂದ ವಾರಾಂತ್ಯದಲ್ಲಿ ಒಂದಿಷ್ಟು ಜನರು ಮಾತ್ರ ಯಾದವಗಿರಿಯ ಅವರ ನಿವಾಸಕ್ಕೆ ಭೇಟಿ ನೀಡುತ್ತಾರೆ.

ಈ ಹಿನ್ನೆಲೆಯಲ್ಲಿ ಹಾಲಿ ಇರುವ ಆರ್.ಕೆ. ನಾರಾಯಣ್ ಅವರ ವಸ್ತುಸಂಗ್ರಹಾಲಯವನ್ನು ಮೇಲ್ದರ್ಜೆಗೇರಿಸಿ ಆಕರ್ಷಣೀಯವಾಗಿ ಮಾಡಲಾಗುವುದು. ಈ ಮೂಲಕ ಪ್ರವಾಸಿಗರನ್ನು ಆಕರ್ಷಿಸಲು ಉದ್ದೇಶಿಸಲಾಗಿದೆ. ಈ ಯೋಜನೆಗೆ ಸಿಎಸ್‌ಆರ್ ಅನುದಾನವನ್ನು ಬಳಸಿಕೊಳ್ಳಲಾಗುವುದು ಎಂದು ನಗರಪಾಲಿಕೆ ಆಡಳಿತಾಧಿಕಾರಿ ರಮೇಶ್ ತಿಳಿಸಿದರು.

ಸ್ಕೈ ವಾಕ್ ನಿರ್ಮಾಣ: ನಗರದ ಜೆಎಲ್‌ಬಿ ರಸ್ತೆಯ ಮಹಿಳಾ ಮಹಾರಾಣಿ ವಿಜ್ಞಾನ, ಕಲಾ ಮತ್ತು ವಾಣಿಜ್ಯ ಕಾಲೇಜಿನ ಬಳಿ ವಾಹನ ದಟ್ಟಣೆಯಿಂದಾಗಿ ವಿದ್ಯಾರ್ಥಿನಿಯರು ರಸ್ತೆ ದಾಟಲು ತೊಂದರೆ ಆಗುತ್ತಿದೆ. ಈ ಹಿನ್ನೆಲೆಯಲ್ಲಿ ಪಿಪಿಪಿ (ಸಾರ್ವಜನಿಕರ ಸಹಭಾಗಿತ್ವ ಮಾದರಿ)ಯಡಿ ಸ್ಕೈ ವಾಕ್ ನಿರ್ಮಿಸಲಾಗುವುದು ಎಂದರು.

120 ಎಂಎಲ್‌ಡಿ ನೀರು: ಮೈಸೂರಿನ ಕಬಿನಿ ಕೆಂಬಾಳು ಜಲಶುದ್ಧೀಕರಣಾಗಾರದಲ್ಲಿ 60 ಎಂಎಲ್‌ಡಿ ಸಾಮರ್ಥ್ಯದ ಜಲಶುದ್ಧೀಕರಣ ಘಟಕವನ್ನು 120 ಎಂಎಲ್‌ಡಿ ಸಾಮರ್ಥ್ಯಕ್ಕೆ ಉನ್ನತೀಕರಿಸುವ ಕಾಮಗಾರಿ ಪೂರ್ಣಗೊಂಡಿದ್ದು, ಪ್ರಸಕ್ತ ಸಾಲಿನಲ್ಲಿ ಇದಕ್ಕೆ ಚಾಲನೆ ದೊರೆಯಲಿದೆ ಎಂದರು.

ಬಲ್ಕ್ ಫ್ಲೋ ಮೀಟರ್: ಕುಡಿಯುವ ನೀರು ಸರಬರಾಜಿನಲ್ಲಿ ಮೂಲ ಸ್ಥಾವರಗಳ ಸಂಪರ್ಕಿತ ಕೊಳವೆ ಮಾರ್ಗಗಳಲ್ಲಿ ನೀರು ಸೋರುವಿಕೆ ಆಗುತ್ತಿದೆ. ಇದನ್ನು ■ 6ನೇ ಪುಟಕ್ಕೆ

ಮೈಸೂರು ಮಿತ್ರ

ನಕ್ಕರೆ ಅದೇ ಸ್ವರ್ಗ

ಉಪಾಧ್ಯಾಯರು : ಕ್ರಿಕೆಟ್ ಬಗ್ಗೆ ಅತೀ ಚಿಕ್ಕದಾದ ಒಂದು ಪ್ರಬಂಧ ಬರೆಯಿರಿ.

ವಿದ್ಯಾರ್ಥಿ : ಮಳೆ ಬಂದ ಕಾರಣ ಪಂದ್ಯವನ್ನು ರದ್ದುಗೊಳಿಸಲಾಗಿದೆ.

ಮೈಸೂರು ಮಿತ್ರ

ಶುಕ್ರವಾರ, 21 ಮಾರ್ಚ್ 2025

ಸತ್ಯೇನೋತ್ತಭಿತಾ ಭೂಮಿಃ ನ ಹಿ ಸತ್ಯಾತ್ಪರೋ ಧರ್ಮಃ

(ಭೂಮಿಯು ಸತ್ಯದ ಮೇಲೆ ನಿಂತಿದೆ, ಸತ್ಯಕ್ಕಿಂತ ಮಿಗಿಲಾದ ಧರ್ಮವಿಲ್ಲ)

ಸಂಪಾದಕ: ಎಂ.ಗೋವಿಂದೇಗೌಡ *M.A.*

ಅಮೃತ ವಾಹಿನಿ..........

ಅತಿಯಾದ ರೂಪ ಸೀತೆಗೆ ಮುಳುವಾಯಿತು. ಅತಿಯಾದ ಗರ್ವ ರಾವಣನಿಗೆ ಕೇಡುಂಟು ಮಾಡಿತು. ಅತಿಯಾದ ದಾನ ಬಲಿಯನ್ನು ನಾಶ ಮಾಡಿತು. ಆದುದರಿಂದ ಯಾವುದು ಅತಿಯಾಗಬಾರದು.

ವೇದ ಸುಳ್ಳಾದರೂ ಗಾದೆ ಸುಳ್ಳಾಗದು { ದುಷ್ಟರ ಸಂಗದಿ ನೆರಳು ಕೊಯ್ಯದೆ ಬಿಡದು ಕೊರಳು.

ನಿಮ್ಮ ಪತ್ರಗಳು

ಸಿದ್ದರಾಮಯ್ಯನವರ ಮಾತುಗಳು ಸುಳ್ಳಾಗುತ್ತವೆ

ಮಾನ್ಯರೆ,

ಮುಂದಿನ ಚುನಾವಣೆಗಳಲ್ಲಿ ಬಿಜೆಪಿಯು ಧೂಳಿಪಟವಾಗುತ್ತದೆ ಎಂದು ಹೇಳಿಕೆ ಕೊಟ್ಟಿರುವ ಸುದ್ದಿಗಳು ಪತ್ರಿಕಾ ಮಾಧ್ಯಮಗಳಲ್ಲಿ ಪ್ರಕಟವಾಗಿರುವುದು ಸರಿಯಷ್ಟೆ. ಈ ಮಾತುಗಳು ಎಂದಿಗೂ ನಿಜವಾಗುವುದಿಲ್ಲ ಎಂಬುದು ಶ್ರೀಸಾಮಾನ್ಯನ ನಂಬಿಕೆ. ಅಷ್ಟಕ್ಕೂ ಒಂದು ದೇಶಭಕ್ತಿಯನ್ನು ಸಾರುವ ಪಕ್ಷವಾದ ಭಾರತೀಯ ಜನತಾ ಪಕ್ಷವು ಏಕೆ ನಿರ್ನಾಮ ಆಗಬೇಕು ಎಂಬುದನ್ನು ಅವರು ಸ್ಪಷ್ಟಪಡಿಸಲಿ.

ತಾನು ಎಂದಿಗೂ ಮುಸ್ಲೀಮರ ಪರ ಎಂಬುದನ್ನು ಹಲವಾರು ಬಾರಿ ಅವರು ಈಗಾಗಲೇ ಸ್ಪಷ್ಟಪಡಿಸಿದ್ದಾರೆ. ಅದು ನಿಜ ಎಂಬಂತೆ ಈಗ ವಿಧಾನಸಭೆಯಲ್ಲಿ ಸವಾಲು ಹಾಕಿದ್ದಾರೆ. ಬಿಜೆಪಿಯು ಇದುವರೆಗೆ ಸ್ವಂತ ಬಲದ ಮೇಲೆ ಅಧಿಕಾರಕ್ಕೆ ಬಂದಿಲ್ಲ ಎಂದು ಅಪಹಾಸ್ಯ ಮಾಡಿದ್ದಾರೆ. ಸ್ವತಃ ಒಂದು ಪಕ್ಷವು ಅಧಿಕಾರಕ್ಕೆ ಬರದಿದ್ದರೆ ಏನಂತೆ, ಒಳ್ಳೆಯ ಆಡಳಿತವನ್ನು ನೀಡುವುದು ಮುಖ್ಯ. ಬಿಜೆಪಿಯು ಅಧಿಕಾರದಲ್ಲಿದ್ದಾಗ ಯಾವ ಗಲಾಟೆಯೂ ಆಗಿರಲಿಲ್ಲ. ಆದರೆ ಈಗ ಒಂದಿಲ್ಲೊಂದು ಕಾರಣಕ್ಕೆ ರಾಜ್ಯದ ಒಂದಿಲ್ಲೊಂದು ಭಾಗದಲ್ಲಿ ಗಲಾಟೆ ಆಗುತ್ತಲೇ ಇರುತ್ತದೆ.

ರಾಜ್ಯದ ಹಣಕಾಸು ಪರಿಸ್ಥಿತಿ ಹದಗೆಟ್ಟಿದೆ. ಆ ಭಾಗ್ಯ, ಈ ಭಾಗ್ಯ ಹೆಸರುಗಳಲ್ಲಿ ರಾಜ್ಯದ ಟ್ರೆಜರಿಯಲ್ಲಿ ಇರುವ ಹಣವನ್ನು ಈ ಭಾಗ್ಯಗಳ ಹೆಸರಿನಲ್ಲಿ ಲೂಟಿ ಮಾಡಿರುವುದಲ್ಲದೆ ಈಗ ಹಿಂದೂ ದೇವಾಲಯಗಳ ಹುಂಡಿಯಲ್ಲಿರುವ ಲಕ್ಷಾಂತರ ರೂಪಾಯಿಗಳ ಮೇಲೆ ಅವರ ಕೆಂಗಣ್ಣು ಬಿದ್ದಿದೆ. ಭಯ, ಭಕ್ತಿಯಿಂದ ದೇವರಿಗೆ ಅರ್ಪಿಸಿದ ಈ ಹಣವು ಸದುಪಯೋಗವಾಗಬೇಕು. ಅದು ಬಿಟ್ಟು ಯಾರದೋ ಅಭಿವೃದ್ಧಿಗೆ ಈ ಹಣವನ್ನು ಬೇಕಾಬಿಟ್ಟಿ ಉಪಯೋಗಿಸುವುದು ಖಂಡಿತಾ ಸರಿಯಲ್ಲ.

ಹೇಗಾದರೂ ಮಾಡಿ ಮುಂಬರುವ ಚುನಾವಣೆಗಳಲ್ಲಿ ಬಹುಮತ ಪಡೆದು ಮತ್ತೆ ಅಧಿಕಾರವನ್ನು ಹಿಡಿಯುವ ಕನಸನ್ನು ಕಾಂಗ್ರೆಸ್ ಪಕ್ಷದವರು ಕಾಣುತ್ತಿದ್ದಾರೆ. ಆದರೆ ಕರ್ನಾಟಕದ ಮತದಾರ ತಮ್ಮ ಕಿವಿಯ ಮೇಲೆ ಕೆಂಪು ಹೂವನ್ನು ಇಟ್ಟುಕೊಂಡಿಲ್ಲ. ಕರ್ನಾಟಕದ ಜನರು ಅಷ್ಟು ದಡ್ಡರಲ್ಲ. ಮುಂಬರುವ ಚುನಾವಣೆಯಲ್ಲಿ ರಾಜ್ಯದ ಜನತೆಯು ಅವರ ಪಕ್ಷಕ್ಕೆ ಸರಿಯಾದ ಬುದ್ಧಿ ಕಲಿಸಲಿದೆ.

–ಬೇಲೂರು ದ.ಶಂ.ಪ್ರಕಾಶ್, ಮೈಸೂರು

ಕುವೆಂಪುನಗರ ಅಪೋಲೋ ಫಾರ್ಮಸಿ ಬಳಿ ಸಂಚಾರ ಪೊಲೀಸರ ನಿಯೋಜಿಸಿ

ಮಾನ್ಯರೆ,



ಇದು ಮೈಸೂರಿನ ಕುವೆಂಪುನಗರ ಕಾಂಪ್ಲೆಕ್ಸ್ ಮತ್ತು ರಾಮಕೃಷ್ಣನಗರ ವೃತ್ತದ ನಡುವೆ ಇರುವ ರಾಯಲ್ ಎನ್‌ಫೀಲ್ಡ್, ಗಿರಿಯಾಸ್ ಮತ್ತು ಅಪೋಲೋ ಫಾರ್ಮಸಿ ಸರ್ಕಲ್. ಈ ಸರ್ಕಲ್ ಬಳಿ ಯಾವಾಗಲೂ ವಾಹನ ಸಂಚಾರ ದಟ್ಟಣೆ ಇರುತ್ತದೆ. ಆಗಾಗ್ಗೆ ಸಣ್ಣ ಪುಟ್ಟ ಅಪಘಾತಗಳು ಸಂಭವಿಸುತ್ತಲೇ ಇವೆ. ಇದು ವಿವೇಕಾನಂದನಗರ, ಕುವೆಂಪುನಗರ ಮತ್ತು ರಾಮಕೃಷ್ಣನಗರಕ್ಕೆ ಈ ಸರ್ಕಲ್‌ನಿಂದಲೇ ಹಾದುಹೋಗಬೇಕು. ಅತೀ ಹೆಚ್ಚು ವಾಹನ ಸಂಚಾರ ದಟ್ಟಣೆ ಇರುವ ಬೆಳಗ್ಗೆ ಮತ್ತು ಸಂಜೆ ಈ ಸರ್ಕಲ್ ಬಳಿ ಒಬ್ಬ ಸಂಚಾರ ಪೊಲೀಸರನ್ನು ನಿಯೋಜಿಸಲಿ.

–ಬೂಕನಕೆರೆ ವಿಜೇಂದ್ರ, ಕುವೆಂಪುನಗರ, ಮೈಸೂರು

ಕಣ್ಮರೆಯಾಗುತ್ತಿವೆ ಗುಬ್ಬಚ್ಚಿಗಳು

ಮಾನ್ಯರೆ,

ಪಕ್ಷಿ ಸಂಕುಲದ ಗುಬ್ಬಚ್ಚಿಯನ್ನು ಇಂಗ್ಲಿಷ್‌ನಲ್ಲಿ ಹೌಸ್ ಸ್ಪ್ಯಾರೊ ಎನ್ನಲಾಗುವುದು. ವಿಶ್ವದಾದ್ಯಂತ ಸುಮಾರು 26 ಹಾಗೂ ಭಾರತದಲ್ಲಿ ಐದು ಪ್ರಭೇದದ ಗುಬ್ಬಚ್ಚಿಗಳಿವೆ. ಜೊತೆಗೆ ಇನ್ನೂ 12 ಉಪ ಪ್ರಭೇದದ ಗುಬ್ಬಚ್ಚಿಗಳನ್ನು ಗುರುತಿಸಲಾಗಿದೆ. ಇವುಗಳ ಜೀವಿತಾವಧಿ ಗರಿಷ್ಠ ಸುಮಾರು 10 ವರ್ಷ. ಆದರೆ ಇತ್ತೀಚೆಗೆ 4 ರಿಂದ 6 ವರ್ಷ ಜೀವಿಸುತ್ತವೆ ಎನ್ನಲಾಗಿದೆ. ಸದ್ಯ ಇವುಗಳ ಸಂತತಿ ಶೇ.80 ರಷ್ಟು ಕ್ಷೀಣಿಸಿದ್ದು, ಗುಬ್ಬಚ್ಚಿಗಳು ಕಾಣಸಿಗುವುದೇ ಅಪರೂಪವಾಗಿದೆ.



ಕಟ್ಟಡಗಳು, ಕಾಂಕ್ರಿಟ್ ರಸ್ತೆಗಳ ನಿರ್ಮಾಣ, ಮೊಬೈಲ್‌ಗಳ ವಿಪರೀತ ಬಳಕೆಯಿಂದ ಗುಬ್ಬಚ್ಚಿಗಳು ತೊಂದರೆ ಅನುಭವಿಸುವಂತಾಗಿದೆ. ಮೊಬೈಲ್ ಟವರ್‌ಗಳಿಂದ ಹೊರ ಹೊಮ್ಮುವ ಎಲೆಕ್ಟ್ರೋ ಮ್ಯಾಗ್ನೇಟಿವ್ ವಿಕಿರಣವು ಗುಬ್ಬಚ್ಚಿಗಳ ಬದುಕಿಗೆ ಕಂಟಕವಾಗಿದೆ ಎಂದು ವರದಿಯಾಗಿದೆ. ವಾತಾವರಣದಲ್ಲಾಗುವ ಬದಲಾವಣೆಗಳು, ಆಹಾರ, ನೀರಿನ ಕೊರತೆ, ಸುರಕ್ಷಿತ ವಾಸತಾಣಗಳ ಕೊರತೆ, ರೋಗ, ಪರಿಸರ ಮಾಲಿನ್ಯ, ಪ್ರಾಣಿ ಭಕ್ಷಗಳ ಕಾಟ(ಉದಾ: ಹದ್ದು, ಕಾಗೆ, ಬೆಕ್ಕು ಹಾವು, ಗೂಬೆ ಇತ್ಯಾದಿ) ಹಾಗೂ ಮಾನವನ ಅತಿಕ್ರಮಣದಿಂದ ಗುಬ್ಬಚ್ಚಿಗಳ ಸಂತತಿಗೆ ಕುತ್ತು ಬಂದಿದೆ.

ಮನೆಯ ಆವರಣದ ಕೈತೋಟಗಳಲ್ಲಿ ಬೆಳೆಸುವ ಅಲಂಕಾರಿಕ ಸಸ್ಯಗಳಿಗೆ ಹೆಚ್ಚಾಗಿ ಕೀಟನಾಶಕಗಳನ್ನು ಬಳಸುವುದರಿಂದ ಸಣ್ಣ ಹುಳುಗಳು, ಕೀಟಗಳು ನಾಶವಾಗಿ ಗುಬ್ಬಚ್ಚಿಗಳಿಗೆ ಆಹಾರದ ಕೊರತೆಯಾಗಿದೆ. ಪುರಾತನ ಕಾಲದಿಂದಲೂ ಗುಬ್ಬಚ್ಚಿಗಳು ಮಾನವನ ಜೊತೆ ಅವಿನಾಭಾವ ಸಂಬಂಧ ಹೊಂದಿವೆ. ಆದರೆ ಕಿರಾಣಿ ಅಂಗಡಿ, ಆಹಾರ ಪದಾರ್ಥಗಳ ಉಗ್ರಾಣ, ಮಾಳಿಗೆ ಮನೆ, ಹುಲ್ಲು ಹಾಗೂ ಹಂಚು ಮೇಲ್ಛಾವಣಿಯ ಮನೆಗಳ ಬಳಿ ಗೂಡು ಕಟ್ಟಿಕೊಂಡು ವಾಸಿಸುತ್ತಿದ್ದ ಗುಬ್ಬಚ್ಚಿಗಳು ಇತ್ತೀಚಿನ ದಿನಗಳಲ್ಲಿ ಕಾಣದಾಗಿವೆ.

ಕಾಂಕ್ರಿಟ್ ಕಾಡು ವಿಸ್ತರಿಸುತ್ತಿದೆ. ಗುಬ್ಬಚ್ಚಿಗಳಿಗೆ ಗೂಡು ಕಟ್ಟುವುದಕ್ಕೂ ಜಾಗವಾಗದ ರೀತಿ ಕಟ್ಟಡಗಳನ್ನು ನಿರ್ಮಿಸಲಾಗುತ್ತಿದೆ. ಕಾಂಕ್ರೀಟ್ ರಸ್ತೆಗಳಿಂದಲೂ ಉಷ್ಣಾಂಶ ಹೆಚ್ಚುತ್ತಿದೆ. ಗಿಡ–ಗಂಟಿಗಳನ್ನೂ ಬಿಡುತ್ತಿಲ್ಲ. ಕೃಷಿ ಮತ್ತು ಸಂಶೋದನಾ ಸಂಸ್ಥೆ (ICAR)ಯ ಅಧ್ಯಯನದ ಪ್ರಕಾರ ಗುಬ್ಬಚ್ಚಿ ಸಂತತಿ ಶೇ.80ರಷ್ಟು ಕ್ಷೀಣಿಸಿದೆ. ಇದು ಪ್ರಕೃತಿ ಅಸಮತೋಲನದ ಎಚ್ಚರಿಕೆ ಘಂಟೆ. ಗುಬ್ಬಚ್ಚಿ ಸಂತತಿ ಉಳಿಸಿ ಸಂರಕ್ಷಿಸಲು ರೈತರು, ಸರ್ಕಾರಗಳು, ಸಂಘ–ಸಂಸ್ಥೆಗಳು, ಶಾಲಾ–ಕಾಲೇಜುಗಳು ಸಂಘಟಿತ ಪ್ರಯತ್ನಕ್ಕೆ ಮುಂದಾಗಬೇಕಿದೆ.

–ಡಾ.ಎಸ್.ಬಸವರಾಜಪ್ಪ ಮತ್ತು ಆರ್.ಸಿಂಧು, ಪ್ರಾಣಿಶಾಸ್ತ್ರ ವಿಭಾಗ, ಮೈಸೂರು ವಿಶ್ವವಿದ್ಯಾನಿಲಯ ಮಾನಸಗಂಗೋತ್ರಿ, ಮೈಸೂರು.



ಡಾ. ವಿ. ರಂಗನಾಥ್

ಲೇಖಕರು ಹಾಗೂ ನಿವೃತ್ತ ತಹಸೀಲ್ದಾರರು

ಮೊ: 94482 08746/ 97421 79000

ಚಿಂತನೆ

ಸಹಜೀವನಕ್ಕೆ ಕಂಟಕವಾಗುತ್ತಿದೆ ಅಹಂ

ನಾವು ಹುಟ್ಟಿದ ಮೇಲೆ ಸಾಯುವವರೆಗೆ ಈ ಸಮಾಜದಲ್ಲಿ, ಬದುಕಬೇಕಾಗುತ್ತದೆ. ನಮಗೆ ಈ ಸಮಾಜ ಸರ್ವಕಾಲಕ್ಕೂ ಜೊತೆಗಾರನಾಗಿರುವಂತಹುದು. ನಮ್ಮ ಜೀವನ ಮೌಲ್ಯಯುತವಾಗಿರಬೇಕಾದರೆ ನಾವು ಹಲವು ಕಟ್ಟುಪಾಡು ಗಳನ್ನು ಪಾಲಿಸಬೇಕಾಗುತ್ತದೆ. ನಮಗೆ ಇಷ್ಟಬಂದಂತೆ ಜೀವಿಸುವುದು ಸಾಧುವಲ್ಲ. ನಮಗೆ ಸ್ವಾತಂತ್ರ್ಯದ ಬಗ್ಗೆ ಸರಿಯಾದ ಅರಿವೇ ಬಂದಿಲ್ಲ ಎನ್ನಿಸುತ್ತದೆ. ಸ್ವಾತಂತ್ರ್ಯ ಎಂದರೆ ಅದು ಸ್ವೇಚ್ಛೆಂದವಲ್ಲ. ನನ್ನ ಹಾಗೆ ಇತರರಿಗೂ ಸ್ವಾತಂತ್ರ್ಯವಿದೆ ಎಂಬುದನ್ನು ಮೊದಲು ಅರಿಯಬೇಕು. ಇಂದು ತಪ್ಪು ಮಾಡುವವರು ತಮ್ಮನ್ನು ಸಮರ್ಥಿಸಿಕೊಳ್ಳಲು ಅದು ನನ್ನಿಷ್ಟ, ಅದನ್ನು ಕೇಳಲು ನೀನು ಯಾರು? ಎಂದು ಪ್ರಶ್ನಿಸುವುದನ್ನು ಕಾಣಬಹುದು. ಅದರಲ್ಲೂ ರಸ್ತೆ ಸುರಕ್ಷತಾ ನಿಯಮಗಳನ್ನು ಉಲ್ಲಂಘಿಸುವವರಲ್ಲಿ ಇಂತಹ ಮೊಂಡುವಾದ ಜಾಸ್ತಿ. ನೀನು ಮಾಡಿದ್ದು ತಪ್ಪು ಎಂದರೆ ಅದಕ್ಕೆ, ನನ್ನಿಷ್ಟ ಎನ್ನುವ ಉತ್ತರ ಬರುತ್ತದೆ. ಅಂದರೆ ಅವರು ಸ್ವಾತಂತ್ರ್ಯವನ್ನು ತಪ್ಪಾಗಿ ಅರ್ಥೈಸಿಕೊಂಡಿದ್ದಾರೆ ಎಂದು ಅರ್ಥ.

ಹಾಗೆಯೇ ಅಪಘಾತ ಮಾಡಿದಾಗಲೂ ಇಂತಹುದೇ ಮಾತುಗಳು ಕೇಳಿಬರುತ್ತವೆ. ಕೆಲವರಂತೂ ತಾವು ದೊಡ್ಡ ಗಂಟಲಲ್ಲಿ ಮಾತನಾಡಿದರೆ ಅದು ತನ್ನ ತಪ್ಪನ್ನು ಮರೆಮಾಚುತ್ತದೆ ಎಂದು ಕೂಗಾಡುತ್ತಾರೆ. ಹೀಗೆ ಕೂಗಾಡುವವರನ್ನು ಕಂಡಾಗ ಅವರೇ ತಪ್ಪು ಮಾಡಿರುವುದು ಎಂಬುದು ಮೇಲು ನೋಟಕ್ಕೇ ಗೊತ್ತಾಗುತ್ತದೆ! ಅದು ಬಿಟ್ಟು ತನ್ನದು ತಪ್ಪಾಯಿತು ಕ್ಷಮಿಸಿ ಎಂದರೆ ಎದುರಿಗಿರುವವನು ಖಂಡಿತಾ ಮತ್ತೆ ಜಗಳ ಮುಂದುವರೆಸಲು ಹೋಗುವುದಿಲ್ಲ. ತಪ್ಪು ಮಾಡುವುದು ಸಹಜ, ಆದರೆ, ಅದನ್ನು ಸಮರ್ಥಿಸಿಕೊಳ್ಳುವುದು ತಪ್ಪು.

ಆದರೆ ಇತ್ತೀಚೆಗೆ ಹೀಗೆ ಅನವಶ್ಯಕ ವಿಷಯಗಳ ಬಗ್ಗೆ ವಾದ–ಪ್ರತಿವಾದ ನಡೆಯುವುದನ್ನು ನಾವು ಹೆಚ್ಚಾಗಿ ಕಾಣುತ್ತಿದ್ದೇವೆ. ಇದು ಎಂತಹ ಅಪಾಯಕಾರಿಯಾಗುತ್ತಿದೆ ಎಂದರೆ ಕೋಪದ ಭರದಲ್ಲಿ ಎದುರಿಗಿರುವವರನ್ನು ಹೊಡೆಯುವುದು, ಕೊಲೆ ಮಾಡುವ ಮಟ್ಟಕ್ಕೆ ಕರೆದುಕೊಂಡು ಹೋಗುತ್ತಿದೆ. ಒಮ್ಮೆ ತಪ್ಪು ಮಾಡಿ ಸಿಕ್ಕಿಕೊಂಡರೆ ಜೈಲುವಾಸ ನಿಶ್ಚಿತ. ಆಗ ಪಶ್ಚಾತ್ತಾಪ ಪಟ್ಟು ನಾನು ಮಾಡಿದ್ದು ಸರಿಯಲ್ಲ ಎಂದು ಎಷ್ಟೇ ರೋಧಿಸಿದರೂ ಶಿಕ್ಷೆಯಿಂದ ತಪ್ಪಿಸಿಕೊಳ್ಳಲಾಗದು.

ಇದಕ್ಕೇ ಹೇಳುವುದು, ಸಮಾಜದಲ್ಲಿ ಒಂದಷ್ಟು ಕಟ್ಟುಪಾಡುಗಳಿವೆ. ಅದನ್ನು ಪಾಲಿಸಿದಾಗ ಎಲ್ಲರಿಗೂ ನೆಮ್ಮದಿ ಸಿಗುತ್ತದೆ ಎಂದು. ಅದು ನಮ್ಮ ಹಿಂದಿನವರು ಮಾಡಿರುವಂತಹುದು. ಅದನ್ನು ಸಮಾಜದ ಹಿತದೃಷ್ಟಿಯಿಂದಲೇ ಮಾಡಿರುತ್ತಾರೆ. ಅದನ್ನು ಮೀರಬಾರದು. ಹಿಂದೆ ಗ್ರಾಮಗಳಲ್ಲಿ ಇಂತಹ ಕಟ್ಟುಪಾಡು ಮೀರಿ ನಡೆದ ಘಟನೆಗಳನ್ನು ಅಲ್ಲಿನ ಮುಖಂಡರು ಪರಿಶೀಲಿಸಿ ತೀರ್ಪು ನೀಡುತ್ತಿದ್ದರು. ಆಗಲೂ ಪ್ರಜಾಪ್ರಭುತ್ವ ವ್ಯವಸ್ಥೆ ಇತ್ತು. ಸಮಾಜದ ಗಣ್ಯರು ಹಾಗೂ ಸಾಮಾನ್ಯವಾಗಿ ತಪ್ಪು ಮಾಡದಂತಹವರು ನ್ಯಾಯ ನಿರ್ಣಯ ಮಾಡುತ್ತಿದ್ದರು. ಅವರು ವಿಷಯವನ್ನು ಕೂಲಂಕುಷವಾಗಿ ಪರಿಶೀಲಿಸಿ ತೀರ್ಪು ನೀಡುತ್ತಿದ್ದರು. ಅವರಲ್ಲೇ ಕೆಲವು ಭಿನ್ನಾಭಿಪ್ರಾಯ ಬಂದರೂ ಅವರೇ ಆ ಬಗ್ಗೆ ಕೂತು ಚರ್ಚಿಸಿ ಒಮ್ಮತದ ನಿರ್ಧಾರ ಕೈಗೊಳ್ಳುತ್ತಿದ್ದರು. ಅದನ್ನು ಗ್ರಾಮಸ್ಥರೆಲ್ಲರೂ ಪಾಲಿಸುತ್ತಿದ್ದರು. ಗ್ರಾಮಗಳು ನೆಮ್ಮದಿಯಾಗಿದ್ದವು. ಆ ತೀರ್ಪಿನಲ್ಲಿ ಗ್ರಾಮದ ಹಿತಾಸಕ್ತಿ ಹಾಗೂ ಮಾನವೀಯತೆ ಪ್ರಮುಖವಾಗಿರುತ್ತಿತ್ತು. ಆದರೆ ಸ್ವಾತಂತ್ರ್ಯ ಬಂದ ನಂತರ ಈ ವಿಧಾನ ಒಂದು ರೀತಿ ಮೂಲೆಗುಂಪಾಯಿತು. ಇಂದು ಸಣ್ಣ ಪುಟ್ಟದ್ದಕ್ಕೂ ನ್ಯಾಯಾಲಯದಲ್ಲಿ ದೂರು ದಾಖಲಿಸಿ, ದಾಖಲಿಸಿದವನೂ ಸೇರಿದಂತೆ ಎಲ್ಲರೂ ನ್ಯಾಯಾಲಯಕ್ಕೆ ಅಲೆಯುವುದನ್ನು ಕಾಣುತ್ತೇವೆ. ಇದೇಕೆ ಹೀಗಾಗುತ್ತಿದೆ. ಹಿಂದೆ ಹೀಗಿರಲಿಲ್ಲವಲ್ಲಾ ಎನ್ನಿಸುತ್ತದೆ. ಇದಕ್ಕೆ ಕಾರಣ ಇಂದು ನಾವು ಸಮಾಜವನ್ನು ಅರಿತುಕೊಂಡು ನಡೆಯುವುದು ಕಡಿಮೆಯಾಗಿದೆ. ಒಂದು ರೀತಿ ಹಣಬಲ ಹಾಗೂ ದೈಹಿಕಬಲ ನಮ್ಮನ್ನು ದಾರಿ ತಪ್ಪಿಸುತ್ತಿದೆ.

ಇದರ ಬದಲು ನಾವು ಸಮಾಜದಲ್ಲಿ ಹೇಗೆ ಬದುಕಬೇಕು ಎಂಬುದನ್ನು ತಿಳಿದುಕೊಂಡು, ಹಾಗೆ ಬದುಕಿದರೆ ಇಂತಹ ಸಮಸ್ಯೆ ನಮಗೆ ಎದುರಾಗುವುದಿಲ್ಲ. 'ನನ್ನಂತೆಯೇ ಇತರರು' ಎಂಬುದು ಇಂದು ಪಾಲಿಸಬೇಕಾದ ಮನೋಭಾವ ಎಂಬುದಾಗಿ ಕಂಡುಬರುತ್ತದೆ.

ಇತ್ತೀಚೆಗೆ ಮೈಸೂರಿನ ಕುವೆಂಪುನಗರದ ಒಂದು ಹೋಟೆಲ್ಲಿಗೆ ಕಾಫಿ ಕುಡಿಯಲು ಹೋಗಿದ್ದಾಗ ಒಬ್ಬರು ಹಳೆಯ ಸ್ನೇಹಿತರು ಭೇಟಿಯಾದರು. ಅವರ ವಾಸ ಮೈಸೂರಿನ ಜೆಪಿ ನಗರ. ಅವರು ಪ್ರತಿದಿನ ಸಂಜೆ ಕುವೆಂಪುನಗರಕ್ಕೆ ಬರುತ್ತಾರೆ. ಅಲ್ಲಿ ಅವರಿಗೆ ಕೆಲವು ಸ್ನೇಹಿತರು ಇದ್ದಾರೆ. ಅವರನ್ನು ಭೇಟಿಯಾಗಿ ಮಾತುಕತೆ ನಡೆಸಿ ಕೊನೆಗೆ ಎಲ್ಲರೂ ಒಂದು ಹೋಟೆಲ್ಲಿಗೆ ಹೋಗಿ ಕಾಫಿ ಕುಡಿದು ಮನೆಗೆ ಹೋಗುವುದು ಅವರ ಅಭ್ಯಾಸ. ಇದ್ಯಾಕೆ ಹೀಗೆ? ನಿಮಗೆ ಜೆಪಿ ನಗರದಲ್ಲಿ ಸ್ನೇಹಿತರು ಇಲ್ಲವೇ? ಪ್ರತಿದಿನ ಇಲ್ಲಿಗೇಕೆ ಬರುತ್ತೀರಿ? ನನಗೆ ಅಲ್ಲಿ ಸ್ನೇಹಿತರು ಇಲ್ಲ. ನನಗೆ ಮೊದಲಿನಿಂದಲೂ ಇಲ್ಲಿನವರೊಡನೆ ಮಾತ್ರ ಸ್ನೇಹ ಇರುವಂತಹುದು. ಹಾಗಾಗಿ ಇಲ್ಲಿಗೇ ಬರುತ್ತೇನೆ ಎಂದರು. ನನಗೆ ಆಶ್ಚರ್ಯ. ಅದ್ಯೇಕೆ ಜೆಪಿ ನಗರದಲ್ಲಿ ಇವರಿಗೆ ಸ್ನೇಹಿತರು ಆಗಲಿಲ್ಲ ಎಂದು ಯೋಚಿಸಿದಾಗ ಅವರು ಈಗ ಏನು ಮಾಡುತ್ತಿದ್ದಾರೋ ಅದೇ ಸರಿ ಎಂಬ ಮನೋಭಾವ ಅವರಲ್ಲಿ ಬಂದುಬಿಟ್ಟಿದೆ. ಹಾಗಾಗಿ ಅವರಿಗೆ ತಮ್ಮ ಮನೆಯ ಸುತ್ತಮುತ್ತ ಯಾರೂ ಸ್ನೇಹಿತರು ಕಂಡುಬರುತ್ತಿಲ್ಲ. ಇದರ ಬದಲು ಅಲ್ಲೇ ನಾಲ್ಕಾರು ಸ್ನೇಹಿತರನ್ನು ಮಾಡಿಕೊಳ್ಳಬಹುದಾಗಿತ್ತು. ಆದರೆ ಮನಸ್ಸಿಲ್ಲ. ಇಂತಹ ಹಲವಾರು ಉದಾಹರಣೆಗಳು ನಮಗೆ ಸಿಗುತ್ತವೆ.

> “ತಪ್ಪು ಮಾಡುವುದು ಸಹಜ. ಆದರೆ ಅದನ್ನು ಸಮರ್ಥಿಸಿಕೊಳ್ಳುವುದು ತಪ್ಪು. ಆದರೆ ಇತ್ತೀಚೆಗೆ ಹೀಗೆ ಅನವಶ್ಯಕ ವಿಷಯಗಳ ಬಗ್ಗೆ ವಾದ–ಪ್ರತಿವಾದ ನಡೆಯುವುದನ್ನು ನಾವು ಹೆಚ್ಚಾಗಿ ಕಾಣುತ್ತಿದ್ದೇವೆ. ಇದು ಎಂತಹ ಅಪಾಯಕಾರಿಯಾಗುತ್ತಿದೆ ಎಂದರೆ ಕೋಪದ ಭರದಲ್ಲಿ ಎದುರಿಗಿರುವವರನ್ನು ಹೊಡೆಯುವುದು, ಕೊಲೆ ಮಾಡುವ ಮಟ್ಟಕ್ಕೆ ಕರೆದುಕೊಂಡು ಹೋಗುತ್ತಿದೆ. ಒಮ್ಮೆ ತಪ್ಪು ಮಾಡಿ ಸಿಕ್ಕಿಕೊಂಡರೆ ಜೈಲುವಾಸ ನಿಶ್ಚಿತ. ಆಗ ಪಶ್ಚಾತ್ತಾಪಪಟ್ಟು ನಾನು ಮಾಡಿದ್ದು ಸರಿಯಲ್ಲ ಎಂದು ಎಷ್ಟೇ ರೋಧಿಸಿದರೂ ಶಿಕ್ಷೆಯಿಂದ ತಪ್ಪಿಸಿಕೊಳ್ಳಲಾಗದು.

ನಾನು ಸಾಹಿತ್ಯ ಕ್ಷೇತ್ರದಲ್ಲಿ ಒಂದಷ್ಟು ಕೆಲಸ ಮಾಡುತ್ತೇನೆ. ಹೊಸದಾಗಿ ಒಂದಷ್ಟು ಜನರನ್ನು ಇದರಲ್ಲಿ ತೊಡಗಿಸುವ ಮನಸ್ಸು. ಹೀಗೆ ಹೊಸ ಪ್ರದೇಶದಲ್ಲಿ ಯಾರಾದರೂ ಪರಿಚಿತರಿದ್ದು, ನೀವು ನಮ್ಮ ಜೊತೆಗೆ ಕೈಜೋಡಿಸಿ ಎಂದಾಗ, ನಾನು ಬರಬಹುದು, ಆದರೆ ನಮ್ಮ ಏರಿಯಾದಲ್ಲಿ ಯಾರೂ ಸಾಹಿತ್ಯಾಸಕ್ತರಿಲ್ಲ ಎಂದು ಉತ್ತರಿಸುತ್ತಾರೆ. ಅದ್ಯೇಕೆ ಇದೂ ಊರು ಅಲ್ಲವೇ? ಎಂದರೆ ನಿಮಗೆ ಗೊತ್ತಿಲ್ಲ, ಇದು ಬೇರೆ ಏರಿಯಾದಂತೆ ಅಲ್ಲ, ಇಲ್ಲಿನ ಜನ ಪ್ರಯೋಜನವಿಲ್ಲ ಎನ್ನುತ್ತಾರೆ. ಇಲ್ಲೂ ಅವರ ಮನೋಭಾವ ವ್ಯಕ್ತವಾಗುತ್ತದೆ. ನಮ್ಮ ಅಕ್ಕಪಕ್ಕದಲ್ಲಿರುವವರ ಬಗ್ಗೆ ನಮಗೆ ಮಾಹಿತಿಯಿಲ್ಲ ಹಾಗೂ ಕಾಳಜಿಯೂ ಇಲ್ಲ. ಇದರಿಂದ ಅಕ್ಕಪಕ್ಕದವರು ಯಾರೂ ಸರಿಯಿಲ್ಲ ಎಂದೇ ಭಾವಿಸುತ್ತಾರೆ.

ಇತ್ತೀಚೆಗೆ ಮೈಸೂರಿನ ಒಬ್ಬರು ಸ್ನೇಹಿತರ ಮನೆಯಲ್ಲಿ ಒಂದು ಸಾವಾಯಿತು. ಅದೂ ಹೃದಯಾಘಾತದಿಂದಾದ ಸಾವು. ಮನೆಯವರಲ್ಲಿ ದುಃಖದ ಛಾಯೆ. ಅಕ್ಕಪಕ್ಕದವರಿಗೆ ಇದರ ಅರಿವಿಲ್ಲ. ಕೊನೆಗೆ ಮನೆಯ ಮುಂದೆ ಆಂಬುಲೆನ್ಸ್ ಬಂದು ನಿಂತಾಗ ಏನಾಯಿತು? ಎಂದು ಕುತೂಹಲ ತೋರಿಸಿದರು. ಆದರೆ ಅಷ್ಟರಲ್ಲಿ ಮರಣ ಸಂಭವಿಸಿತ್ತು. ಮನೆಯವರು ಏಕಾಂಗಿಯಾಗಿ ಮಾಡಿದ ಓಡಾಟ ಫಲ ನೀಡಲಿಲ್ಲ. ಬದಲಾಗಿ ಅಕ್ಕಪಕ್ಕದವರು ಇವರ ಗಡಿಬಿಡಿ ಕಂಡು ಮೊದಲೇ ಸ್ವಲ್ಪವಾದರೂ ಸಹಕರಿಸಿದ್ದರೆ ಒಂದು ಅಮೂಲ್ಯ ಜೀವವನ್ನು ಉಳಿಸಬಹುದಾಗಿತ್ತೇನೋ ಅಥವಾ ನಾವು ಸ್ವಲ್ಪವಾದರೂ ಮಾನವೀಯತೆ ತೋರಿದೆವು ಎಂಬ ಸಮಾಧಾನವಾದರೂ ಇರುತ್ತಿತ್ತು ಪಟ್ಟಣಗಳಲ್ಲಿ ವಾಸಿಸುವವರು ತಾವಾಯಿತು ತಮ್ಮದಾಯಿತು ಎಂಬ ಮನೋಭಾವ ಬೆಳೆಸಿಕೊಳ್ಳುತ್ತಿರುವುದರ ಪರಿಣಾಮವಿದು.

ಒಮ್ಮೆ ಒಂದು ಅಪಾರ್ಟ್‌ಮೆಂಟಿನಲ್ಲಿ ವಾಸಿಸುವವರೂ ಇಂತಹುದೇ ಅನುಭವ ಹೇಳಿಕೊಂಡಿದ್ದರು. ಬೇರೆಡೆ ಮನೆಗಳು ಸ್ವಲ್ಪ ದೂರು ದೂರ ಇರಬಹುದು. ಆದರೆ ಅಪಾರ್ಟ್‌ಮೆಂಟಿನಲ್ಲಿ ಅಕ್ಕಪಕ್ಕ ಮನೆಗಳು. ಆದರೂ ಒಬ್ಬರಿಗೆ ಮತ್ತೊಬ್ಬರ ಪರಿಚಯವಿಲ್ಲ. ಹತ್ತಾರು ವರ್ಷಗಳು ಜೊತೆಯಾಗಿ ಒಂದೆಡೆ ವಾಸಿಸುತಿದ್ದರೂ, ಅಕ್ಕಪಕ್ಕದವರ್ಯಾರು ಎಂದು ಗೊತ್ತೇ ಆಗುವುದಿಲ್ಲ. ಹಿಂದೆ ಹೀಗಿರಲಿಲ್ಲ. ಒಬ್ಬರ ಮನೆಯಲ್ಲಿ ಯಾವುದಾದರೂ ಸಾವು–ನೋವುಗಳಾದರೆ ಇಡೀ ಊರಿಗೆ ಊರೇ ಆ ಮನೆಯ ಮುಂದೆ ನೆರೆಯುತ್ತಿತ್ತು. 'ನೀ ನನಗಿದ್ದರೆ ನಾ ನಿನಗೆ' ಎಂಬ ಮಾತನ್ನು ಅಕ್ಷರಶಃ ಪಾಲಿಸಲಾಗುತ್ತಿತ್ತು. ಇಂದು ಅಕ್ಕ–ಪಕ್ಕದವರ ಸಮಸ್ಯೆ ಅವರದ್ದು, ನಾವೇನು ಮಾಡಲಾಗುತ್ತದೆ ಎಂದು, ಕನಿಷ್ಠ ಅವರ ಸಮಸ್ಯೆ ಏನು ಎಂದೂ ಕೇಳದ ಮನೋಭಾವ. ಆದರೆ ಅಂತಹುದೇ ಸ್ಥಿತಿ ನಮಗೆ ಬಂದಾಗ ನಮ್ಮ ಪ್ರತಿಕ್ರಿಯೆ ಹೇಗಿರುತ್ತದೆ? ಆಗ ನಮ್ಮ ಅಕ್ಕಪಕ್ಕ ದವರು ಯಾರೂ ಪ್ರಯೋಜನವಿಲ್ಲ. ನಮಗೆ ಸಮಸ್ಯೆ ಬಂದಾಗ ಯಾರೂ ಬಂದು ವಿಚಾರಿಸುವುದಿಲ್ಲ ಎಂದು ದೂರುತ್ತೇವೆ.

ನಮಗೆ ಮೊದಲು ಮಾನವೀಯತೆ ಎಂದರೆ ಏನು ಎಂಬುದು ಅರ್ಥವಾಗಬೇಕು. ನನ್ನ ಸಮಸ್ಯೆಗೆ ಇತರರು ಸ್ಪಂದಿಸಬೇಕು ಎಂದರೆ ನಾವೂ ಇತರರ ಸಮಸ್ಯೆಗೆ ಸ್ಪಂದಿಸಬೇಕು. ಅದು ನಮ್ಮ ಸಮಾಜದ ಬದುಕಿನ ಸಾರವಾಗಬೇಕು. ಹಾಗೆ ನೋಡಿದರೆ ಎಲ್ಲರೂ ಹೀಗೇ ನಡೆದುಕೊಳ್ಳುತ್ತಾರೆ ಎಂದೇನಲ್ಲ. ನಾನು ಕಂಡ ಮತ್ತೊಂದು ಅಪಾರ್ಟ್‌ಮೆಂಟಿನಲ್ಲಿ ಎಲ್ಲವೂ ತದ್ವಿರುದ್ಧ. ಯಾವುದಾದರೂ ಹಬ್ಬ ಬಂದರೆ ಅದನ್ನು ಅವರೆಲ್ಲಾ ಸಾಮೂಹಿಕವಾಗಿ ಆಚರಿಸಿ, ಸಂಭ್ರಮಪಡುತ್ತಾರೆ. ಅಲ್ಲಿ ಸ್ವಾತಂತ್ರ್ಯ ದಿನಾಚರಣೆ, ಗಣರಾಜ್ಯೋತ್ಸವ, ಕನ್ನಡ ರಾಜ್ಯೋತ್ಸವಗಳಲ್ಲಿ ಧ್ವಜಾರೋಹಣ ಮಾಡಿ ಎಲ್ಲರೂ ಸಂಭ್ರಮಿಸುತ್ತಾರೆ. ಅಲ್ಲಿ ಯಾರದ್ದಾದರೂ ಹುಟ್ಟು ಹಬ್ಬವಿದ್ದರೆ ಎಲ್ಲರೂ ಹೋಗಿ ಅವರಿಗೆ ಅಭಿನಂದನೆ ಸಲ್ಲಿಸುತ್ತಾರೆ. ಅದು ಕೇವಲ ಔಪಚಾರಿಕವಾಗಿ ಅಲ್ಲ, ಮನದುಂಬಿ ಅಭಿನಂದಿಸು ತ್ತಾರೆ. ನನ್ನ ಹುಟ್ಟುಹಬ್ಬಕ್ಕೆ ಬೇರೆ ಯಾರಾದರೂ ಅಭಿನಂದನೆ ಸಲ್ಲಿಸಿದಾಗ ನನಗೆ ಹೇಗೆ ಸಂತೋಷವಾಗುವುದೋ ಹಾಗೆ ನಾನೂ ಬೇರೆಯವರ ಹುಟ್ಟುಹಬ್ಬಕ್ಕೆ ಶುಭ ಕೋರಬೇಕು. ಅದರಿಂದ ಅವರಿಗೆ ಸಂತೋಷವಾಗುತ್ತದೆ ಎಂದು ಅವರು ಯೋಚಿಸುತ್ತಾರೆ. ಅಲ್ಲಿ ಯಾವಾಗಲೂ ಸಂಭ್ರಮ ಮನೆಮಾಡಿರುತ್ತದೆ.

ಜೀವನವನ್ನು ನಾಕ ಮಾಡುವುದು ನರಕ ಮಾಡುವುದು ನಮ್ಮ ಕೈಯ್ಯಲ್ಲೇ ಇದೆ. ನನ್ನಲ್ಲಿ ಹಣವಿದೆ ಎಂದಾದಾಗ ಅದರ ಸದ್ಬಳಕೆಯಾದರೆ ಸಂತೋಷವಾಗುತ್ತದೆ. ಇಂದಿಗೂ ಪ್ರತಿವರ್ಷ ತಮ್ಮ ಕೈಲಾದಷ್ಟು ಹಣ ಹಾಕಿ ಅವಶ್ಯಕತೆ ಇರುವ ಬಡ ಮಕ್ಕಳಿಗೆ ಪುಸ್ತಕ, ಸಮವಸ್ತ್ರ ನೀಡುವವರನ್ನು ಕಾಣುತ್ತೇವೆ. ಅವರು ಯಾವುದೇ ಪ್ರಚಾರ ಬಯಸುವುದಿಲ್ಲ. ಬದಲಾಗಿ ಅದು ಒಂದು ಸಾಮಾಜಿಕ ಜವಾಬ್ದಾರಿ ಎಂದೇ ಭಾವಿಸುತ್ತಾರೆ. ತಮ್ಮ ಹುಟ್ಟುಹಬ್ಬ ಮೊದಲಾದ ಸಂತೋಷದ ಸಮಯದಲ್ಲಿ ವೃದ್ಧಾಶ್ರಮಗಳಿಗೆ ಹೋಗಿ ಹಣ್ಣು ಹಂಚಿ ಅವರ ಆಶೀರ್ವಾದ ಪಡೆದು ಬರುವವರೂ ನಮ್ಮ ನಡುವೆ ಇದ್ದಾರೆ. ಅವರೆಲ್ಲ ಬಾಯಿಬಿಟ್ಟು ತಾವು ಮಾಡುತ್ತಿರುವುದನ್ನು ಎಲ್ಲೂ ಹೇಳಿಕೊಳ್ಳುವುದಿಲ್ಲ. ಅದರಲ್ಲೇ ಅವರು ಆನಂದ ಕಾಣುತ್ತಾರೆ. ಅವರೊಡನೆ ಅದೇ ಸಮಾಜದಲ್ಲಿ ವಾಸಿಸುವ ಇತರರಿಗೆ ಆ ಮನೋಭಾವ ಏಕೆ ಬೆಳೆಯುವುದಿಲ್ಲ. ಎಲ್ಲರೂ ಆ ರೀತಿ ಯೋಚಿಸಿದರೆ ಸಮಾಜದ ಸ್ಥಿತಿ ಹೇಗಿರುತ್ತದೆ ಎಂದು ಯೋಚಿಸುವುದೇ ಒಂದು ರೋಚಕ ಅನುಭವ ನೀಡುತ್ತದೆ.

ಇತ್ತೀಚೆಗೆ ಪತ್ರಿಕೆಗಳಲ್ಲಿ ಬಂದ ವರದಿ ಓದಿದಾಗ ಬೇಸರ ತರಿಸಿತು. ತಮ್ಮ ವಯಸ್ಸಾದ ತಂದೆ–ತಾಯಿಯನ್ನು ಚಿಕಿತ್ಸೆಗಾಗಿ ಆಸ್ಪತ್ರೆಗೆ ಸೇರಿಸುವ ಮಕ್ಕಳು, ಅವರ ಅನುಕಂಪ ಗಿಟ್ಟಿಸಿ, ಆಸ್ತಿ ಪತ್ರಗಳಿಗೆ ಸಹಿ ಪಡೆದು ನಂತರ ನಾಪತ್ತೆಯಾಗುತ್ತಿದ್ದಾರೆ. ಅವರು ಗುಣಮುಖರಾದರೂ ಮನೆಗೆ ಕರೆದುಕೊಂಡು ಹೋಗುವುದಿಲ್ಲ. ಬಂದು ವಿಚಾರಿಸುವುದೂ ಇಲ್ಲ. ಇಂತಹ ನೂರಾರು ಪ್ರಕರಣಗಳು ನಡೆಯುತ್ತಿವೆ ಎಂದು ಆ ವರದಿ ಹೇಳುತ್ತದೆ. ಮಕ್ಕಳಿಗೆ ತಂದೆ ತಾಯಿಯರಿಗಿಂತ ಹಣ, ಆಸ್ತಿಪಾಸ್ತಿ ಮುಖ್ಯವಾಗುತ್ತಿದೆ ಎಂದಾಗ ಆ ಹಿರಿಯ ಜೀವಗಳಿಗೆ ಅದೆಂತಹ ನೋವಾಗುತ್ತದೆ. ಇದೆಲ್ಲ ಮಾನವೀಯತೆ ಕಡಿಮೆಯಾಗುತ್ತಿರುವ ದ್ಯೋತಕವಾಗಿ ಕಾಣುತ್ತದೆ. ಜೀವನ ಎಂದರೆ ಇಷ್ಟೇನಾ? ನಮಗೆ ಅಕ್ಕಪಕ್ಕದವರು ಬೇಡ, ಕೊನೆಗೆ ಮನೆಯವರೂ ಬೇಡ ಎಂದಾದಾಗ ಅದೆಂತಹ ಜೀವನ ಎನ್ನಿಸುತ್ತದೆ. ಈಗಲಾದರೂ ಎಚ್ಚರಿಕೆ ವಹಿಸಿ ಮನೋಭಾವ ಬದಲಿಸಿಕೊಳ್ಳುವುದು ಸೂಕ್ತ ಎನ್ನಿಸುತ್ತದೆ.

ಬಿಡದಿ ಕಾರ್ಖಾನೆಯಲ್ಲಿ ಪಾಕ್ ಪರ ಗೋಡೆಬರಹ: ಇಬ್ಬರ ಬಂಧನ

ರಾಮನಗರ, ಮಾ.20– ಬಿಡದಿಯಲ್ಲಿರುವ ಪ್ರತಿಷ್ಠಿತ ಕಂಪನಿಯ ಕಾರ್ಖಾನೆ ಶೌಚಾಲಯದಲ್ಲಿ ಪಾಕಿಸ್ತಾನ ಪರ ಬರಹ ಬರೆದ ಪ್ರಕರಣದಲ್ಲಿ ಇಬ್ಬರು ಆರೋಪಿಗಳನ್ನು ಬಿಡದಿ ಪೊಲೀಸರು ಬಂಧಿಸಿದ್ದಾರೆ.





ಉತ್ತರ ಕರ್ನಾಟಕದ ಹೈಮದ್ ಹುಸೇನ್ (24) ಮತ್ತು ಸಾದಿಕ್ (20) ಬಂಧಿತ ಆರೋಪಿಗಳು. ಇವರು ಟೊಯೋಟಾ ಕಾರ್ಖಾನೆಯಲ್ಲಿ ಗುತ್ತಿಗೆ ಆಧಾರದಲ್ಲಿ ಕೆಲಸ ಮಾಡುತ್ತಿದ್ದರು ಎಂದು ತಿಳಿದುಬಂದಿದೆ.

ಆರೋಪಿಗಳು ಮಾ.16ರಂದು ಶೌಚಾಲಯದ ಗೋಡೆ ಮೇಲೆ 'ಪಾಕಿಸ್ತಾನ್ ಕೀ ಜೈ, ಪಾಕಿಸ್ತಾನಕ್ಕೆ ಜಯವಾಗಲಿ ಎಂದು ಬರೆದಿದ್ದರು. ಜೊತೆಗೆ ಕನ್ನಡಿಗರನ್ನು ಅವಹೇಳನಕಾರಿ ಭಾಷೆಯಲ್ಲಿ ನಿಂದಿಸಿದ್ದರು. ಹೀಗಾಗಿ ದೇಶದ್ರೋಹದ ಆರೋಪ ದಡಿಯಲ್ಲಿ ಇಬ್ಬರು ಆರೋಪಿಗಳನ್ನು ಬಂಧನಕ್ಕೊಳಪಡಿಸಲಾಗಿದೆ. ಈ ಕಾರ್ಖಾನೆಯಲ್ಲಿ 2 ಸಾವಿರಕ್ಕೂ ಹೆಚ್ಚು ಕಾರ್ಮಿಕರಿದ್ದು, ಮೂರು ಪಾಳಿಗಳಲ್ಲಿ ಕಾರ್ಮಿಕರು ಕೆಲಸ ಮಾಡುತ್ತಿದ್ದರು. ಪ್ರತಿ ಪಾಳಿಯಲ್ಲಿ 600 ಕಾರ್ಮಿಕರು ಕೆಲಸ ಮಾಡುತ್ತಿದ್ದು, ಮಾ.16ರಂದು ಮೊದಲನೇ ಪಾಳಿಯಲ್ಲಿ ಕೆಲಸ ಮಾಡುತ್ತಿದ್ದ ಕಿಡಿಗೇಡಿಗಳು, ಈ ರೀತಿ ಬರೆದಿದ್ದಾರೆ. ಆರಂಭದಲ್ಲಿ ಈ ಅಪರಾಧವನ್ನು ಕಂಪನಿ ಮುಚ್ಚಿ ಹಾಕಲು ಪ್ರಯತ್ನಿಸಿತ್ತು. ನೋಟಿಸ್ ಬೋರ್ಡ್‌ನಲ್ಲಿ ಈ ರೀತಿ ಮಾಡದಂತೆ ಎಚ್ಚರಿಕೆ ಕೊಡಲಾಗಿತ್ತು. ನಂತರ ಈ ಗೋಡೆ ಬರಹದ ಫೋಟೊ ವೈರಲ್ ಆಗಿದ್ದು, ಬಿಡದಿ ಪೊಲೀಸರು ಭೇಟಿ ನೀಡಿ ಪರಿಶೀಲಿಸಿ ಕಿಡಿಗೇಡಿಗಳ ವಿರುದ್ಧ ಪ್ರಕರಣ ದಾಖಲಿಸಿಕೊಂಡಿದ್ದರು. ಈ ವಿಷಯ ಬೆಳಕಿಗೆ ಬರುತ್ತಿದ್ದಂತೆ ಕನ್ನಡಪರ ಸಂಘಟನೆಗಳು ಕಾರ್ಖಾನೆ ಬಳಿ ಜಮಾಯಿಸಿದ್ದರು. ಪ್ರತಿಭಟನೆ ನಡೆಸಿ ಕಂಪನಿಯ ಆಡಳಿತ ಮಂಡಳಿ ವಿರುದ್ಧ ಘೋಷಣೆ ಕೂಗಿ ಆಕ್ರೋಶ ಹೊರಹಾಕಿದ್ದರು.

2023–24ನೇ ಸಾಲಿನಲ್ಲಿ ಸಿಎಂ ಹೆಲಿಕಾಪ್ಟರ್ ಪ್ರಯಾಣಕ್ಕೆ 11 ಕೋಟಿ ರೂ. ಖರ್ಚು



ಬೆಂಗಳೂರು,ಮಾ.20–ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಕಾಂಗ್ರೆಸ್ ಸರ್ಕಾರ ಬಂದಾಗಿನಿಂದ ವಿಮಾನ ಹಾಗೂ ಹೆಲಿಕಾಪ್ಟರ್ ಪ್ರಯಾಣಕ್ಕೆ ಬರೋಬ್ಬರಿ 11 ಕೋಟಿ ರೂ. ಖರ್ಚು ಮಾಡಿದ್ದಾರೆ. ಈ ಖರ್ಚು ವೆಚ್ಚದ ವರದಿಯನ್ನು ಸರ್ಕಾರ ವಿಧಾನಪರಿಷತ್‌ನಲ್ಲಿ ತಿಳಿಸಿದೆ. ಈ ವಿಚಾರವಾಗಿ ವಿಧಾನಪರಿಷತ್‌ನಲ್ಲಿ ಜೆಡಿಎಸ್ ಶಾಸಕ ಜವರಾಯಿಗೌಡ ಪ್ರಶ್ನಿಸಿದರು. ಈ ವೇಳೆ ಸಿಎಂ ಲಿಖಿತ ರೂಪದ ಮೂಲಕ ಉತ್ತರ ನೀಡಿದ್ದಾರೆ.

ವಿವಿಧ ಜಿಲ್ಲೆ ಪ್ರವಾಸ, ವಿಶೇಷ ಪ್ರವಾಸಗಳಿಗಾಗಿ ಸಿಎಂ ವಿಮಾನ ಬಳಕೆ ಮಾಡಿದ್ದರು. ಕಾಂಗ್ರೆಸ್ ಸರ್ಕಾರ ಬಂದಾಗಿನಿಂದ ಇಲ್ಲಿವರೆಗೆ ಸಿಎಂ ಹಾಗೂ ರಾಜ್ಯಪಾಲರು ಸುಮಾರು 34 ಕೋಟಿ ರೂ. ವಿಮಾನಯಾನಕ್ಕೆ ಖರ್ಚು ಮಾಡಿದ್ದಾರೆ. ಈ ವರದಿಯಲ್ಲಿ ಸಿಎಂ, ರಾಜ್ಯಪಾಲರು ಹಾಗೂ ಹೈಕೋರ್ಟ್ ನ್ಯಾಯಾಧೀಶರ ಸಂಪೂರ್ಣ ವಿಮಾನ ಹಾಗೂ ಹೆಲಿಕಾಪ್ಟರ್ ಪ್ರಯಾಣದ ಖರ್ಚು ವೆಚ್ಚದ ಮಾಹಿತಿಯಿದೆ. 2024–25ನೇ ಸಾಲಿನಲ್ಲಿ ಸರ್ಕಾರವು ಸುಮಾರು 21 ಕೋಟಿ ರೂ. ವಿಮಾನ ಪ್ರಯಾಣಕ್ಕೆ ಖರ್ಚು ಮಾಡಿದೆ.

ಮೈಸೂರು ಪೊಲೀಸರೇ ದಂಧೆ ನಡೆಸುತ್ತಿದ್ದಾರೆ; ಕಡಿವಾಣ ಹಾಕಿ

●ಎ.ಹೆಚ್.ವಿಶ್ವನಾಥ್ ಆಗ್ರಹ ●ಗೃಹ ಸಚಿವ ಪರಮೇಶ್ವರ್ ತನಿಖೆ ಭರವಸೆ

ಬೆಂಗಳೂರು, ಮಾ.20– ಮೈಸೂರು ಪೊಲೀಸರು ಕಲ್ಯಾಣ ಮಂಟಪ ನಿರ್ಮಾಣ ಮಾಡಿಕೊಂಡು ದಂಧೆ ಮಾಡುತ್ತಿದ್ದಾರೆ. ಈ ದಂಧೆಗೆ ಗೃಹ ಇಲಾಖೆ ಕಡಿವಾಣ ಹಾಕಬೇಕು ಎಂದು ಬಿಜೆಪಿ ಸದಸ್ಯ ಎ.ಹೆಚ್.ವಿಶ್ವನಾಥ್ ಸರ್ಕಾರಕ್ಕೆ ಆಗ್ರಹಿಸಿದರು.

ವಿಧಾನಪರಿಷತ್ ಪ್ರಶ್ನೋತ್ತರ ಕಲಾಪದಲ್ಲಿ ಎ.ಹೆಚ್.ವಿಶ್ವನಾಥ್ ಮೈಸೂರು ಪೊಲೀಸರ ಬಗ್ಗೆ ಪ್ರಶ್ನೆ ಮಾಡಿದರು. ಮೈಸೂರು ಮಹಾರಾಜರು ಈ ಹಿಂದೆ ಪೊಲೀಸ್ ಇಲಾಖೆಗೆ ಜಾಗ ಕೊಟ್ಟಿದ್ದರು. ಆ ಜಾಗದಲ್ಲಿ ಮೈಸೂರು ಪೊಲೀಸರು ಒಂದು ಕಲ್ಯಾಣ ಮಂಟಪ ಕಟ್ಟಿದ್ದಾರೆ. ಅದರ ಅಧ್ಯಕ್ಷರು ಕಮಿಷನರ್. ಪೊಲೀಸರಿಗೆ ಕಲ್ಯಾಣ ಮಂಟಪದ ಬಾಡಿಗೆ 25 ಸಾವಿರ, ಬೇರೆಯವರಿಗೆ 2 ಲಕ್ಷ ಚಾರ್ಜ್ ಮಾಡುತ್ತಾರೆ. ಪೊಲೀಸರೇ ತಮ್ಮ ಹೆಸರಿನಲ್ಲಿ ಮಂಟಪ ಕೊಟ್ಟು ಬೇರೆಯವರಿಂದ ಹಣ ವಸೂಲಿ ಮಾಡುತ್ತಿದ್ದಾರೆ. ಪೊಲೀಸರಿಂದಲೇ ದಂಧೆ ಆಗುತ್ತಿದೆ. ಮೈಸೂರು ಪೊಲೀಸರ ಮೇಲೆ ಕೇಸ್ ಇದೆ. ತೆರಿಗೆ ಬಾಕಿ ಉಳಿಸಿಕೊಂಡಿದ್ದಾರೆ. ಇದೊಂದು ದೊಡ್ಡ ಕರ್ಮಕಾಂಡ. ಪೊಲೀಸರು ಪೊಲೀಸ್ ಕೆಲಸ ಮಾಡಿ ಅಂದರೆ ಕಲ್ಯಾಣ ಮಂಟಪ, ಸ್ಕೂಲ್, ಕ್ಲಬ್, ರಿಯಲ್ ಎಸ್ಟೇಟ್ ಮಾಫಿಯಾ ಮಾಡುತ್ತಿದ್ದಾರೆ. ಈ ಕಲ್ಯಾಣ ಮಂಟಪವನ್ನು ಸರ್ಕಾರ ವಶಕ್ಕೆ ಪಡೆಯಬೇಕು ಎಂದು ಹೆಚ್.ವಿಶ್ವನಾಥ್ ಒತ್ತಾಯಿಸಿದರು.



ಇದಕ್ಕೆ ಸಚಿವ ಪರಮೇಶ್ವರ್ ಉತ್ತರ ನೀಡಿ, ಪ್ರತಿ ಜಿಲ್ಲೆಯಲ್ಲಿ ಪೊಲೀಸ್ ಇಲಾಖೆಗೆ ಒಂದು ವಿಶೇಷ ನಿಧಿ ಇದೆ. ಅದರ ಹಣದಲ್ಲಿ ಅವರು ಸಮುದಾಯ ಭವನ, ಶಾಲೆ ಎಲ್ಲಾ ಕಟ್ಟಿಕೊಂಡಿರುತ್ತಾರೆ. ಎಲ್ಲಾ ಜಿಲ್ಲೆಯಲ್ಲೂ ಇಂತಹ ವ್ಯವಸ್ಥೆ ಆಗಿದೆ. ಮೈಸೂರಿನಲ್ಲಿ ಪೊಲೀಸರು ಉತ್ತಮವಾಗಿ ಮಾಡಿಕೊಂಡಿದ್ದಾರೆ. ಪೊಲೀಸರು ಕೆಲಸದ ಜೊತೆ ಹೆಚ್ಚುವರಿಯಾಗಿ ಇದನ್ನು ನಿರ್ವಹಣೆ ಮಾಡುತ್ತಿದ್ದಾರೆ. ಪೊಲೀಸರು ರಿಯಲ್ ಎಸ್ಟೇಟ್ ದಂಧೆ ಮಾಡುತ್ತಿದ್ದಾರೆ ಅಂದರೆ ನಾನು ಸಹಿಸಲ್ಲ. ಇದಕೋಸ್ಕರ ಇಡೀ ರಾಜ್ಯಕ್ಕೆ ಆದೇಶ ಮಾಡಿದ್ದೇವೆ ಎಂದರು. ಮೈಸೂರಿನಲ್ಲಿ 2001ರಲ್ಲಿ ಸಮುದಾಯ ಭವನ ಕಟ್ಟಿದ್ದಾರೆ. ಕಮಿಷನರ್ ಅವರೇ ಅಧ್ಯಕ್ಷರೂ ಆಗಿದ್ದಾರೆ. 2001ರಿಂದ 2017ರಿಂದ ಇವರು ತೆರಿಗೆ ಪಾವತಿ ಮಾಡಿಲ್ಲ. 11 ಕೋಟಿ ತೆರಿಗೆ ಹಣ ಕಟ್ಟಿಲ್ಲ. 9 ಬಾರಿ ತೆರಿಗೆ ಇಲಾಖೆ ನೋಟೀಸ್ ಕೊಟ್ಟಿದೆ. ಆದರೆ ತೆರಿಗೆ ಕೇಸ್ ಆಗಿರುವುದರಿಂದ 2017ರಿಂದ ಈಚೆಗೆ ತೆರಿಗೆ ಪಾವತಿ ಮಾಡಿದ್ದಾರೆ. ಅಕ್ರಮದ ಆರೋಪ ಮಾಡಿರುವುದರಿಂದ ಮೂರನೇ ವ್ಯಕ್ತಿಯಿಂದ ತನಿಖೆ ಮಾಡಿಸುತ್ತೇನೆ. ತನಿಖಾ ವರದಿ ಬಂದ ಬಳಿಕ ಕ್ರಮ ತೆಗೆದುಕೊಳ್ಳುತ್ತೇನೆ ಎಂದು ಭರವಸೆ ಕೊಟ್ಟರು.

Printed by T.S. Gopinath, Published by M. Govinde Gowda on behalf of Academy Newspapers Private Limited, 15-C Industrial 'A' Layout, Bannimantap, Mysore-570 015 and Printed at Academy Newspapers Private Limited, 15-C Industrial 'A' Layout, Bannimantap, Mysore-570 015 and Published at 15-C Industrial 'A' Layout, Bannimantap, Mysore-570 015, Editor: M. Govinde Gowda Ph: 2496520 / 2496521 / 2496526 / 2496527 / 2496528. Fax: 0821-2496525. CITY OFFICES: Visveswaraya Building, III Floor, K.R. CIRCLE, MYSORE-570 001, Ph: 2431774 and No. 114, D. DEVARAJ URS ROAD (Opposite Big Bus), MYSORE-570 001. Ph: 2428695. RNI Reg. No. 36581/1980 E-mail address: mysoorumithra@gmail.com For advertisements: mysoorumithra@gmail.com

ಹಾಸನ ಮಿತ್ರ

ಮಾ.30ರಿಂದ ಏ.8ರವರೆಗೆ ಅರಸೀಕೆರೆಯಲ್ಲಿ ಶ್ರೀರಾಮೋತ್ಸವ

ಅರಸೀಕೆರೆ: ಶ್ರೀರಾಮೋತ್ಸವವನ್ನು ಮಾ.30ರಿಂದ ಏಪ್ರಿಲ್ 8ರವರೆಗೆ ವಿಜೃಂಭಣೆಯಿಂದ ಆಚರಿಸಲು ಭರದ ಸಿದ್ಧತೆಗಳು ನಡೆಯುತ್ತಿವೆ ಎಂದು ತಾಲೂಕು ಬ್ರಾಹ್ಮಣ ಸಂಘದ ಅಧ್ಯಕ್ಷ ರವಿ ಕುಮಾರ್ ತಿಳಿಸಿದರು.



ನಗರದ ಶ್ರೀರಾಮಮಂದಿರದಲ್ಲಿ ಶ್ರೀರಾಮೋತ್ಸವದ ಆಹ್ವಾನ ಪತ್ರಿಕೆಯನ್ನು ಬಿಡುಗಡೆ ಮಾಡಿ, ಮಾತನಾಡಿದ ಅವರು, ಪ್ರತಿದಿನ ಬೆಳಿಗ್ಗೆ ಸೀತಾರಾಮ ಮೂರ್ತಿಗೆ ಅಭಿಷೇಕ, ವಿಶೇಷ ಪೂಜೆಗಳನ್ನು ಮಠಮುದ್ರಾ ರವಿ ಪುರಾಣಿಕ್ ನೆರವೇರಿಸುವರು. ಸೂರ್ಯ ನಮಸ್ಕಾರ, ನವಗ್ರಹ ಜಪ, ಶ್ರೀ ಮಾಯಣ ಪಾರಾಯಣ, ಸಂಜೆ 7ಕ್ಕೆ ಸಾಂಸ್ಕೃತಿಕ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ ಎಂದರು.

ಕಾರ್ಯದರ್ಶಿ ಸುಬ್ರಹ್ಮಣ್ಯ ಮಾತನಾಡಿ, ಮಾ.30ರಂದು ಸಂಜೆ ಪಂಚಾಂಗ ಶ್ರವಣ, 31ರಂದು ಮಂಕುತಿಮ್ಮನ ಕಗ್ಗ ಉಪ ಉಪನ್ಯಾಸ, ಏ.1ರಂದು ಭರತ ನಾಟ್ಯ, 2ರಂದು ಯಕ್ಷಗಾನ ವಾಚನ ಮತ್ತು ವ್ಯಾಖ್ಯಾನ, 3ರಂದು ಸಂಗೀತ ವೈವಿಧ್ಯ, ಏ.4ರಂದು ಕೊಳಲು ವಾದನ, 5ರಂದು ಭರತನಾಟ್ಯ ಪ್ರದರ್ಶನ ಹಮ್ಮಿಕೊಳ್ಳಲಾಗಿದೆ ಎಂದು ತಿಳಿಸಿದರು.

ಏ.6ರಂದು ಶ್ರೀರಾಮನವಮಿ ಪ್ರಯುಕ್ತ ಸೀತಾ ಮಹಿಳಾ ಸಂಘದಿಂದ ಸೀತಾರಾಮ ಕಲ್ಯಾಣ, ಸಂಜೆ 6.30ಕ್ಕೆ ನಗರದ ಪ್ರಮುಖ ಬೀದಿಗಳಲ್ಲಿ ಸೀತಾರಾಮರ ಉತ್ಸವಮೂರ್ತಿಗಳ ವೈಭವೋಪೇತ ಮೆರವಣಿಗೆ ಹಾಗೂ 7ರಂದು ಸೋಮವಾರ ಶ್ರೀರಾಮ ಪಟ್ಟಾಭಿಷೇಕದ ಅಂಗವಾಗಿ ರುದ್ರಾಭಿಷೇಕ, ಶ್ರೀರಾಮ ತಾರಕ ಹೋಮ, ಸಂಜೆ ಶಾಸ್ತ್ರೀಯ ಸಂಗೀತ ಹಾಗೂ ಏ.8ರಂದು ಶ್ರೇಂಯೋನೋತ್ಸವ, ಪ್ರತಿಭಾ ಪುರಸ್ಕಾರ ನಡೆಲಾಗುವುದು. ಪ್ರತಿದಿನ ಪ್ರಸಾದ ವಿನಿಯೋಗವನ್ನು ಏರ್ಪಡಿಸಲಾಗಿದೆ ಎಂದು ತಿಳಿಸಿದರು.

ತಾಲೂಕು ಬ್ರಾಹ್ಮಣ ಸಂಘದ ಗೌರವಾಧ್ಯಕ್ಷ ಕೆ.ರಮೇಶ್, ಕೆ.ವಿ.ಹಿರಿಯಣ್ಣಯ್ಯ, ನಿರ್ದೇಶಕರಾದ ಟಿ.ಆರ್.ನಾಗರಾಜ್, ಡಿ.ಎಸ್.ರಾಮಸ್ವಾಮಿ, ವೆಂಕಟೇಶ್, ಅನಂತಪದ್ಮನಾಭ, ಅಶೋಕ್, ಎಚ್.ವಿ.ಗೋಪಾಲ್, ಸತೀಶ್, ಸೀತಾ ಮಹಿಳಾ ಸಂಘದ ಅಧ್ಯಕ್ಷೆ ಶಕುಂತಲಾ ಆನಂದ್, ಯುವಕ ಸಂಘದ ಉಪಾಧ್ಯಕ್ಷ ಸತ್ಯನಾರಾಯಣ್, ಗಾಯತ್ರಿ ಪತ್ತಿನ ಸಹಕಾರ ಸಂಘದ ವ್ಯವಸ್ಥಾಪಕ ಮಂಜುನಾಥ್ ಸೇರಿದಂತೆ ಇನ್ನಿತರರು ಉಪಸ್ಥಿತರಿದ್ದರು.

ಕೃಷಿ ಪತ್ತಿನ ಸಹಕಾರ ಸಂಘದ ನೂತನ ನಿರ್ದೇಶಕರಿಂದ ಶಾಸಕರಿಗೆ ಅಭಿನಂದನೆ



ಶ್ರವಣಬೆಳಗೊಳ: ಶ್ರವಣಬೆಳಗೊಳ ಕೃಷಿ ಪತ್ತಿನ ಸಹಕಾರ ಸಂಘಕ್ಕೆ ಜೆಡಿಎಸ್ ಬೆಂಬಲಿತ ಅಭ್ಯರ್ಥಿಗಳಾಗಿ ಜಯಗಳಿಸಿರುವ ನೂತನ ನಿರ್ದೇಶಕರು ಶಾಸಕ ಸಿ.ಎನ್.ಬಾಲಕೃಷ್ಣ ಅವರನ್ನು ಭೇಟಿ ಮಾಡಿ, ಅಭಿನಂದಿಸಿದರು.

ಶಾಸಕ ಸಿ.ಎನ್.ಬಾಲಕೃಷ್ಣ ಮಾತನಾಡಿ, 12 ನಿರ್ದೇಶಕರ ಸ್ಥಾನಗಳಲ್ಲಿ ಜೆಡಿಎಸ್ ಬೆಂಬಲಿತ 9 ಮಂದಿ ಆಯ್ಕೆಯಾಗಿರುವುದು ಸಂತಸ ತಂದಿದೆ ಎಂದರು.

ಎಲ್ಲರೂ ಒಗ್ಗಟ್ಟಾಗಿ ಹಳೆಯ ಸಾಲಗಳನ್ನು ಸಕಾಲದಲ್ಲಿ ಮರುಪಾವತಿ ಮಾಡುವಂತೆ ರೈತರಿಗೆ ತಿಳಿಸಿ, ಸಹಕಾರ ಕ್ಷೇತ್ರದ ಬೆಳವಣಿಗೆಗೆ ದೃಢ ಸಂಕಲ್ಪ ಮಾಡಿ ಎಂದು ಸಲಹೆ ನೀಡಿದರು. ಮುಂಗಾರು ಹಂಗಾಮಿನ ಬೆಳೆಗಳಿಗೆ ಗೊಬ್ಬರಗಳನ್ನು ಸಂಗ್ರಹಿಸಿ ವಿತರಿಸಿ, ಪಡಿತರವನ್ನು ಸೊಸೈಟಿ ಮುಖಾಂತರ ನೀಡುತ್ತಿರುವುದರಿಂದ ಭೇದ-ಭಾವ ಮಾಡಬೇಡಿ ಎಂದು ಹೇಳಿದರು.

ಈ ಸಂದರ್ಭದಲ್ಲಿ ನಿರ್ದೇಶಕರಾದ ಎಸ್.ಪಿ.ಶರತ್‌ಕುಮಾರ್, ಎಸ್.ಕೆ.ಅಶೋಕ್, ಎ.ಆರ್.ಜೀವನ್, ಮಂಜೇಗೌಡ, ಕೆ.ಎನ್.ಲಕ್ಕೇಗೌಡ, ಕೆ.ಎನ್.ನಾಗರಾಜನಾಯಕ, ಧರ್ಮರಾಜ್ ಎಸ್.ಎನ್, ಎಂ.ವೆಂಕಟೇಶ್, ಕಮಲಮ್ಮ, ಮುಖಂಡರುಗಳಾದ ಕೆ.ಆರ್.ರಮೇಶ್, ಎಸ್.ಎಂ.ಲಕ್ಷ್ಮಣ್, ಪಾಲಾಕ್ಷಗಾರೆ ನಾಗೇಂದ್ರ, ರವಿ, ನಂಜಪ್ಪ, ಲಿಂಗರಾಜು, ನಾಗರಾಜು ಇದ್ದರು.

ಇಂದಿನಿಂದ ಎಸ್‌ಎಸ್‌ಎಲ್‌ಸಿ ಪರೀಕ್ಷೆ

ಮೈಸೂರು ಜಿಲ್ಲೆಯಲ್ಲಿ 39,103 ವಿದ್ಯಾರ್ಥಿಗಳು, 133 ಪರೀಕ್ಷಾ ಕೇಂದ್ರಗಳು

ಮೈಸೂರು,ಮಾ.20(ಆರ್‌ಕೆ)– ರಾಜ್ಯಾದ್ಯಂತ 2024–25ನೇ ಸಾಲಿನ ಎಸ್‌ಎಸ್‌ಎಲ್‌ಸಿ ವಾರ್ಷಿಕ ಪರೀಕ್ಷೆಗಳು ನಾಳೆ (ಮಾ.21)ಯಿಂದ ಆರಂಭವಾಗಲಿವೆ.

ಮೈಸೂರು ಜಿಲ್ಲೆಯಲ್ಲಿ 465 ಖಾಸಗಿ ಮತ್ತು 734 ಪುನರಾವರ್ತಿತ ಸೇರಿದಂತೆ ಒಟ್ಟು 39,103 ವಿದ್ಯಾರ್ಥಿಗಳು ಪರೀಕ್ಷೆಗೆ ನೋಂದಣಿ ಮಾಡಿಕೊಂಡಿದ್ದು, ಮೈಸೂರು ನಗರದ 35 ಸೇರಿದಂತೆ ಜಿಲ್ಲೆಯಾದ್ಯಂತ 133 ಪರೀಕ್ಷಾ ಕೇಂದ್ರಗಳನ್ನು ಪರೀಕ್ಷೆಗೆ ಸಜ್ಜುಗೊಳಿಸಲಾಗಿದೆ. ಎಲ್ಲಾ ಪರೀಕ್ಷಾ ಕೇಂದ್ರಗಳಲ್ಲಿ ಸಿಸಿ ಕ್ಯಾಮರಾಗಳನ್ನು ಅಳವಡಿಸಲಾಗಿದ್ದು, ಪರೀಕ್ಷಾ ಪ್ರಕ್ರಿಯೆಗಳನ್ನು ವೆಬ್‌ಕಾಸ್ಟಿಂಗ್ ಮಾಡಲಾಗುವುದು ಎಂದು ಸಾರ್ವಜನಿಕ ಶಿಕ್ಷಣ ಇಲಾಖೆ ಮೈಸೂರು ಜಿಲ್ಲಾ ಉಪನಿರ್ದೇಶಕ ಎಸ್.ಟಿ.ಜವರೇಗೌಡ ತಿಳಿಸಿದ್ದಾರೆ.

ಶುಕ್ರವಾರ ಕನ್ನಡ ಭಾಷಾ ಪತ್ರಿಕೆಯೊಂದಿಗೆ ಆರಂಭವಾಗುವ ಪರೀಕ್ಷೆಗಳು, ಏ.4ರಂದು 3ನೇ ಭಾಷೆಯೊಂದಿಗೆ ಅಂತ್ಯಗೊಳ್ಳಲಿದೆ. ಪ್ರತಿದಿನ ಬೆಳಗ್ಗೆ 10ರಿಂದ ಮಧ್ಯಾಹ್ನ 1.15 ಗಂಟೆವರೆಗೆ ಪರೀಕ್ಷೆಗಳು ನಡೆಯಲಿದ್ದು, 19,114 ಬಾಲಕಿಯರು ಸೇರಿದಂತೆ 39,103 ವಿದ್ಯಾರ್ಥಿಗಳು ಪರೀಕ್ಷೆಗೆ ಹಾಜರಾಗುವರು. ಜಿಲ್ಲಾ ಖಜಾನೆಯಿಂದ ಪ್ರಶ್ನೆಪತ್ರಿಕೆ ಮತ್ತು ಉತ್ತರ ಪತ್ರಿಕೆಗಳನ್ನು ಪರೀಕ್ಷಾ ಕೇಂದ್ರಗಳಿಗೆ ಸಾಗಿಸಿ, ವಾಪಸ್ ತರಲು ಜಿಪಿಎಸ್ ಹೊಂದಿದ ವಾಹನಗಳನ್ನು ವ್ಯವಸ್ಥೆ ಮಾಡಲಾಗಿದೆ ಎಂದರು.



ಮೈಸೂರಿನ ನಾರಾಯಣ ಶಾಸ್ತ್ರಿ ರಸ್ತೆಯಲ್ಲಿರುವ ಮಹಾರಾಣಿ ಜೂನಿಯರ್ ಕಾಲೇಜಿನಲ್ಲಿ ಶಿಕ್ಷಕರು ವಿದ್ಯಾರ್ಥಿಗಳ ರೋಲ್ ನಂಬರ್ ಬರೆಯುತ್ತಿರುವುದು.

ಪರೀಕ್ಷಾ ಕೇಂದ್ರಗಳ ಸುತ್ತ 200 ಮೀಟರ್ ವ್ಯಾಪ್ತಿಯಲ್ಲಿ ನಿಷೇಧಾಜ್ಞೆ ಜಾರಿ ಮಾಡಿ ಎಲ್ಲಾ ಜೆರಾಕ್ಸ್ ಅಂಗಡಿಗಳನ್ನು ಪರೀಕ್ಷಾ ಸಮಯದಲ್ಲಿ ಬಂದ್ ಮಾಡುವಂತೆ ಆದೇಶ ಮಾಡಲಾಗಿದೆ. ಹಾಗೂ ಆಯಾ ಪೊಲೀಸ್ ಠಾಣಾ ಸಿಬ್ಬಂದಿಗಳನ್ನು ಭದ್ರತೆಗಾಗಿ ನಿಯೋಜಿಸಿ ಯಾವುದೇ ಅಕ್ರಮ ನಡೆಯದಂತೆ ಎಚ್ಚರವಹಿಸಲಾಗಿದೆ.

ಪರೀಕ್ಷಾ ಮುಖ್ಯ ಅಧೀಕ್ಷಕರು, ಕೊಠಡಿ ಮೇಲ್ವಿಚಾರಕರು ಸೇರಿದಂತೆ ಒಟ್ಟು 633 ಸಿಬ್ಬಂದಿಯನ್ನು ಪರೀಕ್ಷಾ ಕರ್ತವ್ಯಕ್ಕೆ ನಿಯೋಜಿಸಿದ್ದು, ಪರೀಕ್ಷೆಗೆ ಬರುವ ವಿದ್ಯಾರ್ಥಿಗಳನ್ನು ಪರೀಕ್ಷಾ ಕೇಂದ್ರದ ದ್ವಾರದಲ್ಲಿ ತಪಾಸಣೆ ನಡೆಸಿ, ಮೊಬೈಲ್, ಎಲೆಕ್ಟ್ರಾನಿಕ್ ವಾಚ್ ಸೇರಿದಂತೆ ಇನ್ನಿತರ ವಸ್ತುಗಳನ್ನು ಪಡೆದು ಪರೀಕ್ಷೆ ಬರೆಯಲು ಅನುವು ಮಾಡಿಕೊಡಲಾಗುವುದು. ಎಲ್ಲಾ ಪರೀಕ್ಷಾ ಕೇಂದ್ರಗಳಲ್ಲಿ ಆರೋಗ್ಯ ಇಲಾಖೆ ಸಿಬ್ಬಂದಿ ನಿಯೋಜಿಸಿ, ತುರ್ತು ವೈದ್ಯಕೀಯ ನೆರವಿನ ಅಗತ್ಯವಿದ್ದರೆ ಒದಗಿಸಲಾಗುವುದು. ಕುಡಿಯಲು ನೀರು, ಮಾರ್ಗಸೂಚಿ ಫಲಕಗಳನ್ನು ಕಲ್ಪಿಸಲಾಗಿದೆ.

ಕೈಲಾಸ ಮಾನಸ ಸರೋವರದ ದರ್ಶನ ಶ್ರವ್ಯ-ದೃಶ್ಯ ಪ್ರದರ್ಶನ

ಮೈಸೂರು,ಮಾ.20–ಕರ್ನಾಟಕ ಮುಕ್ತಕ ಸಾಹಿತ್ಯ ಅಕಾಡೆಮಿ ಮತ್ತು ಮೈಸೂರಿನ ಕನ್ನಡ ಸಾಹಿತ್ಯ ಕಲಾಕೂಟದ ಸಂಯುಕ್ತ ಆಶ್ರಯದಲ್ಲಿ ಮಾ.25ರಂದು ಸಂಜೆ 6 ಗಂಟೆಗೆ ಕೈಲಾಸ ಮಾನಸ ಸರೋವರದ ದರ್ಶನ ಶ್ರವ್ಯ-ದೃಶ್ಯ ಪ್ರದರ್ಶನವನ್ನು ಶಾರದಾ ವಿಲಾಸ ಶತಮಾನೋತ್ಸವ ಭವನದಲ್ಲಿ ಏರ್ಪಡಿಸಲಾಗಿದೆ. ಈ ಪ್ರದರ್ಶನದ ಪರಿಕಲ್ಪನೆ ಮತ್ತು ಪ್ರಸ್ತುತಿಯನ್ನು ಭಾರತ ಸರ್ಕಾರದ ವಿಶ್ರಾಂತ ಹೆಚ್ಚುವರಿ ಕಾರ್ಯದರ್ಶಿಗಳೂ, ಆಧ್ಯಾತ್ಮಿಕ ಪ್ರವಚನಕಾರರು ಆಗಿರುವ ಸಿ.ವಿ.ಗೋಪಿನಾಥ್ ಸಿದ್ಧಪಡಿಸಿ ಪ್ರದರ್ಶನ ನೀಡಲಿದ್ದಾರೆ.

ಕಾರ್ಯಕ್ರಮವನ್ನು ಮೈಸೂರು ವಿವಿ ಕುಲಪತಿ ಪ್ರೊ.ಎನ್.ಕೆ.ಲೋಕನಾಥ್ ಉದ್ಘಾಟಿಸಲಿದ್ದಾರೆ. ಕರ್ನಾಟಕ ಮುಕ್ತಕ ಸಾಹಿತ್ಯ ಅಕಾಡೆಮಿ ಅಧ್ಯಕ್ಷ ಡಾ.ಎಚ್.ವಿ. ನಾಗರಾಜರಾವ್ ಅಧ್ಯಕ್ಷತೆ ವಹಿಸಲಿದ್ದಾರೆ ಎಂದು ಅಕಾಡೆಮಿ ಪ್ರಧಾನ ಕಾರ್ಯದರ್ಶಿ ಕಿರಣ್ ಸಿಡ್ಲೇಹಳ್ಳಿ, ಕನ್ನಡ ಸಾಹಿತ್ಯ ಕಲಾಕೂಟದ ಅಧ್ಯಕ್ಷ ಎಂ.ಚಂದ್ರಶೇಖರ್ ತಿಳಿಸಿದ್ದಾರೆ.

ಲಿಂಗದೇವರಕೊಪ್ಪಲು ಗ್ರಾಮದ ಶ್ರೀ ಜೋಡಿ ಮಾರಮ್ಮ ಜಾತ್ರಾ ಮಹೋತ್ಸವ

ನಾಳೆ ಇಲವಾಲದ ಸಂತೆಮಾಳದಲ್ಲಿ 72 ಜೊತೆ ಜಂಗಿಕುಸ್ತಿ ಪಂದ್ಯಾವಳಿ

ಮೈಸೂರು, ಮಾ.20(ಜಿಎ)–ಮೈಸೂರು ತಾಲೂಕಿನ ಇಲವಾಲದ ಲಿಂಗದೇವರ ಕೊಪ್ಪಲು ಗ್ರಾಮದ ಶ್ರೀ ಜೋಡಿ ಮಾರಮ್ಮ ಜಾತ್ರಾ ಮಹೋತ್ಸವದ ಪ್ರಯುಕ್ತ ಮೈಸೂರು ಉತ್ತರ ರೋಟರಿ ಸಮುದಾಯ ದಳದ ನೇತೃತ್ವದಲ್ಲಿ ಮಾ.22ರಂದು ಇಲವಾಲದ ಸಂತೆಮಾಳದ ಆವರಣದಲ್ಲಿ ಮಧ್ಯಾಹ್ನ 3ಗಂಟೆಗೆ ರಾಷ್ಟ್ರಮಟ್ಟದ ಪುರುಷರ ಮತ್ತು ಮಹಿಳೆಯರ 72 ಜೊತೆ ಜಂಗಿಕುಸ್ತಿ ಪಂದ್ಯಾವಳಿ ಆಯೋಜಿಸಲಾಗಿದೆ ಎಂದು ರೋಟರಿ ಸಮುದಾಯ ದಳದ ಗೌರವಾಧ್ಯಕ್ಷ ಗೋವಿಂದಸ್ವಾಮಿ ತಿಳಿಸಿದರು.



ಇದೇ ಮೊದಲ ಬಾರಿಗೆ ಮಹಿಳೆಯರ ಮಾರ್ಫಿಟ್ ಕುಸ್ತಿ ಏರ್ಪಡಿಸಿದ್ದು, ಬೆಳಗಾವಿಯ ರಾಷ್ಟ್ರಮಟ್ಟದ ಪದಕ ವಿಜೇತೆ ಪೈ.ಐಶ್ವರ್ಯ ಹಾಗೂ ಗದಗ್‌ನ ರಾಷ್ಟ್ರಮಟ್ಟದ ಕುಸ್ತಿಪಟು ಸೋನಿಯಾ ಜಾಧವ್ ನಡುವೆ ಮಾರ್ಫಿಟ್ ಕುಸ್ತಿ ನಡೆಯಲಿದೆ. ವಿಜೇತರಿಗೆ 50 ಸಾವಿರ ರೂ. ನಗದು, ಬೆಳ್ಳಿಗದೆ ನೀಡಲಾಗುವುದು.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಕುಸ್ತಿ ಪಂದ್ಯಾವಳಿಯಲ್ಲಿ ಸೊಲ್ಲಾಪುರದ ಪೈ.ವಿಕಾಸ್ ದೋತ್ರೆ ಹಾಗೂ ಬೆಳಗಾವಿಯ ಪೈ.ಶಿವಾನಂದ ದಂಡಿ ನಡುವೆ ಮತ್ತು ಮೈಸೂರಿನ ಪೈ.ಪ್ರಕಾಶ್ ಪಾಟೀಲ್ ಇಂಗಳಗಿ ಹಾಗೂ ಸೊಲ್ಲಾಪುರದ ಪೈ.ರಿಯಾಜ್ ನದಾಫ್ ನಡುವೆ, ಹೊಸಹಳ್ಳಿಯ ಪೈ.ಸೂರಜ್ ಹಾಗೂ ಶಿಕಾರಿಪುರದ ಮಾಸೂರು ಪೈ.ಅಸ್ಲಂ ಅವರ ನಡುವೆ ನಡೆಯುವ ಮಾರ್ಫಿಟ್ ಕುಸ್ತಿ ಆಕರ್ಷಣೀಯವಾಗಿರಲಿದೆ. ಜೊತೆಗೆ ಲಿಂಗದೇವರುಕೊಪ್ಪಲಿನ ಪೈ.ಅರ್ಜುನ್ ಹಾಗೂ ಹಾಗನಹಳ್ಳಿ ಪೈ.ದರ್ಶನ್ ನಡುವೆ ಒಂದು ಗಂಟೆ ಕಾಲ ಕಾದಾಟ ನಡೆಯಲಿದೆ ಎಂದರು.

ಅಂತಾರಾಷ್ಟ್ರೀಯ ಖೋಖೋ ಪಟು ಕು.ಚೈತ್ರಾ, ಸಮರ ಕಲೆಯ ಶಿವಣ್ಣ ಮತ್ತಿತರರನ್ನು ಸನ್ಮಾನಿಸಲಾಗುವುದು. ಜಿಲ್ಲಾ ಉಸ್ತುವಾರಿ ಸಚಿವ ಡಾ.ಹೆಚ್.ಸಿ.ಮಹದೇವಪ್ಪ, ಸಂಸದ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್, ಶಾಸಕರಾದ ಜಿ.ಟಿ.ದೇವೇಗೌಡ, ಜಿ.ಡಿ.ಹರೀಶ್‌ಗೌಡ, ಕೆ.ಹರೀಶ್‌ಗೌಡ, ಟಿ.ಎಸ್.ಶ್ರೀವತ್ಸ ವಿಧಾನ ಪರಿಷತ್ ಸದಸ್ಯರಾದ ಡಾ.ಯತೀಂದ್ರ ಸಿದ್ದರಾಮಯ್ಯ, ಡಾ.ಡಿ.ತಿಮ್ಮಯ್ಯ, ಮಂಜೇಗೌಡ, ಮುಡಾ ಮಾಜಿ ಅಧ್ಯಕ್ಷರಾದ ಕೆ.ಮರೀಗೌಡ, ಡಿ.ಧ್ರುವಕುಮಾರ್ ಮತ್ತಿತರರು ಭಾಗವಹಿಸಲಿದ್ದಾರೆ ಎಂದರು. ಗೋಷ್ಠಿಯಲ್ಲಿ ಮೈಸೂರು ರೋಟರಿ ಉತ್ತರ ಸಮುದಾಯ ದಳದ ಅಧ್ಯಕ್ಷ ಎಚ್.ನಾಗೇಶ್, ಸದಸ್ಯರಾದ ಚಂದ್ರಶೇಖರ್, ವೀರಭದ್ರಸ್ವಾಮಿ, ವಿಜಯಕುಮಾರ್, ಮಂಜುನಾಥ್ ಪಟೇಲ್, ಸ್ವಾಮಿಗೌಡ, ಮರಿಸ್ವಾಮಿ ಇದ್ದರು.

ಕರ್ನಾಟಕ ಬಂದ್‌ಗೆ ಹೋಟೆಲ್ ಮಾಲೀಕರ ನೈತಿಕ ಬೆಂಬಲ: ನಾರಾಯಣಗೌಡ

ಮೈಸೂರು, ಮಾ.20(ಆರ್‌ಕೆ)–ಬೆಳಗಾವಿಯಲ್ಲಿ ಕೆಎಸ್‌ಆರ್‌ಟಿಸಿ ಬಸ್ ಚಾಲಕ, ನಿರ್ವಾಹಕನ ಮೇಲೆ ನಡೆದಿರುವ ಹಲ್ಲೆ ಖಂಡಿಸಿ ಕನ್ನಡ ಚಳುವಳಿ ವಾಟಾಳ್ ಪಕ್ಷದ ಅಧ್ಯಕ್ಷ ವಾಟಾಳ್ ನಾಗರಾಜ್ ಮತ್ತು ಕನ್ನಡಪರ ಸಂಘಟನೆಗಳು ಮಾರ್ಚ್ 22ರಂದು ಕರೆ ನೀಡಿರುವ ಕರ್ನಾಟಕ ಬಂದ್‌ಗೆ ನೈತಿಕ ಬೆಂಬಲ ನೀಡುವುದಾಗಿ ಮೈಸೂರಿನ ಹೋಟೆಲ್ ಮಾಲೀಕರ ಸಂಘದ ಅಧ್ಯಕ್ಷ ಸಿ.ನಾರಾಯಣಗೌಡ ತಿಳಿಸಿದ್ದಾರೆ.



ಈ ಕುರಿತು ಪತ್ರಿಕಾ ಪ್ರಕಟಣೆ ನೀಡಿರುವ ಅವರು, ಬಸ್ ಚಾಲಕರ ಮೇಲೆ ನಡೆದಿರುವ ಹಲ್ಲೆ ಪ್ರಕರಣದ ಬಗ್ಗೆ ಸರ್ಕಾರ ಈಗಾಗಲೇ ಕ್ರಮ ವಹಿಸಿದೆ. ಅದಕ್ಕಾಗಿ ನಮ್ಮ ರಾಜ್ಯವನ್ನು ಬಂದ್ ಮಾಡಿ ನಷ್ಟ ಉಂಟು ಮಾಡುವುದು ಸರಿಯಲ್ಲ ಎಂದು ಹೇಳಿದ್ದಾರೆ.

ಈ ನಾಡಿನ ನೆಲ, ಜಲ, ಭಾಷೆ, ಸಂಸ್ಕೃತಿ, ಗಡಿ ವಿಷಯ ಬಂದಾಗ ಹೋಟೆಲ್ ಮಾಲೀಕರ ಸಂಘವು ಮುಂಚೂಣಿಯಲ್ಲಿ ನಿಂತು ಹೋರಾಟ ಮಾಡುತ್ತದೆ. ಹೋಟೆಲ್ ಬಂದ್ ಮಾಡಿದರೆ ಹೊರಗಿನಿಂದ ಮೈಸೂರಿಗೆ ಬರುವ ಪ್ರವಾಸಿಗರಿಗೆ ತೀವ್ರ ತೊಂದರೆಯಾಗುವುದರಿಂದ ಹೋಟೆಲ್ ಸೇರಿದಂತೆ ಎಲ್ಲಾ ಆತಿಥ್ಯ ಸೇವೆ ಎಂದಿನಂತೆ ನಡೆಯಲಿದೆ ಎಂದು ನಾರಾಯಣಗೌಡ ತಿಳಿಸಿದ್ದಾರೆ.

ಜಮ್ಮು-ಕಾಶ್ಮೀರದ ಮಾಜಿ ಶಾಸಕ ಫಕೀರ್ ಮೊಹಮ್ಮದ್ ಖಾನ್ ಆತ್ಮಹತ್ಯೆ



ಶ್ರೀನಗರ,ಮಾ.20–ಜಮ್ಮು ಮತ್ತು ಕಾಶ್ಮೀರ ಮಾಜಿ ಶಾಸಕ ಹಾಗೂ ಬಿಜೆಪಿ ನಾಯಕ ಫಕೀರ್ ಮೊಹಮ್ಮದ್ ಖಾನ್ ಅವರು ಗುರುವಾರ ಶ್ರೀನಗರದ ತುಳಸಿಬಾಗ್‌ನಲ್ಲಿರುವ ಸರ್ಕಾರಿ ಕ್ವಾರ್ಟರ್ಸ್‌ನಲ್ಲಿ ಗುಂಡು ಹಾರಿಸಿಕೊಂಡು ಆತ್ಮಹತ್ಯೆ ಮಾಡಿಕೊಂಡಿದ್ದಾರೆ. 2024ರ ಜಮ್ಮು ಮತ್ತು ಕಾಶ್ಮೀರ ವಿಧಾನಸಭಾ ಚುನಾವಣೆಯಲ್ಲಿ ಗುರೇಜ್‌ನಿಂದ ಬಿಜೆಪಿ ಟಿಕೆಟ್‌ನಲ್ಲಿ ಸ್ಪರ್ಧಿಸಿದ್ದ ಖಾನ್, ತಮ್ಮ ನಿವಾಸದಲ್ಲಿ ಶವವಾಗಿ ಪತ್ತೆಯಾಗಿದ್ದಾರೆ. ಅವರ ಈ ತೀವ್ರ ನಡೆಯ ಹಿಂದಿನ ಕಾರಣ ಇನ್ನೂ ತಿಳಿದುಬಂದಿಲ್ಲ. ಖಾನ್ 1996ರಲ್ಲಿ ಜಮ್ಮು-ಕಾಶ್ಮೀರ ವಿಧಾನಸಭೆಗೆ ಪಕ್ಷೇತರ ಶಾಸಕರಾಗಿ ಆಯ್ಕೆಯಾಗಿದ್ದರು. ನಂತರ ಅವರು 2024ರ ಚುನಾವಣೆಗೆ ಮುನ್ನ ಬಿಜೆಪಿ ಸೇರಿದರು ಮತ್ತು ಚುನಾವಣೆಯಲ್ಲಿ ಕೇಸರಿ ಪಕ್ಷದಿಂದ ಸ್ಪರ್ಧಿಸಿದ್ದರು. ಆದರೆ ಎನ್‌ಸಿಯ ನಜೀರ್ ಅಹ್ಮದ್ ಗುರೇಜಿ ವಿರುದ್ಧ ಸೋಲು ಅನುಭವಿಸಿದ್ದರು.

ಗುಬ್ಬಚ್ಚಿಗಳ ಮತ್ತೆ ಮನೆ ಅಂಗಳಕ್ಕೆ ತರಬೇಕಿದೆ

ಪಕ್ಷಿ ತಜ್ಞ ಪ್ರವೀಣ್ ಆಶಯ



ಪ್ರಕೃತಿಂ ಸಂಸ್ಥೆಯಿಂದ ಬಿದಿರಿನಿಂದ ಮಾಡಿರುವ ಗೂಡುಗಳನ್ನು ವಿತರಿಸಲಾಯಿತು.

ಮೈಸೂರು, ಮಾ.20(ಎಂಕೆ)– ಮೈಸೂರಿನ ಮಲೆ ಮಹದೇಶ್ವರ ರಸ್ತೆಯಲ್ಲಿರುವ ರಾಯಲ್ ಮಾರ್ಟ್ ಆವರಣದಲ್ಲಿ ಪ್ರಕೃತಿಂ ಸಂಸ್ಥೆ ವತಿಯಿಂದ ಗುರುವಾರ ವಿಶ್ವ ಗುಬ್ಬಚ್ಚಿ ದಿನ ಆಚರಿಸಲಾಯಿತು.

ಈ ವೇಳೆ ಗುಬ್ಬಚ್ಚಿ ಕುರಿತು ಪಕ್ಷಿ ತಜ್ಞ ಪ್ರವೀಣ್ ಮಾತನಾಡಿ, ಗುಬ್ಬಚ್ಚಿಗಳು ನಮ್ಮ ಬಾಲ್ಯ ಜೀವನದ ಒಡನಾಟದಲ್ಲಿ ಬೇರೆತು ಹೋಗಿದ್ದವು. ಮನೆಗಳ ಅಂಗಳವೇ ಗುಬ್ಬಚ್ಚಿ ವಾಸಸ್ಥಾನವಾಗಿದ್ದು, ಅದ್ದೂರಿ ಜೀವನ ಶೈಲಿ, ಕಾಂಕ್ರೀಟ್ ಕಟ್ಟಡಗಳಿಂದ ಶೇ.70 ರಷ್ಟು ಗುಬ್ಬಚ್ಚಿಗಳು ಅವನತಿ ಹೊಂದಿದ್ದು, ಅವುಗಳನ್ನು ಮತ್ತೆ ಮನೆಯ ಅಂಗಳಕ್ಕೆ ಕರೆತರುವ ಕಾರ್ಯವಾಗಬೇಕಿದೆ ಎಂದರು.

ಹೊಲ-ಗದ್ದೆಗಳಲ್ಲಿ ಕೀಟಗಳನ್ನು ತಿನ್ನುವ ಮೂಲಕ ಕೀಟನಾಶಕಗಳಾಗಿ ರೈತರ ಮಿತ್ರರೂ ಆಗಿರುವ ಗುಬ್ಬಚ್ಚಿಗಳು ಮರೆಯಾಗುತ್ತಿರುವುದರಿಂದ ಅತೀ ಹೆಚ್ಚು ಕೀಟನಾಶಕಗಳನ್ನು ಬಳಕೆ ಮಾಡುವಂತಾಗಿದೆ. ಇದರಿಂದ ಆಹಾರ ಪದಾರ್ಥಗಳು ವಿಷಕಾರಿಯಾಗುತ್ತಿವೆ. ಆದ್ದರಿಂದ ಮಾನವ ಜೀವನದೊಂದಿಗೆ ಒಡನಾಡಿಯಾಗಿರುವ ಗುಬ್ಬಚ್ಚಿಗಳ ಸಂತಾನವನ್ನು ಉಳಿಸುವ ನಿಟ್ಟಿನಲ್ಲಿ 2010ರಿಂದ ವಿಶ್ವ ಗುಬ್ಬಚ್ಚಿ ದಿನವನ್ನು ಆಚರಣೆ ಮಾಡಲಾಗುತ್ತಿದೆ. ಗುಬ್ಬಚ್ಚಿಗಳನ್ನು ಉಳಿಸುವ ನಿಟ್ಟಿನಲ್ಲಿ ಪ್ರತಿಯೊಬ್ಬರು ತಮ್ಮ ಮನೆಯ ಅಂಗಳದಲ್ಲಿ ಕೃತಕ ಗೂಡುಗಳನ್ನು ಹಾಗೂ ಕಾಳುಗಳನ್ನು ಇಟ್ಟು ರಕ್ಷಣೆಗೆ ಮುಂದಾಗಬೇಕು ಎಂದು ಕರೆ ನೀಡಿದರು. ನಂತರ ಬಿದಿರಿನಿಂದ ತಯಾರಿಸಿದ ನೂರಕ್ಕು ಹೆಚ್ಚು ಗೂಡುಗಳನ್ನು ವಿತರಿಸಲಾಯಿತು. ಪಾಲಿಕೆ ಮಾಜಿ ಸದಸ್ಯ ಶಂಕರ್, ಪ್ರಕೃತಿಂ ಸಂಸ್ಥೆ ಸಂಚಾಲಕ ವಿ. ಶ್ರೀಪ್ರಸಾದ್, ರಾಯಲ್‌ಮಾರ್ಟ್‌ನ ನವಾಝ್, ಸಂಪತ್, ನಿರೂಪಕಿ ಮಮತ ಇದ್ದರು.

ಇಂದು ನವದೆಹಲಿಯಲ್ಲಿ 'ಕಲಿಸು' ಸಂಸ್ಥೆಯ 125 ಗ್ರಂಥಾಲಯ ಉದ್ಘಾಟನೆ

ಮೈಸೂರು, ಮಾ.20(ಎಂಕೆ)– ಮೈಸೂರಿನ 'ಕಲಿಸು' ಸಂಸ್ಥೆಯ 125ನೇ ಗ್ರಂಥಾಲಯ ನವದೆಹಲಿ ಗೋಲ್ ಮಾರುಕಟ್ಟೆಯ ಅಟಲ್ ಆದರ್ಶ ಬೆಂಗಾಲಿ ಬಾಲಿಕಾ ವಿದ್ಯಾಲಯದಲ್ಲಿ ನಾಳೆ(ಮಾ.21) ಬೆಳಗ್ಗೆ 10.30ಕ್ಕೆ ಉದ್ಘಾಟನೆಗೊಳ್ಳಲಿದೆ.

ಮೈಸೂರು– ಕೊಡಗು ಲೋಕಸಭಾ ಕ್ಷೇತ್ರದ ಸಂಸದ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್, ಸಂಸದೆ ಬಾನ್ಸುರಿ ಸ್ವರಾಜ್ ಗ್ರಂಥಾಲಯ ಉದ್ಘಾಟಿಸಲಿದ್ದಾರೆ. 'ಕಲಿಸು' ಸಂಸ್ಥೆಯು ಈಗಾಗಲೇ 124 ಗ್ರಂಥಾಲಯಗಳನ್ನು ತೆರೆದಿದ್ದು, 125ನೇ ಗ್ರಂಥಾಲಯ ರಾಷ್ಟ್ರ ರಾಜಧಾನಿ ನವದೆಹಲಿಯಲ್ಲಿ ಉದ್ಘಾಟನೆಗೊಳ್ಳುತ್ತಿದೆ ಎಂದು 'ಕಲಿಸು' ಸಂಸ್ಥೆ ಮುಖ್ಯ ಕಾರ್ಯ ನಿರ್ವಹಣಾಧಿಕಾರಿ ನಿಖಿಲೇಶ್ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಅಳಿವಿನಂಚಿನಲ್ಲಿ ಗುಬ್ಬಚ್ಚಿ ಸಂತತಿ

• ಸ್ನೇಕ್ ಶ್ಯಾಮ್ ಆತಂಕ • ಪರಿಸರ ಸಮತೋಲನಕ್ಕೆ ಪ್ರಾಣಿ-ಪಕ್ಷಿ ಅನಿವಾರ್ಯ



ವಿಶ್ವ ಗುಬ್ಬಚ್ಚಿ ದಿನಾಚರಣೆ ಅಂಗವಾಗಿ 'ಗುಬ್ಬಚ್ಚಿ ಹಬ್ಬ' ಆಚರಿಸಿ, ಮರಗಳಲ್ಲಿ ಪಕ್ಷಿಗಳಿಗಾಗಿ ನೀರು-ಆಹಾರದ ಬಟ್ಟಲುಗಳನ್ನು ಅಳವಡಿಸಲಾಯಿತು.

ಮೈಸೂರು, ಮಾ.20(ಎಸ್‌ಬಿಡಿ)– ಗುಬ್ಬಚ್ಚಿ ಸೇರಿದಂತೆ ಪಕ್ಷಿ ಸಂಕುಲವನ್ನು ರಕ್ಷಿಸಿದರೆ ಮಾತ್ರ ಪರಿಸರ ಉಳಿಯಲಿದೆ ಎಂದು ಉರಗ ಸಂರಕ್ಷಕ ಸ್ನೇಕ್‌ಶ್ಯಾಮ್ ಹೇಳಿದರು.

ವಿಶ್ವ ಗುಬ್ಬಚ್ಚಿ ದಿನಾಚರಣೆ ಅಂಗವಾಗಿ ಕೆಎಂಪಿಕೆ ಟ್ರಸ್ಟ್ ವತಿಯಿಂದ ನಗರದ ಮಹಾರಾಜ ಕಾಲೇಜು ಮೈದಾನದ ಬಳಿ ಏರ್ಪಡಿಸಿದ್ದ 'ಗುಬ್ಬಚ್ಚಿ ಹಬ್ಬ'ವನ್ನು ಮರದಲ್ಲಿ ಪಕ್ಷಿಗಳಿಗಾಗಿ ನೀರು-ಆಹಾರದ ಬಟ್ಟಲುಗಳನ್ನು ಕಟ್ಟುವ ಮೂಲಕ ಉದ್ಘಾಟಿಸಿ ಮಾತನಾಡಿದ ಅವರು, ನಾವು ಗುಬ್ಬಚ್ಚಿಗಳೊಂದಿಗೆ ಬೆಳೆದವರು. ಆದರೆ ಇತ್ತೀಚೆಗೆ ಆ ಪಕ್ಷಿಗಳೇ ಕಾಣಿಸುತ್ತಿಲ್ಲ. ಪರಿಸರ ಸಮತೋಲನ ದೃಷ್ಟಿಯಿಂದಲೂ ಗುಬ್ಬಚ್ಚಿ ಸೇರಿದಂತೆ ಎಲ್ಲಾ ಪ್ರಬೇಧದ ಪಕ್ಷಿಗಳ ರಕ್ಷಣೆ ಅವಶ್ಯವಾಗಿದೆ ಎಂದರು.

ಸುಮಾರು 25ಕ್ಕೂ ಅಧಿಕ ಗುಬ್ಬಿಗಳ ಪ್ರಬೇಧವಿದೆ. ಆದರೆ ಗುಬ್ಬಿ ಸಂತತಿ ಅಳಿವಿನಂಚಿನಲ್ಲಿದೆ. ಮನುಷ್ಯನಿಂದ ಗುಬ್ಬಿಗೆ ಕಂಟಕ ಎದುರಾಗಿದೆ. ಕೃಷಿಗೆ ಹೆಚ್ಚು ಕ್ರಿಮಿನಾಶಕಗಳನ್ನು ಬಳಸುತ್ತಿರುವುದರಿಂದ ಗುಬ್ಬಚ್ಚಿಗಳ ಸಂಖ್ಯೆ ಕಡಿಮೆಯಾಗಿದೆ. ಮನುಷ್ಯರು ತಮ್ಮೊಂದಿಗೆ ಎಲ್ಲಾ ಜೀವಿಗಳು ಬದುಕಲು ಅವಕಾಶ ಮಾಡಿಕೊಡಬೇಕು. ಗುಬ್ಬಿಯ ಸಂಕುಲವನ್ನು ಮುಂದಿನ ಪೀಳಿಗೆಗೆ ಸಂರಕ್ಷಿಸುವುದು ನಮ್ಮ ಕರ್ತವ್ಯ ಎಂದು ಹೇಳಿದರು.

ಚಿತ್ರನಟ ಆದಿ ಲೋಕೇಶ್ ಮಾತನಾಡಿ, ಗುಬ್ಬಚ್ಚಿ ದಿನ ಮಾತ್ರ ಪಕ್ಷಿಗಳಿಗೆ ನೀರು-ಆಹಾರ ನೀಡಿದರೆ ಸಾಲದು. ಪ್ರತಿದಿನವೂ ಈ ಸತ್ಕಾರ್ಯವಾದರೆ ಪಕ್ಷಿ ಸಂಕುಲನವನ್ನು ಉಳಿಸಲು ಸಾಧ್ಯವಿದೆ. ತಮ್ಮ ಮನೆಯ ಮೇಲೆ ನೀರಿನ ಬಟ್ಟಲಿಟ್ಟರೆ ಎಷ್ಟೋ ಪಕ್ಷಿಗಳ ದಾಹ ನೀಗುತ್ತದೆ ಎಂದರು.

ಈ ಸಂದರ್ಭದಲ್ಲಿ ವನ್ಯಜೀವಿ ಮಂಡಳಿಯ ರಾಜ್ಯ ಸದಸ್ಯ ಡಾ.ಸಂತೃಪ್ತ್ ಗೌಡ,ಕಾಂಗ್ರೆಸ್ ಮುಖಂಡ ಎನ್.ಎಂ.ನವೀನ್ ಕುಮಾರ್, ಕೆಆರ್ ಉಪವಿಭಾಗದ ಎಸಿಪಿ ರಮೇಶ್ ಕುಮಾರ್, ಸೌಮ್ಯ, ಕಿರುತೆರೆ ನಟ ಮಹೇಂದರ್, ಜೀವದಾರ ರಕ್ತ ನಿಧಿ ಕೇಂದ್ರದ ನಿರ್ದೇಶಕ ಗಿರೀಶ್, ಡಾ.ಶ್ರೀನಿವಾಸ್ ಆಚಾರ್, ಶ್ರೀನಿವಾಸ್ ಭಾಷ್ಯಂ, ಟ್ರಸ್ಟ್ ಅಧ್ಯಕ್ಷ ವಿಕ್ರಮ್ ಅಯ್ಯಂಗಾರ್, ಅಜಯ್ ಶಾಸ್ತ್ರಿ, ಎಸ್.ಎನ್.ರಾಜೇಶ್, ಚಕ್ರಪಾಣಿ, ಸುಚೇಂದ್ರ ಮತ್ತಿತರರು ಉಪಸ್ಥಿತರಿದ್ದರು.

PUBLIC NOTICE

It is hereby notified that Mr. D. Naganna, S/o Late Chikkadevappa No. 145, Ramaswamy layout Nanjanagudu Taluk, VTC: Deveerammanahalli, Kalale, Mysuru-571118 intend to sell the Property to my client Mr. Vinay Subramanian S/o R. Subramanian & Mrs. Nandini Jayaram W/o Vinay Subramanian both are residing at # 174, 18th Cross, A Block, J.P. Nagar, Mysuru- 570008 if any person/s has / have any kind of right title interest or claim over the schedule property or objections to the proposed Sale Deed to be made Mr. D. Naganna S/o Late Chikkadevappa in favor of my client Mr. Vinay Subramanian, S/o R. Subramanian & Mrs. Nandini Jayaram W/o Vinay Subramanian they have may lodge their claim / objections with the under signed within seven days (7 days) from the date of this notification, failing which it will be taken for granted that there are no claims / charges / objections whatsoever from whomsoever. Any claims/ objections received after stipulated period of seven days will be treated as no claim and the same will be ignored.

SCHEDULE: All the piece and parcel of property bearing Survey No.117/4, Extent of 1 Acre 09 Guntas, Devanuru Village, Dodda Kavalande Hobli, Nanjanagudu Taluk, Mysore(D).

Sd/- T.K. PRAVEEN
Advocate, No. 134, CH-46/6B 1st Main, 8th Cross, KH Road, Saraswathipuram, Mysore-570009.
Mob: 9481965055

Date: 20-03-2025
Place: Mysuru

ಸಾರ್ವಜನಿಕ ಪ್ರಕಟಣೆ

(ಮೂಲ ದಾಖಲೆ ಪತ್ರವನ್ನು ಕಳೆದುಕೊಂಡಿರುವ ಬಗ್ಗೆ)

ಈ ನೋಟಿಸನ್ನು ಈ ಕೆಳಕಂಡ ನನ್ನ ಕಕ್ಷೀದಾರನ ಪರವಾಗಿ ನೀಡಲಾಗಿದೆ, ಶ್ರೀ ಬಿ ಜಿ ಚೆಂಗಪ್ಪ (ಮಿಟ್ಟೂ ಚೆಂಗಪ್ಪ) S/o ಶ್ರೀ ದಿವಂಗತ ಬಿ ಸಿ ಗಣಪತಿ, ಈ ನೋಟಿಸಿನ ಮೂಲಕ ಸಾರ್ವಜನಿಕವಾಗಿ ತಿಳಿಯಪಡಿಸುವುದೇನೆಂದರೆ,

1. ದಿನಾಂಕ 25/01/2019 ರ ಶುದ್ಧ ಕ್ರಯ ಪತ್ರ ದಾಖಲೆ ಸಂಖ್ಯೆ 5096/2018-19, ಪುಸ್ತಕ-1. ಮತ್ತು ಅದರ ಮೂಲ ಕ್ರಯ ಪತ್ರ ಪಿರಿಯಾಪಟ್ಟಣ ಸಬ್-ರಿಜಿಸ್ಟ್ರಾರ್ ಕಚೇರಿಯಾಗಿದ್ದು,
2. ದಿನಾಂಕ 29/06/1977ರ ಮೂಲ ಕ್ರಯ ಪತ್ರ ದಾಖಲೆ ಸಂಖ್ಯೆ 376/76-77 ಪಿರಿಯಾಪಟ್ಟಣ ಸಬ್-ರಿಜಿಸ್ಟ್ರಾರ್ ಕಚೇರಿಯಾಗಿದ್ದು. ಸದರಿ ಮೇಲೆ ತಿಳಿಸಿದ ದಾಖಲೆಗಳು ಕಳೆದುಹೋಗಿರುತ್ತದೆ. ಅದರಂತೆ ದಿನಾಂಕ 19/03/2025 ಕರ್ನಾಟಕ ರಾಜ್ಯ ಪೊಲೀಸ್ ಅವರಿಗೆ ದೂರನ್ನು ನೀಡಲಾಗಿದೆ ದೂರಿನ No. E-Lost Report No. 1528980/2025.

ಯಾವುದೇ ವ್ಯಕ್ತಿ(ಗಳು), ಫರ್ಮ್, ಕಂಪನಿ, ಸಂಸ್ಥೆ, ಬ್ಯಾಂಕ್ ಅಥವಾ ಯಾವುದೇ ಸಂಘವು ಯಾವುದೇ ಕ್ಲೈಮ್ ಹೊಂದಿದ್ದು ಹಾಗೂ ಮೇಲೆ ತಿಳಿಸಿದ ಡಾಕ್ಯುಮೆಂಟನ್ನು ಹೊಂದಿದ್ದಲ್ಲಿ, ಅವರು ಅದನ್ನು ಹಿಂದಿರುಗಿಸತಕ್ಕದ್ದು ಅಥವಾ ಕೆಳಗೆ ಸಹಿ ಮಾಡಿರುವವರನ್ನು ಸೂಚನೆ ಸ್ವೀಕರಿಸಿದ ದಿನದಿಂದ 7 ದಿನಗಳ ಒಳಗೆ ಸಂಪರ್ಕಿಸತಕ್ಕದ್ದು. ಒಂದು ವೇಳೆ ವಿಫಲವಾದಲ್ಲಿ ಯಾವುದೇ ಹಕ್ಕುಗಳಿಲ್ಲವೆಂದು ಭಾವಿಸಲಾಗುತ್ತದೆ.

SCHEDULE PROPERTY

Item No. 1 : All that piece and parcel of the property bearing Sy No.15, measuring 3 acres 37 Guntas situated in Benagalu Village, Kanagalu Gram Panchayath, Harnahalli Hobli, Periyapatna Taluk, Mysore District, Karnataka State and bounded on: East by : Remaining land Sy No.6, West by : Lake, North by : Remaining land of Sy No.7 South by : Land Belong to Mr. Aravind Raje urs Sy No.16

Item No 2 : All that piece and parcel of the Kushki property land bearing Sy.No. 10 measuring 6 acres 20 Guntas situated in Benagalu village, Kanagalu Gram Panchayath, Harnahalli Hobli, Periyapatna Taluk, Mysore District, Karnataka State and bounded on the: East by : Government Tank, West by : Government Road, South by : Government oni North by : Sy No.9.

AKSHAY RAJ B R, Advocate
#9, Ground Floor, Lucelle Court, Berlie Street, Bangalore- 560025 Mobile: 9686393267
Email : akshay2596raj@gmail.com

ಸಾರ್ವಜನಿಕ ಪ್ರಕಟಣೆ

(ಮೂಲ ದಾಖಲೆ ಪತ್ರವನ್ನು ಕಳೆದುಕೊಂಡಿರುವ ಬಗ್ಗೆ)

ಈ ನೋಟಿಸನ್ನು ಈ ಕೆಳಕಂಡ ನನ್ನ ಕಕ್ಷೀದಾರನ ಪರವಾಗಿ ನೀಡಲಾಗಿದೆ, ಶ್ರೀಮತಿ ಕೃತಿ ಪ್ರದೀಪ್ C/o ಶ್ರೀ ಪ್ರದೀಪ್ ಸಿ.ಎಸ್. ಈ ನೋಟಿಸಿನ ಮೂಲಕ ಸಾರ್ವಜನಿಕವಾಗಿ ತಿಳಿಯಪಡಿಸುವುದೇನೆಂದರೆ, ದಿನಾಂಕ 05/03/2004 ರ ದಾನ ಪತ್ರ ದಾಖಲೆ ಸಂಖ್ಯೆ 3161/2003-04, ಪಿರಿಯಾಪಟ್ಟಣ ಸಬ್-ರಿಜಿಸ್ಟ್ರಾರ್ ಕಚೇರಿಯಾಗಿದ್ದು ಸದರಿ ಮೂಲ ದಾಖಲೆಯು ಕಳೆದುಹೋಗಿರುತ್ತದೆ, ಅದರಂತೆ ದಿನಾಂಕ 19/03/2025 ಕರ್ನಾಟಕ ರಾಜ್ಯ ಪೊಲೀಸ್ ಅವರಿಗೆ ದೂರನ್ನು ನೀಡಲಾಗಿದೆ ದೂರಿನ No. E-Lost Report No. 1528513/2025.

ಯಾವುದೇ ವ್ಯಕ್ತಿ(ಗಳು), ಫರ್ಮ್, ಕಂಪನಿ, ಸಂಸ್ಥೆ, ಬ್ಯಾಂಕ್ ಅಥವಾ ಯಾವುದೇ ಸಂಘವು ಯಾವುದೇ ಕ್ಲೈಮ್ ಹೊಂದಿದ್ದು ಹಾಗೂ ಮೇಲೆ ತಿಳಿಸಿದ ಡಾಕ್ಯುಮೆಂಟನ್ನು ಹೊಂದಿದ್ದಲ್ಲಿ, ಅವರು ಅದನ್ನು ಹಿಂದಿರುಗಿಸತಕ್ಕದ್ದು ಅಥವಾ ಕೆಳಗೆ ಸಹಿ ಮಾಡಿರುವವರನ್ನು ಸೂಚನೆ ಸ್ವೀಕರಿಸಿದ ದಿನದಿಂದ 7 ದಿನಗಳ ಒಳಗೆ ಸಂಪರ್ಕಿಸತಕ್ಕದ್ದು. ಒಂದು ವೇಳೆ ವಿಫಲವಾದಲ್ಲಿ ಯಾವುದೇ ಹಕ್ಕುಗಳಿಲ್ಲವೆಂದು ಭಾವಿಸಲಾಗುತ್ತದೆ.

SCHEDULE PROPERTY

Item No 1 All that piece and parcel of the property bearing Sy No.9 in Khata No.93, measuring 7 acres out of 11-00 acres 24 Guntas situated in Benagalu Village, Kanagalu Gram Panchayath, Harnahalli Hobli, Periyapatna Taluk, Mysore District, Karnataka State and bounded on: East by : Land bearing Sy.No.7, West by : Village boundary, North by : Land belonging to Anjeneyaswamiji Temple, South by : Land belonging to Shivashankarappa.

Item No 2. All that piece and parcel of the Kushki property land bearing Sy.No. 9 in Khata No.93 measuring 4-00 acres 24 Guntas out of 11-00 acres 24 Guntas situated in Benagalu village, Kanagalu Gram Panchayath, Harnahalli Hobli, Periyapatna Taluk, Mysore District, Karnataka State and bounded on the: East by : Land bearing Sy.No.7, West by : Land bearing Sy No. 9 and Village Boundary, South by : Land belonging to Shivashankarappa, North by : Land belonging to Anjeneyaswamiji Temple.

AKSHAY RAJ B R, Advocate
#9, Ground Floor, Lucelle Court, Berlie Street, Bangalore- 560025 Mobile: 9686393267
Email : akshay2596raj@gmail.com

ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ
ಮುಕ್ತಗಂಗೋತ್ರಿ, ಮೈಸೂರು - 570006.
ಆಡಳಿತ ವಿಭಾಗ

ಸಂಖ್ಯೆ: ಕರಾಮುವಿ/ಆವಿ/ಸಿಬ್ಬಂದಿ-02/728/2024-25 ದಿನಾಂಕ: 17.03.2025

ನೋಟಿಸ್

ಕಛೇರಿ ಕರ್ತವ್ಯಕ್ಕೆ ವರದಿ ಮಾಡಿಕೊಳ್ಳುವ ಕುರಿತು.

ಶ್ರೀ ಎಂ. ಶಿವರಾಮಕೃಷ್ಣ, ಹಿರಿಯ ಸಹಾಯಕ, ಪರೀಕ್ಷಾ ವಿಭಾಗ, ಕರಾಮುವಿ, ಮೈಸೂರು, ಆದ ನೀವು **ದಿನಾಂಕ: 02.04.2023 ರಿಂದ** ಅನಧಿಕೃತ ಗೈರಾದ ಸಂಬಂಧ, ವಿಶ್ವವಿದ್ಯಾನಿಲಯವು ಅಳವಡಿಸಿಕೊಂಡಿರುವ ಮೈಸೂರು ವಿಶ್ವವಿದ್ಯಾನಿಲಯದ ಉದ್ಯೋಗಿಗಳ (ಸಿಸಿಎ) ನಿಯಮದ ಪ್ರಕಾರ ನಿಯಮಾನುಸಾರ ವಿಶ್ವವಿದ್ಯಾನಿಲಯವು ಮಾಡಲಾದ ಆರೋಪವು ಇಲಾಖಾ ವಿಚಾರಣೆಯಲ್ಲಿ ಸಾಭೀತಾಗಿರುವ ಹಿನ್ನೆಲೆಯಲ್ಲಿ ವಿಶ್ವವಿದ್ಯಾನಿಲಯವು ಅಳವಡಿಸಿಕೊಂಡಿರುವ ಮೈಸೂರು ವಿಶ್ವವಿದ್ಯಾನಿಲಯದ ಉದ್ಯೋಗಿಗಳ (ಸಿಸಿಎ) ಪರಿನಿಯಮದ ನಿಯಮ-5(1)(VI) ರೀತ್ಯಾ ದಂಡನೆಯನ್ನು ವಿಧಿಸಿ, ಕಛೇರಿ ಕರ್ತವ್ಯಕ್ಕೆ ಮರುನಿಯುಕ್ತಿಗೊಳಿಸಿ, ಆದೇಶ ತಲುಪಿದ ಏಳು ದಿನಗಳ ಒಳಗೆ ಕುಲಸಚಿವರಲ್ಲಿ ಕರ್ತವ್ಯದ ಮೇಲೆ ವರದಿ ಮಾಡಿಕೊಳ್ಳಲು **ದಿನಾಂಕ: 25.10.2024 ರಂದು** ಆದೇಶ ಹೊರಡಿಸಲಾಗಿತ್ತು, ಆದರೆ ಕಛೇರಿ ಕರ್ತವ್ಯಕ್ಕೆ ವರದಿ ಮಾಡಿಕೊಂಡಿರುವುದಿಲ್ಲ. ಈ ಹಿನ್ನೆಲೆಯಲ್ಲಿ ಮಾನ್ಯ ವ್ಯವಸ್ಥಾಪನಾ ಮಂಡಳಿಯ ತೀರ್ಮಾನದಂತೆ, ಕಛೇರಿ ಕರ್ತವ್ಯಕ್ಕೆ ವರದಿ ಮಾಡಿಕೊಳ್ಳುವಂತೆ ತಿಳಿಸಿ **ದಿನಾಂಕ: 17.01.2025ರ "ಅಂತಿಮ ನೋಟಿಸ್"** ಅನ್ನು ತಮ್ಮ ಮನೆಯ ಬಾಗಿಲಿಗೆ ಅಂಟಿಸಲಾಗಿತ್ತು, ಆದರೂ ಸಹ ಪ್ರಸ್ತುತದ ವರೆಗೂ ಕಛೇರಿ ಕರ್ತವ್ಯಕ್ಕೆ ವರದಿ ಮಾಡಿಕೊಂಡಿರುವುದಿಲ್ಲ. ಆದ್ದರಿಂದ ಈ ಪ್ರಕಟಣೆಯು ಪ್ರಕಟಗೊಂಡ ಒಂದು ವಾರದೊಳಗಾಗಿ ನೀವು ಆಡಳಿತ ವಿಭಾಗ, ಕರಾಮುವಿ, ಮೈಸೂರು, ಇಲ್ಲಿ ಹಾಜರಾಗಿ ಕರ್ತವ್ಯಕ್ಕೆ ವರದಿ ಮಾಡಿಕೊಳ್ಳಲು ತಿಳಿಸಿದೆ, ತಪ್ಪಿದಲ್ಲಿ, ಇದೇ **"ಅಂತಿಮ ಸೂಚನೆ"**ಯೆಂದು ಪರಿಗಣಿಸಿ ವಿಶ್ವವಿದ್ಯಾನಿಲಯದ ಕೆಲಸವನ್ನು ನಿರ್ವಹಿಸಲು ನಿಮಗೆ ಆಸಕ್ತಿ ಇಲ್ಲವೆಂದು ಭಾವಿಸಿ, ವಿಶ್ವವಿದ್ಯಾನಿಲಯವು ಪ್ರಸ್ತುತ ಅಳವಡಿಸಿಕೊಂಡಿರುವ ಮೈಸೂರು ವಿಶ್ವವಿದ್ಯಾನಿಲಯದ ಉದ್ಯೋಗಿಗಳ (ಸಿಸಿಎ) ಪರಿನಿಯಮದನ್ವಯ ನಿಯಮಾನುಸಾರ ವಜಾಗೊಳಿಸಲು ಕ್ರಮ ಕೈಗೊಳ್ಳಲಾಗುವುದು.

ಸಹಿ/- ಕುಲಸಚಿವ

ಮೈಸೂರು ಮಿತ್ರ ಶುಕ್ರವಾರ 21 ಮಾರ್ಚ್ 2025

ಹೋಳಿ ಊಟ ಸೇವನೆ ಪ್ರಕರಣ

ಅಸ್ವಸ್ಥರ ಸಂಖ್ಯೆ 120ಕ್ಕೆ ಏರಿಕೆ

ಮಂಡ್ಯ,ಮಾ.20– ಜಿಲ್ಲೆಯ ಮಳವಳ್ಳಿ ತಾಲೂಕಿನಲ್ಲಿ ಕಲುಷಿತ ಆಹಾರ ಸೇವನೆ ಪ್ರಕರಣಕ್ಕೆ ಸಂಬಂಧಿಸಿದಂತೆ ಅಸ್ವಸ್ಥರ ಸಂಖ್ಯೆ 120ಕ್ಕೆ ಏರಿದೆ. ಅಸ್ವಸ್ಥರೆಲ್ಲರೂ ಮಳವಳ್ಳಿ, ಮಂಡ್ಯ, ಕೆ.ಎಂ.ದೊಡ್ಡಿ, ಮೈಸೂರು ಸೇರಿದಂತೆ ವಿವಿಧ ಆಸ್ಪತ್ರೆಗೆ ದಾಖಲಾಗಿದ್ದಾರೆ.

ಹೋಳಿ ಹಬ್ಬದ ಅಂಗವಾಗಿ ಉದ್ಯಮಿ ಪುಷ್ಪೇಂದ್ರಕುಮಾರ್ ಎಂಬುವವರು ಹಬ್ಬದ ದಿನ ಮಳವಳ್ಳಿ ಪಟ್ಟಣದ ಲಕ್ಷ್ಮಿ ನರಸಿಂಹ ಸ್ವಾಮಿ ಹೋಟೆಲ್‌ನಲ್ಲಿ ಊಟವನ್ನು ಆರ್ಡರ್ ಮಾಡಿದ್ದರು. ಹೋಟೆಲ್ ಸಿಬ್ಬಂದಿಗಳು ಹೋಳಿ ಹಬ್ಬಕ್ಕೆ ಆರ್ಡರ್ ಮಾಡಿದ್ದಕ್ಕಿಂತಲೂ ಹೆಚ್ಚಿನ ಪ್ರಮಾಣದಲ್ಲಿ ಆಹಾರ ತಯಾರಿಸಿದ್ದರು.

ಪುಷ್ಪೇಂದ್ರಕುಮಾರ್ ಮತ್ತು ಆಯೋಜಕರು ಆಹಾರ ಸೇವಿಸಿ, ಉಳಿಕೆ ಊಟವನ್ನು ಟಿ.ಕಾಗೇಪುರದ ಗೋಕುಲ ಶಾಲೆಗೆ ನೀಡಿದ್ದರು. ಹೋಟೆಲ್ ಸಿಬ್ಬಂದಿ ಆರ್ಡರ್‌ಗಿಂತ ಹೆಚ್ಚಿಗೆ ಆಹಾರ ತಯಾರು ಮಾಡಿದ್ದರಿಂದ ವ್ಯಾಪಾರಕ್ಕೂ ಹೋಳಿ ಹಬ್ಬಕ್ಕೆ ಸಿದ್ದಪಡಿಸಿದ್ದ ಆಹಾರವನ್ನು ಮಾರಾಟ ಮಾಡಿದ್ದರು. ಈ ಪೈಕಿ ಆಹಾರ ಸೇವಿಸಿದ್ದ ಗೋಕುಲ ಶಾಲೆಯ ವಿದ್ಯಾರ್ಥಿಗಳು, ಪುಷ್ಪೇಂದ್ರಕುಮಾರ್ ಮತ್ತು ಅವರ ಸಂಬಂಧಿಗಳು ಮಾತ್ರವಲ್ಲದೇ ಕೆಲ ಹೊರಗಿನವರು ಅಸ್ವಸ್ಥರಾಗಿದ್ದಾರೆ ಎಂದು ಪೊಲೀಸ್ ಮೂಲಗಳಿಂದ ತಿಳಿದು ಬಂದಿದೆ.

ಊಟ ಸೇವಿಸಿದ್ದ 40 ಮಂದಿ ಮಕ್ಕಳು, ಊಟ ಕಳುಹಿಸಿದ್ದ ಉದ್ಯಮಿಯ 61 ಮಂದಿ ಸಂಬಂಧಿಕರು ಹಾಗೂ ಹೋಟೆಲ್‌ನಲ್ಲಿ ಊಟ ಖರೀದಿಸಿ ಮತ್ತು ಸೇವಿಸಿದ್ದ 20ಕ್ಕೂ ಅಧಿಕ ಕೃಷಿ ಕೂಲಿ ಕಾರ್ಮಿಕರಿಗೆ ವಾಂತಿ, ಬೇಧಿಯಾಗಿ ವಿವಿಧ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆ. ಸದ್ಯ ಹೋಟೆಲ್‌ನ್ನು ಮುಚ್ಚಿಸಲಾಗಿದೆ.

ಇದರ ಜೊತೆಗೆ ವಿಷ ಆಹಾರದಿಂದ ಈಗಾಗಲೇ ಇಬ್ಬರು ಮೃತಪಟ್ಟು 120 ಮಂದಿ ಅಸ್ವಸ್ಥರಾಗಿರುವ ಹಿನ್ನೆಲೆಯಲ್ಲಿ ಪೊಲೀಸರು ಚುರುಕಾಗಿ ಪ್ರಕರಣದ ಬಗ್ಗೆ ತನಿಖೆ ನಡೆಸುತ್ತಿದ್ದಾರೆ. ಮಳವಳ್ಳಿ ಪಟ್ಟಣದ ಲಕ್ಷ್ಮಿ ನರಸಿಂಹಸ್ವಾಮಿ ಹೋಟೆಲ್‌ನಲ್ಲಿ ತಯಾರಿಸಿದ್ದ ಆಹಾರಕ್ಕೆ ಕಿಡಿಗೇಡಿಗಳ್ಯಾರಾದರೂ ವಿಷಕಾರಿ ಪದಾರ್ಥವನ್ನು ಮಿಶ್ರಣ ಮಾಡಿದ್ದಾರೆಯೇ ಎಂಬುದರ ಬಗ್ಗೆಯೂ ಅನುಮಾನಗೊಂಡು ಪೊಲೀಸರು ತನಿಖೆ ನಡೆಸುತ್ತಿದ್ದು, ಹೋಟೆಲ್ ಸಿಸಿಟಿವಿ, ಡಿವಿಆರ್ ಅನ್ನು ವಶಕ್ಕೆ ಪಡೆದು ತನಿಖೆ ಚುರುಕುಗೊಳಿಸಿದ್ದಾರೆ.

ಹೋಳಿ ಊಟ ಎಫೆಕ್ಟ್: ಮಂಡ್ಯದ ಹಲವು ದೇಗುಲಗಳಲ್ಲಿ ಹೊರಗಿನ ಪ್ರಸಾದಕ್ಕೆ ನಿಷೇಧ

ಮಂಡ್ಯ, ಮಾ.20– ಮಳವಳ್ಳಿ ತಾಲೂಕಿನಲ್ಲಿ ನಡೆದ ಹೋಳಿ ಊಟ ಸೇವಿಸಿ ಅಸ್ವಸ್ಥ ಪ್ರಕರಣಕ್ಕೆ ಸಂಬಂಧಿಸಿದಂತೆ ಹಲವು ಮುಂಜಾಗ್ರತಾ ಕ್ರಮಗಳನ್ನು ತೆಗೆದುಕೊಳ್ಳಲು ಜಿಲ್ಲಾಡಳಿತ ಮುಂದಾಗಿ, ಹಾಸ್ಟೆಲ್ ಮತ್ತು ಶಾಲೆಗಳಲ್ಲಿ ಹೊರಗಿನಿಂದ ತಂದ ಊಟವನ್ನು ಮಕ್ಕಳಿಗೆ ನೀಡದಂತೆ ಆದೇಶ ಮಾಡಿದ್ದು, ಇದೀಗ ದೇವಾಲಯದ ಸರದಿ. ಹೊರಗಿನ ಪ್ರಸಾದವನ್ನು ದೇಗುಲಗಳಲ್ಲಿ ಹಂಚದಂತೆ ಕೆಲ ದೇವಾಲಯಗಳು ಕಟ್ಟಪ್ಪಣೆ ಹೊರಡಿಸಿವೆ.

ವಾರ ಹಾಗೂ ವಿಶೇಷ ಪೂಜೆ ಸಂದರ್ಭದಲ್ಲಿ ಭಕ್ತರಿಗೆ ಕೆಲವು ಹೊರಗಿನಿಂದ ತಂದು ಲಾಡು, ರಸಾಯನ, ಸಜ್ಜಿಗೆ ಸೇರಿದಂತೆ ಇನ್ನಿತರ ಪ್ರಸಾದಗಳನ್ನು ಹಂಚುವುದು ಈ ಭಾಗದಲ್ಲಿ ವಾಡಿಕೆಯಾಗಿದೆ. ಆದರೆ ಪ್ರಸಾದ ಸೇವಿಸಿ, ಹೆಚ್ಚು- ಕಡಿಮೆಯಾದರೆ ದೇವಾಲಯದ ಆಡಳಿತ ಮಂಡಳಿಗೆ ಸಮಸ್ಯೆಯಾಗುತ್ತದೆ ಎಂಬ ನಿಟ್ಟಿನಲ್ಲಿ ಈ ನಿರ್ಧಾರಕ್ಕೆ ಬರಲಾಗಿದೆ.

ಮಂಡ್ಯ ನಗರದ ವಿ.ವಿ.ರಸ್ತೆಯಲ್ಲಿರುವ ಪ್ರತಿಷ್ಠಿತ ಗುರು ರಾಘವೇಂದ್ರ ಮಠದಲ್ಲಿ ಈ ನಿರ್ಧಾರಕ್ಕೆ ಬಂದಿದ್ದು, ಹೊರಗಿನಿಂದ ತಂದ ಪ್ರಸಾದವನ್ನು ಹಂಚಲು ನಿಷೇಧ ಏರಲಾಗಿದೆ ಎಂದು ಬ್ಯಾನರ್ ಮೂಲಕ ದೇವಾಲಯದ ಬಳಿ ಅಳವಡಿಸಲಾಗಿದೆ.

ಮಂಡ್ಯ ಜನರ ಬಗ್ಗೆ ಡಿಕೆಶಿ ಅವಹೇಳನಕಾರಿ ಹೇಳಿಕೆ ಖಂಡಿಸಿ

ಹೆದ್ದಾರಿ ತಡೆದು ಪ್ರತಿಭಟನೆ


ಮೈಸೂರು–ಬೆಂಗಳೂರು ಹೆದ್ದಾರಿ ತಡೆದು ಪ್ರತಿಭಟನೆ ನಡೆಸುತ್ತಿರುವುದು.

ಮಂಡ್ಯ,ಮಾ.20– ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರು ಮಂಡ್ಯ ಜಿಲ್ಲೆಯವರ ಬಗ್ಗೆ ಅವಹೇಳನಕಾರಿಯಾಗಿ ಪದ ಬಳಸುವ ಮೂಲಕ ನಿಂದಿಸಿದ್ದಾರೆ ಎಂದು ಆರೋಪಿಸಿ ಬಿಜೆಪಿ, ರೈತಸಂಘ ಹಾಗೂ ಕನ್ನಡ ಸೇನೆ ಸಂಘಟನೆಯ ಕಾರ್ಯಕರ್ತರು ಪ್ರತಿಭಟನೆ ನಡೆಸಿದರು.

ನಗರದ ಜೆ.ಸಿ.ವೃತ್ತದಲ್ಲಿ ಮಧ್ಯಾಹ್ನ ಸೇರಿದ ಪ್ರತಿಭಟನಾಕಾರರು ಬೆಂಗಳೂರು –ಮೈಸೂರು ಹೆದ್ದಾರಿ ತಡೆದು ಡಿ.ಕೆ.ಶಿವಕುಮಾರ್ ವಿರುದ್ಧ ಘೋಷಣೆ ಕೂಗಿ ಆಕ್ರೋಶ ವ್ಯಕ್ತಪಡಿಸಿದರು.

ಕನ್ನಡ ಸೇನೆ ಸಂಘಟನೆಯ ಜಿಲ್ಲಾಧ್ಯಕ್ಷ ಎಚ್.ಸಿ.ಮಂಜುನಾಥ್ ಮಾತನಾಡಿ, ಬೆಂಗಳೂರಿನಲ್ಲಿ ಯೂತ್ ಕಾಂಗ್ರೆಸ್ ಘಟಕ ಪದಾಧಿಕಾರಿಗಳ ಪದಗ್ರಹಣ ಸಮಾರಂಭದಲ್ಲಿ ಮಾತನಾಡುವಾಗ ಮಂಡ್ಯ ಜಿಲ್ಲೆಯ ಜನರಿಗೆ ಅವಹೇಳನಕಾರಿಯಾಗಿ ಮಾತನಾಡುವ ಮೂಲಕ ಜಿಲ್ಲೆಯ ಜನರ ಭಾವನೆಗಳಿಗೆ ಧಕ್ಕೆ ತುದಿದ್ದಾರೆ ಎಂದು ಕಿಡಿಕಾರಿದರು.

ರಾಜ್ಯಕ್ಕೆ ನೀವು ಉಪಮುಖ್ಯಮಂತ್ರಿಗಳು ಅಲ್ಲದೆ, ಮಂಡ್ಯದ ಜೊತೆ ಹೆಚ್ಚು ನಂಟು ಹೊಂದಿದ್ದೀರಿ. ಚುನಾವಣೆ ಸಂದರ್ಭದಲ್ಲಿ ಅಭಿವೃದ್ಧಿಯ ಬಗ್ಗೆ ಭಾಷಣ ಮಾತನಾಡಿದ್ದೀರಿ. ಇದೀಗ ಮಾತನಾಡುವಾಗ ಮಂಡ್ಯ ಜನದ ಛತ್ರಿ ಆಟ ಗೊತ್ತಿದೆ ಎಂಬ ಅವಹೇಳನಕಾರಿ ಪದ ಬಳಕೆ ಮಾಡಿರುವುದು ಸರಿಯಲ್ಲ. ಇದನ್ನು ಖಂಡಿಸುತ್ತೇವೆ ಎಂದರು.

ರಾಜ್ಯದ ಉಪಮುಖ್ಯಮಂತ್ರಿಯಾಗಿ, ಒಂದು ಪಕ್ಷದ ಅಧ್ಯಕ್ಷರಾಗಿ ಜವಾಬ್ದಾರಿಯುತ ಸ್ಥಾನದಲ್ಲಿರುವ ನೀವು ಈ ರೀತಿಯ ಪದ ಬಳಕೆ ಮಾಡಿರುವುದು ತುಂಬಾ ನೋವಿನ ಸಂಗತಿಯಾಗಿದೆ. ಮಂಡ್ಯ ಜಿಲ್ಲೆಗೆ ನೀವು ಬಂದರೆ ಉಗ್ರ ಹೋರಾಟ ಮಾಡುತ್ತೇವೆ ಆದ್ದರಿಂದ ಕೂಡಲೇ ಡಿ.ಕೆ.ಶಿವಕುಮಾರ್ ಅವರು ಜಿಲ್ಲೆಯ ಜನರ ಕ್ಷಮೆಯಾಚಿಸಬೇಕು ಎಂದು ಆಗ್ರಹಿಸಿದರು.

ಇಂದು ಸಾಂಕೇತಿಕವಾಗಿ ಕನ್ನಡ ಸೇನೆ, ರೈತಸಂಘಟನೆಗಳು, ಬಿಜೆಪಿ ಸೇರಿದಂತೆ ಕನ್ನಡಪರ ಸಂಘಟನೆಗಳು ನಿಮ್ಮ ಹೇಳಿಕೆಯನ್ನು ಖಂಡಿಸಿದ್ದೇವೆ. ಯಾವುದೇ ಪಕ್ಷಪರ, ವಿರೋಧವಲ್ಲ. ಆದರೆ 80 ವರ್ಷ ಪೂರೈಸಿರುವ ಮಂಡ್ಯ ಜಿಲ್ಲೆಯ ವಸಂತಗಳನ್ನು ಹಾಳು ಮಾಡುತ್ತಿದ್ದೀರಾ. ಜಿಲ್ಲೆಗೆ ನಿಮ್ಮ ಕೊಡುಗೆ ಏನು?, ಕಾವೇರಿ ನದಿ ನೀರಿಗಾಗಿ 153 ದಿನಗಳ ಕಾಲ ಹೋರಾಟ ಮಾಡಿದಾಗ ನೀರಾವರಿ ಸಚಿವರಾಗಿ ಸೌಜನ್ಯಕ್ಕಾದರೂ ಒಂದು ದಿನವೂ ಭೇಟಿ ನೀಡಲಿಲ್ಲ. ಇನ್ನೂ ಜಿಲ್ಲೆಯ ಬಗ್ಗೆ ಮಾತನಾಡುವ ಯಾವ ನೈತಿಕತೆ ಇದೆ ಎಂದು ಪ್ರಶ್ನಿಸಿದರು.

ಮಾ.22ರಂದು ಕರ್ನಾಟಕ ಬಂದ್ ಆಚರಿಸಲಾಗುತ್ತಿದೆ. ಅಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಹಾಗೂ ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರು ತಮ್ಮ ಸ್ಥಾನಗಳಿಗೆ ರಾಜೀನಾಮೆ ನೀಡಬೇಕು ಎಂಬ ಒತ್ತಾಯ ಮಾಡಲಿದ್ದೇವೆ ಆದ್ದರಿಂದ ಕೂಡಲೇ ಸಂಜೆಯೊಳಗೆ ಜಿಲ್ಲೆಯ ಜನರ ಕ್ಷಮೆಯಾಚಿಸಬೇಕು ಎಂದು ಆಗ್ರಹಿಸಿದರು.

ರೈತ ಮುಖಂಡ ಚಂದ್ರಶೇಖರ್ ಮಾತನಾಡಿ, ಉನ್ನತ ಸ್ಥಾನದಲ್ಲಿರುವ ಉಪಮುಖ್ಯಮಂತ್ರಿಯಾಗಿರುವ ಡಿ.ಕೆ.ಶಿವಕುಮಾರ್ ಅವರು ಜಿಲ್ಲೆಯ ಜನರ ಬಗ್ಗೆ ಹಗುರವಾಗಿ ಮಾತನಾಡಿರುವುದು ಸರಿಯಲ್ಲ. ಜಿಲ್ಲೆಯಲ್ಲಿ ಕೆ.ವಿ.ಶಂಕರಗೌಡರು, ಜಿ.ಮಾದೇಗೌಡರು, ಎಸ್.ಎಂ.ಕೃಷ್ಣ, ರೈತ ನಾಯಕ ಕೆ.ಎಸ್.ಪುಟ್ಟಣ್ಣಯ್ಯರಂಥ ನಾಯಕರು ಇದ್ದರು. ಇಂಥ ನಾಯಕರಿದ್ದ ಜಿಲ್ಲೆಯ ಜನರ ಬಗ್ಗೆ ಹಗುರವಾಗಿ ಮಾತನಾಡಿರುವುದು ಖಂಡನೀಯ. ಉಪಮುಖ್ಯಮಂತ್ರಿಯಾಗಿ ನಾಲಾಯಕ್ ಆಗಿ ಮುಂದುವರೆಯುವುದು ಬೇಡ. ಇದು ಮುಂದೆ ಉಗ್ರ ಪ್ರತಿಭಟನೆ ಅನುಭವಿಸಬೇಕಾಗುತ್ತದೆ. ಮುಂದೆ ಜಿಲ್ಲೆಯ ಜನರು ತೆಗೆದುಕೊಳ್ಳುವ ನಿರ್ಧಾರ ರಾಜ್ಯದ ಜನತೆ ನಿರ್ಧಾರ ಕೈಗೊಳ್ಳಲಿದೆ. ಆದ್ದರಿಂದ ಡಿ.ಕೆ.ಶಿವಕುಮಾರ್ ಅವರು ಮಾತನಾಡುವಾಗ ನಾಲಿಗೆ ಹದ್ದುಬಸ್ತಿನಲ್ಲಿಟ್ಟುಕೊಂಡು ಮಾತನಾಡಬೇಕು ಎಂದು ಕಿಡಿಕಾರಿದರು.

ಪ್ರತಿಭಟನೆಯಲ್ಲಿ ಬಿಜೆಪಿ ಮಾಧ್ಯಮ ವಕ್ತಾರ ಸಿ.ಟಿ.ಮಂಜುನಾಥ್, ಮಹಾಂತಪ್ಪ ಸೇರಿದಂತೆ ರೈತಮುಖಂಡರು ಇದ್ದರು.

ಅಸ್ವಸ್ಥ ಮಕ್ಕಳ ಆರೋಗ್ಯ ವಿಚಾರಿಸಿದ ನಿಖಿಲ್


ಮಕ್ಕಳ ಆರೋಗ್ಯ ವಿಚಾರಿಸಿದ ಜೆಡಿಎಸ್ ಯುವ ಘಟಕದ ಅಧ್ಯಕ್ಷ ನಿಖಿಲ್‌ಕುಮಾರಸ್ವಾಮಿ

ಮಂಡ್ಯ ಮಾ.20– ಹೋಳಿ ಊಟ ಸೇವಿಸಿ ಅಸ್ವಸ್ಥರಾಗಿ ಮಂಡ್ಯ ಮಿಮ್ಸ್ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿರುವ ಮಕ್ಕಳ ಆರೋಗ್ಯವನ್ನು ಗುರುವಾರ ಜೆಡಿಎಸ್ ಯುವ ಘಟಕದ ಅಧ್ಯಕ್ಷ ನಿಖಿಲ್‌ಕುಮಾರಸ್ವಾಮಿ ವಿಚಾರಿಸಿದರು.

ಈ ಸಂದರ್ಭದಲ್ಲಿ ಮಾತನಾಡಿದ ನಿಖಿಲ್, ಫುಡ್ ಪಾಯಿಸನ್‌ನಿಂದ 45 ಮಕ್ಕಳು ಅಸ್ವಸ್ಥಗೊಂಡು ಮಂಡ್ಯ ಮಿಮ್ಸ್‌ನಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆ. ಅದರಲ್ಲಿ ಹತ್ತಾರು ಮಕ್ಕಳು ಎಸ್‌ಎಸ್‌ಎಲ್‌ಸಿ ವಿದ್ಯಾರ್ಥಿಗಳಾಗಿದ್ದಾರೆ. ಇಬ್ಬರನ್ನು ಉಳಿಸಿಕೊಳ್ಳಲು ಆಗಲಿಲ್ಲ ಅಂತಾ ವೈದ್ಯರು ಹೇಳಿದ್ದಾರೆ. ಫುಡ್ ಪಾಯಿಸನ್‌ನಿಂದ ಆಗಿದೆ ಎಂದು ವೈದ್ಯರು ಹೇಳಿದ್ದು, ಹೇಗಾಯ್ತು ಅನ್ನೋದು ಗೊತ್ತಿಲ್ಲ. ವೈದ್ಯರು, ಪೋಷಕರನ್ನ ಭೇಟಿ ಮಾಡಿದ್ದೇನೆ. ಮಕ್ಕಳು, ಪೋಷಕರಿಗೆ ಧೈರ್ಯ ತುಂಬಿದ್ದೇನೆ ಎಂದು ಹೇಳಿದರು. ಮಾಜಿ ಶಾಸಕ ಡಾ.ಕೆ.ಅನ್ನದಾನಿ, ಡಿ.ರಮೇಶ್, ಎಂ.ವಿ.ಪ್ರಕಾಶ್, ಮುಖಂಡರಾದ ಬಿ.ಆರ್.ಸುರೇಶ್, ರವಿ ಕಂಸಾಗರ ಉಪಸ್ಥಿತರಿದ್ದರು.

ಬಳಿಘಟ್ಟ ಗ್ರಾಪಂ ಉಪಾಧ್ಯಕ್ಷರ ಆಯ್ಕೆ


ಬಳಿಘಟ್ಟ ಗ್ರಾಪಂ ಉಪಾಧ್ಯಕ್ಷರಾಗಿ ಆಯ್ಕೆಯಾದ ಜೆಡಿಎಸ್ ಬೆಂಬಲಿತ ಅಣ್ಣಯ್ಯ ಅವರನ್ನು ಸದಸ್ಯರು ಅಭಿನಂದಿಸಿದರು.

ಮೇಲುಕೋಟೆ: ಹೋಬಳಿಯ ಬಳಿಘಟ್ಟ ಗ್ರಾಮ ಪಂಚಾಯಿತಿಯ ಉಪಾಧ್ಯಕ್ಷ ಸ್ಥಾನಕ್ಕೆ ನಡೆದ ಚುನಾವಣೆಯಲ್ಲಿ ಜೆಡಿಎಸ್ ಬೆಂಬಲಿತ ಸದಸ್ಯ ಅಣ್ಣಯ್ಯ ನೂತನ ಉಪಾಧ್ಯಕ್ಷರಾಗಿ ಆಯ್ಕೆಯಾಗಿದ್ದಾರೆ. 10 ಸದಸ್ಯ ಬಲದ ಬಳಿಘಟ್ಟ ಗ್ರಾಮ ಪಂಚಾಯಿತಿಯಲ್ಲಿ ಉಪಾಧ್ಯಕ್ಷ ನಾಗೇಶ್ ರಾಜೀನಾಮೆಯ ಪರಿಣಾಮ ತೆರವಾಗಿದ್ದ ಸ್ಥಾನಕ್ಕೆ ಮಾ.18 ರಂದು ಚುನಾವಣೆ ನಿಗಧಿಯಾಗಿತ್ತು. ಉಪಾಧ್ಯಕ್ಷ ಸ್ಥಾನಕ್ಕೆ ಆಯ್ಕೆ ಬಯಸಿ ಕಾಂಗ್ರೆಸ್ ಬೆಂಬಲಿತ ಆಶಾ ಜೆಡಿಎಸ್ ಬೆಂಬಲಿತ ಅಣ್ಣಯ್ಯ ನಾಮಪತ್ರ ಸಲ್ಲಿಸಿದ್ದರು. ಈ ವೇಳೆ ನಡೆದ ಚುನಾವಣೆಯಲ್ಲಿ ಅಣ್ಣಯ್ಯ ಪರವಾಗಿ 7 ಮತಗಳು ಆಶಾಗೆ ಪರವಾಗಿ 3 ಮತಗಳು ಚಲಾವಣೆಯಾದ ಕಾರಣ ಅಣ್ಣಯ್ಯ ನೂತನ ಉಪಾಧ್ಯಕ್ಷರಾಗಿ ಆಯ್ಕೆಯಾದರು. ತಾಲೂಕು ಪಂಚಾಯತಿಯ ಕಾರ್ಯನಿರ್ವಾಹಕ ಅಧಿಕಾರಿ ಲೋಕೇಶಮೂರ್ತಿ ಚುನಾವಣಾಧಿ ಕಾರಿಯಾಗಿದ್ದರು.

900 ಕೋಟಿ ವೆಚ್ಚದಲ್ಲಿ ಮಂಡ್ಯ ವರ್ತುಲ ರಸ್ತೆ ಯೋಜನೆ ಕೈಗೆತ್ತಿಕೊಳ್ಳಲು ಕೇಂದ್ರದ ಸಮ್ಮತಿ

ಮಂಡ್ಯ/ನವದೆಹಲಿ,ಮಾ.20– ಮಂಡ್ಯ ನಗರ ವರ್ತುಲ ರಸ್ತೆಯನ್ನು ಅದಷ್ಟು ಬೇಗ ಕೈಗೆತ್ತಿಕೊಂಡು ಅನುಷ್ಠಾನಕ್ಕೆ ತರುವ ಬಗ್ಗೆ ಕೇಂದ್ರ ಸಚಿವ ಹೆಚ್.ಡಿ.ಕುಮಾರಸ್ವಾಮಿ ಅವರು ಕೇಂದ್ರ ಭೂಸಾರಿಗೆ ಮತ್ತು ಹೆದ್ದಾರಿ ಸಚಿವ ನಿತಿನ್ ಗಡ್ಕರಿ ಅವರನ್ನು ಭೇಟಿಯಾಗಿ ಚರ್ಚೆ ನಡೆಸಿದರು.


ನಿತಿನ್ ಗಡ್ಕರಿಯವರನ್ನು ಭೇಟಿಯಾದ ಕುಮಾರಸ್ವಾಮಿ

ಸಂಸತ್ ಭವನದಲ್ಲಿರುವ ಗಡ್ಕರಿ ಅವರ ನಿವಾಸದಲ್ಲಿ ಭೇಟಿಯಾದ ಕುಮಾರಸ್ವಾಮಿ ಅವರು, ಈಗಾಗಲೇ ಮಂಡ್ಯ ನಗರಾಭಿವೃದ್ಧಿ ಪ್ರಾಧಿಕಾರವು ಯೋಜನೆಗೆ ಡಿಪಿಆರ್ ಮಾಡಿದೆ. ಆದರೆ ಪ್ರಾಧಿಕಾರದ ಅಂದಾಜು ವೆಚ್ಚ ಯೋಜನೆಗೆ ಸಾಕಾಗುವುದಿಲ್ಲ. 900 ಕೋಟಿ ವೆಚ್ಚದ ಪರಿಷ್ಕೃತ ಯೋಜನೆಗೆ ಒಪ್ಪಿಗೆ ಕೊಟ್ಟು ಅನುಷ್ಠಾನಗೊಳಿಸಬೇಕು ಎಂದು ಸಚಿವರು ಮಾಡಿದ ಮನವಿಗೆ ಗಡ್ಕರಿ ಅವರು ಸಕಾರಾತ್ಮಕವಾಗಿ ಸ್ಪಂದಿಸಿದರು.

ಈ ಬಗ್ಗೆ ಗಡ್ಕರಿ ಅವರಿಗೆ ಕೃತಜ್ಞತೆ ಸಲ್ಲಿಸಿದ ಕುಮಾರಸ್ವಾಮಿ ಅವರು, ಭೂಸ್ವಾಧೀನಕ್ಕೆ 550 ಕೋಟಿ ಹಾಗೂ ನಿರ್ಮಾಣ ಕಾರ್ಯಕ್ಕೆ 350 ಕೋಟಿ ಬೇಕಾಗುತ್ತದೆ ಹೀಗಾಗಿ ಯೋಜನೆಗೆ 900 ಕೋಟಿ ಅಗತ್ಯವಿದೆ ಎಂಬುದನ್ನು ಗಡ್ಕರಿ ಅವರಿಗೆ ಮನವರಿಕೆ ಮಾಡಿಕೊಟ್ಟರು.

ಪಾಂಡವಪುರ: ಜೇವರ್ಗಿ–ಚಾಮರಾಜನಗರ ನಡುವೆ ಮೇಲುಕೋಟೆ ವಿಧಾನಸಭೆ ಕ್ಷೇತ್ರದಲ್ಲಿ ಹಾದುಹೋಗುವ ರಾಷ್ಟ್ರೀಯ ಹೆದ್ದಾರಿಯನ್ನು ದ್ವಿಪಥದಿಂದ ಚತುಷ್ಪಥ ಹೆದ್ದಾರಿಯನ್ನಾಗಿ ಅಭಿವೃದ್ಧಿ ಮಾಡುವ ಬಗ್ಗೆಯು ಚರ್ಚೆ ನಡೆಸಿದರು.

ಬೈಕಿಗೆ ಕಾಡು ಹಂದಿ ಡಿಕ್ಕಿ: ಸವಾರ ಸಾವು

ಕೆ.ಆರ್.ಪೇಟೆ, ಮಾ.20– ಚಲಿಸುತ್ತಿದ್ದ ಬೈಕಿಗೆ ಕಾಡು ಹಂದಿಯೊಂದು ಡಿಕ್ಕಿ ಹೊಡೆದ ಪರಿಣಾಮ ಬೈಕ್ ಸವಾರ ಸ್ಥಳದಲ್ಲೇ ಮೃತಪಟ್ಟಿರುವ ಘಟನೆ ತಾಲೂಕಿನ ದುಗ್ಗನಹಳ್ಳಿ ಗ್ರಾಮದ ಬಳಿ ಇರುವ ಕೆಶಿಫ್ ರಾಜ್ಯ ಹೆದ್ದಾರಿಯಲ್ಲಿ ಬುಧವಾರ ರಾತ್ರಿ ನಡೆದಿದೆ.

ಅಪಘಾತದ ತೀವ್ರತೆಗೆ ಕಾಡು ಹಂದಿಯೂ ಸಹ ಸ್ಥಳದಲ್ಲೆ ಸಾವನ್ನಪ್ಪಿದೆ ಎಂದು ತಾಲೂಕು ಅರಣ್ಯಾಧಿಕಾರಿಗಳು ತಿಳಿಸಿದ್ದಾರೆ.

ಮಂಡ್ಯದ ಕೆ.ಆರ್.ಪೇಟೆ ತಾಲೂಕಿನ ಕೊಟಗಹಳ್ಳಿ ಗ್ರಾಮದ ನಿವಾಸಿ ಕೃಷ್ಣ (51) ಸ್ಥಳದಲ್ಲೇ ಮೃತಪಟ್ಟ ಬೈಕ್ ಸವಾರ ಎಂದು ತಿಳಿದು ಬಂದಿದೆ. ಕೃಷ್ಣ ನಾಗಮಂಗಲದಲ್ಲಿ ಖಾಸಗಿ ಹೋಟೆಲ್‌ನಲ್ಲಿ ಕೆಲಸ ಮುಗಿಸಿ ವಾಪಸ್ ಸ್ವಗ್ರಾಮ ಕೊಡಗಹಳ್ಳಿಗೆ ಬರುತ್ತಿರುವ ವೇಳೆ ಈ ಘಟನೆ ನಡೆದಿದೆ. ಹೆದ್ದಾರಿಯ ಪಕ್ಕದಲ್ಲಿರುವ ಅರಣ್ಯ ಪ್ರದೇಶಕ್ಕೆ ಕಿಡಿಗೇಡಿಗಳು ಬೆಂಕಿ ಹಚ್ಚಿದ್ದು, ಕಾಡುಹಂದಿ ಪ್ರಾಣ ಉಳಿಸಿಕೊಳ್ಳಲು ಅರಣ್ಯ ಪ್ರದೇಶದಿಂದ ರಸ್ತೆ ದಾಟುವಾಗ ಘಟನೆ ನಡೆದಿದೆ ಎಂದು ತಿಳಿದು ಬಂದಿದೆ. ಕೆ.ಆರ್.ಪೇಟೆ ಪಟ್ಟಣ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಮೂರನೇ ಪುಟದಿಂದ

ಉನ್ನತ ಮಟ್ಟದ ತನಿಖೆಗೆ ನಿರ್ಧಾರ

ನಾನು ರೇಪ್ ಮಾಡಿಲ್ಲ ಬೇಕಿದ್ದರೆ, ಆತ ನಂಬುವ ದೇವರುಗಳ ಮೇಲೆ ಆಣೆ ಮಾಡಲಿ. ನಾನೂ ಮಾಡುತ್ತೇನೆ ಎಂದು ಸದನದಲ್ಲಿ ದೇವರುಗಳ ಚಿತ್ರಗಳನ್ನು ಪ್ರದರ್ಶಿಸಿದರು. ನನ್ನ ಮೇಲೆ ರೇಪ್ ಆರೋಪ ಮಾಡಿದಾಕೆ ಇರುವುದು ಎಲ್ಲೋ, ನನ್ನ ವಿರುದ್ಧ ರಾಮನಗರದಲ್ಲಿ ಪ್ರಕರಣ ದಾಖಲಿಸಿ, ನಮ್ಮ ಕುಟುಂಬದ ಮಾನ ಹರಾಜು ಮಾಡಿದೆ. ಈಗಲೂ ನಮ್ಮ ಮೊಮ್ಮಕ್ಕಳು ಬೀದಿಯಲ್ಲಿ ತಲೆ ಎತ್ತಿ ಓಡಾಡದಂತೆ ಆಗಿದೆ.

ನನ್ನ ಮೇಲಿನ ರೇಪ್ ಪ್ರಕರಣವನ್ನು ಸಿಬಿಐಗೆ ವಹಿಸಿ, ಸತ್ಯಾಸತ್ಯತೆ ಹೊರಬರಲಿ, ನೀವು ಇದನ್ನು ಹೀಗೇ ಬಿಟ್ಟರೆ ಅವನು ಉನ್ನತ ಅಧಿಕಾರ ಪಡೆಯಲು ತನ್ನ ವಿರೋಧಿಗಳೆಲ್ಲರನ್ನೂ ಹನಿಟ್ರ್ಯಾಪ್ ಮಾಡುತ್ತಾನೆ ಎಂದು ಗುಡುಗಿದರು.

ಮುನಿರತ್ನ ಮಾತಿಗೆ ಬೆಂಬಲ ವ್ಯಕ್ತಪಡಿಸಿದ ಸುನೀಲ್ ಕುಮಾರ್, ಸಿ.ಡಿ. ಮತ್ತು ಪೆನ್‌ಡ್ರೈವ್ ಫ್ಯಾಕ್ಟರಿ ಹಿಂದಿರುವ ಕೈಗಳನ್ನು ಬಹಿರಂಗಪಡಿಸಿ, ನಾವು ಸಾರ್ವಜನಿಕ ಜೀವನದಲ್ಲಿ ಇರುವವರು ಕೆಲವು ವಿಷಯಗಳನ್ನು ವಿರೋಧಿಸುತ್ತೇವೆ. ಹಾಗಂತ, ನಮ್ಮಗಳ ವಿರುದ್ಧ ಹನಿಟ್ರ್ಯಾಪ್ ಮಾಡಿಸಿದರೆ, 224 ಸದಸ್ಯರ ಗತಿ ಏನು, ಉನ್ನತ ಹುದ್ದೆ ಪಡೆಯಲೋ ಅಥವಾ ಬೇರೆ ಉದ್ದೇಶಕ್ಕೋ ಅವರನ್ನು ವಿರೋಧಿಸುವವರನ್ನೆಲ್ಲಾ ಹನಿಟ್ರ್ಯಾಪ್ ಮಾಡುತ್ತಾ ಹೋದರೆ, ಇದು ಎಲ್ಲಿಗೆ ತಲುಪುತ್ತೆ.

ರಾಜ್ಯ ವಿಧಾನಮಂಡಲದ ಗೌರವ ಕಾಪಾಡಲು ಗೃಹ ಸಚಿವರು ಸಿ.ಡಿ., ಪೆನ್‌ಡ್ರೈವ್ ಪ್ರಕರಣಗಳಿಗೆ ಇತಿಶ್ರೀ ಹಾಡಬೇಕು ಎಂದು ಆಗ್ರಹಿಸಿದರು.

ಸಚಿವರಿಂದ ಸಿಎಂ ಭೇಟಿ: ಹನಿಟ್ರಾಪ್ ಪ್ರಕರಣಕ್ಕೆ ಸಂಬಂಧಿಸಿದಂತೆ ಹಿರಿಯ ಸಚಿವರುಗಳು ಇಂದು ಸಂಜೆ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರನ್ನು ಭೇಟಿ ಮಾಡಿ ಚರ್ಚೆ ನಡೆಸಿದರು.

ಸಹಕಾರ ಸಚಿವ ಕೆ.ಎನ್.ರಾಜಣ್ಣ ಮತ್ತು ವಿಧಾನಪರಿಷತ್ ಸದಸ್ಯರೂ ಆದ ಅವರ ಪುತ್ರ ರಾಜೇಂದ್ರ ಅವರನ್ನು ಹನಿಟ್ರಾಪ್ ಮಾಡಲು ಯತ್ನಿಸಿರುವ ಬಗ್ಗೆ ಇಂದು ವಿಧಾನಸಭೆಯಲ್ಲಿ ಭಾರೀ ಚರ್ಚೆ ನಡೆದಿತ್ತು. ಮಂಡಿ ನೋವಿನಿಂದಾಗಿ ಮುಖ್ಯಮಂತ್ರಿಗಳು ಸದನದಲ್ಲಿ ಹಾಜರಿರಲಿಲ್ಲ. ಇಂದು ಸದನ ಆರಂಭವಾಗುವ ಮುನ್ನವೇ ಸಚಿವ ಸತೀಶ್ ಜಾರಕಿಹೊಳಿ ಅವರು ಹನಿಟ್ರಾಪ್ ಬಗ್ಗೆ ಮಾಧ್ಯಮಗಳಿಗೆ ಹೇಳಿಕೆ ನೀಡಿ, ನಂತರ ಮುಖ್ಯಮಂತ್ರಿಗಳನ್ನು ಭೇಟಿ ಮಾಡಿದ್ದರು.

2 ಬಾರಿ ಹನಿಟ್ರ್ಯಾಪ್ ಪ್ರಯತ್ನ

ಸುದ್ದಿಗಾರರೊಂದಿಗೆ ಸಚಿವ ಸತೀಶ್ ಜಾರಕಿಹೊಳಿ ಮಾತನಾಡಿ, ಹನಿ ಟ್ರ್ಯಾಪ್‌ಗೆ ಹಲವು ಬಾರಿ ಪ್ರಯತ್ನಿಸಿರುವುದು ನಿಜ ಎಂದು ಸಚಿವರ ಹೆಸರೇಳದೆ ಮಾಹಿತಿ ನೀಡಿದರು. ಸಚಿವರ ಹನಿಟ್ರ್ಯಾಪ್‌ನಲ್ಲಿ ಬೀಳಿಸಬೇಕು, ರಾಜಕೀಯದಿಂದ ನಿರ್ನಾಮ ಮಾಡಬೇಕು ಎಂಬ ಪ್ರಯತ್ನಿಸಿದರೂ ಅದು ಯಶಸ್ವಿಯಾಗಿಲ್ಲ. ರಾಜ್ಯದಲ್ಲಿ ಮೊದಲ ಬಾರಿಗೆ ಇಂತಹ ಕೃತ್ಯ ನಡೆದಿಲ್ಲ. ಕಳೆದ 20 ವರ್ಷಗಳಿಂದ ಈ ಹನಿಟ್ರ್ಯಾಪ್ ದಂಧೆ ನಡೆಯುತ್ತಿದೆ. ಪ್ರತಿಯೊಂದು ಪಕ್ಷ ಕಾಂಗ್ರೆಸ್, ಬಿಜೆಪಿ ಮತ್ತು ಜೆಡಿಎಸ್ ಎಲ್ಲಾ ಪಕ್ಷಗಳು ಇದಕ್ಕೆ ಬಲಿಯಾಗಿವೆ ಎಂದು ಹೇಳಿದ್ದಾರೆ.

ಈ ಬಗ್ಗೆ ಸಚಿವರೊಂದಿಗೆ ಮಾತನಾಡಿದಾಗ ಎರಡು ಬಾರಿ ಹನಿಟ್ರ್ಯಾಪ್‌ಗಾಗಿ ಏನೋ ಕೆಲಸ ಇದೆ ಎಂದು ಬಂದಿದ್ದರು. ಅನುಮಾನ ಬಂದು ಪ್ರಶ್ನಿಸಿದಾಗ ಘರ್ಷಣೆ ಉಂಟಾಯಿತು ಎಂದು ಆ ಸಚಿವರು ಹೇಳಿದ್ದಾರೆ. ಅದಕ್ಕೆ ನಾವು ದೂರು ದಾಖಲಿಸಲು ಸಚಿವರಿಗೆ ಸಲಹೆ ನೀಡಿದ್ವಿ. ಯಾರು ಇದರ ಹಿಂದೆ ಇದ್ದಾರೆ, ಇವರ ಉದ್ದೇಶವೇನು ಎಂಬುದು ತನಿಖೆಯಾಗಬೇಕು. ಇದರ ಹಿಂದೆ ಯಾರಿದ್ದಾರೆ ಎಂದು ನಾವು ಹೆಸರು ಹೇಳಿದರೆ ರಾಜಕೀಯ ಆರೋಪವಾಗುತ್ತದೆ. ತನಿಖಾ ಏಜೆನ್ಸಿ ಮೂಲಕವೇ ಬಂದರೆ ಅಧಿಕೃತವಾಗುತ್ತದೆ ಎಂದು ಹೇಳಿದರು.

ಸ್ವಪಕ್ಷೀಯರು ಇದ್ರೂ ಇರಬಹುದು: ಸಚಿವರ ಮೇಲೆ ಹನಿಟ್ರ್ಯಾಪ್ ಅನ್ನು ಆಡಳಿತ ಪಕ್ಷದವರೇ ಮಾಡಿದ್ದಾರೆ ಎಂದು ವಿಪಕ್ಷಗಳ ಆರೋಪಕ್ಕೆ ಪ್ರತಿಕ್ರಿಯಿಸಿದ ಸಚಿವ ಸತೀಶ್ ಜಾರಕಿಹೊಳಿ ಈ ಪ್ರಕರಣದಲ್ಲಿ ಸ್ವಪಕ್ಷೀಯರೇ ಇದ್ದರೂ ಇರಬಹುದು, ರಾಜಕೀಯ ಈಗ ಕೆಳಮಟ್ಟಕ್ಕೆ ಹೋಗಿದೆ. ಹಿಂದಿನ ಸರ್ಕಾರಗಳಲ್ಲೂ ಈ ರೀತಿ ಬ್ಲ್ಯಾಕ್ ಮೇಲ್ ಮಾಡಿರುವುದು ಆಗಿದೆ. ಇಂತಹ ಪ್ರಕರಣ ಒಳ್ಳೆಯ ಬೆಳವಣಿಗೆಯಲ್ಲ. ನಾವು ಇದನ್ನು ಇಷ್ಟಕ್ಕೆ ಬಿಡುವುದು ಸರಿಯಲ್ಲ. ಪಕ್ಷದ ಪ್ರಮುಖ ನಾಯಕರ ಗಮನಕ್ಕೆ ತರಲು ಬಯಸಿದ್ದೇವೆ ಎಂದು ಸತೀಶ್ ಜಾರಕಿಹೊಳಿ ತಿಳಿಸಿದ್ದಾರೆ.

ದೂರು ನೀಡಿದ ಸಚಿವ ರಾಜಣ್ಣ ಪುತ್ರ

ಮೇಲೆ ಹನಿಟ್ರ್ಯಾಪ್ ಯತ್ನ ನಡೆದಿದೆ. ನನಗೆ ಈಗಲೂ ಕರೆಗಳು ಬರುತ್ತಿವೆ. ನಾನು ಮುಖ್ಯಮಂತ್ರಿಗಳಿಗೆ ದೂರು ಕೊಡುತ್ತೇನೆ ಎಂದು ಹೇಳಿದ್ದಾರೆ. ನನ್ನ ತಂದೆ ಮೇಲೆ ಎರಡು ಸಲ ಹನಿಟ್ರ್ಯಾಪ್ ಯತ್ನ ಆಗಿದೆ. ಹನಿಟ್ರ್ಯಾಪ್ ಮಾಡುವವರು ಸರ್ಕಾರಿ ನಿವಾಸಕ್ಕೆ ಹೋಗಿದ್ದಾರೆ. ಈ ಬಗ್ಗೆ ಹೈಕಮಾಂಡ್‌ಗೂ ದೂರು ಕೊಡುತ್ತೇವೆ. ಆದಷ್ಟು ಬೇಗ ತನಿಖೆ ಆದರೆ ಒಳ್ಳೆಯದು. ಹನಿಟ್ರ್ಯಾಪ್‌ಗೆ ಯತ್ನಿಸಿದವರು ಯಾವ ಪಕ್ಷದವರು ಎಂಬುದು ತನಿಖೆಯಿಂದ ಗೊತ್ತಾಗುತ್ತದೆ.

ಸಿಎಂ ಭೇಟಿಯಾದ ರಾಜಣ್ಣ ಪುತ್ರ: ತಮ್ಮ ವಿರುದ್ಧ ಹನಿಟ್ರ್ಯಾಪ್ ರಹಸ್ಯ ಬಹಿರಂಗಪಡಿಸಿದ ಬೆನ್ನಲ್ಲೇ ಸಚಿವ ರಾಜಣ್ಣ ಪುತ್ರ ಸಿಎಂ ಸಿದ್ದರಾಮಯ್ಯ ಅವರನ್ನು ಭೇಟಿಯಾಗಿದ್ದಾರೆ. ವಿಧಾನಸಭೆ ಮೊಗಸಾಲೆಯಲ್ಲಿ ಸಿಎಂ ಕೊಠಡಿಯಲ್ಲಿ ಸಿದ್ದರಾಮಯ್ಯ ಅವರನ್ನು ಭೇಟಿ ಮಾಡಿ ಹನಿಟ್ರ್ಯಾಪ್ ಯತ್ನ ನಡೆದಿರುವ ಬಗ್ಗೆ ದೂರು ನೀಡಿದ್ದಾರೆ ಎನ್ನಲಾಗಿದೆ.

ತನಿಖೆಗೆ ಕೆ.ಎನ್.ರಾಜಣ್ಣ ಆಗ್ರಹ

ವಿಧಾನಸೌಧದಲ್ಲಿ ಮಾಧ್ಯಮಗಳೊಂದಿಗೆ ಮಾತನಾಡಿದ ಸಚಿವರು, ಯತ್ನಾಳ್ ಅವರು ನನ್ನ ಹೆಸರು ನಿರ್ದಿಷ್ಟ ವಾಗಿ ತೆಗೆದುಕೊಂಡರು, ಅದಕ್ಕೆ ಸ್ಪಷ್ಟೀಕರಣ ಕೊಟ್ಟಿದ್ದೇನೆ. ಹಾಸನದ ರೇವಣ್ಣ ಇರಬಹುದು, ಪ್ರಜ್ವಲ್ ರೇವಣ್ಣ ಇರಬಹುದು. ಹಾಗೇ ಮಾಜಿ ಶಾಸಕರ ಪೆನ್ ಡ್ರೈವ್ ಸೇರಿದಂತೆ ಅಶ್ಲೀಲ ಪೆನ್‌ಡ್ರೈವ್‌ಗಳನ್ನು ತಯಾರು ಮಾಡಿದ್ದಾರೆ. ಈ ಬ್ಲಾಕ್ ಮೇಲ್ ಸಂಪೂರ್ಣವಾಗಿ ಅಂತ್ಯವಾಗಬೇಕು. ಹಾಗಾಗಿ ತನಿಖೆ ಸ್ವರೂಪದ ಬಗ್ಗೆ ಗೃಹ ಸಚಿವರ ಜೊತೆಗೆ ಮಾತಾಡುತ್ತೇನೆ. ನಿವೃತ್ತ ನ್ಯಾಯಾಧೀಶರ ನೇತೃತ್ವದಲ್ಲಿ ತನಿಖೆ ಆಗಬೇಕು ಎಂದು ಒತ್ತಾಯಿಸಿದರು.

ಇತ್ತೀಚೆಗೆ ಪೆನ್‌ಡ್ರೈವ್ ಮೂಲಕ ಮನುಷ್ಯರ ತೇಜೋವಧೆ ಮಾಡುವುದು ನಡೆದಿದೆ. ರಮೇಶ್ ಜಾರಕಿಹೊಳಿ, ಹೆಚ್.ಡಿ ರೇವಣ್ಣ, ಪ್ರಜ್ವಲ್ ರೇವಣ್ಣ ಪೆನ್‌ಡ್ರೈವ್‌ಗಳ ಬಗ್ಗೆ ತಡೆಯಾಜ್ಞೆ ತಂದಿದ್ದಾರೆ. ಇದೆಲ್ಲಾ ಸೇರಿದರೆ 48 ಜನರ ಪೆನ್‌ಡ್ರೈವ್ ತಯಾರು ಮಾಡಿದ್ದಾರೆ. ಎಸ್‌ಐಟಿ ಎಲ್ಲಾ ಮಾಮೂಲಾಗಿದೆ, ಈ ರೀತಿ ಬ್ಲ್ಯಾಕ್‌ಮೇಲ್ ಸಂಸ್ಕೃತಿ ಅಂತ್ಯವಾಗಬೇಕಾದರೆ ಉನ್ನತ ಮಟ್ಟದ ತನಿಖೆಯಾಗಿ ಅಪಾದಿತರ ಮೇಲೆ ಕ್ರಮ ಆಗಬೇಕು ಎಂದು ಆಗ್ರಹಿಸಿದರು.

ಎಸ್‌ಐಟಿಯಿಂದ ಅಸಾಧ್ಯ; ಸಿಬಿಐಗೆ ನೀಡಲಿ

ವಿಚಾರ ಪ್ರಸ್ತಾಪ ಮಾಡಿದ್ದಾರೆ. ಸಚಿವ ಸತೀಶ್ ಜಾರಕಿಹೊಳಿ ಅವರೂ ಹನಿಟ್ರ್ಯಾಪ್ ಪುಷ್ಠೀಕರಿಸುವ ಹೇಳಿಕೆ ನೀಡಿದ್ದರು. ಇದೀಗ ಸ್ವತಃ ಕೆ.ಎನ್.ರಾಜಣ್ಣ ಹನಿಟ್ರ್ಯಾಪ್ ಬಗ್ಗೆ ಸದನದಲ್ಲಿ ಹೇಳಿಕೆ ಕೊಟ್ಟಿದ್ದಾರೆ. ಅಲ್ಲದೆ ತಾನೇ ಸ್ವತಃ ದೂರು ಕೊಡುತ್ತೇನೆ ಎಂದಿದ್ದಾರೆ. ಇದರ ಆಧಾರದ ಮೇಲೆ ಗೃಹ ಸಚಿವರು ಹೇಳಿಕೆ ನೀಡಿದ್ದು, ಪಕ್ಷಾತೀತವಾಗಿ ಸದನದಲ್ಲಿ ವಿಚಾರ ಪ್ರಸ್ತಾಪ ಆಗಿದೆ. ಸದನದ ಒಳಗಡೆ, ಹಿಂದೆಂದೂ ಇಂತಹ ಚರ್ಚೆ ಆಗಿಲ್ಲ. ಹನಿಟ್ರ್ಯಾಪ್ ಬಗ್ಗೆ ಸಿಬಿಐ ತನಿಖೆ ಆಗಲಿ. ಎಸ್‌ಐಟಿಯಿಂದ ಇದರ ತನಿಖೆ ಅಸಾಧ್ಯ ಎಂದರು. ಇದರ ಹಿಂದೆ ಯಾರು ಇದ್ದಾರೆ ಎಂಬುದನ್ನು ರಾಜಣ್ಣ ತಿಳಿಸಬೇಕು. ಚರ್ಚೆಗಳ ಬಗ್ಗೆ ನಾನು ಉಲ್ಲೇಖ ಮಾಡಲ್ಲ ಎಂದು ಇದೇ ಸಂದರ್ಭದಲ್ಲಿ ಹೇಳಿದರು.

ರೇಪ್ ಕೇಸ್ ಹಾಕಿಸಿದ್ದು ಡಿಸಿಎಂ ಡಿಕೆಶಿ

ರಾಜೀ ನಾಮೆ ಕೊಟ್ಟರೆ ರೇಪ್ ಕೇಸ್ ಹಾಕಲ್ಲ ಎಂದು ಡಿವೈಎಸ್‌ಪಿ ಧರ್ಮೇಂದ್ರ ನೇರ ವಾಗಿ ನನಗೆ ಹೇಳಿದ್ದಾರೆ. ಡಿ.ಕೆ.ಶಿವ ಕುಮಾರ್ ಹಾಗೂ ಡಿ.ಕೆ.ಸುರೇಶ್ ಸೇರಿ ನನ್ನ ಮೇಲೆ ಸಿಬಿಐ ತನಿಖೆ ಮಾಡಿಸಿ ರೇಪ್ ಕೇಸ್ ಹಾಕಿಸಿದ್ದರು ಎಂದು ಸ್ಫೋಟಕ ಹೇಳಿಕೆ ನೀಡಿದರು.

ನಾನು ರೇಪ್ ಮಾಡಿದ್ದರೆ ಸರ್ವ ನಾಶ ಆಗ್ತೀನಿ: ನನಗೆ ಮೊಟ್ಟೆ ಹೊಡೆಯಲು, ಮಸಿ ಬಳಿಯಲು ಹೀಗೆ ಎಲ್ಲ ದಕ್ಕೂ ರೇಟ್ ಫಿಕ್ಸ್ ಮಾಡಿದ್ದಾರೆ. ಲೋಕಸಭೆ ಚುನಾವಣೆ ಮುಗಿದ ನಂತರ ಈ ರೀತಿ ಟಾರ್ಗೆಟ್ ಮಾಡಿದ್ದಾರೆ. ರಮೇಶ್ ಜಾರಕಿಹೊಳಿ, ರೇವಣ್ಣ, ಸೂರಜ್ ರೇವಣ್ಣ ಎಲ್ಲಾ ಆಯ್ತು ಈಗ ರಾಜಣ್ಣ ಅವರನ್ನು ಡಿಕಶಿ ಟಾರ್ಗೆಟ್ ಮಾಡಿದ್ದಾರೆ. ಡಿಕೆಶಿ ಮಹಾ ಪಾಪದ ಕೆಲಸ ಮಾಡಿ ದ್ದಾರೆ. ನೀವು ಮಾಡಿದ ಪಾಪ ನಿಮ್ಮನ್ನು ಬಿಡಲ್ಲ. ನಿಮ್ಮ ಕುಟುಂಬ ಬೆಳೆಯ ಬೇಕು, ನೀವು ಇನ್ನೂ ಮುಂದೆ ಇಂತಹ ನೀಚ ಕೆಲಸ ಮಾಡಬಾರದು. ನಾನು ರೇಪ್ ಮಾಡಿದ್ದರೆ ಸರ್ವನಾಶ ಆಗುತ್ತೇನೆ. ನಾನು ಹುಳ ಬಿದ್ದು ಸಾಯಬೇಕು. ಇಲ್ಲ ಅಂದರೆ ನೀವು ಹುಳ ಬಿದ್ದು ಸಾಯುತ್ತೀರಾ ಎಂದು ಕಿಡಿಕಾರಿದರು. ನಾನು ಆತ್ಮಹತ್ಯೆ ಮಾಡಿಕೊಳ್ಳಬೇಕು. ಇಲ್ಲ ನನ್ನ ಕೊಲೆ ಮಾಡುತ್ತಾರೆ. ಡಿಕೆಶಿ, ನಿಮ್ಮ ಬಳಿ 20 ರೂ. ಇಲ್ಲದಾಗಲೂ ನಿಮ್ಮನ್ನು ನೋಡಿದವರು ರಾಜಣ್ಣ. ದೇವರು ನಿಮ್ಮನ್ನು ಈ ಮಟ್ಟಕ್ಕೆ ತಂದಿದ್ದಾನೆ. ಆದರೆ ನೀವು ಇಂತಹ ಕೀಳು ಮಟ್ಟಕ್ಕೆ ಹೋಗಬಾರದು. ಇದು ಡಿಕೆ ಶಿವಕುಮಾರ್ ಹನಿಟ್ರ್ಯಾಪ್ ಟೀಂ, ರಾತ್ರಿ 2 ಗಂಟೆಗೆ ಹನಿಟ್ರ್ಯಾಪ್ ಟೀಂ ಜೊತೆ ಸಭೆ ಮಾಡ್ತಾರೆ ಎಂದು ಹೇಳಿದರು.

ಮರ್ಯಾದೆಯಿಂದ ಇದ್ದರೆ ಕ್ಷೇಮ...!

ದ್ವೇಷ ರಾಜಕಾರಣ ಎಂಬುದು ಅವರ ಡಿಎನ್‌ಎನಲ್ಲಿದೆ, ಕೇತಗಾನಹಳ್ಳಿ ಜಮೀನು ವಿಚಾರವಾಗಿ ಕೇಸ್ ದಾಖಲಿಸಿರುವುದು ಸಾಮಾಜಿಕ ಕಾರ್ಯಕರ್ತ ಎಸ್.ಆರ್.ಹಿರೇಮಠ್, ಕೋರ್ಟ್ ಆದೇಶದಂತೆ ಅಧಿಕಾರಿಗಳು ಸರ್ವೆ ಮಾಡಿದ್ದಾರೆ, ಇದರಲ್ಲಿ ನಾವು ಹೇಗೆ ದ್ವೇಷ ರಾಜಕಾರಣ ಮಾಡಿದಂತಾಗುತ್ತದೆ.

ಒತ್ತುವರಿ ಪ್ರಕರಣವನ್ನು ನ್ಯಾಯಾಲಯದಲ್ಲಿ ನಾವು ದಾಖಲಿಸಿದ್ದೇವಾ, ಹಿರೇಮಠ್ ದಾಖಲಿಸಿದ್ದಾರೆ. ಅವರು ನನ್ನ ಮೇಲೂ ಅನೇಕ ಕೇಸ್ ದಾಖಲಿಸಿದ್ದರು. ಅವರ ಅರ್ಜಿ ಮೇರೆಗೆ ನ್ಯಾಯಾಲಯ ಅಧಿಕಾರಿಗಳಿಗೆ ನಿರ್ದೇಶನ ನೀಡಿದ್ದು, ಅಧಿಕಾರಿಗಳು ಕೋರ್ಟ್ ಆದೇಶದಂತೆ ಕೆಲಸ ಮಾಡುತ್ತಿದ್ದಾರೆ, ಇದರಲ್ಲಿ ದ್ವೇಷದ ರಾಜಕಾರಣ ಏನಿದೆ ಎಂದು ಪ್ರಶ್ನಿಸಿದರು. ರಾಮನಗರ ಜಿಲ್ಲೆ ಮರುನಾಮಕರಣ ಮಾಡಬಾರದೆಂದು ಕೇಂದ್ರದ ಮೇಲೆ ಒತ್ತಡ ಹಾಕಿದ್ದಾರೆ, ನಮಗೂ ಕಾನೂನು ಗೊತ್ತಿದೆ. ನಾವು ಯಾರನ್ನೂ ಕೇಳುವ ಅಗತ್ಯವಿಲ್ಲ. ನಾವು ಮಾಹಿತಿ ನೀಡುವಂತೆ ಕೇಳಿ ಪ್ರಸ್ತಾವನೆ ಕಳುಹಿಸಿದ್ದೇವೆ. ದೆಹಲಿಯಲ್ಲಿರುವ ಕೆಲವು ಮಂತ್ರಿಗಳು ಈ ವಿಚಾರದಲ್ಲಿ ಷಡ್ಯಂತ್ರ ನಡೆಸಿದ್ದಾರೆ, ನಾವು ಅದಕ್ಕೆಲ್ಲ ಜಗ್ಗುವುದಿಲ್ಲ ಎಂದರು.

ಯೋಜನೆಗಳ ಪ್ರಸ್ತಾಪ

ಆಸ್ತಿ ತೆರಿಗೆಯಿಂದ 252.60 ಕೋಟಿ ಸಂಗ್ರಹವಾಗಲಿದೆ ಎಂದು ನಿರೀಕ್ಷೆ ಇಟ್ಟುಕೊಳ್ಳಲಾಗಿದೆ. ನೀರು ಸರಬರಾಜು ಮತ್ತು ಒಳ ಚರಂಡಿ ನಿರ್ವಹಣಾ ಶುಲ್ಕವಾಗಿ 98.51 ಕೋಟಿ ಸಂಗ್ರಹಿಸುವ ಗುರಿ ಹೊಂದಲಾಗಿದೆ. ಇದಲ್ಲದೆ ಕಟ್ಟಡ ಪರವಾನಗಿ ಶುಲ್ಕ ನೆಲ ಬಾಡಿಗೆ, ರಸ್ತೆ ಅಗೆತ ಶುಲ್ಕ, ನೀರಿನ ಸಂಪರ್ಕ ಶುಲ್ಕ ಸೇರಿದಂತೆ ಇತರೆ ಮೂಲಗಳಿಂದ 15.73 ಕೋಟಿ ಜಮೆ ಆಗಲಿದೆ ಎಂದು ನಿರೀಕ್ಷೆ ಇಟ್ಟುಕೊಳ್ಳಲಾಗಿದೆ ಎಂದು ಹೇಳಿದರು.

ಉದ್ದಿಮೆ ಪರವಾನಗಿಯಿಂದ 6 ಕೋಟಿ, ಕಮರ್ಷಿಯಲ್ ಕಾಂಪ್ಲೆಕ್ಸ್ ಹಾಗೂ ಗರುಡ ಮಾಲ್ ನೆಲಗುತ್ತಿಗೆ ಬಾಡಿಗೆಯಿಂದ 3.09 ಕೋಟಿ ನಗರ ಪಾಲಿಕೆ ಖಜಾನೆ ತುಂಬಲಿದೆ ಎಂದು ಲೆಕ್ಕ ಮಾಡಲಾಗಿದೆ ಎಂದು ಹೇಳಿದರು. ಈ ಸಾಲಿನಲ್ಲಿ ಹೊರ ಗುತ್ತಿಗೆ ಪೌರಕಾರ್ಮಿಕರ ವೇತನ, ವಿಶೇಷ ನೇಮಕಾತಿಯಾಗುವ ಪೌರ ಕಾರ್ಮಿಕರ ವೇತನಕ್ಕಾಗಿ ಕೇಂದ್ರ ಹಾಗೂ ರಾಜ್ಯ ಸರ್ಕಾರದಿಂದ 35.03 ಕೋಟಿ ಬರಲಿದೆ ಎಂದು ನಿಗದಿ ಮಾಡಲಾಗಿದೆ ಎಂದು ರಮೇಶ್ ತಿಳಿಸಿದರು.

36 ಪೈಸೆ ಹೆಚ್ಚಳ

ಹೊರೆಯನ್ನು ಗ್ರಾಹಕರ ಮೇಲೆ ಹಾಕಿ ಆದೇಶ ಹೊರಡಿಸಿದೆ. ಗ್ರಾಹಕರು ಬಳಸುವ ಪ್ರತಿ ಯೂನಿಟ್ ವಿದ್ಯುತ್ ಮೇಲೆ 2025–26ನೇ ಸಾಲಿಗೆ 36 ಪೈಸೆ, 2026–27ರಲ್ಲಿ 35 ಪೈಸೆ, 2027–28ರಲ್ಲಿ ಪ್ರತಿ ಯೂನಿಟ್‌ಗೆ 34 ಪೈಸೆಯನ್ನು ಹೆಚ್ಚುವರಿಯಾಗಿ ವಿಧಿಸಲು ಆಯೋಗ ಸಮ್ಮತಿಸಿದೆ.

ಇಲಾಖಾ ನೌಕರರಿಗೆ ನೀಡಬೇಕಾದ ಸೌಲತ್ತುಗಳ ಬಾಬ್ತನ್ನು ಸರ್ಕಾರ ನೀಡದಿರುವುದರಿಂದ ಈ ಹೊರೆ ಬಳಕೆದಾರರ ಮೇಲೆ ಬಿದ್ದಿದೆ. ದರ ಹೆಚ್ಚಳದಿಂದ ಮುಂದಿನ ಮೂರು ವರ್ಷಗಳಲ್ಲಿ 8,519.55 ಕೋಟಿ ರೂ. ಸಂಗ್ರಹವಾಗಲಿದೆ ಎಂದು ಆಯೋಗ ತಿಳಿಸಿದೆ. ಆಯೋಗದ ನಿರ್ಧಾರವನ್ನು ಸರ್ಕಾರ ಸ್ವಾಗತಿಸಿದ್ದು ದರ ಹೆಚ್ಚಳ ಬಡವರ ಮೇಲೆ ಯಾವುದೇ ಪರಿಣಾಮ ಬೀರುವುದಿಲ್ಲ ಎಂದಿದೆ. ಗೃಹಜ್ಯೋತಿ ಯೋಜನೆಯಡಿ ಎಲ್ಲಾ ಗ್ರಾಹಕರಿಗೂ 200 ಯೂನಿಟ್ ವರೆಗೆ ಉಚಿತ ವಿದ್ಯುತ್ ನೀಡಿರುವುದರಿಂದ ಅದರ ಮಿತಿಯಲ್ಲೇ ಇದ್ದರೆ, ದರ ಹೆಚ್ಚಳದ ಹೊರೆ ಬರುವುದಿಲ್ಲ.

ದರ ಹೆಚ್ಚಳ ಮಾಡುವುದರಿಂದ ಉಳ್ಳವರಿಗೆ ಯಾವುದೇ ಹೆಚ್ಚಿನ ಭಾರ ಆಗುವುದಿಲ್ಲ ಎಂದು ಸರ್ಕಾರ ಸಮರ್ಥಿಸಿಕೊಂಡಿದೆ. ಸರ್ಕಾರದ ನಿರ್ಧಾರವನ್ನು ರಾಜ್ಯ ಬಿಜೆಪಿ ಕಟುವಾಗಿ ಟೀಕಿಸಿ, ಗ್ಯಾರಂಟಿ ಯೋಜನೆಗಳನ್ನು ತಂದು ಜನರಿಂದ ಈ ಹಣವನ್ನು ಬೇರೆ ರೂಪದಲ್ಲಿ ವಸೂಲಿ ಮಾಡುತ್ತಿದೆ ಎಂದಿದೆ.

ಸುಸಜ್ಜಿತ ಪಾರ್ಕಿಂಗ್ ವ್ಯವಸ್ಥೆ

ದಟ್ಟಣೆ ಹೆಚ್ಚಾಗುತ್ತಿದ್ದು, ಸುಗಮ ಸಂಚಾರಕ್ಕೆ ಅನುಕೂಲವಾಗಲು ವಾಹನಗಳ ಪಾರ್ಕಿಂಗ್ ವ್ಯವಸ್ಥೆ ಕಲ್ಪಿಸುವುದು ಅವಶ್ಯವಾಗಿದೆ. ಈ ಹಿನ್ನೆಲೆ ಪುರಭವನದ ಬೇಸ್‌ಮೆಂಟ್‌ನಲ್ಲಿರುವ ಪಾರ್ಕಿಂಗ್ ಜೊತೆಗೆ ದೇವರಾಜ ಅರಸ್ ರಸ್ತೆಯಲ್ಲಿ ಪಿಪಿಪಿ ಅಡಿಯಲ್ಲಿ ಸುಸಜ್ಜಿತ ಪಾರ್ಕಿಂಗ್ ವ್ಯವಸ್ಥೆ ಕಲ್ಪಿಸಲು ಉದ್ದೇಶಿಸಲಾಗಿದೆ ಎಂದು ರಮೇಶ್ ತಿಳಿಸಿದರು.

ಡಾಂಬರ್ ಬದಲು ಕಾಂಕ್ರೀಟ್ ರಸ್ತೆ: ಮಹಾತ್ಮ ಗಾಂಧಿ ನಗರ ವಿಕಾಸ ಯೋಜನೆ– 2.0 ನಡಿ ನಗರ ಪಾಲಿಕೆಗೆ 250 ಕೋಟಿ ಅನುದಾನವನ್ನು ನ್ಯಾಷನಲ್ ಹೌಸಿಂಗ್ ಬ್ಯಾಂಕ್‌ನಿಂದ ಪಡೆದ ಸಾಲದಲ್ಲಿ ಮೂರು ವರ್ಷದ ಅವಧಿಗೆ ಹಂತ ಹಂತವಾಗಿ ಹಣ ಬಿಡುಗಡೆಯಾಗಿದೆ. ಈಗ ಈ ಯೋಜನೆಯಲ್ಲಿ ನಗರದ ಪ್ರಮುಖ ಭಾಗಗಳಲ್ಲಿ ಯುಟಿಲಿಟಿ ಡಕ್ಟ್ ಒಳಗೊಂಡ ಬಿಟಮಿನ್ ಅಂಡ್ ಕಾಂಕ್ರೀಟ್ ರಸ್ತೆಗಳನ್ನು ನಿರ್ಮಿಸಲು ಯೋಜಿಸಲಾಗಿದೆ ಎಂದರು.

ರಸ್ತೆಗಳ ಪಕ್ಕದಲ್ಲಿ ಯುಟಿಲಿಟಿ ಕಾರಿಡಾರ್ ಇರುವುದರಿಂದ ಫೈಬರ್ ಕೇಬಲ್, ಒಳಚರಂಡಿ ಕೊಳವೆ ಮಾರ್ಗ, ಭೂಗತ ವಿದ್ಯುತ್ ಕೇಬಲ್ ಹಾಗೂ ಇತರೆ ಭೂಗತ ಉಪಕರಣಗಳನ್ನು ಅಳವಡಿಸಲು ಸುಲಭವಾಗುತ್ತದೆ. ಜೊತೆಗೆ ನಿರ್ವಹಣೆ ಕೂಡ ಸುಲಭವಾಗಲಿದೆ ಎಂದು ರಮೇಶ್ ಈ ಯೋಜನೆ ಬಗ್ಗೆ ವಿವರಣೆ ನೀಡಿದರು.

ರಾಜ್ಯ ಸರ್ಕಾರದ ಆದೇಶದಂತೆ ಪ್ರತಿ ವಾರ್ಡ್‌ನಲ್ಲಿ ಬಿ ಖಾತಾ ಮತ್ತು ಇ–ಖಾತಾ ಅಭಿಯಾನ ಆರಂಭಿಸಲಾಗಿದೆ. ಅವಶ್ಯಕ ದಾಖಲಾತಿ ನೀಡಿದರೆ ಒಂದು ವಾರದಲ್ಲಿ ಇ–ಖಾತಾ ನೀಡಲಾಗುವುದು. ಸಾರ್ವಜನಿಕರಿಗೆ ನಿಗದಿತ ಅವಧಿಯಲ್ಲಿ ಸೇವೆ ಒದಗಿಸಲು ಕಂದಾಯ ಸೇವೆಗಳನ್ನು ವಿಕೇಂದ್ರೀಕರಣ ಮಾಡಲಾಗುತ್ತದೆ ಎಂದರು.

ಮರ್ಯಾದೆಗೇಡಿ, ಕಿಡಿಗೇಡಿ...

ಇದೂ ಒಂದು ಬದುಕೇ... ರಾಜಕೀಯ ವಿರೋಧಿಗಳನ್ನು ಹತ್ತಿಕ್ಕಲು ಕ್ರಿಮಿನಲ್ ಕೃತ್ಯಗಳಲ್ಲಿ ತೊಡಗಿರುವ ವಿಷಸರ್ಪ ನನ್ನಡೆಗೆ ನಾಲಿಗೆ ಚಾಚಿದೆ! ಇಂಥ ಕ್ರಿಮಿನಲ್ ಒಬ್ಬ ಕೆಟ್ಟ ಅಲೋಚನೆಗಳಲ್ಲಿ ದಿನಪೂರ್ತಿ ಮುಳುಗಿರುವುದು ಸಹಜ. ಕ್ರಿಮಿನಲ್‌ನ ಚಾಳಿಯೇ ಧಮ್ಕಿ ಹಾಕುವುದು. ವಿಷ ಕ್ರಿಮಿಯ ಕೆಲಸ ಎಲ್ಲರನ್ನೂ ಕಚ್ಚುವುದು.. ಇದರಲ್ಲಿ ನನಗೇನೂ ಅಚ್ಚರಿ ಇಲ್ಲ ಎಂದು ತಿರುಗೇಟು ಕೊಟ್ಟಿದ್ದಾರೆ. ನಾನು ಭೂ ಒತ್ತುವರಿ ಮಾಡಿದ್ದೇನೋ ಇಲ್ಲವೋ ಕಾನೂನು ವ್ಯಾಪ್ತಿ ಯಲ್ಲಿ ತೀರ್ಮಾನವಾಗುತ್ತದೆ. ಈಗ ನನ್ನ ಮರ್ಯಾದೆ ವಿಷಯ ಇರಲಿ, ಇವತ್ತು ಸ್ವಪಕ್ಷೀಯರೇ ಈ ಮರ್ಯಾದೆ ಗೇಡಿಯ ಮಾನವನ್ನು ವಿಧಾನ ಸೌಧದಲ್ಲಿಯೇ ಹರಾಜು ಹಾಕಿದ್ದಾರೆ! ಅದಕ್ಕೆ ಉತ್ತರ ವೇನು? ಎಂದು ಪ್ರಶ್ನೆ ಮಾಡಿದ್ದಾರೆ.

ಬಿಇಎಲ್ ಉದ್ಯೋಗಿ ಬಂಧನ

ಬಿಇಎಲ್‌ನಲ್ಲಿ ಕೆಲಸ ಮಾಡುತ್ತಿದ್ದ ದೀಪ್ ರಾಜ್ ಚಂದ್ರ ಮೂಲತಃ ಉತ್ತರಪ್ರದೇಶದ ಗಾಜಿಯಾಬಾದ್ ನಿವಾಸಿ. ಈತ ಬಿಇಎಲ್‌ನ ಪ್ರಾಡಕ್ಟ್ ಡೆವಲಪ್ಮೆಂಟ್ ಅಂಡ್ ಇನ್ನೋವೇಶನ್ ಸೆಂಟರ್ ವಿಭಾಗದಲ್ಲಿ ಕೆಲಸ ಮಾಡುತ್ತಿದ್ದ. ಬೆಂಗಳೂರಿನ ಮತ್ತಿಕೆರೆ ಬಳಿ ನೆಲೆಸಿದ್ದ. ಈತ ಬಿಇಎಲ್‌ನಿಂದ ರಕ್ಷಣಾ ವಿಚಾರಗಳನ್ನು ಪಾಕಿಸ್ತಾನಕ್ಕೆ ರವಾನಿಸುತ್ತಿದ್ದ ಎಂಬ ಆರೋಪವಿದೆ.

ನಿವಾಸ ಸಂಗ್ರಹಾಲಯ ಮೇಲ್ದರ್ಜೆಗೆ

ತಡೆಗಟ್ಟಲು ನೀರು ಸರಬ ರಾಜು ಕೊಳವೆ ಜಾಲದ ಪ್ರಮುಖ ಬಿಂದು ಗಳಲ್ಲಿ ನೀರಿನ ಹರಿವಿನ ಪ್ರಮಾಣ ಅಳತೆ ಮಾಡು ವುದು ಅತ್ಯವಶ್ಯವಾಗಿದೆ. ಈ ಹಿನ್ನೆಲೆ ಕೇಂದ್ರ ಸರ್ಕಾರದ ಅಮೃತ್ ಪ್ರೋತ್ಸಾಹ ಯೋಜನೆಯಲ್ಲಿ 44 ವಾಟರ್ ಬಲ್ಕ್ ಫ್ಲೋ ಮೀಟರ್ ಅಳವಡಿಸ ಲಾಗುವುದು ಎಂದು ರಮೇಶ್ ಮಾಹಿತಿ ನೀಡಿದರು.

ತ್ಯಾಜ್ಯ ವಿಲೇವಾರಿ: ನಗರದಲ್ಲಿ ಶೀಘ್ರವಾಗಿ ಪಾರಂಪರಿಕ ತ್ಯಾಜ್ಯವನ್ನು ವಿಲೇವಾರಿ ಮಾಡಿ ತ್ಯಾಜ್ಯವಿರುವ ಸ್ಥಳವನ್ನು ವೇಸ್ಟ್ ಟು ಎನರ್ಜಿ ಯೋಜನೆಗೆ ಭಾರತ್ ಪೆಟ್ರೋಲಿಯಂ ಕಾರ್ಪೋರೇಷನ್ ಗೆ ವಹಿಸಲಾಗುತ್ತಿದೆ ಎಂದರು.

ಟ್ರಾನ್ಸ್ ಫರ್ ಘಟಕ ನಿರ್ಮಾಣ: ಪ್ರತಿದಿನ ಸುಮಾರು 535 ಟಿಪಿಡಿ ಘನತ್ಯಾಜ್ಯ ಉತ್ಪತ್ತಿಯಾಗುತ್ತಿದ್ದು, ಪ್ರತಿ ವಲಯ ಕಚೇರಿಯಲ್ಲಿ ದ್ವಿತೀಯ ಹಂತದ ತ್ಯಾಜ್ಯ ವಿಲೇವಾರಿಗೆ ಪ್ರಸ್ತುತ 3 ಕಾಂಪ್ಯಾಕ್ಟರ್ ವಾಹನ ಬಳಸಲಾಗುತ್ತಿದೆ. ಕಡಿಮೆ ಸಮಯದಲ್ಲಿ ತ್ಯಾಜ್ಯ ಸಂಗ್ರಹಣೆಯ ಸಾಮರ್ಥ್ಯ ಹೆಚ್ಚಿಸಲು 9.90 ಕೋಟಿಯಲ್ಲಿ 16 ಕ್ಯೂಮೀಟರ್ ಸಾಮರ್ಥ್ಯದ 3 ಟ್ರಾನ್ಸ್ ಫರ್ ಘಟಕ ನಿರ್ಮಾಣ ಮಾಡಲು ಉದ್ದೇಶಿಸಲಾಗಿದೆ ಎಂದು ತಿಳಿಸಿದರು.

ವಿಂಡ್ರೊ ಟರ್ನರ್ ಯಂತ್ರ ಖರೀದಿ: ವಿದ್ಯಾರಣ್ಯಪುರಂ ಹಾಗೂ ರಾಯನಕೆರೆ ಘನತ್ಯಾಜ್ಯ ವಿಲೇವಾರಿ ಘಟಕಗಳಲ್ಲಿ ಎಂಆರ್ ಎಫ್ (ಮೆಟೀರಿಯಲ್ ರಿಕವರಿ ಫೆಸಿಲಿಟಿ) ಅಳವಡಿಸಲಾಗುತ್ತಿದೆ. ನಗರದಲ್ಲಿ ಉತ್ಪಾದನೆಯಾಗುವ ಘನ ತ್ಯಾಜ್ಯವನ್ನು ಆಧುನಿಕ ರೀತಿಯಲ್ಲಿ ವೈಜ್ಞಾನಿಕವಾಗಿ ಸಂಸ್ಕರಿಸಲು ವಿಂಡ್ರೊ ಟರ್ನರ್ ಯಂತ್ರ ಖರೀದಿಸಲಾಗುತ್ತಿದೆ ಎಂದು ರಮೇಶ್ ಮಾಹಿತಿ ನೀಡಿದರು.

ತ್ಯಾಜ್ಯ ಸಂಸ್ಕರಣೆಗೆ ಯಂತ್ರ ಖರೀದಿ: ಮೈಸೂರು ನಗರದಲ್ಲಿ ಪ್ರತಿದಿನ 100 ರಿಂದ 150 ಟನ್ ಕಟ್ಟಡದ ತ್ಯಾಜ್ಯ ಉತ್ಪತ್ತಿಯಾಗುತ್ತಿದೆ. ಇದನ್ನು ವೈಜ್ಞಾನಿಕವಾಗಿ ಸಂಸ್ಕರಿಸಲು 11.66 ಕೋಟಿ ವೆಚ್ಚದಲ್ಲಿ ಯಂತ್ರೋಪಕರಣ ಖರೀದಿ ಮಾಡಲಾಗುತ್ತಿದೆ ಎಂದು ಹೇಳಿದರು. 45 ಡಿಸಿಲ್ಟಿಂಗ್ ಯಂತ್ರ ಮತ್ತು 22 ಜೆಟ್ಟಿಂಗ್ ಯಂತ್ರಗಳನ್ನು ಖರೀದಿ ಮಾಡಲು ನಿರ್ಧರಿಸಲಾಗಿದೆ.

ಅರ್ಹ ವಿಕಲಚೇತನರಿಗೆ ವಿವಿಧ ಯೋಜನೆಯ ಸವಲತ್ತುಗಳ ಕಲ್ಪಿಸಿ

● ಸಂಬಂಧಿಸಿದ ಅಧಿಕಾರಿಗಳಿಗೆ ಜಿಲ್ಲಾಧಿಕಾರಿ ಜಿ.ಲಕ್ಷ್ಮೀಕಾಂತರೆಡ್ಡಿ ಸಲಹೆ ● ವಿಕಲಚೇತನರ ಕುಂದು-ಕೊರತೆ ಸಭೆಯಲ್ಲಿ ಅಹವಾಲು ಸ್ವೀಕಾರ

ಮೈಸೂರು,ಮಾ.20(ಎಂಟಿವೈ)- ಸರ್ಕಾರ ವಿವಿಧ ಯೋಜನೆಗಳ ಮೂಲಕ ನೀಡುವ ಸವಲತ್ತುಗಳನ್ನು ಅರ್ಹ ವಿಕಲಚೇತನರಿಗೆ ಪಾರದರ್ಶಕವಾಗಿ ತಲುಪಿಸುವ ಕೆಲಸವನ್ನು ಅಧಿಕಾರಿಗಳು ಪ್ರಾಮಾಣಿಕವಾಗಿ ಮಾಡಬೇಕು ಎಂದು ಜಿಲ್ಲಾಧಿಕಾರಿ ಜಿ.ಲಕ್ಷ್ಮೀಕಾಂತರೆಡ್ಡಿ ಸಲಹೆ ನೀಡಿದ್ದಾರೆ.

ಮೈಸೂರು ಜಿ.ಪಂ. ಸಭಾಂಗಣದಲ್ಲಿ ಗುರುವಾರ ನಡೆದ ವಿಕಲಚೇತನರ ಕುಂದು ಕೊರತೆ ಸಭೆಯಲ್ಲಿ ವಿಕಲಚೇತನರಿಂದ ಅಹವಾಲು ಸ್ವೀಕರಿಸಿ ಮಾತನಾಡಿದ ಅವರು, ವಿಕಲಚೇತನರು ಸ್ವಾವಲಂಬಿಯಾಗಿ ಜೀವನ ನಡೆಸುವುದಕ್ಕೆ ನೆರವಾಗುವ ನಿಟ್ಟಿನಲ್ಲಿ ಸರ್ಕಾರ ವಿವಿಧ ಯೋಜನೆಗಳನ್ನು ಜಾರಿಗೆ ತಂದಿದ್ದು, ಅದರ ಸೌಲಭ್ಯ ಅರ್ಹರಿಗೆ ತಲುಪಿಸುವ ಕೆಲಸ ಆಗಬೇಕು. ಸರ್ಕಾರದಿಂದ ಸಿಗುವ ಸೌಲಭ್ಯಗಳನ್ನು ಪಾರದರ್ಶಕವಾಗಿ ತಲುಪಿಸಬೇಕು. ವಿಕಲಚೇತನರು ಯಾವುದೇ ಸಮಸ್ಯೆ ಈಡೇರಿಕೆಗೆ ಸಂಬಂಧಿಸಿದಂತೆ ಸಲ್ಲಿಸುವ ಅರ್ಜಿಗಳನ್ನು ಗಂಭೀರವಾಗಿ ಪರಿಗಣಿಸಿ, ಅವುಗಳ ಇತ್ಯರ್ಥಕ್ಕೆ ಪ್ರಾಮಾಣಿಕ ಪ್ರಯತ್ನ ಮಾಡಬೇಕು. ಸಾಧ್ಯವಾದಷ್ಟು ಸಮಸ್ಯೆಗಳನ್ನು ಸ್ಥಳದಲ್ಲೇ ಬಗೆಹರಿಸುವ ನಿಟ್ಟಿನಲ್ಲಿ ಕ್ರಮ ಕೈಗೊಳ್ಳಬೇಕು ಎಂದರು.

ಇದೇ ವೇಳೆ ಕೆಲವು ವಿಕಲಚೇತನರು ದೂರು ನೀಡಿ, ಸಾರಿಗೆ ಸಂಸ್ಥೆ ಬಸ್‌ಗಳಲ್ಲಿ ವಿಕಲಚೇತನರಿಗೆ ಮೀಸಲು ಇರುವ ಆಸನಗಳ ಸಾಮಾನ್ಯರು ಆಕ್ರಮಿಸಿಕೊಂಡಿರುತ್ತಾರೆ. ಮೀಸಲು ಆಸನಗಳ ಕಡ್ಡಾಯಗೊಳಿಸುವಂತೆ ಮನವಿ ಮಾಡಿದರು.



ಮೈಸೂರು ಜಿ.ಪಂ. ಸಭಾಂಗಣದಲ್ಲಿ ಜಿಲ್ಲಾಧಿಕಾರಿ ಜಿ.ಲಕ್ಷ್ಮೀಕಾಂತರೆಡ್ಡಿ ವಿಕಲಚೇತನರ ಕುಂದುಕೊರತೆ ಸಭೆ ನಡೆಸಿ, ಸಮಸ್ಯೆ ಆಲಿಸಿದರು. ಚಿತ್ರದಲ್ಲಿ ಜಿ.ಪಂ ಸಿಇಓ ಎಸ್.ಯುಕೇಶ್‌ಕುಮಾರ್ ಅವರನ್ನು ಕಾಣಬಹುದು.

“ ಮೈಸೂರು ಜಿಲ್ಲೆಯಲ್ಲಿ ಮಾಸಾಶನ ಬರದೆ ಇರುವವರ ಪಟ್ಟಿ ಮಾಡಿ, ಅವರಿಗೆ ಮಾಸಾಶನ ತ್ವರಿತಗತಿಯಲ್ಲಿ ಬಿಡುಗಡೆ ಮಾಡಲು ಕ್ರಮ ಕೈಗೊಳ್ಳಬೇಕು. ವಿಶೇಷಚೇತನರು ಮನೆ ನಿರ್ಮಿಸಿಕೊಡುವಂತೆ ಈಗಾಗಲೇ ಅರ್ಜಿ ಸಲ್ಲಿಸಿದ್ದಾರೆ. ಈ ನಿಟ್ಟಿನಲ್ಲಿ ವಿಕಲಚೇತನರಿಗೆ ವಸತಿ ಸೌಲಭ್ಯ ಕಲ್ಪಿಸಲು ಅಗತ್ಯ ಜಮೀನು ಗುರುತಿಸುವಂತೆ ಮೈಸೂರು ತಹಶೀಲ್ದಾರ್ ಮಹೇಶ್ ಅವರಿಗೆ ಜಿಲ್ಲಾಧಿಕಾರಿಗಳು ಸೂಚನೆ ನೀಡಿದರು.

ಇದಕ್ಕೆ ಪ್ರತಿಕ್ರಿಯಿಸಿದ ಜಿಲ್ಲಾಧಿಕಾರಿಗಳು ಸಾರಿಗೆ ಸಂಸ್ಥೆಯ ಬಸ್‌ಗಳಲ್ಲಿ ಮೀಸಲಿಟ್ಟಿರುವ ಆಸನಗಳ ವಿಕಲಚೇತನರಿಗೆ ಕಲ್ಪಿಸಿಕೊಡುವುದಕ್ಕೆ ಸಾರಿಗೆ ಸಂಸ್ಥೆಯ ವಿಭಾಗೀಯ ನಿಯಂತ್ರಣಾಧಿಕಾರಿಗಳಿಗೆ ಸೂಚನೆ ನೀಡಲಾಗುವುದು. ಬಸ್‌ಗಳಲ್ಲಿ ವಿಕಲಚೇತನರ ಮೀಸಲು ಆಸನ ಪಡೆಯುವುದು ನಿಮ್ಮ ಹಕ್ಕು ಎಂದು ಸ್ಥೈರ್ಯ ತುಂಬಿದರು. ಸಭೆಯಲ್ಲಿ ಅರ್ಹ ವಿಕಲಚೇತನರಿಗೆ ತ್ರಿಚಕ್ರ ವಾಹನಗಳನ್ನು ನೀಡಬೇಕು. ಕೆಲವು ವಿಕಲಚೇತನರಿಗೆ ಪಿಂಚಣಿ ಹಣ 1 ವರ್ಷದಿಂದ ಬರುತ್ತಿಲ್ಲ. ವಸತಿರಹಿತರಿಗೆ ವಸತಿ ಸೌಲಭ್ಯ ಕಲ್ಪಿಸಬೇಕು. ಮೈಸೂರು ನಗರಪಾಲಿಕೆಯಲ್ಲಿ ಮೀಸಲಿರುವ ಶೇ.5ರ ಅನುದಾನ ಪೂರ್ಣ ಪ್ರಮಾಣದಲ್ಲಿ ಬಳಕೆ ಮಾಡಲು ಕ್ರಮ ಕೈಗೊಳ್ಳಬೇಕು ಎಂದು ಮನವಿ ಮಾಡಿದರು.

ಇದಕ್ಕೆ ಸ್ಪಂದಿಸಿದ ಜಿಲ್ಲಾಧಿಕಾರಿಗಳು ಸಭೆಯಲ್ಲಿ ಸಲ್ಲಿಕೆಯಾದ ಎಲ್ಲಾ ಅರ್ಜಿಗಳನ್ನು ಕೂಲಂಕಷವಾಗಿ ಪರಿಶೀಲಿಸಿ, ತ್ವರಿತಗತಿಯಲ್ಲಿ ವಿಲೇವಾರಿ ಮಾಡಲು ಕ್ರಮ ಕೈಗೊಳ್ಳಲಾಗುವುದು. ಅಲ್ಲದೆ, ಈಗಾಗಲೇ ಸ್ಥಳದಲ್ಲಿಯೇ ಕೆಲವು ಸಮಸ್ಯೆ ಬಗೆಹರಿಸಲು ಸಂಬಂಧಪಟ್ಟ ಅಧಿಕಾರಿಗಳಿಗೆ ಸೂಚನೆ ನೀಡಲಾಗಿದೆ ಎಂದರು.

ಸಭೆಯಲ್ಲಿ ಜಿ.ಪಂ ಸಿಇಓ ಎಸ್.ಯುಕೇಶ್ ಕುಮಾರ್, ಜಿಲ್ಲಾ ಅಂಗವಿಕಲರ ಕಲ್ಯಾಣಾಧಿಕಾರಿ ಕಲ್ಯಾಣ ಅಧಿಕಾರಿ ಶಂಕರ ಗೌಡ ಪಾಟೀಲ್ ಸೇರಿದಂತೆ ವಿವಿಧ ಇಲಾಖೆಗಳ ಅಧಿಕಾರಿಗಳು ಹಾಗೂ ವಿಕಲಚೇತನರು ಉಪಸ್ಥಿತರಿದ್ದರು.

ಇಬ್ಬರು ಖದೀಮರ ಬಂಧನ: 40 ಲಕ್ಷ ಮೌಲ್ಯದ 500 ಗ್ರಾಂ ಚಿನ್ನಾಭರಣ ವಶ



ಮೈಸೂರು, ಮಾ.20(ಆರ್‌ಕೆ)- ಮನೆ ಬಾಗಿಲು ಮೀಟಿ ಚಿನ್ನಾಭರಣ ಕಳವು ಮಾಡಿದ್ದ ಇಬ್ಬರು ಖದೀಮರನ್ನು ವಿಜಯನಗರ ಠಾಣೆ ಪೊಲೀಸರು ಬಂಧಿಸಿದ್ದಾರೆ.

ಬೆಂಗಳೂರಿನ ಜಯನಗರ ನಿವಾಸಿಗಳಾದ ವೆಂಕಟೇಶ್ (48) ಹಾಗೂ ರವಿ (37) ಬಂಧಿತ ಆರೋಪಿಗಳು. ಮಾ.6ರಂದು ಮೈಸೂರಿನ ವಿಜಯನಗರ 2ನೇ ಹಂತದ ರೈಲ್ವೆ ಬಡಾವಣೆಯ ಒಂದನೇ ಮೇನ್‌ನಲ್ಲಿರುವ ಶಶಿಕುಮಾರ್ ಎಂಬವರ ಮನೆ ಬಾಗಿಲು ಮೀಟಿ ಚಿನ್ನಾಭರಣ ಕಳವು ಮಾಡಿದ್ದ ಬಗ್ಗೆ ವಿಜಯನಗರ ಠಾಣೆ ಪೊಲೀಸರು ಪ್ರಕರಣ ದಾಖಲಿಸಿಕೊಂಡಿದ್ದರು. ತನಿಖೆಗಾಗಿ ರಚಿಸಲಾಗಿದ್ದ ತಂಡದ ಪೊಲೀಸರು ಮಾ.10ರಂದು ವಿಜಯನಗರ 4ನೇ ಹಂತದಲ್ಲಿ ಅನುಮಾನಾಸ್ಪದವಾಗಿ ಓಡಾಡುತ್ತಿದ್ದ ಇಬ್ಬರನ್ನು ವಶಕ್ಕೆ ಪಡೆದು ವಿಚಾರಣೆ ನಡೆಸಿದಾಗ ಎರಡು ಕಳವು ಪ್ರಕರಣದಲ್ಲಿ ಭಾಗಿಯಾಗಿರುವುದಾಗಿ ಒಪ್ಪಿಕೊಂಡಿದ್ದರು. ಆರೋಪಿಗಳಿಂದ 40 ಲಕ್ಷರೂ. ಮೌಲ್ಯದ 500 ಗ್ರಾಂ ಚಿನ್ನಾಭರಣವನ್ನು ವಶಪಡಿಸಿಕೊಳ್ಳುವಲ್ಲಿ ಪೊಲೀಸರು ಯಶಸ್ವಿಯಾಗಿದ್ದಾರೆ.

ವಿಚಾರಣೆ ನಡೆಸಿದ ಬಳಿಕ ಆರೋಪಿಗಳನ್ನು ನ್ಯಾಯಾಧೀಶರ ಮುಂದೆ ಹಾಜರುಪಡಿಸಲಾಗಿ ಮಾ.11ರಂದು ಅವರನ್ನು ನ್ಯಾಯಾಂಗ ಬಂಧನಕ್ಕೆ ಒಪ್ಪಿಸಲಾಯಿತು. ಅಪರಾಧ ಮತ್ತು ಸಂಚಾರ ವಿಭಾಗದ ಡಿಸಿಪಿ ಎಸ್.ಜಾಹ್ನವಿ ಅವರ ಮಾರ್ಗದರ್ಶನದಲ್ಲಿ ವಿಜಯನಗರ ಉಪವಿಭಾಗದ ಎಸಿಪಿ ರವಿಪ್ರಸಾದ್ ನೇತೃತ್ವದಲ್ಲಿ ವಿಜಯನಗರ ಠಾಣೆ ಇನ್‌ಸ್ಪೆಕ್ಟರ್ ಎಸ್.ಡಿ.ಸುರೇಶ್‌ಕುಮಾರ್, ಸಬ್ ಇನ್‌ಸ್ಪೆಕ್ಟರ್‌ಗಳಾದ ಕೆ.ವಿಶ್ವನಾಥ್, ಕೆ.ನಾರಾಯಣ, ಡಿ.ಕೃಷ್ಣ, ವನಜಾಕ್ಷಿ, ಆಟೋಮೇಷನ್ ಸೆಂಟರ್ ಸಬ್ ಇನ್‌ಸ್ಪೆಕ್ಟರ್ ಚಂದ್ರಶೇಖರ್, ಸಿಬ್ಬಂದಿಗಳಾದ ಎಂ.ಜೆ.ಶಂಕರ್, ಹೆಚ್.ಕೆ.ಪ್ರದೀಪ್ ಕುಮಾರ್, ಕೆ.ಎನ್.ಲೋಕೇಶ್, ಹೆಚ್.ಎಸ್.ಲೋಕೇಶ್, ಕೆ.ಎನ್.ಮಂಜುನಾಥ್, ಎನ್.ವೆಂಕಟೇಶ್, ವಜ್ರ, ಕೆ.ಎಸ್.ರಂಜಿತ, ವಿದ್ಯಾ ಕರಡಿಗುದ್ದಿ, ಎಂ.ಕೆ.ಮುರಳೀಧರ್, ರಾಘವೇಂದ್ರ, ಆರ್.ಲಿಖಿತ್, ಕುಮಾರ್, ಮಂಜು, ಶ್ಯಾಂಸುಂದರ್, ಗುರುದೇವಾರಾಧ್ಯ ಪತ್ತೆ ಕಾರ್ಯದಲ್ಲಿ ಪಾಲ್ಗೊಂಡಿದ್ದರು.

ಇಂದು ‘ಲಾ ಗೈಡ್’ ಹೆಚ್.ಎನ್.ವೆಂಕಟೇಶ್ ಹುಟ್ಟುಹಬ್ಬದ ಅಂಗವಾಗಿ ರಕ್ತದಾನ ಶಿಬಿರ



ಮೈಸೂರು,ಮಾ.20(ಜಿಎ)-‘ಲಾ ಗೈಡ್’ ಕನ್ನಡ ಕಾನೂನು ಮಾಸ ಪತ್ರಿಕೆಯ ಗೌರವ ಸಂಪಾದಕರೂ ಆದ ಹಿರಿಯ ವಕೀಲ ಹೆಚ್.ಎನ್.ವೆಂಕಟೇಶ್ ಅವರ ಹುಟ್ಟುಹಬ್ಬದ ಅಂಗವಾಗಿ ಮಾ.21ರಂದು ಶುಕ್ರವಾರ ಬೆಳಗ್ಗೆ 10ರಿಂದ ಮಧ್ಯಾಹ್ನ 3.30ರವರೆಗೆ ನಗರದ ಹಳೇ ನ್ಯಾಯಾಲಯ ಕಟ್ಟಡದ ವಕೀಲರ ಸಂಘದ ಸಭಾಂಗಣದಲ್ಲಿ ರಕ್ತದಾನ ಶಿಬಿರ ಆಯೋಜಿಸಲಾಗಿದೆ.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಸಂಘದ ಮಾಜಿ ಉಪಾಧ್ಯಕ್ಷ ಪುಟ್ಟಸಿದ್ದೇಗೌಡ, ಹೆಚ್.ಎನ್.ವೆಂಕಟೇಶ್ ಅವರ ಹುಟ್ಟುಹಬ್ಬವನ್ನು ವಿಶಿಷ್ಟವಾಗಿ ಹಾಗೂ ಸಮಾಜಮುಖಿ ಕಾರ್ಯಗಳ ಮೂಲಕ ಆಚರಿಸಬೇಕೆಂಬ ಉದ್ದೇಶದಿಂದ ರಕ್ತದಾನ ಶಿಬಿರ ಆಯೋಜಿಸಿದ್ದು, ವಕೀಲರೂ ಸೇರಿದಂತೆ ಸುಮಾರು 150 ಮಂದಿ ಪಾಲ್ಗೊಳ್ಳುವ ನಿರೀಕ್ಷೆಯಿದೆ. ಎಸ್‌ಪಿ ವಿಷ್ಣುವರ್ಧನ್, ವಕೀಲರ ಸಂಘದ ಅಧ್ಯಕ್ಷರು ಹಾಗೂ ಇನ್ನಿತರ ಪದಾಧಿಕಾರಿಗಳು ಹಾಜರಿರಲಿದ್ದಾರೆ. ಸಾರ್ವಜನಿಕರು ಸಹ ಪಾಲ್ಗೊಳ್ಳಬಹುದಾಗಿದೆ ಎಂದರು. ಸುದ್ದಿಗೋಷ್ಠಿಯಲ್ಲಿ ವಕೀಲರಾದ ಗಿರೀಶ್ ಮಾಂಬಳ್ಳಿ, ಕೆ.ಪ್ರಶಾಂತ್, ಚಂದ್ರು, ಹರ್ಷಿತ್, ಜಯಶಂಕರ್ ಅಶೋಕಪುರಂ ಉಪಸ್ಥಿತರಿದ್ದರು.

ಚಾಮುಂಡಿಬೆಟ್ಟದಲ್ಲಿ ಮಹಾಬಲೇಶ್ವರ ರಥೋತ್ಸವ



ಮೈಸೂರು, ಮಾ.20(ಎಂಕೆ)- ಮೈಸೂರಿನ ಚಾಮುಂಡಿಬೆಟ್ಟದಲ್ಲಿ ಮಹಾಬಲೇಶ್ವರ ರಥೋತ್ಸವ ಅತ್ಯಂತ ವಿಜೃಂಭಣೆಯಿಂದ ಗುರುವಾರ ನೆರವೇರಿತು.

ಬೆಳಗ್ಗೆ 7.30ರಿಂದ ಆರಂಭವಾದ ರಥೋತ್ಸವದಲ್ಲಿ ಗ್ರಾಮಸ್ಥರು ಸೇರಿದಂತೆ ಸಾವಿರಾರು ಭಕ್ತಾದಿಗಳು ಭಾಗವಹಿಸಿ, ಪೂಜಾ ವಿಧಿ ವಿಧಾನಗಳನ್ನು ಸಲ್ಲಿಸಿದರು. ಈ ವೇಳೆ ಭಕ್ತಾದಿಗಳಿಗೆ ಮಜ್ಜಿಗೆ, ಪಾನಕ ವಿತರಣೆ ಜೊತೆಗೆ ಅನ್ನ ಸಂತರ್ಪಣೆಯೂ ನಡೆಯಿತು.

ಚಾಮುಂಡೇಶ್ವರಿ ದೇವಸ್ಥಾನದ ಪ್ರಧಾನ ಅರ್ಚಕ ಡಾ.ಶಶಿ ಶೇಖರ್ ದೀಕ್ಷಿತ್, ಕುಮಾರ್ ದೀಕ್ಷಿತ್, ಮುಖಂಡರಾದ ಸಂತೋಷ್, ಎಂ.ಡಿ.ಸೋಮಣ್ಣ, ವಿಶ್ವನಾಥ್, ಗುರು, ಚರಣ್, ಶಂಭು ಲಿಂಗು, ಶಿವರಾವ್ ನಾಯಕ, ಕೆ.ಭರತ್, ಶ್ರೀಧರ್, ಶಂಭು, ನಾಗೇಂದ್ರ, ಬಸವರಾಜು ಮತ್ತಿತರರಿದ್ದರು.

ಜಿಲ್ಲಾ ಮಟ್ಟದ ಅನುಷ್ಠಾನ ಸಮಿತಿ ಸದಸ್ಯರ ನೇಮಕಕ್ಕೆ ಅರ್ಜಿ ಆಹ್ವಾನ

ಮೈಸೂರು,ಮಾ.20- ಸಮಾಜ ಕಲ್ಯಾಣ ಇಲಾಖೆ ವತಿಯಿಂದ ಮೈಸೂರು ಜಿಲ್ಲೆಯ ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡದ ಅಲೆಮಾರಿ ಅಭಿವೃದ್ಧಿ ನಿಗಮಕ್ಕೆ ಸಂಬಂಧಿಸಿದಂತೆ ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡದ ಅಲೆಮಾರಿ, ಅರೆ ಅಲೆಮಾರಿ, ಸೂಕ್ಷ್ಮ ಮತ್ತು ಅತಿ ಸೂಕ್ಷ್ಮ ಸಮುದಾಯಗಳ ಹಾಗೂ ಮೇದಾರ ಸಮುದಾಯದ ಸರ್ಕಾರದ ವಿವಿಧ ಯೋಜನೆಗಳ ಸಮರ್ಪಕ ಅನುಷ್ಠಾನಕ್ಕೆ ಜಿಲ್ಲಾ ಮಟ್ಟದ ಅನುಷ್ಠಾನ ಸಮಿತಿ ಸದಸ್ಯರನ್ನು ನೇಮಕ ಮಾಡಲು ಅರ್ಜಿ ಆಹ್ವಾನಿಸಲಾಗಿದ್ದು, ನಾಮನಿರ್ದೇಶಕ ಸದಸ್ಯರುಗಳನ್ನು ಜಿಲ್ಲಾಧಿಕಾರಿಗಳ ಅಧ್ಯಕ್ಷತೆಯಲ್ಲಿ ಆಯ್ಕೆ ಮಾಡಲಾಗುತ್ತದೆ. ಮೈಸೂರು ಜಿಲ್ಲಾ ವ್ಯಾಪ್ತಿಯಲ್ಲಿನ ಸಮುದಾಯದ ಮುಖಂಡರು ಸ್ವ ವಿವರವುಳ್ಳ ಮಾಹಿತಿಯೊಂದಿಗೆ ಏಪ್ರಿಲ್ 2ರೊಳಗಾಗಿ ಸಮಾಜ ಕಲ್ಯಾಣ ಇಲಾಖೆ ಜಂಟಿ ನಿರ್ದೇಶಕರ ಕಚೇರಿಗೆ ಅರ್ಜಿಗಳನ್ನು ಸಲ್ಲಿಸಬಹುದಾಗಿದೆ ಎಂದು ಸಮಾಜ ಕಲ್ಯಾಣ ಇಲಾಖೆ ಜಂಟಿ ನಿರ್ದೇಶಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

‘ಮಂಡ್ಯದವರು ಛತ್ರಿಗಳು...’; ಡಿಕೆಶಿ ವಿವಾದಾತ್ಮಕ ಹೇಳಿಕೆ

ಬೆಂಗಳೂರು, ಮಾ.20- ಅಧಿಕಾರಕ್ಕೆ ಸನಿಹವಾಗುತ್ತಿರುವಂತೆಲ್ಲಾ, ಡಿಸಿಎಂ ಡಿ.ಕೆ.ಶಿವಕುಮಾರ್, ವಿವಾದಗಳನ್ನು ಮೈಮೇಲೆ ಎಳೆದುಕೊಳ್ಳುತ್ತಿರುವಂತಿದೆ.

ಇತ್ತೀಚಿನ ದಿನಗಳಲ್ಲಿ ತಮ್ಮ ಹೇಳಿಕೆಗಳಿಂದಲೇ ಸುದ್ದಿಯಾಗುತ್ತಿರುವ ಡಿ.ಕೆ.ಶಿವಕುಮಾರ್ ಈಗ ಮಂಡ್ಯದ ಜನತೆಯ ವಿಷಯವಾಗಿ ಹೇಳಿಕೆ ನೀಡಿ ಯಡವಟ್ಟು ಮಾಡಿಕೊಂಡಿದ್ದಾರೆ.

ಬೆಂಗಳೂರಿನ ಅರಮನೆ ಮೈದಾನದಲ್ಲಿ ಮಾ.17ರಂದು ನಡೆದ ಯೂತ್ ಕಾಂಗ್ರೆಸ್ ಅಧ್ಯಕ್ಷರ ಪದಗ್ರಹಣ ಕಾರ್ಯ ಕ್ರಮದಲ್ಲಿ ಅವರು ಮಾತನಾಡುತ್ತಿದ್ದಾಗ ಮಂಡ್ಯದವರು ಫಲಕ ಹಾಗೂ ಬಾವುಟಗಳನ್ನು ಪ್ರದರ್ಶಿಸಿದ್ದರು. ಇದನ್ನು ಕಂಡು ಸಿಟ್ಟಾದ ಡಿ.ಕೆ.ಶಿವಕುಮಾರ್, ‘ಅದೆಲ್ಲ ಕೆಳಗಿಳಿಸಿ, ನಿಮ್ಮ ಮಂಡ್ಯದವ್ರ ಛತ್ರಿಗಳ ಆಟ ನಿಲ್ಲಿಸಿ’ ಎಂದು ಗದರಿಸಿದ್ದರು.

ಮಂಡ್ಯ ಜನತೆಗೆ ಛತ್ರಿಗಳು ಎಂಬ ಡಿ.ಕೆ.ಶಿವಕುಮಾರ್ ಹೇಳಿಕೆ ಈಗ ಜಿಲ್ಲೆಯ ಜನರನ್ನು ಕೆರಳಿಸಿದೆ. ಈ ಹೇಳಿಕೆಗೆ ಜಿಲ್ಲೆಯಲ್ಲಿ ಭಾರೀ ಆಕ್ರೋಶ ವ್ಯಕ್ತವಾಗಿದೆ.

ಜಿಲ್ಲೆಯ ಜನರಿಗೆ ಡಿ.ಕೆ.ಶಿವಕುಮಾರ್ ಅವಮಾನ ಮಾಡಿದ್ದಾರೆ. ಮಂಡ್ಯ ಜನರ ಭಿಕ್ಷೆಯಿಂದ ಕಾಂಗ್ರೆಸ್‌ಗೆ ಅಧಿಕಾರ ಸಿಕ್ಕಿದೆ. 7 ರಲ್ಲಿ 5 ಕ್ಷೇತ್ರಗಳು ಕಾಂಗ್ರೆಸ್ ಶಾಸಕರು ಆಯ್ಕೆಯಾಗಿದ್ದಾರೆ ಎಂದು ಸಾಮಾಜಿಕ ಜಾಲತಾಣಗಳಲ್ಲಿ ಡಿ.ಕೆ.ಶಿವಕುಮಾರ್ ವಿರುದ್ಧ ಜನತೆ ಆಕ್ರೋಶ ಹೊರಹಾಕಿದ್ದಾರೆ.

ಸಾಮಾಜಿಕ ಜಾಲತಾಣದಲ್ಲಿ ಮಂಡ್ಯ ಜನತೆ ಕಿಡಿ



ಇನ್ನೂ ಕೆಲವರು ಡಿಕೆ ಶಿವಕುಮಾರ್ ಅವರ ಹಳೆಯ ಹೇಳಿಕೆಯನ್ನು ಉಲ್ಲೇಖಿಸಿ, ಅಧಿಕಾರಕ್ಕಾಗಿ ಮಂಡ್ಯ ಜನರ ಬಳಿ ಬಂದು ಪೆನ್ನು, ಪೇಪರ್ ಕೊಡಿ ಎಂದು ಅಂಗಲಾಚಿದ್ದು ಮರೆತು ಹೋಯ್ತಾ ಡಿಸಿಎಂ ಸಾಹೇಬ್ರೆ? ಮಂಡ್ಯದವರು ಸಿಎಂ ಆಗಿದ್ದಾಗ ಅವರ ಕಾಲಿಗೆ ಬಿದ್ದು ಬೆಳೆದವರು ನೀವು ಎಂದು ಡಿಕೆ ಶಿವ ಕುಮಾರ್‌ಗೆ ತಿವಿದಿದ್ದಾರೆ.

ಇಂತಹ ದುರಹಂಕಾರಿಗೆ ಸರಿಯಾದ ಬುದ್ಧಿ ಕಲಿಸಬೇಕು. ಅತೀ ಹೆಚ್ಚು ಕನ್ನಡ ಮಾತನಾಡುವ ಜಿಲ್ಲೆ ಜನರಿಗೆ ಅವಮಾನ ಮಾಡಿದ್ದೀರಿ ಎಂದು ಸಾಲು ಸಾಲು ಪೋಸ್ಟ್ ಹಾಕಿ ಜನ ಆಕ್ರೋಶ ಹೊರಹಾಕಿದ್ದಾರೆ. ಡಿ.ಕೆ ಶಿವಕುಮಾರ್ ತಮ್ಮ ಹೇಳಿಕೆಗೆ ಮಂಡ್ಯ ಜನರ ಕ್ಷಮೆ ಯಾಚಿಸಬೇಕು. ಇಲ್ಲದಿದ್ದರೆ ಮಂಡ್ಯಕ್ಕೆ ಅವರು ಬಂದರೆ ಕಪ್ಪು ಬಾವುಟ ಪ್ರದರ್ಶನ ಮಾಡುತ್ತೇವೆ. ಅವರ ಹೇಳಿಕೆ ಖಂಡಿಸದೇ ಜಿಲ್ಲೆಯ ಜನರ ಪರ ನಿಲ್ಲದ ಕಾಂಗ್ರೆಸ್‌ನ ಶಾಸಕರು ಛತ್ರಿಗಳು ಎಂದು ಜಿಲ್ಲೆಯ ಜನತೆ ಕಿಡಿಕಾರಿದ್ದಾರೆ. ಈ ನಡುವೆ ಡಿಕೆಶಿ ಅವರಿಗೆ ಅಧಿಕಾರದ ಮದ ಎಂದು ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ.ವಿಜಯೇಂದ್ರ ವಾಗ್ದಾಳಿ ನಡೆಸಿದ್ದಾರೆ.

ಡಿಕೆಶಿ ಸಮರ್ಥನೆ: ಹೌದು, ನನಗೆ ಮದ ಇದೆ. ಏನೀಗ ಎಂದು ಡಿಸಿಎಂ ಡಿ.ಕೆ.ಶಿವಕುಮಾರ್ ಬಿಜೆಪಿ ರಾಜ್ಯಾಧ್ಯಕ್ಷ ಬಿವೈ ವಿಜಯೇಂದ್ರ ಅವರಿಗೆ ತಿರುಗೇಟು ನೀಡಿದ್ದಲ್ಲದೇ ತಮ್ಮ ಹೇಳಿಕೆಯನ್ನು ಸಮರ್ಥಿಸಿಕೊಂಡಿದ್ದಾರೆ.

ವಿಧಾನಸೌಧದಲ್ಲಿ ವಿಜಯೇಂದ್ರ ವಿರುದ್ಧ ಏಕವಚನದಲ್ಲೇ ಕಿಡಿಕಾರಿದ ಡಿಕೆಶಿ, ನನಗೆ ಮದ ಜಾಸ್ತಿ ಇದೆ, ನನಗೆ ಮದ ಇದ್ದರೆ ಕಡಿಮೆ ಮಾಡಲಿ. ನಾನು ಹೇಳಿರುವುದನ್ನು ಇವನು ನೋಡಿದ್ದಾನಾ. ಪ್ರೀತಿ ಪಾತ್ರರಿಗೆ ಹೇಳ್ತೀನಿ. ಅದೆಲ್ಲ ಸುಳ್ಳು, ಯಾವ ಛತ್ರಿನೂ ಇಲ್ಲ. ಛತ್ರಿ ಅಂತಾ ನಾನು ಯಾರಿಗೆ ಅಂದಿದ್ದೀನಿ? ಕಳ್ ನನ್ ಮಗ ಅಂತಾರೆ. ಸುಳ್ ನನ್ ಮಗಾ ಅಂತಾರೆ. ನನಗೆ ಬೇಕಾದವರಿಗೆ ಹೇಳುತ್ತೇನೆ ಎಂದು ಮಂಡ್ಯದವರ ಛತ್ರಿ ಬುದ್ಧಿ ಗೊತ್ತು ಎಂಬ ಹೇಳಿಕೆಯನ್ನು ಸಮರ್ಥಿಸಿಕೊಂಡಿದ್ದಾರೆ.

ಮುಡಾ ಜಾಗದಲ್ಲಿ ಅನಧಿಕೃತವಾಗಿ ನಿರ್ಮಿಸಿದ್ದ ಕಟ್ಟಡ ನೆಲಸಮ

15 ಕೋಟಿ ರೂ. ಮೌಲ್ಯದ 1.25 ಎಕರೆ ಜಾಗ ವಶಕ್ಕೆ ಪಡೆದ ಅಧಿಕಾರಿಗಳು



ಮೈಸೂರು, ಮಾ.20(ಆರ್‌ಕೆ)- ಮುಡಾ ಜಾಗದಲ್ಲಿ ಅನಧಿಕೃತವಾಗಿ ನಿರ್ಮಿಸಿದ್ದ ಕಟ್ಟಡ ನೆಲಸಮಗೊಳಿಸಿದ ಪ್ರಾಧಿಕಾರದ ಅಧಿಕಾರಿಗಳು, ಸುಮಾರು 15 ಕೋಟಿ ರೂ. ಬೆಲೆ ಬಾಳುವ 1.25 ಎಕರೆ ಆಸ್ತಿಯನ್ನು ವಶಕ್ಕೆ ಪಡೆದಿದ್ದಾರೆ.

ಮೈಸೂರು ತಾಲೂಕು, ಕಸಬಾ ಹೋಬಳಿ, ನಾಚನಹಳ್ಳಿ ಗ್ರಾಮದ ಹೆಚ್.ಡಿ. ಕೋಟೆ ರಸ್ತೆಗೆ ಹೊಂದಿಕೊಂಡಂತಿರುವ ಸರ್ವೆ ನಂಬರ್ 74ರಲ್ಲಿ 1 ಎಕರೆ 25 ಗುಂಟೆ ಜಾಗವನ್ನು 1962ರಲ್ಲಿ ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರ(ಮುಡಾ)ವು ವಸತಿ ಬಡಾವಣೆ ಉದ್ದೇಶಕ್ಕಾಗಿ ಸ್ವಾಧೀನಪಡಿಸಿಕೊಂಡಿತ್ತು.

ಸುಮಾರು 15 ಕೋಟಿ ರೂ. ಬೆಲೆ ಬಾಳುವ ಜಾಗದಲ್ಲಿ ಅನಧಿಕೃತವಾಗಿ ಕಟ್ಟಡ ನಿರ್ಮಿಸಿ ತಂತಿ ಬೇಲಿ ಅಳವಡಿಸಿಕೊಂಡಿದ್ದರು. ಇಂದು ಬೆಳಗ್ಗೆ 6 ಗಂಟೆಯಿಂದ ಕಾರ್ಯಾಚರಣೆ ನಡೆಸಿದ ಮುಡಾ ಅಧಿಕಾರಿಗಳು ಪೊಲೀಸರ ಭದ್ರತೆಯಲ್ಲಿ ಕಟ್ಟಡ ನೆಲಸಮಗೊಳಿಸಿ ಆಸ್ತಿಯನ್ನು ವಶಕ್ಕೆ ಪಡೆಯುವಲ್ಲಿ ಯಶಸ್ವಿಯಾಗಿದ್ದಾರೆ.

ಮುಡಾ ಆಯುಕ್ತ ಎ.ಎನ್.ರಘುನಂದನ್ ಅವರ ಮಾರ್ಗದರ್ಶನದಂತೆ ಸೂಪರಿಂಟೆಂಡಿಂಗ್ ಇಂಜಿನಿಯರ್ ಮುರಳೀಧರ್, ಎಕ್ಸಿಕ್ಯೂಟಿವ್ ಇಂಜಿನಿಯರ್‌ಗಳಾದ ನಾಗೇಶ, ಧರಣೇಂದ್ರಪ್ಪ, ವಿಶೇಷ ಭೂ ಸ್ವಾಧೀನಾಧಿಕಾರಿ ಮಂಜು ನಾಥ್, ವಲಯಾಧಿಕಾರಿ ಕೆ.ಆರ್. ಮಹೇಶ್, ಜೂನಿಯರ್ ಇಂಜಿನಿಯರ್ ಕಾಂತರಾಜ್ ಆಚಾರಿ ಹಾಗೂ ಇತರರು ತೆರವು ಕಾರ್ಯಾಚರಣೆಯಲ್ಲಿ ಪಾಲ್ಗೊಂಡಿದ್ದರು.

ಯಕೃತ್ತಿನ ಸಮಸ್ಯೆಗಳ ಚಿಕಿತ್ಸಾ ಶಿಬಿರ

ಮೈಸೂರು, ಮಾ. 20-ಮೈಸೂರಿನ ಲಲಿತಾದ್ರಿಪುರ ರಸ್ತೆಯಲ್ಲಿರುವ ಜೆಎಸ್‌ಎಸ್ ಆಯುರ್ವೇದ ಆಸ್ಪತ್ರೆಯಲ್ಲಿ ಮಾ.22ರಿಂದ 29ರವರೆಗೆ ಬೆಳಗ್ಗೆ 9.30ರಿಂದ 4.30 ರವರೆಗೆ ಯಕೃತ್ತಿನ ಸಮಸ್ಯೆಗಳ ಚಿಕಿತ್ಸಾ ಶಿಬಿರ ಹಮ್ಮಿಕೊಳ್ಳಲಾಗಿದೆ. ಮೈಗ್ರೇನ್ ಮತ್ತು ಯಾವುದೇ ತರಹದ ತಲೆನೋವು ಚಿಕಿತ್ಸಾ ಶಿಬಿರವನ್ನು ಮಾ.24ರಿಂದ 31 ರವರೆಗೆ ಬೆಳಗ್ಗೆ 9ರಿಂದ ಸಂಜೆ 4.30ರವರೆಗೆ ಹಮ್ಮಿಕೊಳ್ಳಲಾಗಿದೆ. ಹೆಚ್ಚಿನ ಮಾಹಿತಿಗೆ ಮೊ. 8892761694, ದೂ. 0821-2548231 ಸಂಪರ್ಕಿಸಬಹುದು.

ಕುಡಿದ ಅಮಲಿನಲ್ಲಿ ಸ್ನೇಹಿತರ ಜಗಳಕ್ಕೆ ಒಬ್ಬನ ಕೊಲೆ

ಶ್ರೀರಂಗಪಟ್ಟಣ, ಮಾ,20- ಕುಡಿದ ಅಮಲಿನಲ್ಲಿ ಸ್ನೇಹಿತರ ನಡುವೆ ನಡೆದ ಜಗಳ ವಿಕೋಪಕ್ಕೆ ತಿರುಗಿ ಓರ್ವನ ಕೊಲೆಯಲ್ಲಿ ಅಂತ್ಯಗೊಂಡ ಘಟನೆ ತಾಲೂಕಿನ ಬೆಳಗೊಳ ಗ್ರಾಮದಲ್ಲಿ ನಡೆದಿದೆ.

ಬೆಳಗೊಳ ನಿವಾಸಿ ಮೋಹನ್ ಕುಮಾರ್ (44) ಹತ್ಯೆಯಾದವನಾಗಿದ್ದು, ದೀತ ಮತ್ತು ರವಿಚಂದ್ರ ಸ್ನೇಹಿತರಾಗಿದ್ದು, ಅದೇ ಗ್ರಾಮದಲ್ಲಿರುವ ತನ್ನ ಖಾಲಿಯಿದ್ದ ಮೋಹನ್ ಅಕ್ಕನ ಮನೆಯಲ್ಲಿ ಬುಧವಾರ ರಾತ್ರಿ ಇವರಿಬ್ಬರು ಎಣ್ಣೆ ಹೊಡೆಯಲು ಆರಂಭಿಸಿದ್ದಾರೆ. ಈ ವೇಳೆ ಇಬ್ಬರ ನಡುವೆ ಗಲಾಟೆ ಆರಂಭವಾಗಿದೆ. ಅದು ವಿಕೋಪಕ್ಕೆ ತಿರುಗಿದಾಗ ಮೋಹನ್, ಮನೆಯಲ್ಲಿದ್ದ ಚಾಕುವಿನಿಂದ ರವಿಚಂದ್ರನಿಗೆ ಚುಚ್ಚಲು ಪ್ರಯತ್ನಿಸಿದನಂತೆ. ಆಗ ಆ ಚಾಕುವನ್ನೇ ಕಿತ್ತುಕೊಂಡ ರವಿಚಂದ್ರ, ಮೋಹನ್‌ನ ಕತ್ತಿನ ಭಾಗಕ್ಕೆ ಚುಚ್ಚಿದ್ದಾನೆ ಹೀಗಾಗಿ ರಕ್ತದ ಮಡುವಿನಲ್ಲಿಯೇ ಬಿದ್ದು ಮೋಹನ್ ಸಾವನ್ನಪ್ಪಿದ್ದಾನೆ ಎನ್ನಲಾಗಿದೆ.

ಕೊಲೆಯಾದ ಮೋಹನ್ ಕುಮಾರ್ ಹಾಗೂ ಆರೋಪಿ ರವಿಚಂದ್ರ ಇಬ್ಬರು ಪ್ರಾಣಸ್ನೇಹಿತರು. ಒಂದೇ ಗ್ರಾಮ, ಒಟ್ಟಿಗೆ ವಿದ್ಯಾಭ್ಯಾಸ ಕೂಡ ಮಾಡಿದವರು. ಇಬ್ಬರು ಪೇಯಿಂಟ್ ಹೊಡೆಯುವ ಕೆಲಸ ಮಾಡುತ್ತಿದ್ದರು. ಆಗಾಗ ಒಟ್ಟಿಗೆ ಕುಡಿಯುತ್ತಿದ್ದರು. ಮೋಹನನಿಗೆ ವಿವಾಹವಾಗಿದ್ದು, ಪತ್ನಿ ಬಿಟ್ಟು ಹೋಗಿರುವುದರಿಂದ ತನ್ನ ಮಗನನ್ನು ತಾಯಿಯ ಜೊತೆ ಬಿಟ್ಟು, ತಾನೊಬ್ಬನೇ ಖಾಲಿಯಿದ್ದ ತನ್ನ ಅಕ್ಕನ ಮನೆಯಲ್ಲಿ ವಾಸವಿದ್ದ. ಹೀಗಾಗಿ ಆಗಾಗ ತನ್ನ ಸ್ನೇಹಿತ ರವಿಚಂದ್ರನನ್ನು ಕರೆದು ಒಟ್ಟಿಗೆ ಗುಂಡು ಹಾಕುತ್ತಿದ್ದರು ಎಂದು ಪೊಲೀಸರು ತಿಳಿಸಿದ್ದಾರೆ.

ರಾತ್ರಿ ವೇಳೆ ಮನೆಯ ಲೈಟ್ ಉರಿಯುತ್ತಿರುವುದನ್ನು ಗಮನಿಸಿದ ಮೋಹನ್ ತಾಯಿ ಜಯಲಕ್ಷ್ಮಿ ಬಂದು ನೋಡಿದಾಗ ಕೊಲೆ ನಡೆದಿರುವುದು ಬೆಳಕಿಗೆ ಬಂದಿದೆ.

ವಿಷಯ ತಿಳಿದ ಜಿಲ್ಲಾ ಎಸ್‌ಪಿ ಮಲ್ಲಿಕಾರ್ಜುನ ಬಾಲದಂಡಿ ಸ್ಥಳಕ್ಕೆ ಭೇಟಿ ನೀಡಿ ಪರಿಶೀಲನೆ ನಡೆಸಿದ್ದಾರೆ. ಅಲ್ಲದೆ ಕೊಲೆ ಆರೋಪಿಯನ್ನು ಪೊಲೀಸರು ಬಂಧಿಸಿದ್ದಾರೆ. ಈ ಸಂಬಂದ ಕೆಆರ್‌ಎಸ್ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ. ಕೊಲೆಗೆ ನಿಖರ ಕಾರಣಗಳು ತಿಳಿದು ಬಂದಿಲ್ಲ ಎಂದು ಪೊಲೀಸರು ತಿಳಿಸಿದ್ದಾರೆ.

ಕಾರಿನಲ್ಲಿ ತಂದು ಕಸ ಬಿಸಾಡಿದ ವ್ಯಕ್ತಿ ವಿರುದ್ಧ ಪಾಲಿಕೆಯಿಂದ ಕೇಸ್

ಮೈಸೂರು, ಮಾ.20(ಎಸ್‌ಬಿಡಿ)- ಕಾರಿನಲ್ಲಿ ಬಂದು ರಸ್ತೆ ಬದಿ ಕಸ ಬಿಸಾಡಿ ಹೋದ ಅಪರಿಚಿತನ ವಿರುದ್ಧ ಆಲನಹಳ್ಳಿ ಪೊಲೀಸ್ ಠಾಣೆಯಲ್ಲಿ ಎಫ್‌ಐಆರ್ ದಾಖಲಾಗಿದೆ.

ಮೈಸೂರು ಮಹಾನಗರ ಪಾಲಿಕೆ ವಲಯ ಕಚೇರಿ 9ರ ಪರಿಸರ ಇಂಜಿನಿಯರ್ ಲೋಕೇಶ್ವರಿ ನೀಡಿದ ದೂರಿನನ್ವಯ ಆಲನಹಳ್ಳಿ ಪೊಲೀಸ್ ಠಾಣೆ ಪೊಲೀಸರು ಪ್ರಕರಣ ದಾಖಲಿಸಿಕೊಂಡು, ಕಾರಿನ ನೋಂದಣಿ ಸಂಖ್ಯೆ ಆಧಾರದಲ್ಲಿ ಕಸ ಬಿಸಾಡಿದ ವ್ಯಕ್ತಿಯ ಪತ್ತೆಗೆ ಕ್ರಮ ಕೈಗೊಂಡಿದ್ದಾರೆ.

ಮೈಸೂರು-ಬನ್ನೂರು ರಸ್ತೆ, ಕಾವೇರಿ ಆಸ್ಪತ್ರೆ ಎದುರಿನ ಬಸ್ ತಂಗುದಾಣದ ಬಳಿ ಮಾ.17ರಂದು ರಾತ್ರಿ 10 ಗಂಟೆ ಸಮಯದಲ್ಲಿ ಕಾರೊಂದು ಬಂದು ನಿಂತಿದೆ. ಅದರಿಂದ ಇಳಿದ ವ್ಯಕ್ತಿಯೊಬ್ಬ, ಕಸ ತುಂಬಿದ ಕವರ್ ಅನ್ನು ರಸ್ತೆ ಬದಿಗೆ ಬಿಸಾಡಲು ಮುಂದಾಗಿದ್ದಾರೆ. ಆ ವೇಳೆ ಅಲ್ಲಿಯೇ ಕರ್ತವ್ಯ ನಿರ್ವಹಿಸುತ್ತಿದ್ದ ಪೌರಕಾರ್ಮಿಕ ರಾಜು, ಇಲ್ಲಿ ಕಸ ಹಾಕದಂತೆ ತಿಳಿಸಿದ್ದಾರೆ. ಆದರೂ ಆ ವ್ಯಕ್ತಿ ಕಸದ ಕವರ್ ಅನ್ನು ಬಿಸಾಡಿ ಹೋಗಿದ್ದಾರೆ. ಇದರಿಂದ ಅಪಾಯಕಾರಿ ರೋಗದ ಸೋಂಕು ಹರಡುವ ಸಾಧ್ಯತೆ ಇದೆ ಎಂದು ಪಾಲಿಕೆ ಅಧಿಕಾರಿ, ಪೊಲೀಸರಿಗೆ ನೀಡಿರುವ ದೂರಿನಲ್ಲಿ ತಿಳಿಸಿದ್ದಾರೆ.

ವಾಹನ ಬಂದಿಲ್ಲ: ಕಸ ಬಿಸಾಡಿ ಹೋಗುವುದನ್ನು ಪೌರಕಾರ್ಮಿಕ ರಾಜು ವಿಡಿಯೋ ಮಾಡಿದ್ದಾರೆ. ಕಾರಿನಿಂದ ವ್ಯಕ್ತಿಯೊಬ್ಬರು ಇಳಿಯುತ್ತಿದ್ದಂತೆ ರಾಜು ಪ್ರಶ್ನಿಸುತ್ತಾರೆ. ಸಾರ್, ಏನ್ ಮಾಡ್ತಿದ್ದೀರಾ, ಇಲ್ಲಿ ಕಸ ಹಾಕ್ಬೇಡಿ. ನೋಡಿ ಅಲ್ಲಿ ಬೋರ್ಡ್ ಹಾಕಿದ್ದಾರೆ. ನನ್ನ ಇಲ್ಲಿ ಡ್ಯೂಟಿಗೆ ಹಾಕಿದ್ದಾರೆ’ ಎನ್ನುತ್ತಾರೆ. ಆಗ ಆ ವ್ಯಕ್ತಿ ‘ಮೂರ್ನಾಲ್ಕು ದಿನಗಳಿಂದ ಕಸ ಸಂಗ್ರಹಿಸುವ ವಾಹನ ಬಂದಿಲ್ಲ ಏನ್ ಮಾಡೋದು ಮತ್ತೆ’ ಎಂದು ಪ್ರಶ್ನಿಸುತ್ತಾರೆ. ಅದಕ್ಕೆ ರಾಜು, ‘ಗಾಡಿ ಬಂದಿಲ್ಲ ಅಂದ್ರೆ ಸೂಪರ್‌ವೈಸರ್‌ಗೆ ದೂರು ಕೊಡಿ, ಆದ್ರೆ ಇಲ್ಲಿ ಕಸ ಹಾಕಬೇಡಿ’ ಎನ್ನುತ್ತಾರೆ. ಆದರೂ ಕೇಳದೆ ಕಸದ ಕವರ್ ಬಿಸಾಡಿ, ಕಾರಿನಲ್ಲಿ ತೆರಳುವುದು ವಿಡಿಯೋದಲ್ಲಿ ಸೆರೆಯಾಗಿದೆ.

ಪೊಲೀಸ್ ಮೊರೆ: ಎಲ್ಲೆಂದರಲ್ಲಿ ಕಸ ಬಿಸಾಡದಂತೆ ನಿರಂತರವಾಗಿ ಮನವಿ ಮಾಡುವ ನಗರ ಪಾಲಿಕೆ ಅಧಿಕಾರಿಗಳು, ಆಗಾಗ್ಗೆ ದಂಡದ ಎಚ್ಚರಿಕೆಯನ್ನೂ ನೀಡುತ್ತಿರುತ್ತಾರೆ. ಆದರೆ ಇದೆಲ್ಲಾ ಆ ದಿನಕ್ಕೆ ಸೀಮಿತವಾಗುವುದರಿಂದ ಏನೂ ಪ್ರಯೋಜನವಾದಂತಿಲ್ಲ. ಈಗಲೂ ಹಲವು ಕಡೆ ತ್ಯಾಜ್ಯದ ರಾಶಿ ಬಿದ್ದಿದೆ. ಆದ್ದರಿಂದ ಪಾಲಿಕೆ ಅಧಿಕಾರಿಗಳು ಕಟ್ಟುನಿಟ್ಟಿನ ಕ್ರಮಕ್ಕೆ ಮುಂದಾಗಿದ್ದಾರೆ. ಹೆಚ್ಚು ಕಸ ಹಾಕುವಂತಹ ಜಾಗಗಳಲ್ಲಿ ನಿಗಾ ವಹಿಸಲು ಪೌರ ಕಾರ್ಮಿಕರನ್ನು ನಿಯೋಜಿಸಲಾಗಿದೆ. ಕಸ ಹಾಕದಂತೆ ತಿಳಿಸಿದರೂ ಕೇಳದವರ ವಿರುದ್ಧ ಪೊಲೀಸ್ ಠಾಣೆಯಲ್ಲಿ ದೂರು ದಾಖಲಿಸಲು ಅಧಿಕಾರಿಗಳು ಮುಂದಾಗಿದ್ದಾರೆ.

ಆರು ತಿಂಗಳು ಜೈಲು, ದಂಡ

ಕಾರಿನಲ್ಲಿ ಕಸ ತಂದು ಬಿಸಾಡಿದ ವ್ಯಕ್ತಿ ವಿರುದ್ಧ ಭಾರತೀಯ ನ್ಯಾಯ ಸಂಹಿತೆ(ಬಿಎನ್‌ಎಸ್) 271ರ ಅಡಿಯಲ್ಲಿ ಪ್ರಕರಣ ದಾಖಲಿಸಲಾಗಿದೆ. ಈ ಸೆಕ್ಷನ್ ಜೀವಕ್ಕೆ ಅಪಾಯಕಾರಿಯಾದ ರೋಗದ ಸೋಂಕನ್ನು ಹರಡುವ ಸಾಧ್ಯತೆಯಿರುವ ನಿರ್ಲಕ್ಷ್ಯ ಕೃತ್ಯಗಳನ್ನು ಉಲ್ಲೇಖಿಸುತ್ತದೆ. ಅಪರಾಧ ಸಾಬೀತಾದರೆ ಆರು ತಿಂಗಳು ಜೈಲು ಅಥವಾ ದಂಡ, ಇಲ್ಲವೇ ಇವರೆಡನ್ನೂ ವಿಧಿಸಬಹುದಾಗಿದೆ.

ದೇಶ - ವಿದೇಶ

ಮತ್ತೆ ಇಸ್ರೇಲ್ ದಾಳಿ; ಗಾಜಾದಲ್ಲಿ 70ಕ್ಕೂ ಅಧಿಕ ಸಾವು



ಗಾಜಾ: ಗಾಜಾ ಪಟ್ಟಿಯಾದ್ಯಂತ ಇಸ್ರೇಲ್ ನಡೆಸಿದ ವೈಮಾನಿಕ ದಾಳಿಯಲ್ಲಿ ಕನಿಷ್ಠ 70 ಪ್ಯಾಲೆಸ್ಟೀನಿಯನ್ನರು ಸಾವನ್ನಪ್ಪಿದ್ದಾರೆ. ಮತ್ತು ಹಲವರು ಗಾಯಗೊಂಡಿದ್ದಾರೆ ಎಂದು ಗಾಜಾ ಆರೋಗ್ಯ ಅಧಿಕಾರಿ ತಿಳಿಸಿದ್ದಾರೆ. ಗಾಜಾ ಪಟ್ಟಿಯ ಉತ್ತರ ಮತ್ತು ದಕ್ಷಿಣ ಪ್ರದೇಶಗಳಲ್ಲಿ ಹಲವಾರು ಮನೆಗಳು ಹಾಗೂ ಮೂಲಸೌಕರ್ಯಗಳನ್ನು ಗುರಿಯಾಗಿಸಿಕೊಂಡು ಇಸ್ರೇಲಿ ದಾಳಿ ನಡೆದಿದೆ.

2 ತಿಂಗಳ ಅಲ್ಪ ಕದನ ವಿರಾಮದ ನಂತರ ಮತ್ತೆ ಗಾಜಾ ಪಟ್ಟಿಯ ಮೇಲೆ ದಾಳಿ ಪ್ರಾರಂಭಿಸಿರುವ ಇಸ್ರೇಲ್, ಹಮಾಸ್ ಉಗ್ರರನ್ನು ಸಂಪೂರ್ಣವಾಗಿ ನಾಶ ಮಾಡುವುದಾಗಿ ಘೋಷಿಸಿದೆ. ಇದಕ್ಕೂ ಮುನ್ನ ಮೊನ್ನೆ ನಡೆದ ದಾಳಿಯಲ್ಲಿ ಇಸ್ರೇಲ್, ಹಮಾಸ್ ಸರ್ಕಾರದ ಡಜನ್‌ಗೂ ಅಧಿಕ ಜನರನ್ನು ಹತ್ಯೆ ಮಾಡಿತ್ತು. ಜೊತೆಗೆ ಅಂದು 326 ಸಾಮಾನ್ಯ ಜನರು ಸಹ ಹತ್ಯೆ ಆಗಿದ್ದರು. ಗಾಜಾವನ್ನು ವಿಭಜಿಸುವ ನೆಟ್‌ಜಾರಿಮ್ ಕಾರಿಡಾರ್‌ನ ಮೇಲೆ ಇಸ್ರೇಲ್‌ನ ನಿಯಂತ್ರಣವನ್ನು ವಿಸ್ತರಿಸಿದೆ. ಎನ್‌ಕ್ಲೇವ್‌ನ ಉತ್ತರ ಮತ್ತು ದಕ್ಷಿಣದ ನಡುವೆ ಭಾಗಶಃ ಬಫರ್ ವಲಯವನ್ನು ರಚಿಸುವ ಗುರಿಯನ್ನು ಹೊಂದಿರುವ ಕೇಂದ್ರೀಕೃತ ಕೌಶಲವಾಗಿತ್ತು ಎಂದು ಹೇಳಿದೆ.

ಐಎಸ್‌ಐಗೆ ರಕ್ಷಣಾ ಮಾಹಿತಿ ಸೋರಿಕೆ: ಮತ್ತೊಬ್ಬ ಉದ್ಯೋಗಿ ಬಂಧನ

ಲಖನೌ: ಪಾಕಿಸ್ತಾನದ ಇಂಟರ್-ಸರ್ವಿಸಸ್ ಇಂಟೆಲಿಜೆನ್ಸ್ ಅಥವಾ ಐಎಸ್‌ಐಗೆ ಸಾಮಾಜಿಕ ಮಾಧ್ಯಮಗಳ ಮೂಲಕ ವರ್ಗೀಕೃತ ಮತ್ತು ಸೂಕ್ಷ್ಮ ರಕ್ಷಣಾ ಮಾಹಿತಿಯನ್ನು ಹಂಚಿಕೊಂಡ ಆರೋಪದ ಮೇಲೆ ಕಾನ್ಪುರ ಶಸ್ತ್ರಾಸ್ತ್ರ ಕಾರ್ಖಾನೆಯ ಉದ್ಯೋಗಿಯನ್ನು ಉತ್ತರಪ್ರದೇಶ ಭಯೋತ್ಪಾದನಾ ನಿಗ್ರಹ ದಳ ಬಂಧಿಸಿದೆ. ಇದರೊಂದಿಗೆ ಕಳೆದ 5 ದಿನಗಳಲ್ಲಿ ಶಸ್ತ್ರಾಸ್ತ್ರ ಕಾರ್ಖಾನೆಯ ಇಬ್ಬರು ಸಿಬ್ಬಂದಿಯನ್ನು ಬಂಧಿಸಲಾಗಿದೆ. ಯುಪಿ ಎಟಿಎಸ್ ಬಿಡುಗಡೆ ಮಾಡಿದ ಅಧಿಕೃತ ಹೇಳಿಕೆ ಪ್ರಕಾರ ಕಾನ್ಪುರ ಆರ್ಡನೆನ್ಸ್ ಫ್ಯಾಕ್ಟರಿಯಲ್ಲಿ ಜೂನಿಯರ್ ವರ್ಕ್ಸ್ ಮ್ಯಾನೇಜರ್ ಆಗಿ ಕೆಲಸ ಮಾಡುತ್ತಿದ್ದ ಕುಮಾರ್ ವಿಕಾಸ್‌ನನ್ನು ಬಂಧಿಸಲಾಗಿದೆ. ಆರೋಪಿಯು 'ನೇಹಾ ಶರ್ಮಾ' ಎಂಬ ನಕಲಿ ಹೆಸರಿನ ಪಾಕಿಸ್ತಾನಿ ಏಜೆಂಟ್ ಜೊತೆ ನಿರಂತರ ಸಂಪರ್ಕದಲ್ಲಿದ್ದ ಎಂದು ಎಟಿಎಸ್ ಪ್ರಕಟಣೆಯಲ್ಲಿ ತಿಳಿಸಿದೆ. ಕುಮಾರ್ ವಿಕಾಸ್ ಶಸ್ತ್ರಾಸ್ತ್ರ ತಯಾರಿಕೆ, ಉದ್ಯೋಗಿ ಹಾಜರಾತಿ ಹಾಳೆಗಳು, ಯಂತ್ರ ವಿನ್ಯಾಸಗಳು ಮತ್ತು ಉತ್ಪಾದನಾ ಚಾರ್ಟ್‌ಗಳಿಗೆ ಸಂಬಂಧಿಸಿದ ಗೌಪ್ಯ ದಾಖಲೆಗಳು ಮತ್ತು ಸೂಕ್ಷ್ಮ ಡೇಟಾವನ್ನು ವಾಟ್ಸಾಪ್ ಮೂಲಕ ಐಎಸ್‌ಐ ಏಜೆಂಟ್‌ಗೆ ನೀಡುತ್ತಿದ್ದ ಎಂಬುದು ತನಿಖೆಯಿಂದ ತಿಳಿದುಬಂದಿದೆ.

ಪುಟಿನ್ ಆಯ್ತು, ಈಗ ಝೆಲೆನ್ಸ್ಕಿ ಜೊತೆ ಟ್ರಂಪ್ ಮಾತುಕತೆ




ವಾಷಿಂಗ್ಟನ್: ರಷ್ಯಾ-ಉಕ್ರೇನ್ ಕದನ ವಿರಾಮ ಒಪ್ಪಂದಕ್ಕೆ ಸಂಬಂಧಿಸಿದಂತೆ ರಷ್ಯಾ ಅಧ್ಯಕ್ಷ ವ್ಲಾಡಿಮಿರ್ ಪುಟಿನ್ ಅವರೊಂದಿಗೆ ಮಾತನಾಡಿರುವ ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್, ಇಂದು ಉಕ್ರೇನ್ ಅಧ್ಯಕ್ಷ ವೆಲೊಡಿಮಿರ್ ಝೆಲೆನ್ಸ್ಕಿ ಅವರೊಂದಿಗೆ ದೂರವಾಣಿಯಲ್ಲಿ ಮಾತನಾಡಿದ್ದಾರೆ. ಸುಮಾರು 1 ಗಂಟೆಗೂ ಹೆಚ್ಚು ಕಾಲ ಕದನ ವಿರಾಮ ಒಪ್ಪಂದಕ್ಕೆ ಸಹಿ ಹಾಕಲು ರಷ್ಯಾ ಮತ್ತು ಉಕ್ರೇನ್ ಮಂಡಿಸಿರುವ ಬೇಡಿಕೆಗಳ ಬಗ್ಗೆ ಸುದೀರ್ಘವಾಗಿ ಮಾತನಾಡಿದ್ದಾರೆ ಎಂದು ಮೂಲಗಳು ಖಚಿತಪಡಿಸಿವೆ. ಅಮೆರಿಕವು ಉಕ್ರೇನ್‌ಗೆ ನೀಡುತ್ತಿರುವ ಬೆಂಬಲವನ್ನು ನಿಲ್ಲಿಸದಂತೆ ಝೆಲೆನ್ಸ್ಕಿ ಮನವಿ ಮಾಡಿದ್ದಾರೆ. ಆದರೆ ಪುಟಿನ್ ಕದನ ವಿರಾಮ ಒಪ್ಪಂದಕ್ಕೆ ರಷ್ಯಾ ಸಹಿ ಮಾಡಬೇಕಾದರೆ ಉಕ್ರೇನ್‌ಗೆ ನೀಡಲಾಗುತ್ತಿರುವ ಎಲ್ಲಾ ಸಾಮರಿಕ ಮತ್ತು ಗುಪ್ತಚರ ನೆರವನ್ನು ನಿಲ್ಲಿಸಬೇಕು ಎಂದು ಷರತ್ತು ವಿಧಿಸಿದ್ದಾರೆ. ಈ ಎಲ್ಲಾ ಬೆಳವಣಿಗೆಗಳ ಕುರಿತು ತಮ್ಮ ಟ್ರೂತ್ ಸೋಷಿಯಲ್ ಮಿಡಿಯಾದಲ್ಲಿ ಮಾಹಿತಿ ಹಂಚಿಕೊಂಡಿರುವ ಟ್ರಂಪ್, ರಷ್ಯಾ ಮತ್ತು ಉಕ್ರೇನ್‌ನ ಬೇಡಿಕೆಗಳನ್ನು ಈಡೇರಿಸುವ ಪ್ರಾಮಾಣಿಕ ಪ್ರಯತ್ನವನ್ನು ಮುಂದುವರೆಸಿರುವುದಾಗಿ ಹೇಳಿದ್ದಾರೆ.

ಪ್ರಕಾಶ್ ರಾಜ್, ದೇವರಕೊಂಡ, ರಾಣಾ ಸೇರಿ 25 ನಟ-ನಟಿಯರ ವಿರುದ್ಧ ಕೇಸ್



ಹೈದರಾಬಾದ್: ಬೆಟ್ಟಿಂಗ್ ಆ್ಯಪ್ ಪ್ರಚಾರ ಮಾಡಿದ ಹಿನ್ನೆಲೆಯಲ್ಲಿ ನಟ ಪ್ರಕಾಶ್‌ರಾಜ್, ವಿಜಯ್ ದೇವರಕೊಂಡ, ರಾಣಾ ದಗ್ಗುಬಾಟಿ ಸೇರಿದಂತೆ ಟಾಲಿವುಡ್‌ನ 25ಕ್ಕೂ ಹೆಚ್ಚು ನಟ-ನಟಿಯರ ವಿರುದ್ಧ ಪ್ರಕರಣ ದಾಖಲಾಗಿದೆ. ಸಾಮಾಜಿಕ ಹೋರಾಟಗಾರ ಫಣೀಂದ್ರ ಶರ್ಮಾ ಎಂಬುವರು ನೀಡಿದ ದೂರಿನ ಹಿನ್ನೆಲೆಯಲ್ಲಿ ಹೈದರಾಬಾದ್‌ನ ಮಿಯಾಪುರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ. ಟಾಲಿವುಡ್‌ನ ಹಲವು ನಟ-ನಟಿಯರು ಸಾಮಾಜಿಕ ಜಾಲತಾಣಗಳಲ್ಲಿ ಜಾಹೀರಾತನ್ನು ನೀಡುವ ಮೂಲಕ ಬೆಟ್ಟಿಂಗ್ ಆ್ಯಪ್ ಅನ್ನು ಪ್ರಚಾರ ಮಾಡುತ್ತಿದ್ದಾರೆ. ಬೆಟ್ಟಿಂಗ್ ಆ್ಯಪ್‌ಗಳಲ್ಲಿ ಹಣ ಹಾಕಿ ಯುವ ಜನತೆ ನಷ್ಟಕ್ಕೆ ತುತ್ತಾಗಿದ್ದಾರೆ. ಆ್ಯಪ್ ಪ್ರಚಾರಕ್ಕೆ ತೆಲಂಗಾಣ ಸರ್ಕಾರ ಈಗಾಗಲೇ ನಿಷೇಧ ಹೇರಿದ್ದರೂ ಬೆಟ್ಟಿಂಗ್ ಆ್ಯಪ್ ಪರ ಪ್ರಚಾರ ನಡೆಸುತ್ತಿದ್ದಾರೆ ಎಂದು ದೂರಿದ್ದಾರೆ. ದೂರು ಹಿನ್ನೆಲೆ ಪ್ರಣೀತಾ, ಲಕ್ಷ್ಮಿ ಮಂಚು ಮತ್ತು ನಿಧಿ ಅಗರ್ವಾಲ್, ಅನನ್ಯ ನಾಗೆಲ್ಲ, ಸಿರಿ ಹನುಮಂತು, ಶ್ರೀಮುಖಿ, ವರ್ಷಿಣಿ ಸೌಂದರರಾಜನ್, ವಸಂತಿ ಕೃಷ್ಣನ್, ಶೋಬಾ ಪಟ್ಟಾನಿ, ಪವನ್ ಪಟ್ಟಾನಿ, ಪವನ್ ಶೆಟ್ಟಿ ಪಾಂಡು, ಪದ್ಮಾವತಿ, ಇಮ್ರಾನ್ ಖಾನ್, ವಿಷ್ಣು ಪ್ರಿಯಾ, ಹರ್ಷ ಸಾಯಿ, ಬಯ್ಯ ಸನ್ನಿ ಯಾದವ್, ಶ್ಯಾಮಲಾ, ಟೇಸ್ಟಿ ತೇಜಾ, ರಿತು ಚೌಧರಿ ಮತ್ತು ಬಂಡಾರು ಶೇಷಾಯನಿ ಸುಪ್ರಿತಾ ಸೇರಿ ಹಲವರ ವಿರುದ್ಧ ಎಫ್‌ಐಆರ್ ದಾಖಲಾಗಿದೆ.

ಅಮೆರಿಕದಲ್ಲಿ ಬಡ್ಡಿದರ ಯಥಾಸ್ಥಿತಿ; 2025ರೊಳಗೆ 50 ಮೂಲಾಂಕಗಳಷ್ಟು ದರ ಕಡಿತಕ್ಕೆ ಇಂಗಿತ



ವಾಷಿಂಗ್ಟನ್: ಅಮೆರಿಕದ ಫೆಡರಲ್ ರಿಸರ್ವ್ ಸಂಸ್ಥೆ ತನ್ನ ಬಡ್ಡಿದರ ಯಥಾಸ್ಥಿತಿ ಕಾಯ್ದುಕೊಳ್ಳಲು ನಿರ್ಧರಿಸಿದೆ. ಹೊಸ ಸರ್ಕಾರದ ವಿವಾದಾತ್ಮಕ ಆಮದು ಸುಂಕ ನೀತಿಯಿಂದಾಗಿ ಫೆಡರಲ್ ರಿಸರ್ವ್ ನಿರ್ಧಾರದ ಬಗ್ಗೆ ಸಾಕಷ್ಟು ಕುತೂಹಲ ಇತ್ತು ಆದರೆ, ಅಂತಿಮವಾಗಿ ಶೇ. 4.25ರಿಂದ ಶೇ. 4.50ರ ಶ್ರೇಣಿಯಲ್ಲಿ ಬಡ್ಡಿದರ ಮುಂದುವರಿಸಲು ನಿಶ್ಚಯಿಸಲಾಗಿದೆ.

2 ದಿನಗಳ ಕಾಲ ಫೆಡರಲ್ ರಿಸರ್ವ್ ಸಭೆ ಬಳಿಕ ಸುದ್ದಿಗೋಷ್ಠಿ ಉದ್ದೇಶಿಸಿ ಮಾತನಾಡಿದ ಅದರ ಛೇರ್ಮನ್ ಜಿರೋಮ್ ಪೋವೆಲ್, ತಾವು ದೇಶದ ಆರ್ಥಿಕ ಚಟುವಟಿಕೆಯನ್ನು ಪರಾಮರ್ಶಿಸಿದ ಬಳಿಕ ಈ ನಿರ್ಧಾರ ತೆಗೆದುಕೊಂಡಿದ್ದಾಗಿ ತಿಳಿಸಿದರು. ಅಮೆರಿಕದಲ್ಲಿ ಹಣದುಬ್ಬರ ಶೇ.2ರಷ್ಟು ಇರಬೇಕೆಂದು ಗುರಿ ಇಡಲಾಗಿದೆ. ಆದರೆ, ಈ ಮಟ್ಟಕ್ಕಿಂತ ದರ ಹೆಚ್ಚಿದೆ. ಆಮದು ಸುಂಕ ನೀತಿಯು ಹಣದುಬ್ಬರವನ್ನು ಮೇಲ್ಮುಖಕ್ಕೆ ನೂಕುತ್ತಿದೆ. ಈ ಅಂಶಗಳನ್ನು ಫೆಡರಲ್ ರಿಸರ್ವ್‌ನ ಮಾನಿಟರಿ ಕಮಿಟಿ ಸಭೆಯಲ್ಲಿ ಪರಿಗಣಿಸಲಾಯಿತು. ಹಣದುಬ್ಬರ ನಿರೀಕ್ಷಿತ ರೀತಿಯಲ್ಲಿ ನಿಯಂತ್ರಣದಲ್ಲಿದ್ದಿದ್ದರೆ ಈ ಬಾರಿಯೂ ಬಡ್ಡಿದರ ಕಡಿಮೆಗೊಳಿಸುವ ಸಾಧ್ಯತೆ ಇತ್ತು. ಆದರೆ, ಅಂತಿಮವಾಗಿ ಬಡ್ಡಿದರ ಯಥಾಸ್ಥಿತಿ ಕಾಯ್ದುಕೊಳ್ಳುವ ನಿರ್ಧಾರಕ್ಕೆ ಬರಲಾಯಿತು.

ಕುಡಿಯುವ ನೀರಿನ ಸಮಸ್ಯೆ : ಖಾಲಿ ಕೊಡದ ಪ್ರತಿಭಟನೆ



ಗುಹ್ಯ ಕೂಡುಗದ್ದೆ ಗ್ರಾಮದಲ್ಲಿ ನೀರಿನ ಸಮಸ್ಯೆ ಬಗೆಹರಿಸುವಂತೆ ಒತ್ತಾಯಿಸಿ ಪ್ರತಿಭಟಿಸಲಾಯಿತು.

ಸಿದ್ದಾಪುರ,ಮಾ.20–ಕುಡಿಯುವ ನೀರಿನ ಸಮಸ್ಯೆ ಬಗೆಹರಿಸುವಂತೆ ಒತ್ತಾಯಿಸಿ ವಿರಾಜಪೇಟೆ ತಾಲೂಕಿನ ಸಿದ್ದಾಪುರ ಗ್ರಾಮ ಪಂಚಾಯಿತಿ ಮುಂದೆ ಸಿಪಿಐಎಂ ಪಕ್ಷದ ಕಾರ್ಯಕರ್ತರು ಪ್ರತಿಭಟನೆ ನಡೆಸಿದರು.

ಗುಹ್ಯ ಕೂಡುಗದ್ದೆ ಗ್ರಾಮದಲ್ಲಿ ನೀರಿನ ಸಮಸ್ಯೆ ಬಗೆಹರಿಸುವಲ್ಲಿ ಪಂಚಾಯಿತಿ ವಿಫಲವಾಗಿದೆ ಎಂದು ಆರೋಪಿಸಿ ಪ್ರತಿಭಟನಾಕಾರರು ಗ್ರಾಮ ಪಂಚಾಯಿತಿ ಕಾರ್ಯಾಲಯದ ಎದುರು ಖಾಲಿ ಕೊಡಗಳನ್ನು ಪ್ರದರ್ಶಿಸಿ ಅಸಮಾಧಾನ ವ್ಯಕ್ತಪಡಿಸಿದರು.

ಸಿಪಿಐಎಂ ಪಕ್ಷದ ಜಿಲ್ಲಾ ಕಾರ್ಯದರ್ಶಿ ಎಚ್.ಬಿ.ರಮೇಶ್, ಮಾತನಾಡಿ ಈ ವ್ಯಾಪ್ತಿಯಲ್ಲಿ ಬಹುತೇಕ ಕೂಲಿ ಕಾರ್ಮಿಕರೇ ಹೆಚ್ಚಾಗಿ ವಾಸಿಸುವ ಪ್ರದೇಶವಾಗಿದ್ದು ಕುಡಿಯುವ ನೀರು ಸಮರ್ಪಕವಾಗಿ ನಿಗದಿತ ಸಮಯದಲ್ಲಿ ಸರಬರಾಜು ಆಗುತ್ತಿಲ್ಲ ಕುಡಿಯುವ ನೀರನ್ನು ಶೇಖರಣೆ ಮಾಡಲು ಕಾರ್ಮಿಕರು ಕೆಲಸವನ್ನು ಬಿಟ್ಟು ಮನೆಯಲ್ಲಿ ಉಳಿದುಕೊಳ್ಳುವ ಪರಿಸ್ಥಿತಿ ನಿರ್ಮಾಣವಾಗಿದೆ. ಆದ್ದರಿಂದ ಕೂಡಲೇ ಇದಕ್ಕೆ ವೈಜ್ಞಾನಿಕವಾದ ಶಾಶ್ವತ ಪರಿಹಾರವನ್ನು ಆಡಳಿತ ಮಂಡಳಿ ಕಲ್ಪಿಸಬೇಕಾಗಿದೆ ಎಂದು ಒತ್ತಾಯಿಸಿದರು.

ಪಕ್ಷದ ಕೂಡುಗದ್ದೆ ಶಾಖಾ ಕಾರ್ಯದರ್ಶಿ ಅನಿಲ್ ಕುಟ್ಟಪ್ಪ, ಸಿಪಿಐಎಂ ಸಂಚಾಲನ ಸಮಿತಿಯ ಕಾರ್ಯದರ್ಶಿ ಎನ್.ಡಿ.ಕುಟ್ಟಪ್ಪ, ಪಿ.ಆರ್.ಭರತ್, ಹಂಸ ಮಾಸ್ಟರ್, ಸಿ.ಎ. ಮುಸ್ತಫಾ, ಖಿದಿಜ, ಸಾರ, ತಾರಾ, ವಿಮಲಾ ಸೇರಿದಂತೆ ಮತ್ತಿತರರು ಹಾಜರಿದ್ದರು.

ಆಸ್ತಿ ವಿವಾದ : ಪೊಲೀಸ್ ಠಾಣೆ ಮುಂದೆಯೇ ಕುಟುಂಬಸ್ಥರ ಬಡಿದಾಟ

ಮಡಿಕೇರಿ,ಮಾ.20– ಪಿತ್ರಾರ್ಜಿತ ಆಸ್ತಿ ವಿಚಾರಕ್ಕಾಗಿ ಪೊಲೀಸ್ ಠಾಣೆಗೆ ದೂರು ನೀಡಲು ಬಂದು ಠಾಣೆಯ ಮುಂಭಾಗದಲ್ಲೇ ಕುಟುಂಬಸ್ಥರು ಪರಸ್ಪರ ಕೈ ಕೈ ಮಿಲಾಯಿಸಿಕೊಂಡ ಘಟನೆ ನಾಪೋಕ್ಲು ಠಾಣೆ ಆವರಣದಲ್ಲಿ ನಡೆದಿದೆ. ಪ್ರಕರಣಕ್ಕೆ ಸಂಬಂಧಿಸಿದಂತೆ ಮಹಿಳೆಯರು ಹಾಗೂ ಪುರುಷ ಸಹಿತ ಒಟ್ಟು 11 ಮಂದಿಯ ವಿರುದ್ಧ ನಾಪೋಕ್ಲು ಪೊಲೀಸರು ಪ್ರಕರಣ ದಾಖಲಿಸಿಕೊಂಡಿದ್ದಾರೆ.

ಬೇತು ಗ್ರಾಮದ ಕೆ.ಹೆಚ್.ಅಹಮದ್(51), ನಾಪೋಕ್ಲು ಗ್ರಾಮದ ಇಸ್ಮಾಯಿಲ್(49), ಮಹಮದ್ ಆಲಿ(28), ಬೇತು ಗ್ರಾಮದ ಹಮೀದ್(45), ಹಂಸ(60), ನಾಪೋಕ್ಲುವಿನ ಆಟೋ ಲತೀಫ್(42), ಬೇತು ನಿವಾಸಿಗಳಾದ ಸಫೂರ(40), ಹಸೀನಾ(40), ಸಫಿಯಾ(45), ನಬೀಸಾ(41), ಮತ್ತು ಆಸಿಯಾ(35) ಎಂಬವರೇ ಪರಸ್ಪರ ಹೊಡೆದಾಡಿಕೊಂಡವರಾಗಿದ್ದು, ಇವರುಗಳ ವಿರುದ್ಧ ಪ್ರಕರಣ ದಾಖಲಿಸಲಾಗಿದೆ.



ದೂರು ನೀಡಲು ಬಂದು ಠಾಣೆಯ ಮುಂಭಾಗದಲ್ಲೇ ಕುಟುಂಬಸ್ಥರು ಪರಸ್ಪರ ಕೈ ಕೈ ಮಿಲಾಯಿಸಿಕೊಂಡರು

ಬೇತು ಗ್ರಾಮದಲ್ಲಿರುವ ಪಿತ್ರಾರ್ಜಿತ ಆಸ್ತಿಯಲ್ಲಿ ಕುಟುಂಬದ ನಡುವೆ ವ್ಯಾಜ್ಯವಿದ್ದು, ಬುಧವಾರ ಇದೇ ವಿಚಾರಕ್ಕೆ ಗಲಾಟೆ ಮಾಡಿಕೊಂಡಿದ್ದಾರೆ. ಬಳಿಕ ಎಲ್ಲರೂ ಸಂಜೆ 6.30ರ ಸಮಯದಲ್ಲಿ ನಾಪೋಕ್ಲು ಠಾಣೆಗೆ ದೂರು ನೀಡಲು ಬಂದಿದ್ದಾರೆ. ಠಾಣೆಯ ಮುಂಭಾಗದಲ್ಲೇ ಮತ್ತೆ ಜೋರಾಗಿ ಕಿರುಚಾಡುತ್ತಾ ಜಗಳವಾಡಿಕೊಂಡು ಕೈ ಕೈ ಮಿಲಾಯಿಸಿಕೊಂಡಿದ್ದಾರೆ. ಈ ವೇಳೆ ಪೊಲೀಸರು ಮಧ್ಯೆ ಪ್ರವೇಶಿಸಿ ಜಗಳ ಬಿಡಿಸಿದ್ದಾರೆ. ಬಳಿಕ ಎಲ್ಲಾ 11 ಮಂದಿಯ ವಿರುದ್ಧ ಪೊಲೀಸರು ಪ್ರಕರಣ ದಾಖಲಿಸಿದ್ದಾರೆ. ಪರಸ್ಪರ ಹೊಡೆದಾಡಿಕೊಂಡು ಗಾಯಗೊಂಡ ಹಸೀನಾ, ಸಫಿಯಾ, ನಬೀಸಾ ಮತ್ತು ಹಮೀದ್ ಎಂಬವರು ಜಿಲ್ಲಾಸ್ಪತ್ರೆಗೆ ದಾಖಲಾಗಿದ್ದಾರೆ. ಸಾರ್ವಜನಿಕ ಸ್ಥಳದಲ್ಲಿ ಶಾಂತಿ ಮತ್ತು ನೆಮ್ಮದಿಗೆ ಭಂಗ ತರುವ ವ್ಯಕ್ತಿಗಳ ವಿರುದ್ಧ ಪ್ರಕರಣ ದಾಖಲಿಸಲಾಗುತ್ತದೆ. ಈ ರೀತಿಯ ಕೃತ್ಯಗಳು ಪುನರಾವರ್ತನೆಯಾದಲ್ಲಿ ಅಂತಹ ವ್ಯಕ್ತಿಗಳ ವಿರುದ್ಧ ರೌಡಿ ಶೀಟರ್ ತೆರೆದು ಕಾನೂನು ಕ್ರಮ ಕೈಗೊಳ್ಳಲಾಗುತ್ತದೆ ಎಂದು ಪೊಲೀಸ್ ಇಲಾಖೆ ಪ್ರಕಟಣೆ ಹೊರಡಿಸಿದೆ.

ಸಾಧಕರಿಗೆ ಬೇಟೋಳಿ ಗ್ರಾಮ ಪಂಚಾಯಿತಿಯಿಂದ ಸನ್ಮಾನ




ವಿವಿಧ ಕ್ಷೇತ್ರಗಳಲ್ಲಿ ಸಾಧನೆ ಮಾಡಿದವರಿಗೆ ಬೇಟೋಳಿ ಗ್ರಾಮ ಪಂಚಾಯಿತಿಯಿಂದ ಸನ್ಮಾನಿಸಲಾಯಿತು.

ವಿರಾಜಪೇಟೆ, ಮಾ.20– ವಿವಿಧ ಕ್ಷೇತ್ರಗಳಲ್ಲಿ ಸಾಧನೆ ಮಾಡಿದವರಿಗೆ ಬೇಟೋಳಿ ಗ್ರಾಮ ಪಂಚಾಯಿತಿ ಕಚೇರಿ ಆವರಣದಲ್ಲಿ ನಡೆದ ಸಮಾರಂಭದಲ್ಲಿ ಸನ್ಮಾನಿಸಿ ನೆನಪಿನ ಕಾಣಿಕೆ ನೀಡಿ ಗೌರವಿಸಲಾಯಿತು.

ಶ್ರೀ ಕೃಷ್ಣ ದೇವರಾಜ ಒಡೆಯರ್ ಸದ್ಭಾವನ ರಾಜ್ಯ ಪ್ರಶಸ್ತಿ ಪುರಸ್ಕೃತರಾದ ಗ್ರಾಮೀಣ ಮಟ್ಟದ ಮಕ್ಕಳ ಶೈಕ್ಷಣಿಕ ಅಭಿವೃದ್ಧಿಗಾಗಿ ದುಡಿಯುತ್ತಿರುವ ಬೇಟೋಳಿ ಸರಕಾರಿ ಹಿರಿಯ ಪ್ರಾಥಮಿಕ ಶಾಲಾಭಿವೃದ್ಧಿ ಸಮಿತಿ ಅಧ್ಯಕ್ಷ ಎಂ.ಎಂ.ಇಸ್ಮಾಯಿಲ್, ಗ್ರಾಮೀಣ ರತ್ನ ರಾಜ್ಯ ಪ್ರಶಸ್ತಿ ಪುರಸ್ಕೃತರಾದ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲಾ ಮುಖ್ಯ ಶಿಕ್ಷಕರಾದ ಸೀತಾ, ಬೇಟೋಳಿ ಗ್ರಾಮ ಪಂಚಾಯಿತಿ ವ್ಯಾಪ್ತಿಯ ಆರೋಗ್ಯ ಸಹಾಯಕಿಯಾಗಿ 37 ವರ್ಷ ಉತ್ತಮ ಸೇವೆ ಸಲ್ಲಿಸಿ ನಿವೃತ್ತರಾದ ಕೆ.ಕೆ. ರಮಿತಾ, ಬೇಟೋಳಿ ಗ್ರಾಮ ಪಂಚಾಯಿತಿಯಲ್ಲಿ ಕರ ವಸೂಲಿಗಾರನಾಗಿ ಅತ್ಯುತ್ತಮ ಕಾರ್ಯ ನಿರ್ವಹಿಸಿದ ಬಿ.ಎಸ್.ದಿನೇಶ್, ಗ್ರಾಪಂ ಡಾಟಾ ಎಂಟ್ರಿ ಆಪರೇಟರ್ ಆಗಿ ಸೇವೆಗೈಯ್ಯುತ್ತಿರುವ ಕೆ.ಬಿ.ರಮ ಅವರುಗಳನ್ನು ಸನ್ಮಾನಿಸಿ ಗೌರವಿಸಲಾಯಿತು. ಈ ವೇಳೆ ಸನ್ಮಾನಿತರು ಸಭೆಯನ್ನು ದ್ದೇಶಿಸಿ ಮಾತನಾಡಿದರು. ಸಭೆಯ ಅಧ್ಯಕ್ಷತೆ ವಹಿ ಸಿದ್ದ ಗ್ರಾಪಂ ಅಧ್ಯಕ್ಷ ಅಚ್ಚಪಂಡ ಎಂ.ಬೋಪಣ್ಣ ಮಾತನಾಡಿ, ಸಮಾಜದಲ್ಲಿ ಗುರುತಿಸಲ್ಪಟ್ಟವರನ್ನು ಸನ್ಮಾನಿಸಲಾಗಿದೆ. ಸನ್ಮಾನಿತರು ತನ್ನದೇ ಆದ ಕೊಡುಗೆಯನ್ನು ಸಮಾಜಕ್ಕೆ ನೀಡಿರುವುದು ಗ್ರಾಮಕ್ಕೆ ಹೆಮ್ಮೆಯಾಗಿರುತ್ತದೆ. ಸನ್ಮಾನಿತರಿಂದ ಮತ್ತಷ್ಟು ಸೇವೆಯು ಈ ಗ್ರಾಮಕ್ಕೆ ಮತ್ತು ಸಮಾಜಕ್ಕೆ ಲಭಿಸುವಂತಾಗಲಿ ಎಂದು ಹಾರೈಸಿದರು.

ಗ್ರಾಪಂ ಅಭಿವೃದ್ಧಿ ಅಧಿಕಾರಿ ಬಿ.ಮಣಿ ಪ್ರಾಸ್ತಾವಿಕವಾಗಿ ಮಾತನಾಡಿ, ಸ್ವಾಗತಿಸಿದರು, ಪಂಚಾಯಿತಿ ಮಾಜಿ ಅಧ್ಯಕ್ಷೆ ಹಾಲಿ ಸದಸ್ಯೆ ಯಶೋಧ ಹಾಗೂ ಸದಸ್ಯ ರಜಾಕ್ ಅಭಿನಂದನೆ ಸಲ್ಲಿಸಿದರು. ವೇದಿಕೆಯಲ್ಲಿ ಸದಸ್ಯರಾದ ಎ.ಎ.ವಸಂತ ಕಟ್ಟಿ, ಪಿ.ಬಿ.ಚಂಗಪ್ಪ ಎಂ.ಎಂ.ರಂಜಿತ್, ಸಿ.ಎಸ್.ಸುದೀಶ್, ಪಿ.ಕೆ.ಗೀತಾ, ಪಿ.ಎಂ.ಲಕ್ಷ್ಮಿ, ಕೆ.ಆರ್.ಲತಾ, ಪಂಚಾಯಿತಿ ಸಿಬ್ಬಂದಿವರ್ಗ, ಅಂಗನವಾಡಿ, ಆಶಾ ಕಾರ್ಯಕರ್ತರು, ಸಂಜೀವಿನಿ ಸಂಘದ ಪ್ರತಿನಿಧಿಗಳು ಭಾಗವಹಿಸಿದ್ದರು.

ಗಾಂಜಾ ಮಾರಾಟಕ್ಕೆ ಯತ್ನಿಸಿದ ಇಬ್ಬರ ಬಂಧನ



ಅಶ್ರಫ್



ಅಸ್ಕರ್ ಪಿ.ಕೆ

ಮಡಿಕೇರಿ,ಮಾ.20– ನಿಷೇಧಿತ ಮಾದಕ ವಸ್ತು ಗಾಂಜಾ ಸರಬರಾಜು ಮತ್ತು ಮಾರಾಟ ಮಾಡಲು ಯತ್ನಿಸುತ್ತಿದ್ದ ಇಬ್ಬರನ್ನು ಭಾಗಮಂಡಲ ಪೊಲೀಸರು ಬಂಧಿಸಿದ್ದಾರೆ. ನಾಪೋಕ್ಲು ಸಮೀಪದ ಕುಂಜಿಲ ಗ್ರಾಮ ನಿವಾಸಿ ಕೆ.ಯು.ಮೊಹಮದ್ ಅಶ್ರಫ್(37) ಮತ್ತು ಅಯ್ಯಂಗೇರಿ ಗ್ರಾಮ ನಿವಾಸಿ ಅಸ್ಕರ್ ಪಿ.ಕೆ(24) ಎಂಬವರೇ ಬಂಧಿತರಾಗಿದ್ದು, ಇವರ ಬಳಿ ಇದ್ದ 1 ಕೆ.ಜಿ. 151 ಗ್ರಾಂ ಗಾಂಜಾ, ಕೃತ್ಯಕ್ಕೆ ಬಳಸಿದ್ದ 1 ಆಟೋ ರಿಕ್ಷಾವನ್ನು ವಶಕ್ಕೆ ಪಡೆಯಲಾಗಿದೆ.

ಅಯ್ಯಂಗೇರಿ–ನಾಪೋಕ್ಲು ರಸ್ತೆಯಲ್ಲಿ ಗಾಂಜಾ ಸರಬರಾಜು ಮಾಡುತ್ತಿದ್ದ ಮಾಹಿತಿ ಆಧರಿಸಿ ದಾಳಿ ನಡೆಸಿದ ಪೊಲೀಸರು ಇಬ್ಬರು ಆರೋಪಿಗಳನ್ನು ಮಾಲು ಸಹಿತ ಬಂಧಿಸಿ ನ್ಯಾಯಾಂಗ ವಶಕ್ಕೆ ಒಪ್ಪಿಸಿದ್ದಾರೆ. ಮಡಿಕೇರಿ ಡಿವೈಎಸ್‌ಪಿ ಸೂರಜ್.ಪಿ.ಎ, ಗ್ರಾಮಾಂತರ ಪ್ರಭಾರ ವೃತ್ತ ನಿರೀಕ್ಷಕ ಅನೂಪ್ ಮಾದಪ್ಪ, ಭಾಗಮಂಡಲ ಠಾಣಾಧಿಕಾರಿ ಶೋಭಾ ಲಮಾಣಿ ಮತ್ತು ಸಿಬ್ಬಂದಿ ಕಾರ್ಯಾಚರಣೆ ನಡೆಸಿದ್ದಾರೆ.

ಇಂದಿನಿಂದ ನೆಸ್‌ಕೆಫೆ ಕೊಡಗು ಹಾಕಿ ಕಪ್

ಗೋಣಿಕೊಪ್ಪ, ಮಾ.20– ಇಲ್ಲಿನ ಕಾವೇರಿ ಕಾಲೇಜು ಮೈದಾನದಲ್ಲಿ ನೆಸ್ಲೆ ಇಂಡಿಯ ಲಿಮಿಟೆಡ್ ಹಾಗೂ ಹಾಕಿ ಕೂರ್ಗ್ ಸಹಯೋಗದಲ್ಲಿ ನಾಳೆಯಿಂದ ನೆಸ್‌ಕೆಫೆ ಕೊಡಗು ಹಾಕಿ ಕಪ್ ಆರಂಭಗೊಳ್ಳಲಿದೆ. ಟೂರ್ನಿಗಾಗಿ ಸೂಕ್ತ ಸಿದ್ದತೆ ನಡೆದಿದ್ದು, ಹಾಕಿಕೂರ್ಗ್ ಆಯೋಜಿಸುವ ಲೀಗ್ ಪಂದ್ಯಾವಳಿಯ ಅಂತಿಮ ಎಂಟು ತಂಡಗಳಾದ ಮೂರ್ನಾಡು ಬ್ಲೇಜ್ ಕ್ಲಬ್,



ಮೂರ್ನಾಡು ಎಂಆರ್‌ಎಫ್, ಬೇರಳಿನಾಡ್ ಯುಎಸ್‌ಸಿ, ಬಲಮುರಿ ಕ್ಲಬ್, ಬೇಗೂರು ಈಶ್ವರ ಯೂತ್ ಕ್ಲಬ್, ಕೋಣನಕಟ್ಟೆ ಇಲೆವೆನ್, ಕಕ್ಕಬ್ಬೆ ಮಲ್ಮ, ಕುಂದ ಬೊಟ್ಟಿಯ ತ್ರಾ ್ಡ್ ತಂಡಗಳು ಸೆಣಸಾಟ ನಡೆಸಲಿವೆ.

ಟೂರ್ನಿ ನಿರ್ದೇಶಕರಾಗಿ ಮಿನ್ನಂಡ ಜೋಯಪ್ಪ, ಹಾಕಿಕೂರ್ಗ್ ಖಜಾಂಚಿ ಗುಮ್ಮಟ್ಟೀರ ಮುತ್ತಣ್ಣ, ನಿರ್ದೇಶಕ ಕಳ್ಳಿಚಂಡ ಗೌತಂ, ಕಾವೇರಿ ಕಾಲೇಜು ದೈಹಿಕ ಶಿಕ್ಷಣ ನಿರ್ದೇಶಕ ಮಲ್ಲಮಾಡ ಸಂತೋಷ್ ಮೈದಾನ ಉಸ್ತುವಾರಿ ನಿಬಾಯಿಸಿದ್ದಾರೆ.

ಪ್ರಥಮ ತಂಡಕ್ಕೆ 75 ಸಾವಿರ ನಗದು, ದ್ವಿತೀಯ ತಂಡಕ್ಕೆ 50 ಸಾವಿರ, ಸೆಮಿಗೆ ಪ್ರವೇಶಿಸಿದ ಎರಡು ತಂಡಗಳಿಗೆ ತಲಾ 25 ಸಾವಿರ, ಉಳಿದ ತಂಡಗಳಿಗೆ ತಲಾ 10 ಸಾವಿರ ನಗದು ಬಹುಮಾನ ನೀಡಲಾಗುತ್ತದೆ. ಆಕರ್ಷಕ ಟ್ರೋಫಿ ವಿಶೇಷವಾಗಿದೆ. ಉದ್ಘಾಟನೆ ಕಾರ್ಯಕ್ರಮಕ್ಕೆ ಕ್ಯಾಲ್ಸ್ ಮುಖ್ಯಸ್ಥ ದತ್ತ ಕರುಂಬಯ್ಯ, ನೆಸ್ಲೆ ಮಿಡ್ಲ್ ಈಸ್ಟ್ ಮತ್ತು ನಾರ್ತ್ ಆಫ್ರಿಕ ವ್ಯವಹಾರಿಕ ಅಭಿವೃದ್ಧಿ ನಿವೃತ್ತ ವ್ಯವಸ್ಥಾಪಕ ಕರ್ತಮಾಡ ವಿಕ್ರಂ ಸುಬ್ಬಯ್ಯ, ಹಿರಿಯರಾದ ಅಪ್ಪಚೆಟ್ಟೋಳಂಡ ಮನು ಮುತ್ತಪ್ಪ ಭಾಗವಹಿಸಲಿದ್ದಾರೆ.

ಅನಾರೋಗ್ಯ ಕಾರಣ ವ್ಯಕ್ತಿ ಆತ್ಮಹತ್ಯೆ

ಕುಶಾಲನಗರ, ಮಾ.20– ಅನಾರೋಗ್ಯ ಸಮಸ್ಯೆ ಹಿನ್ನೆಲೆಯಲ್ಲಿ ವಿವಾಹಿತನೊರ್ವ ನೇಣು ಬಿಗಿದುಕೊಂಡು ಆತ್ಮಹತ್ಯೆ ಮಾಡಿಕೊಂಡಿರುವ ಘಟನೆ ಬುಧವಾರ ಪಟ್ಟಣದ ನೆಹರು ಬಡಾವಣೆಯಲ್ಲಿ ನಡೆದಿದೆ. ನೆಹರು ಬಡಾವಣೆ ಬಲಮುರಿ ಸಿದ್ಧಿ ವಿನಾಯಕ ದೇವಸ್ಥಾನದ ಪಕ್ಕದ ನಿವಾಸಿ ಪೊನ್ನಚ್ಚನ ಪೊನ್ನಪ್ಪ ಅವರ ಪುತ್ರ ರಂಜನ್(39) ಆತ್ಮಹತ್ಯೆ ಮಾಡಿಕೊಂಡ ವ್ಯಕ್ತಿ. ಬುಧವಾರ ರಾತ್ರಿ ತನ್ನ ಮಲಗುವ ಕೋಣೆಯಲ್ಲಿ ನೇಣು ಬಿಗಿದುಕೊಂಡು ಮೃತಪಟ್ಟಿದ್ದಾನೆ. ಈ ಸಂದರ್ಭ ಪತ್ನಿ ಹಾಗೂ ತಾಯಿ ಕೂಡ ಮನೆಯಲ್ಲಿ ಇರಲಿಲ್ಲ. ತಂದೆ ಅನಾರೋಗ್ಯ ನಿಮಿತ್ತ ಅವರ ರೂಮಿನಲ್ಲಿ ಇದ್ದರು ಎಂದು ತಿಳಿದು ಬಂದಿದೆ.

ಮಹಜರು ಸಂದರ್ಭದಲ್ಲಿ ರಂಜನ್ ಜೇಬಲ್ಲಿ ಡೆತ್‌ನೋಟ್ ಸಿಕ್ಕಿದ್ದು, ಅದರಲ್ಲಿ ತನ್ನ ಸಾವಿಗೆ ತಾನೇ ಜವಾಬ್ದಾರ ಬೇರಾರೂ ಕಾರಣರಲ್ಲ. ತನ್ನ ಮೃತ ದೇಹವನ್ನು ಮಡಿಕೇರಿಯ ಮೆಡಿಕಲ್ ಕಾಲೇಜಿಗೆ ದಾನ ಮಾಡುವಂತೆ ತಿಳಿಸಿದ್ದಾರೆ ಎಂದು ಪೊಲೀಸ್ ಮೂಲಗಳು ತಿಳಿಸಿವೆ.

ನಾಳೆ ಪತ್ರಕರ್ತರ ಸಂಘದ ನೂತನ ಪದಾಧಿಕಾರಿಗಳ ಪದಗ್ರಹಣ

ಮಡಿಕೇರಿ: ಕೊಡಗು ಪತ್ರಕರ್ತರ ಸಂಘದ ನೂತನ ಪದಾಧಿಕಾರಿಗಳ ಪದಗ್ರಹಣ ಸಮಾರಂಭ ಮತ್ತು ಪತ್ರಕರ್ತರ ಸಾಂಸ್ಕೃತಿಕ ಸಂಭ್ರಮ ಮಾ. 22ರಂದು ಮಡಿಕೇರಿಯಲ್ಲಿ ಆಯೋಜಿತವಾಗಿದೆ.

ನಗರದ ರೆಡ್ ಬ್ರಿಕ್ಸ್ ಇನ್‌ನ ಸತ್ಕಾರ್ ಸಭಾಂಗಣದಲ್ಲಿ ಅಂದು ಸಂಜೆ 6 ಗಂಟೆಗೆ ಜಿಲ್ಲಾ ಚೇಂಬರ್ ಆಫ್ ಕಾಮರ್ಸ್ ಅಧ್ಯಕ್ಷ ಬಿ.ಆರ್. ನಾಗೇಂದ್ರ ಪ್ರಸಾದ್ ಉದ್ಘಾಟಿಸಲಿದ್ದು, ಸಂಘದ ಸ್ಟಿಕ್ಕರ್‌ಗಳನ್ನು ಕೂರ್ಗ್ ಹೋಟೆಲ್ಸ್, ರೆಸಾರ್ಟ್ ಅಸೋಸಿಯೇಷನ್ ಅಧ್ಯಕ್ಷ ಕುಂಡ್ಯೋಳಂಡ ದಿನೇಶ್ ಕಾರ್ಯಪ್ಪ ಬಿಡುಗಡೆಗೊಳಿಸಲಿದ್ದಾರೆ.

ಟಿ.ಎಸ್.ಚಂದ್ರಶೇಖರ್ ನಿಧನ



ಕುಶಾಲನಗರ, ಮಾ.20– ತಾಲೂಕಿನ ಶಿರಂಗಾಲ ಬಳಿಯ ನಲ್ಲೂರು ಸರ್ಕಾರಿ ಹಿರಿಯ ಪ್ರಾಥ ಮಿಕ ಶಾಲೆಯ ಪ್ರಭಾರ ಮುಖ್ಯ ಶಿಕ್ಷಕರಾಗಿದ್ದ ಮೂಲತಃ ತೊರೆನೂರು ಗ್ರಾಮದ ಟಿ.ಎಸ್.ಚಂದ್ರಶೇಖರ್(57) ಗುರುವಾರ ಬೆಳಿಗ್ಗೆ ಅನಾರೋಗ್ಯದಿಂದ ಸ್ವಗ್ರಾಮ ತೊರೆನೂರಿನಲ್ಲಿ ನಿಧನ ಹೊಂದಿದ್ದಾರೆ.

ಮೃತರು ಪತ್ನಿ ಸೇರಿದಂತೆ ಓರ್ವ ಪುತ್ರ ಮತ್ತು ಪುತ್ರಿಯನ್ನು ಅಗಲಿದ್ದಾರೆ.ಮೃತರ ಅಂತ್ಯ ಸಂಸ್ಕಾರವು ಗುರುವಾರ ಸಂಜೆ ಸ್ವಗ್ರಾಮದಲ್ಲಿ ನಡೆಯಿತು.

ಮೃತರು ಭಾರತ್ ಮತ್ತು ಸ್ಕೌಟ್ಸ್‌ನ ಸೋಮವಾರಪೇಟೆ ತಾಲೂಕು ಘಟಕದ ಕಾರ್ಯದರ್ಶಿಯಾಗಿ ಸೇವೆ ಸಲ್ಲಿಸುತ್ತಿದ್ದರು. ಮೃತರ ನಿಧನಕ್ಕೆ ಬಿಇಓ ಎಸ್.ಭಾಗ್ಯಮ್ಮ ಮತ್ತಿತರರು ಸಂತಾಪ ಸೂಚಿಸಿದ್ದಾರೆ.

ಫ್ರಿಡ್ಜ್ ಸ್ಫೋಟಗೊಂಡು ಮನೆಯಲ್ಲಿದ್ದ ಸಾಮಗ್ರಿ ಭಸ್ಮ



ಚಾಮರಾಜನಗರ,ಮಾ.20– ಫ್ರಿಡ್ಜ್ ಸ್ಫೋಟಗೊಂಡು ಮನೆಯಲ್ಲಿದ್ದ ಸಾಮಗ್ರಿ ಸುಟ್ಟು ಭಸ್ಮವಾಗಿರುವ ಘಟನೆ ಗುರುವಾರ ನಗರದಲ್ಲಿ ನಡೆದಿದೆ.

ನಗರದ ಶಂಕರಪುರ ಬಡಾವಣೆಯ ನಿವಾಸಿ ವಕೀಲ ರಾಘವೇಂದ್ರ ಅವರ ಮನೆಯಲ್ಲಿದ್ದ ಫ್ರಿಡ್ಜ್ ಏಕಾಏಕಿ ಸ್ಫೋಟಗೊಂಡಿದ್ದು ಕೂಡಲೇ ಮನೆಯಲ್ಲಿದ್ದವರು ಹೊರ ಓಡಿ ಹೋಗಿದ್ದಾರೆ. ಇದರಿಂದಾಗಿ ಯಾವುದೇ ಪ್ರಾಣಾಪಾಯ ಸಂಭವಿಸಿಲ್ಲ. ಫ್ರಿಡ್ಜ್ ಸ್ಫೋಟಗೊಂಡ ಪರಿಣಾಮ ಮನೆಯಲ್ಲಿ ಅಪಾರ ಪ್ರಮಾಣದ ಹೊಗೆ ಕಾಣಿಸಿಕೊಂಡಿದೆ. ಕೂಡಲೇ ಸ್ಥಳಕ್ಕೆ ಅಗ್ನಿಶಾಮಕದಳದ ಸಿಬ್ಬಂದಿ ಆಗಮಿಸಿ ಬೆಂಕಿಯನ್ನು ನಂದಿಸುವ ಮೂಲಕ ಹೆಚ್ಚಿನ ಅನಾಹುತವನ್ನು ತಪ್ಪಿಸಿದ್ದಾರೆ. ಓವರ್ ಲೋಡ್‌ನಿಂದಾಗಿ ಈ ರೀತಿಯಾಗಿದೆ ಎಂದು ಅಗ್ನಿಶಾಮಕ ದಳದ ಸಿಬ್ಬಂದಿ ತಿಳಿಸಿದರು.

ನಾಡ ಬಂದೂಕು ಹಿಡಿದು ಅಡ್ಡಾಡುತ್ತಿದ್ದ ವ್ಯಕ್ತಿ ಬಂಧನ

ಯಳಂದೂರು, ಮಾ.20– ತಾಲೂಕಿನ ಅಗರ–ಮಾಂಬಳ್ಳಿ ಪೊಲೀಸ್ ಠಾಣೆಯ ವ್ಯಾಪ್ತಿಯ ಸೂರಾಪುರ ಗ್ರಾಮ ಬಳಿ ಕಬಿನಿ ಕಾಲುವೆ ರಸ್ತೆಯಲ್ಲಿ ಬುಧವಾರ ಬೆಳಗಿನ ಜಾವ ಅಕ್ರಮವಾಗಿ ನಾಡಬಂದೂಕು ಹಿಡಿದು ಅಡ್ಡಾಡುತ್ತಿದ್ದ ವ್ಯಕ್ತಿಯೊಬ್ಬನನ್ನು ಪೊಲೀಸರು ಬಂಧಿಸಿದ್ದಾರೆ.



ಮಲ್ಲಿಕಾರ್ಜುನ

ಈತನನ್ನು ಕುಣಗಳ್ಳಿ ಗ್ರಾಮದ ಉಪ್ಪಾರ ಜನಾಂಗದ ಮಲ್ಲಿಕಾರ್ಜುನ ಎಂದು ಗುರುತಿಸಲಾಗಿದೆ. ಮಾ. 12 ರಂದು ಕೂಡ ಇದೇ ಗ್ರಾಮದ ಓರ್ವನನ್ನು ಬಂಧಿಸಲಾಗಿತ್ತು. ಈ ಘಟನೆ ಮಾಸುವ ಮುನ್ನವೇ ಮತ್ತೊಂದು ಘಟನೆಯೂ ಜರುಗಿದೆ. ಈತ ನಾಡ ಬಂದೂಕು ಹಿಡಿದು ಅಡ್ಡಾಡುತ್ತಿದ್ದಾನೆ ಎಂಬ ಖಚಿತ ಮಾಹಿತಿ ಮೇರೆಗೆ ಎಸ್‌ಪಿ ಡಾ.ಬಿ.ಟಿ. ಕವಿತಾ, ಡಿವೈಎಸ್‌ಪಿ ಧರ್ಮೇಂದ್ರ, ಸಿಪಿಐ ಕೆ. ಶ್ರೀಕಾಂತ್ ಮಾರ್ಗದರ್ಶನದಲ್ಲಿ ಪಿಎಸ್‌ಐ ಕರಿಬಸಪ್ಪ, ಮುಖ್ಯ ಪೇದೆ ಪರಶಿವಮೂರ್ತಿ, ಸುಕ್ರನಾಯಕ್, ಶಿವಕುಮಾರ್, ಬಸವರಾಜು ಗುತ್ತಲ್, ಬಸವರಾಜು ನೇತೃತ್ವದ ತಂಡ ದಾಳಿ ಮಾಡಿ ಈತನನ್ನು ಬಂಧಿಸಿ ದೂರು ದಾಖಲಿಸಿಕೊಂಡು ಮುಂದಿನ ಕ್ರಮ ವಹಿಸಿದ್ದಾರೆ.

ಅಕ್ರಮವಾಗಿ ಸಾಗಿಸುತ್ತಿದ್ದ 38 ಕ್ವಿಂ. ಅಕ್ಕಿ ವಶ



ಯಳಂದೂರು: ಅಕ್ರಮವಾಗಿ ಸಾಗಣೆ ಮಾಡುತ್ತಿದ್ದ 38 ಕ್ವಿಂಟಾಲ್ ಅನ್ನಭಾಗ್ಯ ಅಕ್ಕಿಯನ್ನು ವಶಪಡಿಸಿಕೊಳ್ಳಲಾಗಿದೆ.

ಕೊಳ್ಳೇಗಾಲದಿಂದ ಚಾಮರಾಜ ನಗರಕ್ಕೆ ಅಕ್ಕಿಯನ್ನು ಕಾಳಸಂತೆಯಲ್ಲಿ ಮಾರಾಟ ಮಾಡಲು ಪಡಿತರ ಅಕ್ಕಿಯನ್ನು ಟಾಟಾ ಏಸ್ ವಾಹನದಲ್ಲಿ ಸಾಗಣೆ ಮಾಡುತ್ತಿರುವ ಕುರಿತು ಖಚಿತ ಮಾಹಿತಿ ಮೇರೆಗೆ ಆಹಾರ ನಿರೀಕ್ಷಕ ಬಿಸಲಯ್ಯ ನೀಡಿದ ದೂರು ಆಧರಿಸಿ ಎಸ್‌ಐ ತಾಜುದ್ದೀನ್ ಪಟ್ಟಣದ ದೇವಸ್ಥಾನದ ಬಳಿ ವಾಹನವನ್ನು ತಡೆದು ತಪಾಸಣೆ ಮಾಡಿದ್ದಾರೆ. ಈ ವೇಳೆ ಚಾಲಕ ವಾಹನ ನಿಲ್ಲಿಸಿ ಪರಾರಿಯಾಗಿದ್ದಾನೆ. ನಂತರ ವಾಹನ ಪರಿಶೀಲಿಸಿದಾಗ 80 ಪ್ಲಾಸ್ಟಿಕ್ ಚೀಲದಲ್ಲಿ ಸಂಗ್ರಹಿಸಿದ್ದ 57,675 ಮೌಲ್ಯದ 3,845 ಕೆ.ಜಿ ಅಕ್ಕಿ ದೊರೆತಿದೆ. ಆರೋಪಿ ಫರಾನ್ ಮೇಲೆ ದೂರು ದಾಖಲಿಸಿ ಕೊಂಡಿರುವ ಪೊಲೀಸರು ಪಡಿತರ ಅಕ್ಕಿ ಮತ್ತು ವಾಹನ ವಶಕ್ಕೆ ಪಡೆದು, ತನಿಖೆ ಕೈಗೊಂಡಿದ್ದಾರೆ.

ಇಂದು ಪರಿಶಿಷ್ಟ ಜಾತಿ, ವರ್ಗಗಳ ಹಿತರಕ್ಷಣಾ ಸಮಿತಿಸಭೆ

ಚಾಮರಾಜನಗರ, ಮಾ.20– ತಾಲೂಕು ಮಟ್ಟದ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗಗಳ ಹಿತರಕ್ಷಣಾ ಸಮಿತಿ ಸಭೆಯು ತಹಶೀಲ್ದಾರ್‌ರ ಅಧ್ಯಕ್ಷತೆಯಲ್ಲಿ ಶುಕ್ರವಾರ ಬೆಳಿಗ್ಗೆ 11 ಗಂಟೆಗೆ ನಗರದ ತಾಲೂಕು ಪಂಚಾಯಿತಿ ಸಭಾಂಗಣದಲ್ಲಿ ನಡೆಯಲಿದೆ ಎಂದು ಸಮಾಜ ಕಲ್ಯಾಣ ಇಲಾಖೆ ಸಹಾಯಕ ನಿರ್ದೇಶಕರು ತಿಳಿಸಿದ್ದಾರೆ.

ಇಂದಿನಿಂದ ಎಸ್‌ಎಸ್‌ಎಲ್‌ಸಿ ಪರೀಕ್ಷೆ : ಸರ್ವ ಸಿದ್ಧತೆ

ಜಿಲ್ಲಾ ಪಂಚಾಯತ್ ಸಿಇಓ ಮೋನಾ ರೋತ್

ಚಾಮರಾಜನಗರ, ಮಾ.20 – ಎಸ್‌ಎಸ್‌ಎಲ್‌ಸಿ ಪರೀಕ್ಷೆಯು ನಾಳೆಯಿಂದ ಏ.4 ರವರೆಗೆ ನಡೆಯಲಿದ್ದು ಜಿಲ್ಲೆಯಲ್ಲಿ 47 ಪರೀಕ್ಷಾ ಕೇಂದ್ರಗಳನ್ನು ತೆರೆಯಲಾಗಿದ್ದು ಎಲ್ಲಾ ಸಿದ್ದತೆ ಮಾಡಲಾಗಿದೆ ಎಂದು ಜಿಪಂ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಮೋನಾ ರೋತ್ ಅವರು ತಿಳಿಸಿದ್ದಾರೆ.

ಪರೀಕ್ಷಾ ಕೇಂದ್ರಗಳಲ್ಲಿ ಅಗತ್ಯ ಮೂಲ ಸೌಲಭ್ಯಗಳನ್ನು ಒದಗಿಸಲು ಕ್ರಮ ವಹಿಸಲಾಗಿದೆ. ಎಲ್ಲಾ ಪರೀಕ್ಷಾ ಕೇಂದ್ರಗಳಲ್ಲಿ ಪರೀಕ್ಷಾ ಕಾರ್ಯದ ವೆಬ್ ಕಾಸ್ಟಿಂಗ್‌ಗೆ ಕ್ರಮ ತೆಗೆದುಕೊಳ್ಳಲಾಗಿದೆ. ಪರೀಕ್ಷಾ ಕೇಂದ್ರ ಗಳಲ್ಲಿ ಪ್ರಥಮ ಚಿಕಿತ್ಸಾ ಪೆಟ್ಟಿಗೆ, ಓಆರ್‌ಎಸ್ ಹಾಗೂ ಸಾಮಾನ್ಯ ಔಷಧೋಪಚಾರ ಕಿಟ್‌ನೊಂದಿಗೆ ಆರೋಗ್ಯ ಇಲಾಖೆ ವತಿಯಿಂದ ಶುಶ್ರೂಷಕರನ್ನು ನಿಯೋಜಿಸಲಾಗಿದೆ.

ವಿದ್ಯಾರ್ಥಿಗಳು ಪರೀಕ್ಷಾ ಪ್ರವೇಶ ಪತ್ರಗಳನ್ನು ಹಾಜರುಪಡಿಸಿ ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮದ ಬಸ್ಸುಗಳಲ್ಲಿ ಪರೀಕ್ಷಾ ಕೇಂದ್ರಕ್ಕೆ ಉಚಿತವಾಗಿ ಪ್ರಯಾಣಿಸಬಹುದು. ಈ ಬಾರಿಯ ಎಸ್‌ಎಸ್‌ಎಲ್‌ಸಿ ಪರೀಕ್ಷಾ ಫಲಿತಾಂಶ ಸುಧಾರಣೆಗೆ ಹಲವಾರು ಕಾರ್ಯಕ್ರಮಗಳನ್ನು ರೂಪಿಸಿ ಈಗಾಗಲೇ ಅನುಷ್ಠಾನಗೊಳಿಸಲಾಗಿದೆ.



ಸಕಲ ಸಿದ್ಧತೆ : ನಾಳೆಯಿಂದ ಏ.4ರವರೆಗೆ ಜಿಲ್ಲಾದ್ಯಂತ ಎಸ್‌ಎಸ್‌ಎಲ್‌ಸಿ ಪರೀಕ್ಷೆ ಆರಂಭವಾಗಲಿದ್ದು, ಸಾರ್ವಜನಿಕ ಶಿಕ್ಷಣ ಇಲಾಖೆ ಅಗತ್ಯ ಸಿದ್ಧತೆಗಳನ್ನು ಪೂರ್ಣಗೊಳಿಸಿದೆ. ಪ್ರತಿದಿನ ಬೆಳಗ್ಗೆ 10ರಿಂದ ಮಧ್ಯಾಹ್ನ 1.15ರವರೆಗೆ ಪರೀಕ್ಷೆ ನಡೆಯಲಿದ್ದು, ಜಿಲ್ಲೆಯಲ್ಲಿ ಒಟ್ಟು 12,432 "ವಿದ್ಯಾರ್ಥಿಗಳು ನೋಂದಾವಣಿ ಮಾಡಿಸಿಕೊಂಡಿದ್ದು, ಒಟ್ಟು 47 ಪರೀಕ್ಷಾ ಕೇಂದ್ರಗಳಲ್ಲಿ ಪರೀಕ್ಷೆ ಬರೆಯಲಿದ್ದಾರೆ.

ಮೊದಲ ದಿನವಾದ ಶುಕ್ರವಾರ (ಮಾ. 21) ಪ್ರಥಮ ಭಾಷೆಯ ಪರೀಕ್ಷೆಗಳು ನಡೆಯಲಿದ್ದು, ಏ.4ರಂದು ತೃತೀಯ ಭಾಷೆ ಪರೀಕ್ಷೆಯೊಂದಿಗೆ ಮುಕ್ತಾಯವಾಗಲಿದೆ.

12,432 ವಿದ್ಯಾರ್ಥಿಗಳು ನೋಂದಣಿ: ಪರೀಕ್ಷೆಯಲ್ಲಿ 11,638 ಶಾಲಾ ಅಭ್ಯರ್ಥಿಗಳು, 156 ಖಾಸಗಿ ವಿದ್ಯಾರ್ಥಿಗಳು, 638 ಪುನರಾವರ್ತಿತ ವಿದ್ಯಾರ್ಥಿಗಳು ಸೇರಿ ಒಟ್ಟು 12,432 ಅಭ್ಯರ್ಥಿಗಳು ನೋಂದಣಿ ಮಾಡಿಸಿಕೊಂಡಿದ್ದಾರೆ. ಈ ಪೈಕಿ 6,351 ಬಾಲಕರು, 6,081 ಬಾಲಕಿಯರು ಇದ್ದಾರೆ.

ಚಾಮರಾಜನಗರ ತಾಲೂಕಿನ 15, ಗುಂಡ್ಲುಪೇಟೆ 9, ಹನೂರು 9, ಕೊಳ್ಳೇಗಾಲ 8 ಹಾಗೂ ಯಳಂದೂರು ತಾಲೂಕಿನ 4 ಸೇರಿದಂತೆ ಜಿಲ್ಲೆಯಲ್ಲಿ ಒಟ್ಟು 45 ಪರೀಕ್ಷಾ ಕೇಂದ್ರಗಳನ್ನು ಸ್ಥಾಪಿಸಲಾಗಿದೆ ಎಂದು ಶಾಲಾ ಶಿಕ್ಷಣ ಇಲಾಖೆಯ ಉಪನಿರ್ದೇಶಕರಾದ ರಾಮಚಂದ್ರರಾಜೇ ಅರಸ್ ಪತ್ರಿಕೆಗೆ ಮಾಹಿತಿ ನೀಡಿದರು.

ಕಳೆದ ಬಾರಿ ಯಾವುದೇ ಗೊಂದಲಗಳಿಲ್ಲದೇ ಸರಾಗವಾಗಿ ಪರೀಕ್ಷೆ ನಡೆಸಿ ಫಲಿತಾಂಶಗಳನ್ನು ನಿಗದಿತ ಸಮಯದಲ್ಲೇ ನೀಡಲಾಗಿತ್ತು. ಈ ಬಾರಿಯೂ ಅದೇ ರೀತಿ ಕ್ರಮಬದ್ಧವಾಗಿ ಇನ್ನೂ ಹೆಚ್ಚಿನ ಭದ್ರತೆಯಲ್ಲಿ ಪರೀಕ್ಷೆ ನಡೆಯಸಲು ಶಿಕ್ಷಣ ಇಲಾಖೆ ಸಕಲ ಸಿದ್ಧತೆ ಕೈಗೊಂಡಿದೆ ಎಂದು ತಿಳಿಸಿದರು.

ಪರೀಕ್ಷೆಯನ್ನು ಪಾರದರ್ಶಕವಾಗಿ ನಡೆಸುವ ಉದ್ದೇಶದಿಂದ ಜಿಲ್ಲೆಯ 47 ಪರೀಕ್ಷಾ ಕೇಂದ್ರಗಳಲ್ಲಿಯೂ ಸೂಕ್ತ ಭದ್ರತೆಯನ್ನು ಕೈಗೊಳ್ಳಲಾಗಿದ್ದು, ಸಿಸಿಟಿ" ಕ್ಯಾಮೆರಾ ಅಳವಡಿಸಲಾಗಿದೆ.

ಮಾ.21ರಂದು ಕನ್ನಡ (ಪ್ರಥಮ ಭಾಷೆ), ಮಾ. 24ರಂದು ಗಣಿತ, ಮಾ. 26ರಂದು ಇಂಗ್ಲೀಷ್ (ದ್ವಿತೀಯ ಭಾಷೆ), ಮಾ.29ರಂದು ಸಮಾಜ "ಜ್ಞಾನ, ಏ. 1ರಂದು ಅರ್ಥಶಾಸ್ತ್ರ, ಏ. 2ರಂದು "ಜ್ಞಾನ ಹಾಗೂ ಏ. 4 ಹಿಂದಿ (ತೃತೀಯ ಭಾಷೆ) ಪರೀಕ್ಷೆ ನಡೆಯಲಿದ್ದು, ಪರೀಕ್ಷೆ ನಡೆಸುವ ಸಂಬಂಧ ಸಕಲ ಸಿದ್ಧತೆ ಪೂರ್ಣಗೊಂಡಿದೆ ಎಂದು ಮಾಹಿತಿ ನೀಡಿದ್ದಾರೆ.

ಅಪರಿಚಿತ ಶವ ಪತ್ತೆ

ಚಾಮರಾಜನಗರ,ಮಾ.20– ನೇಣು ಬಿಗಿದ ಸ್ಥಿತಿಯಲ್ಲಿ ಅಪರಿಚಿತ ವ್ಯಕ್ತಿಯ ಶವ ತಾಲೂಕಿನ ಅಮಚವಾಡಿಯಲ್ಲಿ ಪತ್ತೆಯಾಗಿದೆ.

ಗ್ರಾಮದಲ್ಲಿನ ಪಂಚಾಯಿತಿಯ ರಸ್ತೆಯ ಬಳಿ ಇರುವ ಕುಂಬಾರ ಸಮುದಾಯ ಭವನದಲ್ಲಿ ಅಪರಿಚಿತ ಶವ ಪತ್ತೆಯಾಗಿದ್ದು, ಇದು ಕೊಲೆಯೋ ಅಥವಾ ಆತ್ಮಹತ್ಯೆಯೋ ಎಂಬ ಸಂಶಯ ಸಾರ್ವಜನಿಕ ವಲಯದಲ್ಲಿ ವ್ಯಕ್ತವಾಗಿದೆ. ಗ್ರಾಮದ ನಿಂಗರಾಜು ಎಂಬಾತ ಮೂತ್ರ ವಿಸರ್ಜನೆಗೆಂದು ತೆರಳಿದ ಸಂದರ್ಭದಲ್ಲಿ ಸಮುದಾಯದ ಭವನ ಕಡೆ ತಿರುಗಿ ನೋಡಿದಾಗ ಶವ ಪತ್ತೆಯಾಗಿದ್ದು, ಈತ ಗಾಬರಿಗೊಂಡು ಸ್ಥಳೀಯರಿಗೆ ಮಾಹಿತಿ ನೀಡಿದ್ದಾನೆ. ವಿಷಯ ತಿಳಿದ ಕೂಡಲೇ ಸಾರ್ವಜನಿಕರು ಸ್ಥಳಕ್ಕೆ ಭೇಟಿ ನೀಡಿ ಶವವನ್ನು ವೀಕ್ಷಿಸಿದರು ಈತ ಗ್ರಾಮದವನೇ ಅಥವಾ ಬೇರೆ ಊರಿನಿಂದ ಬಂದಿರುವವನೇ ಎಂಬುದು ಇನ್ನೂ ತಿಳಿದು ಬಂದಿಲ್ಲ.

ಸುದ್ದಿ ತಿಳಿದ ಕೂಡಲೇ ಸ್ಥಳಕ್ಕೆ 112 ಪೊಲೀಸರು ಭೇಟಿ ನೀಡಿದ್ದು ಹಾಗೂ ಗ್ರಾಮಾಂತರ ಪೊಲೀಸ್ ಠಾಣಾ ಪೊಲೀಸರು ಶ್ವಾನ ದಳ ಕರೆಸಿ ಸ್ಥಳ ಪರಿಶೀಲಿಸಿದ್ದಾರೆ. ಈತ ಯಾರು? ಇಲ್ಲಿಗೆ ಏತಕ್ಕಾಗಿ ಬಂದಿದ್ದಾನೆ ಇದು ಆತ್ಮಹತ್ಯೆಯೋ ಅಥವಾ ಕೊಲೆಯೊ ಎಂಬುದು ಪೊಲೀಸರ ತನಿಖೆಯಿಂದ ಬೆಳಕಿಗೆ ಬರಬೇಕಾಗಿದೆ.

ಗಾಂಜಾ ಸಾಗಿಸುತ್ತಿದ್ದ ಆರೋಪಿಯ ಬಂಧನ

ಯಳಂದೂರು: ತಾಲೂಕಿನ ವಡೆಗೆರೆ ಸಮೀಪ ಗಾಂಜಾ ಸಾಗಿಸುತ್ತಿರುವ ಬಗ್ಗೆ ಖಚಿತ ಮಾಹಿತಿ ಮೇರೆಗೆ ದಾಳಿಮಾಡಿ 130 ಗ್ರಾಂ ಒಣ ಗಾಂಜಾವನ್ನು ವಶಪಡಿಕೊಂಡಿದ್ದಾರೆ.

ಬಿಳಿಗಿರಿರಂಗನಬೆಟ್ಟದಿಂದ ಗಾಂಜಾ ಸಾಗಿಸುತ್ತಿರುವ ಸಂಬಂಧ ಖಚಿತ ಮಾಹಿತಿ ಮೇರೆಗೆ ಯಳಂದೂರು ಠಾಣೆಯ ಸಬ್ ಇನ್‌ಸ್ಪೆಕ್ಟರ್ ತಾಜುದ್ದೀನ್‌ರವರ ನೇತೃತ್ವದ ತಂಡ ವಡಗೆರೆ ಸಮೀಪ ದಾಳಿಮಾಡಿ ಬಿಳಿಗಿರಿರಂಗನಬೆಟ್ಟದ ಸೀಗೆಬೆಟ್ಟ ಪೋಡಿನ ಕುಮಾರ ಎಂಬಾತನನ್ನು ಬಂಧಿಸಿ ಗಾಂಜಾವನ್ನು ವಶಪಡಿಸಿಕೊಂಡು ಪ್ರಕರಣ ದಾಖಲಿಸಿದ್ದಾರೆ.

ಕೃಷಿ ಅಧಿಕಾರಿ ಅಮೃತೇಶ್, ಸಮಾಜ ಕಲ್ಯಾಣ ಇಲಾಖೆಯ ವಿಜಯ್, ಪೊಲೀಸ್ ಸಿಬ್ಬಂದಿಗಳಾದ ಜಡೇಸ್ವಾಮಿ, ಶುಕ್ರನಾಯಕ್, ನಾಗೇಂದ್ರ, ವಾಸುದೇವ್‌ರವರು ಹಾಜರಿದ್ದರು.

ವಿದ್ಯುತ್ ಪೂರೈಕೆಗೆ ಆಗ್ರಹಿಸಿ ರೈತ ಸಂಘ ಪ್ರತಿಭಟನೆ

ಕೊಳ್ಳೇಗಾಲ, ಮಾ.20– ಸಮರ್ಪಕ ವಿದ್ಯುತ್ ಪೂರೈಕೆಗಾಗಿ ಆಗ್ರಹಿಸಿ ಗುರುವಾರ ಕರ್ನಾಟಕ ರಾಜ್ಯ ರೈತ ಸಂಘ ಹಾಗೂ ಹಸಿರು ಸೇನೆ ಪದಾಧಿಕಾರಿಗಳು ಪ್ರೊ.ನಂಜುಂಡಸ್ವಾಮಿ ಬಣದ ಕಾರ್ಯಕರ್ತರು ಜಿಲ್ಲಾಧ್ಯಕ್ಷ ಗೌಡಳ್ಳಿ ಸೋಮಣ್ಣ ನೇತೃತ್ವದಲ್ಲಿ ಚೆಸ್ಕಾಂ ಕಚೇರಿಯ ಮುಂದೆ ಪ್ರತಿಭಟನೆ ನಡೆಸಿದರು.

ಚೆಸ್ಕಾಂ ಅಧಿಕಾರಿಗಳು ಸಮರ್ಪಕ ವಿದ್ಯುತ್ ಪೂರೈಸುವಲ್ಲಿ ವಿಫರಾಗಿದ್ದಾರೆ, ರೈತರ ಬೆನ್ನು ಮುರಿಯುವ ಕೆಲಸ ಮಾಡುವ ನಿಟ್ಟಿನಲ್ಲಿ ಸಜ್ಜಾಗಿದ್ದಾರೆ. ವಿದ್ಯುತ್ ಕಡಿತದಿಂದ ರೈತರ ಬೇಳೆ ಒಣಗುವಂತಾಗಿದೆ, ರೈತರ ಪಂಪ್ ಸೆಟ್‌ಗಳಿಗೆ ಸಮರ್ಪಕ ವಿದ್ಯುತ್ ಪೂರೈಸುವಲ್ಲಿ ವಿಫಲರಾಗಿದ್ದಾರೆ. ಅದೇ ರೀತಿ ರಾಜ್ಯ ಸರ್ಕಾರ ಸಹ ರೈತರ ಹಿತ ಕಾಯುವಲ್ಲಿ ಸಂಪೂರ್ಣ ವಿಫಲವಾಗಿದೆ ಎಂದು ಆರೋಪಿಸಿದರು

ಚೆಸ್ಕಾಂನ ಕೆಲ ಅಧಿಕಾರಿಗಳು ಟಿಸಿ ಅಳವಡಿಕೆ ವಿಚಾರದಲ್ಲಿ ಲಂಚ ಕೇಳುತ್ತಿದ್ದಾರೆ ಎಂದು ಪ್ರತಿಭಟನಾ ರೈತರು ಗಂಭೀರ ಆರೋಪ ಮಾಡಿದರು. ಸ್ಥಳಕ್ಕೆ ಹಿರಿಯ ಅಧಿಕಾರಿ ಇಇ ತಬಸ್ಸುಮ್ ಮತ್ತು ಎಇಇ ರಾಜು ಪ್ರತಿಭಟನಾಕಾರರ ಅಹವಾಲು ಸ್ವೀಕರಿಸಿ ವಾರ ಕಾಲಾವಕಾಶ ನೀಡಿದರೆ ನಿಮ್ಮ ಸಮಸ್ಯೆ ಬಗೆಹರಿಸುವುದಾಗಿ ಆಶ್ವಾಸನೆ ನೀಡಿದರು.



ಕೊಳ್ಳೇಗಾಲದ ಚೆಸ್ಕಾಂ ಕಚೇರಿ ಮುಂಭಾಗ ರೈತರು ಅಸಮರ್ಪಕ ವಿದ್ಯುತ್ ಪೂರೈಕೆ ಖಂಡಿಸಿ ಪ್ರತಿಭಟಿಸಿದರು. ಸೋಮಣ್ಣ, ಕಾಂತರಾಜು, ಚಿಕ್ಕರಾಜು ಇದ್ದರು.

ಈವೇಳೆ ಯಳಂದೂರು ತಾಲೂಕು ಅಧ್ಯಕ್ಷ ಅಲ್ಕೆರೆ ಅಗ್ರಹಾರ ನಾಗರಾಜು, ಹನೂರು ತಾಲ್ಲೂಕು ಅಧ್ಯಕ್ಷ ಚಿಕ್ಕರಾಜು, ಜಿಲ್ಲಾ ಉಪಾಧ್ಯಕ್ಷ ರಾಮಕೃಷ್ಣ, ಯಳಂದೂರು ಗೌರವಾಧ್ಯಕ್ಷ ಮಲ್ಲಗೆಹಳ್ಳಿ ಕಾಂತರಾಜು ಇನ್ನಿತರಿದ್ದರು

ಹಿರಿಯ ರಾಜಕಾರಣಿ ಸಿ.ಎಂ.ಶಿವಮಲ್ಲಪ್ಪ ನಿಧನ



ಗುಂಡ್ಲುಪೇಟೆ, ಮಾ.20– ಮಾಜಿ ಶಾಸಕ ಹಾಗೂ ಬಿಜೆಪಿ ಜಿಲ್ಲಾಧ್ಯಕ್ಷ ಸಿ.ಎಸ್. ನಿರಂಜನಕುಮಾರ್ ಅವರ ತಂದೆ ತಾಲೂಕಿನ ಚೌಡಹಳ್ಳಿ ಗ್ರಾಮದ ಹಿರಿಯ ರಾಜಕಾರಣಿ, ಗುತ್ತಿಗೆದಾರರೂ ಆದ ಸಿ.ಎಂ.ಶಿವಮಲ್ಲಪ್ಪ (84) ಗುರುವಾರ ಬೆಳಗ್ಗೆ ವಯೋಸಹಜ ಅನಾರೋಗ್ಯದಿಂದ ನಿಧನರಾದರು.

ಮೃತರು ಪತ್ನಿ ಶಿವಮ್ಮ, ಮೂವರು ಪುತ್ರಿಯರು, ಪುತ್ರ ಮತ್ತು ಅಪಾರ ಬಂಧುವರ್ಗವನ್ನು ಅಗಲಿದ್ದಾರೆ. ಮೃತರ ಸ್ವಗ್ರಾಮ ಚೌಡಹಳ್ಳಿಯಲ್ಲಿ ಅಂತ್ಯಕ್ರಿಯೆ ಶುಕ್ರವಾರ ವೀರಶೈವ ವಿಧಿವಿಧಾನದಂತೆ ಮಧ್ಯಾಹ್ನ 2 ಗಂಟೆಗೆ ನೆರವೇರಲಿದೆ ಎಂದು ಕುಟುಂಬದ ಮೂಲಗಳು ತಿಳಿಸಿದೆ. 1941ರಲ್ಲಿ ಚೌಡಹಳ್ಳಿ ಗ್ರಾಮದಲ್ಲಿ ಜನಿಸಿದ ಸಿ.ಎಂ.ಶಿವಮಲ್ಲಪ್ಪ ಪ್ರಥಮದರ್ಜೆ ಗುತ್ತಿಗೆದಾರರಾಗಿ ಅವಿಭಜಿತ ಮೈಸೂರು ಜಿಲ್ಲೆಯ ಬಹುತೇಕ ಡ್ಯಾಂಗಳ ನಿರ್ಮಾಣದ ಕಾಮಗಾರಿ ನಡೆಸಿದ್ದರು. ಅಂದಿನ ಶಾಸಕ ಹೆಚ್.ಕೆ.ಶಿವರುದ್ರಪ್ಪನವರ ಆಪ್ತರಾಗಿದ್ದ ಶಿವಮಲ್ಲಪ್ಪ ರಾಜ್ಯದ ನೀರಾವರಿ ಮಂತ್ರಿಯಾಗಿದ್ದ ಹೆಚ್.ಎಂ. ಚನ್ನಬಸಪ್ಪನವರ ಒಡನಾಡಿಯಾಗಿದ್ದರು.

ಎಸ್.ಲಿಂಗರಾಜು



ಯಳಂದೂರು,ಮಾ.20–ತಾಲೂಕು ಪಂಚಾಯಿತಿ ಮಾಜಿ ಸದಸ್ಯ ಅಂಬಳೆ ಗ್ರಾಮದ ಎಸ್.ಲಿಂಗರಾಜು ಬುಧವಾರ ಮುಂಜಾನೆ ಹೃದಯಾಘಾತದಿಂದ ತಮ್ಮ ನಿವಾಸದಲ್ಲಿ ನಿಧನರಾದರು. ಮೃತರು ಪತ್ನಿ, ಇಬ್ಬರು ಪುತ್ರರು, ಇಬ್ಬರು ಪುತ್ರಿಯರು ಬಂಧುಗಳನ್ನು ಅಗಲಿದ್ದಾರೆ. ಇವರ ಅಂತ್ಯಕ್ರಿಯೆ ಬುಧವಾರ ಸಂಜೆ ಸ್ವಗ್ರಾಮದ ಜಮೀನಿನಲ್ಲಿ ನೆರವೇರಿತು.

ಮಹದೇವಸ್ವಾಮಿ



ಯಳಂದೂರು, ಮಾ.20– ತಾಲೂಕಿನ ದುಗ್ಗಹಟ್ಟಿ ಗ್ರಾಮದ ಉಪ್ಪಾರ ಬಡಾವಣೆಯ ನಿವಾಸಿ ಮಹದೇವಸ್ವಾಮಿ(44) ಬುಧವಾರ ಬೆಳಗಿನ ಜಾವ ಹೃದಯಾಘಾತದಿಂದ ನಿಧನರಾದರು. ಮೃತರು ಪತ್ನಿ, ಪುತ್ರ ಬಂಧು–ಬಳಗ ಅಗಲಿದ್ದಾರೆ. ಅಂತ್ಯಕ್ರಿಯೆ ಸ್ವಗ್ರಾಮದ ಅವರ ಜಮೀನಿನಲ್ಲಿ ಸಂಜೆ ನೆರವೇರಿತು.



ಅವಳೇ ಕಾಂಚನ ಚಿತ್ರದಲ್ಲಿ ಜನಾರ್ಧನ್ ಮತ್ತು ಪ್ರಿಯಾ ನಾಗಣ್ಣ

ಅವಳೇ ಕಾಂಚನ

ಗ್ರಾಮೀಣ ಸೊಗಡಿನ ಹಾರರ್ ಚಿತ್ರ

ಈ ಹಿಂದೆ ಒಲವಿನ ಗೆಳತಿ, ರಕ್ಷಕ ಸೇರಿದಂತೆ ಸುಮಾರು 17 ಚಿತ್ರಗಳನ್ನು ನಿರ್ದೇಶಿಸಿದ ಹಿರಿಯ ನಿರ್ದೇಶಕ ಮಂಡ್ಯ ನಾಗರಾಜ್ ಅವರ ನಿರ್ಮಾಣ ಹಾಗೂ ನಿರ್ದೇಶನದ ಮತ್ತೊಂದು ಚಿತ್ರ ಅವಳೇ ಕಾಂಚನ ಬಿಡುಗಡೆಯ ಹಾದಿಯಲ್ಲಿದೆ. ಫ್ಯಾಮಿಲಿ ಕಂಟೆಂಟ್ ಜತೆಗೆ ಹಾರರ್ ಟಚ್ ಹೊಂದಿರುವ ಈ ಚಿತ್ರದ ಟ್ರೈಲರ್ ಇತ್ತೀಚೆಗೆ ಬಿಡುಗಡೆಯಾಯಿತು.

ಈ ಸಂದರ್ಭದಲ್ಲಿ ಮಾತನಾಡಿದ ಮಂಡ್ಯ ನಾಗರಾಜ್, ನನ್ನ ನಿರ್ದೇಶನದ 18ನೇ ಚಿತ್ರ ಲವ್, ಹಾರರ್‌ನಂಥ ಎಲ್ಲಾ ರೀತಿಯ ಮನರಂಜನಾತ್ಮಕ ಅಂಶಗಳನ್ನು ಒಳಗೊಂಡ ಈ ಚಿತ್ರದಲ್ಲಿ ಬಹುತೇಕ ಹೊಸ ಕಲಾವಿದರ ಜತೆಗೆ ಅಪೂರ್ವ, ಭೀಮಣ್ಣ ನಾಯ್ಕರಂಥ ಹಿರಿಯ ಕಲಾವಿದರೂ ನಟಿಸಿದ್ದಾರೆ. ಹಳ್ಳಿಯಲ್ಲಿ 2 ಕುಟುಂಬಗಳ ಮಧ್ಯೆ ನಡೆಯುವ ಘಟನೆಗಳು, ಪ್ರೇಮಿಗಳಿಬ್ಬರ ಪರ–ವಿರೋಧ ಚರ್ಚೆಗಳು ನಡೆದು, ಕೊನೆಗೆ ಏನೆಲ್ಲ ತಿರುವು ಪಡೆಯಿತು ಎಂಬುದನ್ನು ಹಾರರ್ ಹಿನ್ನೆಲೆಯಲ್ಲಿ ಹೇಳಿದ್ದೇನೆ. ಮಂಡ್ಯ, ಮೈಸೂರು, ಬನ್ನೂರು ಸುತ್ತಮುತ್ತ 26 ದಿನ ಚಿತ್ರದ ಶೂಟಿಂಗ್ ಮಾಡಿದ್ದೇವೆ, ಜನಾರ್ಧನ್, ಪ್ರಿಯಾ ನಾಗಣ್ಣ ಚಿತ್ರದ ನಾಯಕ, ನಾಯಕಿಯಾಗಿದ್ದು, ಹರಿಣಿ, ನಿತ್ಯ, ಶಂಕರಣ್ಣ, ರಂಗಸ್ವಾಮಿ ಉಳಿದ ಪಾತ್ರವರ್ಗದಲ್ಲಿದ್ದಾರೆ, ಚಿತ್ರವನ್ನು ಏಪ್ರಿಲ್ ವೇಳೆಗೆ ರಿಲೀಸ್ ಮಾಡುವ ಯೋಜನೆಯಿದೆ ಎಂದರು.

ನಿರ್ಮಾಪಕ, ನಿರ್ದೇಶಕ ಮಂಡ್ಯ ನಾಗರಾಜ್ ಅವರು 90ರ ದಶಕದಲ್ಲಿ ನಮ್ಮೂರ ರಾಮಾಯಣ ಚಿತ್ರದ ಮೂಲಕ ನಿರ್ಮಾಣ ನಿರ್ದೇಶನ ಆರಂಭಿಸಿದರು, ಆ ಚಿತ್ರಕ್ಕೆ ಒಳ್ಳೇ ಹೆಸರು ಬಂತು, ಸಬ್ಸಿಡಿಯೂ ಸಿಕ್ಕಿತ್ತು. ನಂತರ ಮರ್ಡರ್, ತಾಯಿಯ ಋಣ, ರಕ್ಷಕ, ಒಲವಿನ ಗೆಳತಿ ಸೇರಿದಂತೆ 18 ಚಿತ್ರಗಳನ್ನು ನಿರ್ಮಿಸಿದರು. ಹದಿನೆಂಟು ಸಿನಿಮಾ ಮಾಡುವುದು ಎಂದರೆ ಸಾಮಾನ್ಯವಲ್ಲ ಸಾಕಷ್ಟು ಏಳು ಬೀಳುಗಳನ್ನು ಕಂಡಿರುವ ಮಂಡ್ಯ ನಾಗರಾಜ್ ಅವರೀಗ ಫ್ಯಾಮಿಲಿ ಹಾರರ್ ಸಬ್ಜೆಕ್ಟ್‌ನೊಂದಿಗೆ ಗಾಂಧಿಗರದಲ್ಲಿ ಮತ್ತೊಮ್ಮೆ ಸೌಂಡ್ ಮಾಡುತ್ತಿದ್ದಾರೆ.



ನಿರ್ದೇಶಕಿಯಾದ ಹರ್ಷಿಕಾ ಪೂಣಚ್ಚ

'ಚಿ.ಸೌಜನ್ಯ' ಶೋಷಿತ ಹೆಣ್ಣುಮಕ್ಕಳ ಕಥೆ



ನಟಿ ಹಾಗೂ ಸಾಮಾಜಿಕ ಕಾರ್ಯಗಳಿಂದಲೂ ಗುರುತಿಸಿಕೊಂಡಿರುವ ನಟಿ ಹರ್ಷಿಕಾ ಪೂಣಚ್ಚ ಈಗ ನಿರ್ದೇಶಕಿಯಾಗುತ್ತಿದ್ದಾರೆ. ಕನ್ನಡದಲ್ಲಿ ಕೇವಲ ಬೆರಳೆಣಿಕೆಯಷ್ಟಿರುವ ನಿರ್ದೇಶಕಿಯರ ಸಾಲಿಗೆ ಹರ್ಷಿಕಾ ನೂತನ ಸೇರ್ಪಡೆಯಾಗಲಿದ್ದಾರೆ. ಇತ್ತೀಚೆಗೆ ಹರ್ಷಿಕಾ ಪೂಣಚ್ಚ ನಿರ್ದೇಶಿಸುತ್ತಿರುವ, ಕಂಸಾಳೆ ಫಿಲಂಸ್ ಹಾಗೂ ಭುವನ್ ಎಂಟರ್‌ಟೈನ್ಮೆಂಟ್ ಲಾಂಛನದಲ್ಲಿ ಮಧು ಮರಿಸ್ವಾಮಿ ಮತ್ತು ಭುವನ್ ಪೊನ್ನಣ್ಣ ನಿರ್ಮಿಸುತ್ತಿರುವ ಈ ಚಿತ್ರದ ಶೀರ್ಷಿಕೆ ಬಿಡುಗಡೆ ಕಾರ್ಯಕ್ರಮ ನಡೆಯಿತು. ದೇಶದಲ್ಲಿ ನಡೆದಿರುವ ಹಾಗೂ ನಡೆಯುತ್ತಿರುವ ಹೆಣ್ಣುಮಕ್ಕಳ ಶೋಷಣೆ ಕುರಿತು ಜಾಗೃತಿ ಮೂಡಿಸುವ ಕಾನ್ಸೆಪ್ಟ್ ಇರುವ ಈ ಚಿತ್ರಕ್ಕೆ "ಚಿ.ಸೌಜನ್ಯ" ಎಂದು ಹೆಸರಿಡಲಾಗಿದೆ. "ಒಂದು ಹೆಣ್ಣಿನ ಕಥೆ" ಎಂಬ ಅಡಿಬರಹ ಈ ಚಿತ್ರಕ್ಕಿದೆ.

ಈ ಸಂದರ್ಭದಲ್ಲಿ ನಿರ್ಮಾಪಕ ಭುವನ್ ಪೊನ್ನಣ್ಣ ಮಾತನಾಡುತ್ತ, ಭಾರತದಲ್ಲಿ ಪ್ರತಿವರ್ಷ ಮೂವತ್ತಾರು ಸಾವಿರಕ್ಕೂ ಅಧಿಕ ಮಹಿಳೆಯರು ಅತ್ಯಾಚಾರಕ್ಕೆ ಒಳಗಾಗುತ್ತಿದ್ದಾರೆ. ಸರಾಸರಿ ದಿನಕ್ಕೆ ನೂರು ಮಹಿಳೆಯರಂತೆ. ಈ ಬಗ್ಗೆ ಕೇಸ್ ದಾಖಲಾಗುತ್ತದೆ. ವಿಚಾರಣೆ ನಡೆಯುತ್ತದೆ. ಆದರೆ ಆ ಹೆಣ್ಣುಮಕ್ಕಳಿಗೆ ನ್ಯಾಯ ದೊರಕಿರುವುದು ತೀರ ಕಡಿಮೆ. ನಾನು ಹಾಗೂ ಹರ್ಷಿಕಾ ಇಂತಹ ಘಟನೆ ಬಗ್ಗೆ ಚರ್ಚಿಸಿ, ಅಂಥಾ ಸ್ಥಳಕ್ಕೆ ಹೋಗಿ ಸಾವಿರಾರು ಜನರೊಂದಿಗೆ ಹೋರಾಟ ಮಾಡಿದ್ದೇವೆ. ಈ ಬಗ್ಗೆ ಜನರಲ್ಲಿ ಜಾಗೃತಿ ಮೂಡಿಸಲು ಸಿನಿಮಾ ಉತ್ತಮ ಮಾಧ್ಯಮ ಅನಿಸಿತು. ಹಾಗಾಗಿ ಈ ಚಿತ್ರವನ್ನು ನಾನು ಹಾಗೂ ಮಧು ಮರಿಸ್ವಾಮಿ ಜಂಟಿಯಾಗಿ ನಿರ್ಮಿಸುತ್ತಿದ್ದೇವೆ ಎಂದು ಹೇಳಿದರು.

ಇಷ್ಟು ದಿನ ನಟಿಯಾಗಿ ಗುರುತಿಸಿಕೊಂಡಿದ್ದೆ. ಚಿತ್ರ ನಿರ್ಮಿಸುವ ಹಂಬಲವಿತ್ತು. ಆದರೆ ನಿರ್ದೇಶನ ಮಾಡುತ್ತೀನಿ ಅಂದುಕೊಂಡಿರಲಿಲ್ಲ ಎಂದ ಹರ್ಷಿಕಾ ಪೂಣಚ್ಚ, ಹೆಣ್ಣುಮಕ್ಕಳ ಶೋಷಣೆಯ ಬಗ್ಗೆ ನಾನು ಹಾಗೂ ಭುವನ್ ಸಾಕಷ್ಟು ಹೋರಾಟ ಮಾಡಿದ್ದೇವೆ. ಇಂತಹ ಸಾಮಾಜಿಕ ಕಳಕಳಿಯುಳ್ಳ ಚಿತ್ರವನ್ನು ಮಾಡಬೇಕೆಂದು ಆಸೆಯಿತ್ತು. ಹಾಗಾಗಿ ನನ್ನ ಪತಿ ಭುವನ್ ಮತ್ತು ಮಧು ಮರಿಸ್ವಾಮಿ ಅವರು ಹೆಣ್ಣುಮಕ್ಕಳ ನೋವು ಗಂಡಸರಿಗಿಂತ ಹೆಣ್ಣುಮಕ್ಕಳಿಗೆ ಜಾಸ್ತಿ ಗೊತ್ತಿರುತ್ತದೆ. ಹಾಗಾಗಿ ಈ ಚಿತ್ರವನ್ನು ನೀವೇ ನಿರ್ದೇಶನ ಮಾಡಿ ಎಂದರು. ಇದು ಯಾವುದೇ ಒಂದು ಘಟನೆಯ ಕುರಿತಾದ ಚಿತ್ರವಲ್ಲ. ದೇಶದಲ್ಲಿ ನಡೆದಿರುವ ಇಂತಹ ನೂರಾರು ಅಮಾನುಷ ಘಟನೆಗಳನ್ನಿಟ್ಟುಕೊಂಡು ಚಿತ್ರಕಥೆ ಮಾಡುತ್ತಿದ್ದೇವೆ, ನಮ್ಮ ಚಿತ್ರದ ನಾಯಕಿ ಹೆಸರು ಸೌಜನ್ಯ ಅಷ್ಟೇ. ಇಲ್ಲಿ ಸೌಜನ್ಯ ಪ್ರಕರಣ ಬರೋದೆ ಇಲ್ಲ. ಸದ್ಯ ಶೀರ್ಷಿಕೆ ಬಿಡುಗಡೆ ಮಾಡಿದ್ದೇವೆ. ಮುಂದಿನ ದಿನಗಳಲ್ಲಿ ಹೆಚ್ಚಿನ ಮಾಹಿತಿ ನೀಡುತ್ತೇವೆ ಎಂದರು. ನಟ ಕಿಶೋರ್ ಮಾತನಾಡುತ್ತ, ನಾವು ದೇಶದಲ್ಲಿ ಇಂತಹ ಎಷ್ಟೇ ಘಟನೆಗಳು ನಡೆದರೂ ನಮ್ಮ ಮನೆಯಲ್ಲಿ ನಡೆದಿಲ್ಲ ಎಂದು ಸುಮ್ಮನಿರುತ್ತೇವೆ, ಆದರೆ ಆಕೆ ಕೂಡ ಒಬ್ಬರ ಮಗಳು, ಒಬ್ಬರ ಸಹೋದರಿ ಆಗಿರುತ್ತಾರೆ. ಆ ನಿಟ್ಟಿನಲ್ಲಿ ನಾವು ಯೋಚಿಸಬೇಕು, ಇಂತಹ ವಿಷಯಗಳನ್ನು ಸಿನಿಮಾ ಮೂಲಕ ಹೇಳಿದಾಗ ಅದು ಬೇಗ ಜನರಿಗೆ ತಲುಪುತ್ತದೆ. ನಾನು ಈ ಚಿತ್ರದಲ್ಲಿ ಪೊಲೀಸ್ ಅಧಿಕಾರಿಯಾಗಿ ಕಾಣಿಸಿಕೊಳ್ಳುತ್ತಿದ್ದೇನೆ ಎಂದರು.

ಕಂಗ್ರ್ಯಾಜುಲೇಶನ್ಸ್ ಬ್ರದರ್‌ಗೆ ದುಬೈನಲ್ಲಿ ಹಾಡು ಬಿಡುಗಡೆ



ತನ್ನ ಟೈಟಲ್‌ನಿಂದಲೇ ಸುದ್ದಿಯಾಗಿದ್ದ 'ಕಂಗ್ರ್ಯಾಜುಲೇಶನ್ಸ್ ಬ್ರದರ್' ಹರಿಸಂತೋಷ್ ಅವರ ನಿರ್ಮಾಣ ಸಾರಥ್ಯದಲ್ಲಿ ಪ್ರಾರಂಭವಾಗಿದ್ದ ಈ ಚಿತ್ರದ ಚಿತ್ರೀಕರಣ ಪೂರ್ಣವಾಗಿದ್ದು, ಪೋಸ್ಟ್ ಪ್ರೊಡಕ್ಷನ್ ಕೆಲಸ ನಡೆಯುತ್ತಿದೆ, ಈ ಚಿತ್ರದ ಹಾಡನ್ನು ದುಬೈನಲ್ಲಿ ಬಿಡುಗಡೆ ಮಾಡಲು ಚಿತ್ರತಂಡ ಯೋಜನೆ ಹಾಕಿಕೊಂಡಿದ್ದು ಈ ಬಗ್ಗೆ ಪತ್ರಿಕಾಗೋಷ್ಠಿಯಲ್ಲಿ ಮಾಹಿತಿ ಹಂಚಿಕೊಂಡಿತು.

ಕಲ್ಲೂರ್ ಸಿನಿಮಾಸ್ ಪೆನ್ ಎನ್ ಪೇಪರ್ ಸ್ಟುಡಿಯೋಸ್ ಲಾಂಛನದಲ್ಲಿ ಪ್ರಶಾಂತ್ ಕಲ್ಲೂರ್ ಅವರು ನಿರ್ಮಿಸಿರುವ ಈ ಚಿತ್ರಕ್ಕೆ ಹರಿಸಂತೋಷ್ ಕಥೆ ಬರೆದು, ಕ್ರಿಯೇಟಿವ್ ಹೆಡ್ ಆಗಿ ಕಾರ್ಯ ನಿರ್ವಹಿಸಿದ್ದಾರೆ. ಚಿತ್ರದ ನಾಯಕನಾಗಿ ರಕ್ಷಿತ್‌ನಾಗ್, ನಾಯಕಿಯರಾಗಿ ಸಂಜನಾದಾಸ್ ಮತ್ತು ಅನುಶಾ ಅಲ್ಲದೆ ಹಿರಿಯನಟ ಶಶಿಕುಮಾರ್ ನಟಿಸಿದ್ದಾರೆ.

ಹರಿಸಂತೋಷ್ ಮಾತನಾಡುತ್ತ, ಈಗಿನ ದಿನಗಳಲ್ಲಿ ಹುಡುಗರಿಗೆ ಹುಡುಗಿಯರೇ ಸಿಗದಂಥ ಪರಿಸ್ಥಿತಿ ನಿರ್ಮಾಣವಾಗಿದೆ. ಇಂಥ ಸಂದರ್ಭದಲ್ಲಿ ಒಬ್ಬ ಹುಡುಗನಿಗೆ ಇಬ್ಬರು ಹುಡುಗಿಯರು ಸಿಕ್ಕಾಗ ಏನಾಗಬಹುದು? ಎಲ್ಲರೂ ಕಂಗ್ರ್ಯಾಜುಲೇಶನ್ಸ್ ಬ್ರದರ್ ಹೇಳಬಹುದು, ಇದರ ಸುತ್ತ ನಡೆಯುವ ಹಾಸ್ಯ ಘಟನೆಗಳೇ ಈ ಚಿತ್ರದ ಕಥಾವಸ್ತು, ಶಶಿಕುಮಾರ್ ನಾಯಕನ ತಂದೆಯ ಪಾತ್ರದಲ್ಲಿ ಅಭಿನಯಿಸಿದ್ದಾರೆ. ಕಾರವಾರ, ಬೆಂಗಳೂರು ಸೇರಿದಂತೆ ಅನೇಕ ಲೊಕೇಶನ್‌ಗಳಲ್ಲಿ 45 ದಿನಗಳ ಕಾಲ ಚಿತ್ರೀಕರಣ ನಡೆಸಿದ್ದೇವೆ, ನಿರ್ಮಾಪಕ ಪ್ರಶಾಂತ್ ಕಲ್ಲೂರು ಅದ್ದೂರಿಯಾಗಿ ಚಿತ್ರವನ್ನು ನಿರ್ಮಿಸಿದ್ದಾರೆ. ಮುಂದಿನ ತಿಂಗಳು ದುಬೈನಲ್ಲಿ ಈ ಚಿತ್ರದ ಮೊದಲ ಹಾಡನ್ನು ಬಿಡುಗಡೆ ಮಾಡುವ ಉದ್ದೇಶವಿದೆ ಎಂದರು.

ಹಿರಿಯ ನಟ ಶಶಿಕುಮಾರ್ ಮಾತನಾಡಿ, ಚಿತ್ರ ಮಾಡುವಾಗ ಪಕ್ಕಾ ಯೋಜನೆ ಹಾಕಿಕೊಳ್ಳುವುದು ಮುಖ್ಯ. ನಾವೆಲ್ಲಾ ಪಕ್ಕಾ ಪ್ಲಾನಿಂಗ್ ಮಾಡಿಕೊಂಡು ಕೆಲಸ ಮಾಡುತ್ತಿದ್ದೆವು. ಅಂತಹುದೇ ವಾತಾವರಣ ಚಿತ್ರರಂಗದಲ್ಲಿ ಬರಬೇಕು. ಈ ಚಿತ್ರದಲ್ಲಿ ನಾನು ನಾಯಕನ ತಂದೆಯ ಪಾತ್ರ ಮಾಡಿದ್ದೇನೆ ಎಂದರು.

ಕನ್ನಡದ ಪ್ರತಿಭೆಗಳನ್ನು ಬೆಳೆಸಲು ನಿರ್ಮಾಪಕರು ಮುಂದೆ ಬರಬೇಕು. ನಿರ್ದೇಶಕ ಪ್ರತಾಪ್ ಗಂಧರ್ವ ಅವರು ಹಾಕಿಕೊಂಡ ಯೋಜನೆಯಂತೆ ಚಿತ್ರೀಕರಣ ಮುಗಿಸಿಕೊಟ್ಟಿದ್ದಾರೆ. ಚಿತ್ರ ಚೆನ್ನಾಗಿ ಮೂಡಿಬಂದಿದೆ ಎಂದು ನಿರ್ಮಾಪಕ ಪ್ರಶಾಂತ್ ಕಲ್ಲೂರ್ ಹೇಳಿದರು. ನಿರ್ದೇಶಕ ಪ್ರತಾಪ್ ಗಂಧರ್ವ ಮಾತನಾಡಿ, ಹರಿಸಂತೋಷ್ ಅವರ ಸಹಕಾರದಿಂದ ನಿಗದಿತ ಸಮಯದಲ್ಲಿ ಚಿತ್ರವನ್ನು ಪೂರ್ಣಗೊಳಿಸಲು ಸಹಕಾರಿಯಾಗಿದೆ. ಚಿತ್ರ ಜೂನ್‌ನಲ್ಲಿ ತೆರೆಗೆ ಬರಲಿದೆ ಎಂದರು.

ಸಿನಿಪದಬಂಧ–569



ಉಮ್ಮತ್ತೂರು ಇಂದುಶೇಖರ್
ಮೊ.9880820462

1		2		3		4			■	■
	■		■		■		■	■	5	■
6			■	7						■
	■	■	■		■		■	■	■	8
	■	9	■	■	■	10		11		
12					13	■	■		■	
	■		■	■		■	14		■	
■	■		■	15			■		■	■
16				■		■	17			18
	■	■	■	■		■	■	■	■	
19			■	20						

ಹೆಸರು ______

ವಿಳಾಸ ______

______

ದೂರವಾಣಿ ಸಂಖ್ಯೆ ______

ಎಡದಿಂದ ಬಲಕ್ಕೆ

1. ಯಾದವ ಕುಲದವನಿಗೆ ಅನುಷಾಳ ಪ್ರೀತಿಯ ಕರೆ! 9
6. ವಿಜಯ್ ಅಭಿನಯದ ತಾತ್ಕಾಲಿಕ ಪ್ರಪಂಚ 3
7. ಎ. ವಿ. ಶೇಷಾಗಿರಿರಾವ್ ನಿರ್ದೇಶನದಲ್ಲಿ ಆರತಿ ಅಣ್ಣಾವ್ರ ಹೀಗೆ ಕರೆದಳು 6
10. ಎಂ. ವಿ. ರಾಜಮ್ಮ ನಿರ್ಮಾಪಕಿಯಾಗಿ ನಿರ್ಮಿಸಿದ ಚಿತ್ರ 5
12. ಹಕ್ಕಿಯೊಂದು ನಿರ್ಮಿಸಿದ ಪಂಜರ 6
14. _ _ ಸವಿ ನೆನಪು 2
15. ಶ್ರೀಗಂಧಕ್ಕೆ ಹೀಗೊಂದು ಹೆಸರು 3
16. ಶ್ರೀಮುರಳಿ ಕೊಬ್ಬಿದ ಆನೆ 4
17. ಹಣಬಲದೊಂದಿಗೆ ಬಂದ ಪ್ರಜಾಶಕ್ತಿ! 4
19. ಸುಂಟರಗಾಳಿ ಎಬ್ಬಿಸಿದ ನಟಿ 3
20. ಬಂಧನ ಹಾಡಿನಲ್ಲಿ ವಿಷ್ಣುವರ್ಧನ್ ಬರೆದ ಕಥೆ 7

ಮೇಲಿನಿಂದ ಕೆಳಕ್ಕೆ

1. ಶ್ರೀನಾಥ್, ಗೀತಾ, ಸರಿತಾ ಅಭಿನಯದ ಚಿತ್ರ 7
2. ಯಾರೇ ನೀನು ಚೆಲುವೆ ಚಿತ್ರದ ಹೀರಾಳ ಪಾತ್ರವಿಲ್ಲಿ ಅಸ್ತವ್ಯಸ್ತ 3
3. ಜಿ. ಕೆ. ಇನ್ಶಿಲ್ ಹೊಂದಿರುವ ನಿರ್ದೇಶಕ 4
4. ಸೂಪರ್ ಚಿತ್ರದ ನಟಿ 5
5. ಕುಮಾರ ಬಂಗಾರಪ್ಪ ಹೊಳೆಯುತ್ತಿದ್ದಾನೆ 2
8. ಪ್ರೇಮ್ ಒಳ್ಳೆಯ ನಡತೆಯುಳ್ಳವನು 4
9. ಪುತ್ರನ ಜೊತೆ ಪುತ್ರನ ಪುತ್ರನೂ ಇದ್ದಾನೆ 5
11. ಮನ್ಮಥನ ಹೆಂಡತಿ ಓದಿದ ಪುಸ್ತಕ 5
13. ಅನಂತನಾಗ್ – ಮಂಜುಳಾ ಅಭಿನಯದ ಚಿತ್ರ ಇಲ್ಲಿ ತಲೆಕೆಳಗು 6
16. ವೃಕ್ಷದ ನಡುವೆ ದ್ವೇಷವಿದೆ 3
18. ಗೋರಿ ಕಟ್ಟಿ ಆಡಿದ ಆಟ 3

ಸಿನಿ ಪದಬಂಧ 568ರ ಉತ್ತರ

ನಾ	ನಿ	ರು	ವು	ದೇ	ನಿ	ನ	ಗಾ	ಗಿ	■	■
ನೇ	■	ಕ್ಮಿ	■	ವ	■	ಮ್ಮೂ	■	■	ಭಾ	■
ರಾ	ಗಿ	ಣಿ	■	ನಾ	ಗ	ರ	ಮ	ಹಿ	ಮೆ	■
ಜ	■	■	■	ಗ	■	ರಾ	■	■	■	ಹಾ
ಕು	■	ಜೀ	■	■	■	ಜ	ನ್ಮ	ರ	ಹ	ಸ್ಯ
ಮಾ	ನ	ವ	ದಾ	ನ	ವ	■	■	ಣ	■	ರ
ರ	■	ಕ್ಕೆ	■	■	ಸಂ	■	ಕೋ	ವಿ	■	ತ್ನ
■	■	ಜೀ	■	ಹಂ	ತ	ಕ	■	ಕ್ರ	■	■
ಐ	ರಾ	ವ	ತ	■	ಪೂ	■	ಪ್ರೇ	ಮ	ಲೋ	ಕ
ಶಾ	■	■	■	■	ರ್ಣ	■	■	■	■	ರು
ನಿ	ರೋ	ಷ	■	ಕಾ	ಮ	ಣ್ಣ	ನ	ಮ	ಕ್ಕ	ಳು

ವಿಜೇತರು: ವೀರಭದ್ರಸ್ವಾಮಿ, ಕುವೆಂಪುನಗರ, ಮೈಸೂರು

ವಿಳಾಸ: 'ಸಿನಿಬಂಧ' ವಿಭಾಗ, 'ಮೈಸೂರು ಮಿತ್ರ' ದಿನಪತ್ರಿಕೆ, ಬನ್ನಿಮಂಟಪ, ಮೈಸೂರು–570 015

ಡಾ.ರಾಜಕುಮಾರ್, ಪುನೀತ್ ರಾಜಕುಮಾರ್ ಮರುಸೃಷ್ಟಿ ಧ್ರುವ 369



ಆಧುನಿಕ ತಂತ್ರಜ್ಞಾನದ ಮೂಲಕ ಡಾ.ರಾಜ್‌ಕುಮಾರ್, ಪುನೀತ್ ರಾಜ್‌ಕುಮಾರ್ ಅವರನ್ನು ಬೆಳ್ಳಿತೆರೆಯ ಮೇಲೆ ಮರುಸೃಷ್ಟಿಸಲು ಸಾಕಷ್ಟು ನಿರ್ದೇಶಕರು ಪ್ರಯತ್ನಿಸಿದ್ದಾರೆ. ಆ ಸಾಲಿಗೆ ಈಗ ಜಿ.ಕೆ.ಶಂಕರ್‌ನಾಗ್ ಎಂಬ ಯುವ ನಿರ್ದೇಶಕ ಹೊಸ ಸೇರ್ಪಡೆ. ಅವರು ತಮ್ಮ ನಿರ್ದೇಶನದ ಧ್ರುವ 369 ಚಿತ್ರದ ಮೂಲಕ ಈ ಮಹತ್ಕಾರ್ಯಕ್ಕೆ ಮುಂದಾಗಿದ್ದಾರೆ. ಎಐ ತಂತ್ರಜ್ಞಾನ ಉಪಯೋಗಿಸಿ, ಡಾ.ರಾಜ್‌ಕುಮಾರ್ ಹಾಗೂ ಪುನೀತ್ ರಾಜ್‌ಕುಮಾರ್ ಅವರನ್ನು ತೆರೆಮೇಲೆ ಮರುಸೃಷ್ಟಿಸುತ್ತಿದ್ದಾರೆ. ಪುನೀತ್ ಅವರ ಹುಟ್ಟುಹಬ್ಬದ ಪ್ರಯುಕ್ತ ಧ್ರುವ 369 ಚಿತ್ರದ ಟೀಸರ್ ಬಿಡುಗಡೆಯಾಗಿದ್ದು, ಇದರಲ್ಲಿ ತಂದೆ ಮಗ ಇಬ್ಬರನ್ನೂ ಅನಿಮೇಶನ್ ಮೂಲಕ ಪೌರಾಣಿಕ ಪಾತ್ರಗಳಲ್ಲಿ ತೆರೆಮೇಲೆ ತೋರಿಸಿದ್ದಾರೆ.

ಟೀಸರ್ ರಿಲೀಸ್ ನಂತರ ಮಾತನಾಡಿದ ನಿರ್ದೇಶಕ ಶಂಕರ್‌ನಾಗ್ ಕೃತ(ಸತ್ಯ) ಯುಗದಲ್ಲಿ ನಡೆದಂಥ ನೈಜ ಘಟನೆಯನ್ನು ಆಧರಿಸಿ ಈ ಚಿತ್ರಕಥೆ ಮಾಡಿದ್ದೇನೆ. ಆಕಾಶದಲ್ಲಿರುವ ಧ್ರುವ ನಕ್ಷತ್ರದ ಪ್ರತಿರೂಪವಾಗಿ ಪುನೀತ್ ರಾಜ್‌ಕುಮಾರ್ ಅವರ ಪಾತ್ರವನ್ನು ತೋರಿಸುತ್ತಿದ್ದೇವೆ. ಇವರ ತಂದೆಯಾಗಿ ಡಾ.ರಾಜಕುಮಾರ್ ಅವರನ್ನು ಸೃಷ್ಟಿಸಿದ್ದು, ಇಬ್ಬರ ಬಾಂಧವ್ಯದ ಸನ್ನಿವೇಶಗಳು ಕಣ್ಣಿಗೆ ಕಟ್ಟುವಂತಿದೆ. ಇವರನ್ನು ಮಾದರಿಯಾಗಿಟ್ಟುಕೊಂಡು ಈಗಿನ ಜನ ಹೊಸದಾಗಿ ಏನನ್ನು ಕಂಡುಹಿಡಿಯುತ್ತಾರೆ ಎನ್ನುವುದೇ ಚಿತ್ರದ ಕಾನ್ಸೆಪ್ಟ್, ಪುನೀತ್ ರಾಜ್‌ಕುಮಾರ್ ಅವರ ಅಭಿಮಾನಿಯಾಗಿ, ಅವರನ್ನು ಮರುಸೃಷ್ಟಿ ಮಾಡಬೇಕೆಂಬ ನನ್ನ ಪರಿಕಲ್ಪನೆಗೆ ನಿರ್ಮಾಪಕರು ಬೆಂಬಲ ನೀಡಿದರು. ಸನಾತನ ಧರ್ಮಕ್ಕಿಂತ, ಪ್ರಸ್ತುತ ಸನಾತನ ವಿಜ್ಞಾನವನ್ನು ತಿಳಿದುಕೊಳ್ಳಬೇಕಾಗಿದೆ. ನಾವು ಯಾವ ರೀತಿ ಅಭಿವೃದ್ಧಿಯಾಗಬೇಕು. ಅಲ್ಲದೆ ಮೌಲ್ಯಗಳನ್ನು ಬೆಳಸಿಕೊಳ್ಳಬೇಕು ಎಂಬುದನ್ನು ಕೂಡ ಈ ಚಿತ್ರದಲ್ಲಿ ಹೇಳಿದ್ದೇವೆ. ಚಿತ್ರದ ಶೇ. 45ರಷ್ಟು ಭಾಗ ಗ್ರಾಫಿಕ್ಸ್‌ನಲ್ಲಿದ್ದು, 369 ದೈವಿಕ ಸಂಖ್ಯೆ ಎಂದು ತೋರಿಸಿದ್ದೇವೆ ಗ್ರಹಗಳ ಬಗ್ಗೆ ಯಾರಿಗೂ ತಿಳಿಯದ ವಿಷಯಗಳನ್ನು ನಾವಿಲ್ಲಿ ಹೇಳಲು ಪ್ರಯತ್ನಿಸಿದ್ದೇವೆ. ಮೇ ತಿಂಗಳಲ್ಲಿ ಚಿತ್ರವನ್ನು ರಿಲೀಸ್ ಮಾಡುವ ಯೋಜನೆಯೂ ಇದೆ ಎಂದು ವಿವರಿಸಿದರು. 1.40 ನಿಮಿಷ ಅವಧಿಯ ಈ ಟೀಸರ್‌ನಲ್ಲಿ ಡಾ.ರಾಜಕುಮಾರ್ ಮತ್ತು ಡಾ.ಪುನೀತ್ ರಾಜಕುಮಾರ್ ವೀರಯೋಧರಾಗಿ ಕಾಣಿಸಿಕೊಂಡಿದ್ದಾರೆ, ಮಂಗಳೂರು ಮೂಲದ ಶ್ರೀಕೃಷ್ಣ ಕಾಂತಿಲ ಅವರು ಅಚಿಂತ್ಯ ಸ್ಟುಡಿಯೋಸ್ ಬ್ಯಾನರ್ ಅಡಿಯಲ್ಲಿ ಈ ಚಿತ್ರವನ್ನು ನಿರ್ಮಾಣ ಮಾಡಿದ್ದಾರೆ.

ಮಂಗಳೂರು, ಬೆಂಗಳೂರು, ನಂದಿಬೆಟ್ಟ, ಚಿಕ್ಕಬಳ್ಳಾಪುರ, ಜವಹರಲಾಲ್ ನೆಹರು ತಾರಾಲಯದಲ್ಲಿ ಚಿತ್ರದ ಚಿತ್ರೀಕರಣ ನಡೆಸಲಾಗಿದೆ. ಹಿರಿಯನಟ ರಾಘವೇಂದ್ರ ರಾಜಕುಮಾರ್ ಅವರು ರಾಜ್ಯಪಾಲರ ಪಾತ್ರದಲ್ಲಿ ಹಾಗೂ ರಮೇಶ್ ಭಟ್ ಅವರು ವಿಜ್ಞಾನಿಯಾಗಿ ಕಾಣಿಸಿಕೊಂಡಿದ್ದಾರೆ.

ತಾಯಿ, ಮಕ್ಕಳ ಆಸ್ಪತ್ರೆ ಸಿಬ್ಬಂದಿ ನಿರ್ಲಕ್ಷ್ಯ

ಆಕ್ಸಿಜನ್ ಇಲ್ಲದೇ ಆಂಬುಲೆನ್ಸ್‌ನಲ್ಲಿ ಮಗು ಸಾವು

ನಂಜನಗೂಡು, ಮಾ.20– ನಗರದ ತಾಯಿ ಮತ್ತು ಮಕ್ಕಳ ಆಸ್ಪತ್ರೆ ಸಿಬ್ಬಂದಿ ನಿರ್ಲಕ್ಷ್ಯತನ ಹಾಗೂ ಸರ್ಕಾರಿ ಆಸ್ಪತ್ರೆ ಆಂಬುಲೆನ್ಸ್‌ನಲ್ಲಿ ಆಕ್ಸಿಜನ್ ಸೌಲಭ್ಯ ವಿಲ್ಲದೆ ಮಗು ಸಾವನ್ನಪ್ಪಿದೆ ಎಂದು ಪೋಷಕರು ಆರೋಪಿಸಿದ್ದಾರೆ.

ನಗರದ ಶ್ರೀರಾಂಪುರ ಬಡಾವಣೆಯ ಕುಮಾರ್ ಹಾಗೂ ರತ್ನಮ್ಮ ದಂಪತಿ ಮಗು ಸಾವನ್ನಪ್ಪಿರುವುದು. ರತ್ನಮ್ಮ ಮಾ.17ರಂದು ನಗರದ ತಾಯಿ ಮತ್ತು ಮಕ್ಕಳ ಆಸ್ಪತ್ರೆಗೆ ಹೆರಿಗೆಗೆ ದಾಖಲಾಗಿದ್ದರು. ಹೆರಿಗೆಯಾದ ಕೂಡಲೇ ಮಗು ನೀಲಿ ಬಣ್ಣಕ್ಕೆ ತಿರುಗಿದ್ದು, ಹೆಚ್ಚಿನ ಚಿಕಿತ್ಸೆಗಾಗಿ ಮೈಸೂರಿನ ಚೆಲುವಾಂಬ ಆಸ್ಪತ್ರೆಗೆ ಕಳುಹಿಸಿಕೊಟ್ಟಿದ್ದಾರೆ. ಆದರೆ ಆಸ್ಪತ್ರೆಯಲ್ಲಿ ಮಗು ಸಾವನ್ನಪ್ಪಿದೆ. ಮಗುವಿಗೆ ಉಸಿರಾಟದ ತೊಂದರೆ ಇದ್ದರೂ ಸಹ ಆಂಬುಲೆನ್ಸ್‌ನಲ್ಲಿ ಆಕ್ಸಿಜನ್ ಕೊಡದೆ ಮತ್ತು ನಂಜನಗೂಡಿನ ತಾಯಿ ಮತ್ತು ಮಕ್ಕಳ ಆಸ್ಪತ್ರೆ ಸಿಬ್ಬಂದಿ ಹೆರಿಗೆ

ಪೋಷಕರ ಆರೋಪ

ಸಮಯದಲ್ಲಿ ನಿರ್ಲಕ್ಷ್ಯ ವಹಿಸಿದ್ದರಿಂದಾಗಿ ಮಗು ಸಾವನ್ನಪ್ಪಿದೆ ಎಂದು ಪೋಷಕರು ಆರೋಪಿಸಿದ್ದಾರೆ.

ಮಗುವಿನ ಸಂಬಂಧಿ ಲೀಲಾ ಸುದ್ದಿಗಾರರೊಂದಿಗೆ ಮಾತನಾಡಿ, ಮಗು ಹುಟ್ಟಿದ ಕೂಡಲೇ ಉಸಿರಾಟಕ್ಕೆ ತೊಂದರೆ ಇದೆ. ಆದ್ದರಿಂದ ಮೈಸೂರಿನ ಚೆಲುವಾಂಬ ಆಸ್ಪತ್ರೆಗೆ ಕರೆದುಕೊಂಡು ಹೋಗಿ ಎಂದು ತಿಳಿಸಿದ್ದರಿಂದಾಗಿ ಆಂಬುಲೆನ್ಸ್‌ನಲ್ಲಿ ಕರೆದುಕೊಂಡು ಹೋದೆವು. ಉಸಿರಾಟಕ್ಕೆ ತೊಂದರೆ ಇದ್ದರೂ ಆಂಬುಲೆನ್ಸ್‌ನಲ್ಲಿ ಮಗುವಿಗೆ ಆಕ್ಸಿಜನ್ ನೀಡಿರಲಿಲ್ಲ. ಜೊತೆಗೆ ಚೆಲುವಾಂಬ ಆಸ್ಪತ್ರೆ ವೈದ್ಯರು ಮಗು ಜನಿಸಿದ ಕೂಡಲೇ ಇಲ್ಲಿಗೆ ಕರೆದುಕೊಂಡು ಬರಬೇಕಿತ್ತು. ಅಲ್ಲದೆ ಹೆರಿಗೆಯ ಸಮಯದಲ್ಲಿ ವೈದ್ಯರು ಹಾಗೂ ಸಿಬ್ಬಂದಿ ನಿಯಮಬದ್ಧವಾಗಿ ಹೆರಿಗೆ ಮಾಡಿಸದ ಕಾರಣ ಮಗುವಿಗೆ ರಕ್ತಸ್ರಾವವಾಗಿದೆ ಎಂದು ತಿಳಿಸಿದರು. ಹೀಗಾಗಿ ಮಗುವಿನ ಸಾವಿಗೆ ತಾಯಿ ಮತ್ತು ಮಕ್ಕಳ ಆಸ್ಪತ್ರೆ ಸಿಬ್ಬಂದಿ ಮತ್ತು ಆಕ್ಸಿಜನ್ ಕೊರತೆ ಕಾರಣ ಎಂದು ಆರೋಪಿಸಿದರು. ಇನ್ನು ಹೆತ್ತ ಮಗು ಸಾವಿನಿಂದ ಕಂಗಾಲಾಗಿದ್ದ ತಾಯಿ ರೋಧನೆ ಮುಗಿಲು ಮುಟ್ಟಿತ್ತು.

ಸರ್ಕಾರಿ ಆಸ್ಪತ್ರೆ ಆಡಳಿತಾಧಿಕಾರಿ ಡಾ.ಶಿವಪ್ರಸಾದ್ ಮಾತನಾಡಿ, ಹೆರಿಗೆ ಸಮಯದಲ್ಲಿ ಸಿಬ್ಬಂದಿ ಯಾವುದೇ ನಿರ್ಲಕ್ಷ್ಯತನ ವಹಿಸಿಲ್ಲ. ಅಲ್ಲದೆ ಸಹಜ ಹೆರಿಗೆಯಾಗಿದೆ. ಕಾಂಜೆನೆಂಟಲ್ ಹಾರ್ಟ್ ಡಿಸೀಸ್ ಎಂಬ ಕಾಯಿಲೆಯಿಂದಾಗಿ ಮಗುವಿನ ಉಸಿರಾಟಕ್ಕೆ ತೊಂದರೆಯಾಗಿತ್ತು. ಹೆಚ್ಚಿನ ಚಿಕಿತ್ಸೆಗಾಗಿ ಮೈಸೂರಿನ ಆಸ್ಪತ್ರೆಗೆ ಆಂಬುಲೆನ್ಸ್‌ನಲ್ಲಿ ಕಳುಹಿಸಿಕೊಡಲಾಗಿದೆ. ಆಂಬುಲೆನ್ಸ್‌ನಲ್ಲಿ ಆಕ್ಸಿಜನ್ ಇಲ್ಲ ಎಂಬುದು ಸುಳ್ಳು. ಆ ಆಂಬುಲೆನ್ಸ್‌ನಲ್ಲಿ 2 ಆಕ್ಸಿಜನ್ ಸಿಲಿಂಡರ್‌ಗಳನ್ನು ಇಡಲಾಗಿತ್ತು ಎಂದು ಸ್ಪಷ್ಟಪಡಿಸಿದರು.

ನಂಬಿಕೆಯಂತೆ ಜೀವನದ ಸಂಗತಿ ಘಟಿಸುತ್ತವೆ

ಸುತ್ತೂರು ಶ್ರೀಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ



ಯರಗನಹಳ್ಳಿಯಲ್ಲಿ ನಡೆದ ಧಾರ್ಮಿಕ ಸಭೆಯನ್ನು ವಿವಿಧ ಮಠಾಧೀಶರು ಉದ್ಘಾಟಿಸಿದರು.

ತಿ.ನರಸೀಪುರ, ಮಾ.20– ಅವರವರ ಭಾವಕ್ಕೆ ತಕ್ಕಂತೆ, ಪ್ರತಿ ಮನುಷ್ಯನ ನಂಬಿಕೆಯಂತೆ ಜೀವನದ ಸಂಗತಿಗಳು ಘಟಿಸುತ್ತವೆ. ಹಾಗಾಗಿ ಮನುಜನ ನಂಬಿಕೆಯೇ ದೈವ ಸ್ವರೂಪಿ ಎಂದು ಸುತ್ತೂರು ಶ್ರೀಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ ತಿಳಿಸಿದರು.

ತಾಲೂಕಿನ ಯರಗನಹಳ್ಳಿಯಲ್ಲಿ ಶ್ರೀಮಲೆ ಮಹದೇಶ್ವರಸ್ವಾಮಿ ದೇಗುಲದ ಜೀರ್ಣೋದ್ಧಾರ ಮತ್ತು ಸಂಪ್ರೋಕ್ಷಣೆ ಕಾರ್ಯಕ್ರಮದ ಅಂಗವಾಗಿ ನಡೆದ ಧಾರ್ಮಿಕ ಸಭೆಯ ಸಾನಿಧ್ಯ ವಹಿಸಿ ಅವರು ಮಾತನಾಡಿದರು. ದೈವ ಸ್ವರೂಪಿಗಳು ಸತ್ಕಾರ್ಯ ಮಾಡಲು ಪ್ರತಿಯೊಂದು ಕಾಲಘಟ್ಟದಲ್ಲೂ ಅವತರಿಸಿದ್ದಾರೆ. ಆ ಪೈಕಿ ಮಲೆ ಮಹದೇಶ್ವರರು ಒಬ್ಬರು. ಮಲೆ ಮಹದೇಶ್ವರರು ಹೆಚ್ಚಾಗಿ ಅರಣ್ಯ, ದಟ್ಟವಾದ ಕಾನನಗಳಲ್ಲಿ ಸಂಚರಿಸಿರುವ ಸಂಗತಿ ಕಾಣುತ್ತೇವೆ. ಇದರ ಉದ್ದೇಶ ಗ್ರಾಮೀಣ ಪ್ರದೇಶಗಳಲ್ಲಿ ಧರ್ಮ, ದೈವತ್ವ ಮತ್ತು ಸಾಮಾಜಿಕ ಪ್ರಜ್ಞೆ ಮೂಡಿಸಿ ಜನರನ್ನು ಉತ್ತಮ ಮಾರ್ಗದತ್ತ ನಡೆಸುವ ಸದುದ್ದೇಶವಾಗಿತ್ತು ಎಂದರು.

ನಂಬಿಕೆಯೇ ದೇವರು. ದೇವರ ಇರುವಿಕೆ ಬಿಂಬಿಸಲು ನಾವು ಗುಡಿ ಗೋಪುರಗಳನ್ನು ನಿರ್ಮಿಸುತ್ತಿದ್ದೇವೆ. ದೇವರು ಸರ್ವವ್ಯಾಪಿ. ಅವರ ಇರುವಿಕೆಯೂ ಎಲ್ಲರ ಅಂತರಾತ್ಮದಲ್ಲೂ ಇದೆ. ನಾವು ಯಾವ ಮನಸ್ಥಿತಿ ಹೊಂದಿರುತ್ತೇವೆಯೋ ಅದೇ ರೀತಿಯ ಫಲಿತಾಂಶಗಳು ನಮ್ಮ ಜೀವನದಲ್ಲಿ ಘಟಿಸುತ್ತಾ ಹೋಗುತ್ತವೆ ಎಂದರು.

ಕರ್ನಾಟಕ, ತಮಿಳುನಾಡು ರಾಜ್ಯಗಳ ಅಪಾರ ಭಕ್ತರು ಮಲೆ ಮಹದೇಶ್ವರ ಸನ್ನಿಧಿಗೆ ಭೇಟಿ ನೀಡಿ ದರ್ಶನ ಪಡೆದು ಪುನೀತರಾಗುತ್ತಾರೆ. ಯಾರು ಅಂತರಾತ್ಮದ ಶಕ್ತಿಯಿಂದ ಬದುಕನ್ನು ಪವಿತ್ರಾತ್ಮವಾಗಿ ರೂಪಿಸಿಕೊಳ್ಳುತ್ತಾರೋ ಅವರು ಜಗದಲ್ಲಿ ಚಿರಸ್ಥಾಯಿಗಳಾಗುತ್ತಾರೆ. ಅಪಾರ ಭಕ್ತಿ, ಶ್ರದ್ಧೆ, ನಂಬಿಕೆ ಪೂಜೆಗೆ ಯೋಗ್ಯ. ಅಂತರಾತ್ಮ ಪ್ರೀತಿಯಿಂದ ಪೂಜೆ ಸಲ್ಲಿಸಿದಾಗ ಭಕ್ತಿ ಸಾಕಾರಗೊಳ್ಳುತ್ತದೆ. ಗ್ರಾಮದ ಸರ್ವರ ಸಹಕಾರದಿಂದ ದೇಗುಲ ರೂಪುಗೊಂಡಿದೆ. ಮಾದಪ್ಪನ ಎಲ್ಲಾ ಭಕ್ತರಿಗೂ ಸನ್ಮಂಗಳ ಉಂಟು ಮಾಡಲಿ ಎಂದು ಆಶೀರ್ವದಿಸಿದರು.

ತುಮಕೂರು ಸಿದ್ಧಗಂಗಾ ಮಠದ ಶ್ರೀ ಸಿದ್ಧಲಿಂಗ ಸ್ವಾಮೀಜಿ ಮಾತನಾಡಿದರು.

ದೇವಸ್ಥಾನ ಉದ್ಘಾಟನೆ

ಹಿನ್ನಲೆಯಲ್ಲಿ ಮುಂಜಾನೆಯಿಂದಲೇ ಸಂಪ್ರೋಕ್ಷಣೆ, ಏಕದಶ ರುದ್ರ ಸ್ಥಾಪನೆ, ರುದ್ರಾಭಿಷೇಕ, ರುದ್ರಹೋಮ ನಡೆಯಿತು. ಬೆಳಗ್ಗೆ 8.30ಕ್ಕೆ ಪೂರ್ಣಾಹುತಿ, ಅಭಿಷೇಕ ನಂತರ 10.30ಕ್ಕೆ ಮಹಾಮಂಗಳಾರತಿ ನೆರವೇರಿತು. ವಿವಿಧ ಭಾಗಗಳಿಂದ ಆಗಮಿಸಿದ್ದ ಸಾವಿರಾರು ಭಕ್ತರಿಗೆ ದಾಸೋಹ ನಡೆಯಿತು. ದೇವಸ್ಥಾನವನ್ನು ವಿವಿಧ ಬಗೆಯ ಪುಷ್ಪಗಳಿಂದ ಅಲಂಕರಿಸಲಾಗಿತ್ತು.

ವಾಟಾಳು ಮಠಾಧೀಶ ಸಿದ್ಧಲಿಂಗಶಿವಾಚಾರ್ಯ ಸ್ವಾಮೀಜಿ, ಮಹದೇಶ್ವರ ಬೆಟ್ಟದ ಸಾಲೂರು ಬೃಹಮಠದ ಶಾಂತಮಲ್ಲಿಕಾರ್ಜುನ ಸ್ವಾಮೀಜಿ, ಕನಕಪುರ ದೇಗುಲಮಠದ ಕಿರಿಯ ಚನ್ನ ಬಸವಸ್ವಾಮೀಜಿ, ದೇವನೂರು ಗುರುಮಲ್ಲೇಶ್ವರ ದಾಸೋಹ ಮಠದ ಮಹಾಂತ ಸ್ವಾಮೀಜಿ, ಹಲವಾರ ಮಠದ ಷಡಕ್ಷರ ಸ್ವಾಮೀಜಿ, ಕಳ್ಳೀಪುರ ಮಠದ ಗುರುಪಾದಸ್ವಾಮಿ, ವೀರಪ್ಪ ಒಡೆಯರ ಹುಂಡಿ ಮಠದ ರೇಣುಕಾಶಿವಾಚಾರ್ಯ ಶ್ರೀಗಳು, ಹೊಸೂರುಂಡಿ ಮಠದ ರಾಜಶೇಖರ ಶ್ರೀಗಳು, ಮಾಡ್ರಹಳ್ಳಿ ಮಠದ ಶ್ರೀ ಶಾಂತಮಲ್ಲಿಕಾರ್ಜುನ ಸ್ವಾಮೀಜಿ ಸೇರಿದಂತೆ ತಾಲೂಕಿನ ವಿವಿಧ ಮಠಾಧೀಶರು ಹಾಗೂ ಶ್ರೀಮಲೆ ಮಹದೇಶ್ವರ ಸ್ವಾಮಿ ದೇವಸ್ಥಾನ ಜೀರ್ಣೋದ್ಧಾರ ಸಮಿತಿ ಸದಸ್ಯರು, ಗ್ರಾಮಸ್ಥರು, ಯಜಮಾನರು ಹಾಜರಿದ್ದರು.

ಹಸ್ತಿಕೇರಿ ಮಠದಲ್ಲಿ ಧಾರ್ಮಿಕ ಕಾರ್ಯಕ್ರಮ ಸಮಾರೋಪ



ಧಾರ್ಮಿಕ ಕಾರ್ಯಕ್ರಮದ ಸಮಾರೋಪ ಸಮಾರಂಭ ನಡೆಯಿತು.

ತಲಕಾಡು, ಮಾ.20– ಹಳೇ ತಲಕಾಡು ಹಸ್ತಿಕೇರಿ ಮಠದ ವಿಕಾಸ ವೇದಿಕೆ ಆಶ್ರಯದಲ್ಲಿ ಲೋಕ ಕಲ್ಯಾಣಾರ್ಥ ಶನಿ ಭಗವಾನರ ಸಪ್ತಾಹ ಪಠಣ ಪಾರಾಯಣ, ಧಾರ್ಮಿಕ ಕಾರ್ಯಕ್ರಮದ ಸಮಾರೋಪ ಸಮಾರಂಭ ನಡೆಯಿತು.

ಮಠದ ಅಧ್ಯಕ್ಷ ಡಾ.ಸಿದ್ದಮಲ್ಲಿಕಾರ್ಜುನ ಸ್ವಾಮೀಜಿ ಮಾತನಾಡಿ, ಪ್ರಕೃತಿ ಮುನಿದು ವಿಶ್ವದ ನಾನಾ ಕಡೆ ಅವಘಡಗಳು ಸಂಭವಿಸುತ್ತಿವೆ. ಇದಕ್ಕೆ ಪರಿಹಾರವಾಗಿ ಪ್ರಾರ್ಥನೆ, ಪೂಜೆ, ಜಪತಪ, ಹೋಮ, ಯಜ್ಞ ಯಾಗಾದಿಗಳನ್ನು ನಡೆಸಬೇಕಾಗುತ್ತದೆ. ಹಾಗಾಗಿ ವಿಶ್ವದ ಮನುಕುಲಕ್ಕೆ ಒಳಿತಾಗಲು ಮಠದಲ್ಲಿ ಕಾರ್ಯಕ್ರಮ ಆಯೋಜಿಸಲಾಗಿದೆ ಎಂದರು.

ಬೆಂಗಳೂರು ಬೇಲಿ ಮಹಾಸಂಸ್ಥಾನ ಮಠದ ಶ್ರೀಶಿವರುದ್ರ ಸ್ವಾಮೀಜಿ ಧಾರ್ಮಿಕ ಸಮ್ಮೇಳನ ಉದ್ಘಾಟಿಸಿದರು. ತಮಿಳುನಾಡಿನ ನಾಗಸಂದ್ರ ಮಠದ ಸ್ವಾಮೀಜಿ, ಕೆಂಗೇರಿ ವಿಶ್ವಒಕ್ಕಲಿಗರ ನಿಶ್ಚಲಾನಂದ ಸ್ವಾಮೀಜಿ ಆಶೀರ್ವಚನ ನೀಡಿದರು. ಬೆಂಗಳೂರಿನ ವಿಶ್ರಾಂತ ಜಿಲ್ಲಾಧಿಕಾರಿ ವಿ.ಶಂಕರ್ ಹಾಗೂ ಸಹಕಾರ ಸಂಘದ ನಿಬಂಧಕ ಕೆ.ಹೆಚ್.ತಿಮ್ಮಯ್ಯ ಮಾತನಾಡಿದರು. ಮಂಡ್ಯ ಬಸವದಳದ ಅಧ್ಯಕ್ಷ ಗುರುಪ್ರಸಾದ್, ಜಯದೇವಣ್ಣ, ಶ್ರೀಕಂಠ ಪ್ರಸಾದ್, ಪ್ರಕಾಶ್ ಯೋಗಿ, ಓಂಕಾರ ಶಾಸ್ತ್ರಿ ಪವನ್ ಶಾಸ್ತ್ರಿ ಮತ್ತಿತರರು ಹಾಜರಿದ್ದರು.

ಗೌರವಾಧ್ಯಕ್ಷರಾಗಿ ನೇಮಕ

ಮೈಸೂರು, ಮಾ.20– ಜಿಲ್ಲಾ ಪಶು ವೈದ್ಯಕೀಯ ಪರೀಕ್ಷಕ ಸಂಘದ ಗೌರವಾಧ್ಯಕ್ಷರಾಗಿ



ಎಂ.ಜೆ. ವೆಂಕಟೇಶ್ ಅವರನ್ನು ನೇಮಕ ಮಾಡಲಾಗಿದೆ ಎಂದು ಕರ್ನಾಟಕ ರಾಜ್ಯ ಪಶು ವೈದ್ಯಕೀಯ ಪರೀಕ್ಷಕರ ಸಂಘದ ಅಧ್ಯಕ್ಷ ಡಿ.ಚಂದ್ರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ವಿಜೃಂಭಣೆಯ ಗುಜ್ಜಮ್ಮತಾಯಿ ರಥೋತ್ಸವ



ಗುಜ್ಜಮ್ಮತಾಯಿ ರಥೋತ್ಸವ ನಡೆಯಿತು.

ಮೈಸೂರು, ಮಾ.20– ತಾಲೂಕಿನ ಜಯಪುರ ಗ್ರಾಮದಲ್ಲಿ ಗುಜ್ಜಮ್ಮತಾಯಿ ರಥೋತ್ಸವ ಗುರುವಾರ ವಿಜೃಂಭಣೆಯಿಂದ ನಡೆಯಿತು.

ಗಂಗಸ್ಥಾನ ಕೆಗ್ಗೆರೆಯಲ್ಲಿ ದೇವಿ ರಥಕ್ಕೆ ಪೂಜಾ ಕೈಂಕರ್ಯ ನೆರವೇರಿಸಿ ಮೆರವಣಿಗೆಗೆ ಚಾಲನೆ ನೀಡಲಾಯಿತು. ರಥವನ್ನು ಬೃಹತ್ ಹೂವಿನ ಹಾರಗಳಿಂದ ಸಿಂಗರಿಸಲಾಗಿತ್ತು. ಭಕ್ತರು ದೇವಾಲಯ ಆವರಣಕ್ಕೆ ರಥ ಎಳೆದು ತಂದರು.

ಮಲೆಯಋಷಿ ಕೋಣಪ್ಪಸ್ವಾಮಿ, ಚಿಕ್ಕದೇವಮ್ಮ, ಕೆಂಗಾಲಮ್ಮ ದೇವರ ಸತ್ತಿಗೆಗಳು ಮತ್ತು ಬಿರುದುಗಳು ಮೆರವಣಿಗೆಯಲ್ಲಿ ಸಾಗಿದವು. ಬಾಲಕಿಯರು ದೇವಿಯ ಹಾಲರವಿ ಹೊತ್ತು ತಂದರು. ತಮಟೆ ತಾಳಕ್ಕೆ ಯುವಕರು ನಂದಿಧ್ವಜ ಕಂಬ ಹೊತ್ತು ಕುಣಿದು ಕುಪ್ಪಳಿಸಿದರು. ಹರಕೆ ಹೊತ್ತ ಭಕ್ತರು ಬಾಯಿಬೀಗ ಧರಿಸಿ ದೇವರಿಗೆ ಹರಕೆ ಸಲ್ಲಿಸಿದರು. ಮಧ್ಯಾಹ್ನ 2 ಗಂಟೆಗೆ ಪ್ರಾರಂಭವಾದ ರಥೋತ್ಸವ ಸಂಜೆ 5 ಗಂಟೆ ವೇಳೆಗೆ ಗುಜ್ಜಮ್ಮ ದೇಗುಲ ತಲುಪಿತು. ಈ ವೇಳೆ ಭಕ್ತರಿಗೆ ಮಜ್ಜಿಗೆ, ಕಲ್ಲಂಗಡಿ ಹಣ್ಣು, ಪಾನಕ ವಿತರಿಸಲಾಯಿತು. ಗ್ರಾಮಸ್ಥರು ದೇವಾಲಯ ಆವರಣದಲ್ಲಿ ಮಡೆ ಅನ್ನ ಮತ್ತು ಕೋಳಿ ಸಾಂಬಾರ್ ಪ್ರಸಾದ ಸಿದ್ದಪಡಿಸಿ ದೇವಿಗೆ ನೈವೇಧ್ಯ ನೀಡಿ ಪೂಜೆ ಸಲ್ಲಿಸಿದರು. ಕೋಣಪ್ಪ ಸ್ವಾಮಿ ಯವರ ಸತ್ತಿಗೆಯನ್ನು ಗ್ರಾಮದಲ್ಲಿ ಮೆರವಣಿಗೆ ಮಾಡಿ, ಭಕ್ತರಿಗೆ ಅನ್ನ ಸಂತರ್ಪಣೆ ಮಾಡಲಾಯಿತು. ಬುಧವಾರ ರಾತ್ರಿ ಗುಜ್ಜಮ್ಮ ತಾಯಿ ದೇಗುಲದಲ್ಲಿ ಹೋಮ ಹವನಗಳನ್ನು ನೆರವೇರಿಸಿ, ದೇವಿಗೆ ಚಿನ್ನದ ಒಡವೆಗಳನ್ನು ಧರಿಸಿ, ಹೂವಿನ ಅಲಂಕಾರ ಮಾಡಿ, ಪೂಜಾ ಕಾರ್ಯ ನಡೆಸಲಾಯಿತು. ಸುತ್ತಮುತ್ತಲ ಗ್ರಾಮಗಳಿಂದ ಆಗಮಿಸಿದ್ದ ಭಕ್ತರು ದೇವರ ದರ್ಶನ ಪಡೆದರು.

ಎರಡು ವರ್ಷದ ಹೆಣ್ಣು ಮಗು ಮಾರಾಟ; ತಂದೆ, ತಾಯಿ, ಮಧ್ಯವರ್ತಿ, ಖರೀದಿಸಿದ್ದವರ ವಿರುದ್ಧ ಕೇಸ್

ನಂಜನಗೂಡು, ಮಾ.20– ಎರಡು ವರ್ಷದ ಹೆಣ್ಣು ಮಗುವನ್ನು ಹೆತ್ತವರೇ ಮಾರಾಟ ಮಾಡಿರುವ ಪ್ರಕರಣ ನಂಜನಗೂಡಿನಲ್ಲಿ ಬೆಳಕಿಗೆ ಬಂದಿದ್ದು, ಅಂಗನವಾಡಿ ಶಿಕ್ಷಕಿಯೊಬ್ಬರು ನೀಡಿದ ಸುಳಿವಿನ ಮೇರೆಗೆ ಶಿಶು ಅಭಿವೃದ್ಧಿ ಇಲಾಖೆ ಅಧಿಕಾರಿಗಳು ಮಧ್ಯಪ್ರವೇಶಿಸಿ ಮಾರಾಟವಾಗಿದ್ದ ಮಗುವನ್ನು ರಕ್ಷಿಸಿ ಮಕ್ಕಳ ಪಾಲನಾ ಕೇಂದ್ರಕ್ಕೆ ಒಪ್ಪಿಸಿದ್ದಾರೆ.

ಈ ಸಂಬಂಧ ನಂಜನಗೂಡು ಪಟ್ಟಣ ಪೊಲೀಸ್ ಠಾಣೆಗೆ ಜಿಲ್ಲಾ ಮಕ್ಕಳ ರಕ್ಷಣಾ ಘಟಕದ ರಕ್ಷಣಾಧಿಕಾರಿ ಅಪೇಕ್ಷಿತ ಎಂಬುವರು ಗುರುವಾರ ದೂರು ನೀಡಿದ್ದು, ನಗರದ ನೀಲಕಂಠ ನಗರ ಬಡಾವಣೆ ನಿವಾಸಿ ನಾಗಮ್ಮ ಎಂಬುವರ ಪುತ್ರ ಅನಿಲ್ ಕುಮಾರ್ ಹಾಗೂ ಸೌಮ್ಯ ದಂಪತಿಯ 2 ವರ್ಷದ ಹೆಣ್ಣು ಮಗು ಮಾರಾಟವಾಗಿತ್ತು. ಈ ದಂಪತಿಗೆ 2 ಗಂಡು, ಒಂದು ಹೆಣ್ಣು ಸೇರಿದಂತೆ ಮೂವರು ಮಕ್ಕಳಿದ್ದು, ಅದೇ ಬಡಾವಣೆ ನಿವಾಸಿ ಲಕ್ಷ್ಮಮ್ಮ ಎಂಬುವರು ಹಣ ಕೊಡಿಸುವುದಾಗಿ ಪುಸಲಾಯಿಸಿ ಚಾಮರಾಜನಗರ ವ್ಯಾಪ್ತಿಯ ಒಂದು ಗ್ರಾಮಕ್ಕೆ 14 ಸಾವಿರ ರೂಗಳಿಗೆ ಮಾ.13ರಂದು ಮಾರಾಟ ಮಾಡಿಸಿದ್ದಾರೆ.

ಈ ಸಂಬಂಧ ಸ್ಥಳೀಯ ಅಂಗನವಾಡಿ ಕಾರ್ಯಕರ್ತೆ ಮಗುವಿನ ಅಜ್ಜಿಯೊಂದಿಗೆ ಮಾತನಾಡಿ, ಮಗುವನ್ನು ಮಾರಾಟ ಮಾಡಿರುವುದನ್ನು ಖಚಿತಪಡಿಸಿಕೊಂಡು ಶಿಶು ಅಭಿವೃದ್ಧಿ ಇಲಾಖೆ ಅಧಿಕಾರಿಗಳ ಗಮನಕ್ಕೆ ತಂದಿದ್ದಾರೆ. ನಂತರ ಸ್ಥಳೀಯ ಮುಖಂಡರೊಬ್ಬರು ಮಗುವನ್ನು ಖರೀದಿಸಿದ್ದವರನ್ನು ಸಂಪರ್ಕಿಸಿದಾಗ 14 ಸಾವಿರಕ್ಕೆ ಮಗು ಮಾರಾಟವಾಗಿರುವುದು ಖಚಿತವಾ ಗಿದೆ. ಈ ವೇಳೆ ಅವರು ಮಗು ಖರೀದಿಸಿದವರೊಂದಿಗೆ ಮಾತುಕತೆ ನಡೆಸಿದ್ದು, ನಮಗೆ ಹಣ ಕೊಟ್ಟರೆ ಮಗು ವಾಪಸ್ ಕೊಡುವುದಾಗಿ ತಿಳಿಸಿದ್ದಾರೆ. ಮೊದಲು ಮಗು ತಂದು ಕೊಡಿ ನಂತರ ಹಣದ ವಿಚಾರ ಮಾತನಾ ಡೋಣ ಎಂದು ಹೇಳಿದ ಬಳಿಕ ಮಗುವನ್ನು ಮಾ.17 ರಂದು ವಾಪಸ್ ತಂದು ಕೊಟ್ಟಿದ್ದಾರೆ. ಆನಂತರ ಪೊಲೀಸರು, ಶಿಶು ಅಭಿವೃದ್ಧಿ ಇಲಾಖೆ ಅಧಿಕಾರಿ ಗಳೊಂದಿಗೆ ಸಮಾಲೋಚಿಸಿ ಮಕ್ಕಳ ಪೋಷಣೆ ಮತ್ತು ರಕ್ಷಣೆಯ ಹಿತದೃಷ್ಟಿಯಿಂದ ನಾಗಮ್ಮ ಅವರೊಂದಿಗೆ ಅನಿಲ್ ಕುಮಾರ್ ಹಾಗೂ ಸೌಮ್ಯ ದಂಪತಿಯ ಮೂರು ಮಕ್ಕಳನ್ನು ಮಕ್ಕಳ ಕಲ್ಯಾಣ ಸಮಿತಿ ವಶಕ್ಕೆ ನೀಡಿದ್ದಾರೆ. ಬಳಿಕ ಮಕ್ಕಳ ಕಲ್ಯಾಣ ಸಮಿತಿಯವರು ತಾತ್ಕಾಲಿಕ ಆಶ್ರಯಕ್ಕಾಗಿ ಮಕ್ಕಳನ್ನು ಶ್ರೀ ಛಾಯಾದೇವಿ ದತ್ತು ಕೇಂದ್ರದ ವಶಕ್ಕೆ ಒಪ್ಪಿಸಿದ್ದು, ಪ್ರಕರಣದಲ್ಲಿ ಮಗು ಮಾರಾಟವಾಗಿದ್ದನ್ನು ಪೋಷಕರಿಂದ ಖಚಿತಪಡಿಸಿಕೊಂಡು, ಮಾ.20ರಂದು ನಂಜನಗೂಡು ಪಟ್ಟಣ ಪೊಲೀಸ್ ಠಾಣೆಗೆ ಮಕ್ಕಳ ರಕ್ಷಣಾಧಿಕಾರಿ, ಮಗು ಮಾರಾಟ ಮಾಡಿದ್ದ ತಂದೆ ಅನಿಲ್ ಕುಮಾರ್, ತಾಯಿ ಸೌಮ್ಯ, ಮಗು ಕೊಡಿಸಿರುವ ಲಕ್ಷ್ಮಮ್ಮ ಹಾಗೂ ಖರೀದಿಸಿದ್ದ ಚಾಮರಾಜನಗರ ಜಿಲ್ಲಾ ವ್ಯಾಪ್ತಿಯ ವ್ಯಕ್ತಿಗಳ ಮೇಲೆ ಕಾನೂನು ರೀತ್ಯಾ ಕ್ರಮ ಕೈಗೊಳ್ಳುವಂತೆ ದೂರು ನೀಡಿದ್ದಾರೆ.

ಮೂವರ ಬಂಧನ: ಪ್ರಕರಣ ಸಂಬಂಧ ನಂಜನಗೂಡು ಪಟ್ಟಣ ಪೊಲೀಸರು ಮಗು ಕೊಡಿಸಿದ್ದ ಮಧ್ಯವರ್ತಿ ಲಕ್ಷ್ಮಮ್ಮ, ತಂದೆ ಅನಿಲ್ ಕುಮಾರ್, ತಾಯಿ ಸೌಮ್ಯ ಅವರನ್ನು ವಶಕ್ಕೆ ಪಡೆದು ವಿಚಾರಣೆ ನಡೆಸುತ್ತಿದ್ದಾರೆ. ಅಲ್ಲದೇ ಮಗುವನ್ನು ಖರೀದಿಸಿದ್ದ ಚಾಮರಾಜನಗರ ಮೂಲದ ವ್ಯಕ್ತಿಗಳ ಬಂಧನಕ್ಕೆ ಬಲೆ ಬೀಸಿದ್ದಾರೆ.

ನಾಯಿ ಕಡಿತಕ್ಕೊಳಗಾದ ಮಕ್ಕಳಿಗೆ ಚೆಕ್ ವಿತರಣೆ



ನಾಯಿ ಕಡಿತಕ್ಕೊಳಗಾದ ಮಕ್ಕಳಿಗೆ ಪರಿಹಾರದ ಚೆಕ್ ವಿತರಿಸಲಾಯಿತು.

ತಿ.ನರಸೀಪುರ, ಮಾ.20– ಬೀದಿ ನಾಯಿ ಕಡಿತಕ್ಕೊಳಗಾದ ಪಟ್ಟಣ ಪುರಸಭೆ ವ್ಯಾಪ್ತಿಯ ವಿನಾಯಕ ಕಾಲೋನಿಯ ಮಕ್ಕಳಾದ ಮನ್ವಿತಾ(05) ಹಾಗೂ ಚಂದನಾ(08)ಳಿಗೆ ಪುರಸಭೆ ವತಿಯಿಂದ ಪರಿಹಾರದ ಚೆಕ್ ವಿತರಿಸಲಾಯಿತು.

ಪುರಸಭೆ ಉಪಾಧ್ಯಕ್ಷೆ ರಾಜೇಶ್ವರಿ ಎಂ. ರಾಘವೇಂದ್ರ, ನಾಯಿ ಕಡಿತಕ್ಕೊಳಗಾದ ಮಕ್ಕಳ ಮನೆಗೆ ಭೇಟಿ ನೀಡಿ ತಲಾ 5 ಸಾವಿರ ರೂ.ಗಳ ಚೆಕ್ ವಿತರಿಸಿದರು.

ಈ ವೇಳೆ ಮಾತನಾಡಿದ ಅವರು, ನಾಯಿ ಹಾವಳಿ ತಡೆಗೆ ಪುರಸಭೆಯಿಂದ ಅಗತ್ಯ ಕ್ರಮ ಕೈಗೊಳ್ಳಲಾಗುವುದು. ನಿವಾಸಿಗಳು ಯಾವುದೇ ಆತಂಕಕ್ಕೊಳಗಾಗುವುದು ಬೇಡ ಎಂದು ಭರವಸೆ ನೀಡಿದರು. ಈ ವೇಳೆ ಪುರಸಭೆ ಆರೋಗ್ಯಾಧಿಕಾರಿ ಮಧು ಹಾಜರಿದ್ದರು.

ಗೃಹ ನಿರ್ಮಾಣ ಸಹಕಾರ ಸಂಘಕ್ಕೆ ಆಯ್ಕೆ



ಮೈಸೂರು ವಿಭಾಗ ಮಟ್ಟದ ಪ.ಜಾತಿ ಮತ್ತು ಪ.ಪಂಗಡಗಳ ಸರ್ಕಾರಿ ನೌಕರರ ಗೃಹ ನಿರ್ಮಾಣ ಸಹಕಾರ ಸಂಘದ ಅಧ್ಯಕ್ಷರಾಗಿ ಎಂ.ಎಸ್.ಗಂಗಾಧರ್, ಉಪಾಧ್ಯಕ್ಷರಾಗಿ ಪಿ.ರಾಘವೇಂದ್ರ, ನಿರ್ದೇಶಕರಾಗಿ ಬಿ.ಮರಿಸ್ವಾಮಿ, ಎಂ.ಡಿ.ಮಹದೇವಸ್ವಾಮಿ, ಬಿ.ಶಿವಮ್ಮ, ಎಸ್.ನಾಗರಾಜು, ಎಂ.ಎಸ್.ದಯಾನಂದಸ್ವಾಮಿ, ಹೆಚ್.ಎಂ.ವಿಜಯಕುಮಾರ್, ಡಾ.ಶಿವರಾಮಕೃಷ್ಣ, ಎ.ಶಿವಪ್ಪ, ಎಸ್.ರಾಜೇಂದ್ರ ಪ್ರಸಾದ್, ಬಿ.ವಿ.ರಾಜಶೇಖರ ಮೂರ್ತಿ, ಬಿ.ಕೆ.ವೆಂಕಟೇಶ್, ಎಸ್.ವಸಂತಕುಮಾರಿ ಆಯ್ಕೆಯಾಗಿದ್ದಾರೆ.

ಅಧಿವೇಶನದಲ್ಲಿ ಜೀತ ಮುಕ್ತರ ಬಗ್ಗೆ ಪ್ರಸ್ತಾಪ

ನಿರುದ್ಯೋಗಿಗಳಿಗಾಗಿ ಉದ್ಯೋಗ ಮೇಳ ನಡೆಸಲು ಮನವಿ



ಹೆಚ್.ಡಿ.ಕೋಟೆ, ಮಾ.20– ಜೀತ ಮುಕ್ತರು ಹಾಗೂ ಬಡ ಕುಟುಂಬಗಳ ವಿದ್ಯಾವಂತರು ಕೆಲಸವಿಲ್ಲದೆ ಸಂಕಷ್ಟದಲ್ಲಿದ್ದಾರೆ. ಆದ್ದರಿಂದ ತಾಲೂಕಿನಲ್ಲಿ ಸರ್ಕಾರದ ವತಿಯಿಂದ ಉದ್ಯೋಗ ಮೇಳ ನಡೆಸಲು ಅವಕಾಶ ಮಾಡಿಕೊಡಿ ಎಂದು ಶಾಸಕ ಅನಿಲ್ ಮನವಿ ಮಾಡಿದರು.


ಅಧಿವೇಶನದಲ್ಲಿ ಬಜೆಟ್ ಮೇಲಿನ ಚರ್ಚೆಯಲ್ಲಿ ಮಾತನಾಡಿದ ಅವರು, ಹೆಚ್.ಡಿ.ಕೋಟೆ ತಾಲೂಕಿನಲ್ಲಿ ಜೀತದಿಂದ ಮುಕ್ತರಾಗಿ ಸಮಾಜ ಮುಖ್ಯವಾಹಿನಿಗೆ ಬಂದು ಜೀವನ ನಡೆಸಲು ಹೆಣಗಾಡುತ್ತಿರುವ ಜೀತಮುಕ್ತರ ಜೀವನ ಸ್ಥಿತಿಯನ್ನು ಸದನದಲ್ಲಿ ಪ್ರಸ್ತಾಪಿಸಿದರು.

ಜೀತ ಪದ್ಧತಿ ನಿರ್ಮೂಲನೆಯಾಗಿದ್ದರೂ ಈ ಪದ್ಧತಿಯಿಂದ ಹೊರ ಬಂದಿರುವ ಜೀತ ಮುಕ್ತರು ಸರ್ಕಾರದಿಂದ ಸಿಗಬೇಕಾದ ಸವಲತ್ತುಗಳಾದ ಭೂಮಿ, ಪಂಪ್‌ಸೆಟ್, ವಾಸಕ್ಕೆ ಮನೆ, ನಿವೇಶನ ಮತ್ತಿತರರ ಸವಲತ್ತು ಸಿಗದೆ ಅತಂತ್ರ ಸ್ಥಿತಿಯಲ್ಲಿದ್ದು, ಅವರಿಗೆ ಸರ್ಕಾರ ವಿಶೇಷ ಪ್ಯಾಕೇಜ್ ಘೋಷಣೆ ಮಾಡಬೇಕು ಎಂದು ಸರ್ಕಾರದ ಗಮನ ಸೆಳೆದರು.

ತಾಲೂಕಿನ ಹಲವು ಸಮಸ್ಯೆಗಳ ಬಗ್ಗೆ ಅಧಿವೇಶನದಲ್ಲಿ ಪ್ರಸ್ತಾಪಿಸುವ ಸಂದರ್ಭ ವಿಪಕ್ಷ ನಾಯಕ ಅಶೋಕ್ ಅವರು ಶಾಸಕ ಅನಿಲ್ ಅವರ ಮಾತಿಗೆ ಬೆಂಬಲ ವ್ಯಕ್ತಪಡಿಸಿದರು. ಶಾಸಕರು ಜೀತ ಮುಕ್ತರು, ನಿರುದ್ಯೋಗಿಗಳು ಹಾಗೂ ತಾಲೂಕಿನ ಅಭಿವೃದ್ಧಿ ವಿಚಾರವಾಗಿ ಸದನದಲ್ಲಿ ಚರ್ಚಿಸಿರುವುದಕ್ಕೆ ನಿರುದ್ಯೋಗಿ ಯುವಕರು, ತಾಲೂಕಿನ ಜನತೆ ಶಾಸಕರಿಗೆ ಅಭಿನಂದನೆ ಸಲ್ಲಿಸಿದ್ದಾರೆ.

ರಸ್ತೆಯಲ್ಲಿ ಬಿದ್ದಿದ್ದ ಮರಕ್ಕೆ ಬೈಕ್ ಡಿಕ್ಕಿ: ಪೇದೆ ಸಾವು

ಹುಣಸೂರು, ಮಾ.20– ರಸ್ತೆಯಲ್ಲಿ ಬಿದ್ದಿದ್ದ ಮರಕ್ಕೆ ಬೈಕ್ ಡಿಕ್ಕಿ ಹೊಡೆದ ಪರಿಣಾಮ ಹಿಂಬದಿ ಸವಾರ ಸ್ಥಳದಲ್ಲೇ ಮೃತಪಟ್ಟಿರುವ ಘಟನೆ ಬುಧವಾರ ರಾತ್ರಿ ತಾಲೂಕಿನ ಶಿರೇನಹಳ್ಳಿ ರಸ್ತೆಯಲ್ಲಿ ನಡೆದಿದೆ.



ತಾಲೂಕಿನ ಕಟ್ಟೆ ಮಳಲವಾಡಿ ಗ್ರಾಮದ ನಿವಾಸಿ ಸೀಮೆಣ್ಣೆ ಕುಳ್ಳಯ್ಯನವರ ಪುತ್ರ, ಬೆಂಗಳೂರು ಕೋರಮಂಗಲದ ಬೆಟಾಲಿಯನ್ 4 ರಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದ ಕೆಎಸ್‌ಆರ್‌ಪಿ ಪೇದೆ ಕೆ.ಸಾಗರ್ (31) ಮೃತಪಟ್ಟವರು. ಸವಾರ ವಾಸು ತೀವ್ರ ಗಾಯಗೊಂಡು ಚಿಕಿತ್ಸೆಗಾಗಿ ಆಸ್ಪತ್ರೆಗೆ ದಾಖಲಾಗಿದ್ದಾರೆ.

ವಿವರ: ತಾಲೂಕಿನ ಮಾಕೋಡು ಗ್ರಾಮದ ಜಯರಾಮೇಗೌಡ ಕಲ್ಯಾಣ ಮಂಟಪದಲ್ಲಿ ತನ್ನ ಸ್ನೇಹಿತನ ಮದುವೆ ನಡೆಯುತ್ತಿದ್ದ ಹಿನ್ನಲೆಯಲ್ಲಿ ಬುಧವಾರ ರಾತ್ರಿ ಬೈಕ್‌ನಲ್ಲಿ ಆರತಕ್ಷತೆಗೆ ಹೋಗಿ ಬರುವ ವೇಳೆ ಚಿಟ್ಟಕ್ಯಾತನಹಳ್ಳಿ ಸರ್ಕಲ್ ಪಕ್ಕ ರಸ್ತೆಯಲ್ಲಿ ಬಿದ್ದಿದ್ದ ಮರಕ್ಕೆ ಬೈಕ್ ಡಿಕ್ಕಿ ಹೊಡೆದ ಪರಿಣಾಮ ಹಿಂಬದಿ ಕುಳಿತಿದ್ದ ಸಾಗರ್ ಸ್ಥಳದಲ್ಲೇ ಸಾವನ್ನಪ್ಪಿದರೇ, ವಾಸು ತೀವ್ರ ಗಾಯಗಳೊಂದಿಗೆ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆ. ಈ ಸಂಬಂಧ ಹುಣಸೂರು ಗ್ರಾಮಾಂತರ ಠಾಣೆ ಪೊಲೀಸರು ಪ್ರಕರಣ ದಾಖಲಿಸಿಕೊಂಡು ಮುಂದಿನ ಕ್ರಮ ಕೈಗೊಂಡಿದ್ದಾರೆ.

ಮೂಗೂರಲ್ಲಿ ಪುನೀತ್ ರಾಜ್‌ಕುಮಾರ್ ಹುಟ್ಟುಹಬ್ಬ



ಪುನೀತ್ ರಾಜ್‌ಕುಮಾರ್ ಹುಟ್ಟುಹಬ್ಬ ಆಚರಿಸಲಾಯಿತು.

ಮೂಗೂರು, ಮಾ.20– ಗ್ರಾಮದ ಅಪ್ಪು ಅಭಿಮಾನಿ ಬಳಗದಿಂದ ಪವರ್‌ಸ್ಟಾರ್ ಪುನೀತ್ ರಾಜ್‌ಕುಮಾರ್ ಅವರ 50ನೇ ಹುಟ್ಟುಹಬ್ಬವನ್ನು ಸಂಭ್ರಮ ಸಡಗರದಿಂದ ಆಚರಿಸಲಾಯಿತು.

ಗ್ರಾಮದ ಮುಖಂಡ ಗೌಡರ ಪುಟ್ಟು ಅವರು ಪುನೀತ್ ರಾಜಕುಮಾರ್ ಭಾವಚಿತ್ರಕ್ಕೆ ಪುಷ್ಪಾರ್ಚನೆ ಮಾಡಿ ನಮನ ಸಲ್ಲಿಸಿ ಮಾತನಾಡಿ, ಪುನೀತ್ ರಾಜ್‌ಕುಮಾರ್ ಅವರು ಚಿತ್ರರಂಗದ ಮೇರು ನಟರಾಗಿ ತಮ್ಮ ಜೀವಿತದ ಕೊನೆವರೆಗೂ ದೀನ ದುರ್ಬಲರ ಏಳಿಗೆಗಾಗಿ ಶ್ರಮಿಸಿದರು. ಅವರಲ್ಲಿದ್ದ ಮಾನವೀಯತೆ ಗುಣಗಳು ಇತರರಿಗೆ ಮಾದರಿಯಾಗಿವೆ. ಇಂದು ಅವರು ನಮ್ಮೊಂದಿಗೆ ಇಲ್ಲದಿದ್ದರೂ ಕನ್ನಡಿಗರ ಮನದಲ್ಲಿ ಚಿರಸ್ಥಾಯಿಯಾಗಿ ಉಳಿದಿದ್ದಾರೆ ಎಂದರು.

ಗೌಡರ ಬೀದಿಯಲ್ಲಿ ಪುನೀತ್ ರಾಜಕುಮಾರ್ ಅವರ ಬೃಹತ್ ಫ್ಲೆಕ್ಸ್ ಬಳಿ ಪಟಾಕಿ ಸಿಡಿಸಿ, ಅನ್ನಸಂತರ್ಪಣೆ ನಡೆಸಲಾಯಿತು. ಈ ಸಂದರ್ಭ ದೊಡ್ಮನೆ ಅಭಿಮಾನಿ ಬಳಗದ ಪದಾಧಿಕಾರಿಗಳು, ಗ್ರಾಮಸ್ಥರು ಉಪಸ್ಥಿತರಿದ್ದರು.

ಇಂದಿನಿಂದ ಎಸ್‌ಎಸ್‌ಎಲ್‌ಸಿ ಪರೀಕ್ಷೆ: ಸರ್ವ ಸಿದ್ಧತೆ

ಕ್ಷೇತ್ರ ಶಿಕ್ಷಣಾಧಿಕಾರಿ ಎಸ್.ಪಿ.ಮಹದೇವ್



ಎಸ್‌ಎಸ್‌ಎಲ್‌ಸಿ ಪರೀಕ್ಷೆ ಸಂಬಂಧ ಪೂರ್ವಭಾವಿ ಸಭೆ ನಡೆಯಿತು.

ಹುಣಸೂರು, ಮಾ.20– ಪ್ರಸಕ್ತ ಸಾಲಿನ ಎಸ್‌ಎಸ್‌ಎಲ್‌ಸಿ ಪರೀಕ್ಷೆ ನಾಳೆಯಿಂದ(ಮಾ.21) ಆರಂಭಗೊಳ್ಳಲಾಗಿದ್ದು, ಇದಕ್ಕಾಗಿ ತಾಲೂಕಿನಲ್ಲಿ ಸಕಲ ಸಿದ್ಧತೆ ಕೈಗೊಳ್ಳಲಾಗಿದೆ ಎಂದು ಕ್ಷೇತ್ರ ಶಿಕ್ಷಣಾಧಿಕಾರಿ ಎಸ್.ಪಿ.ಮಹದೇವ್ ತಿಳಿಸಿದ್ದಾರೆ.

ನಗರದ ಬಿಆರ್‌ಸಿ ಕಚೇರಿಯಲ್ಲಿ ನಡೆದ ಎಸ್‌ಎಸ್‌ಎಲ್‌ಸಿ ಪರೀಕ್ಷೆ ಸಂಬಂಧ ನಡೆದ ಪೂರ್ವಭಾವಿ ಸಭೆಯಲ್ಲಿ ಮಾತನಾಡಿದ ಅವರು, ಈ ಬಾರಿ ತಾಲೂಕಿನಲ್ಲಿ ಸರ್ಕಾರಿ, ಖಾಸಗಿ ಶಾಲಾ ವಿದ್ಯಾರ್ಥಿಗಳು ಹಾಗೂ ಪುನರಾವರ್ತಿತ ವಿದ್ಯಾರ್ಥಿಗಳು ಸೇರಿದಂತೆ ಒಟ್ಟು 4316 ವಿದ್ಯಾರ್ಥಿಗಳು (2213 ಬಾಲಕರು, 2103 ಬಾಲಕಿಯರು) ಪರೀಕ್ಷೆ ಎದುರಿಸುತ್ತಿದ್ದಾರೆ. ತಾಲೂಕಿನಲ್ಲಿ 15 ಪರೀಕ್ಷಾ ಕೇಂದ್ರಗಳನ್ನು ಸ್ಥಾಪಿಸಿದ್ದು, ಈ ಪೈಕಿ ನಗರದಲ್ಲಿ ಹಾಗೂ ಹೋಬಳಿ ಮಟ್ಟದಲ್ಲಿ 4 ಮತ್ತು ಗ್ರಾಮೀಣ ಮಟ್ಟದಲ್ಲಿ 7 ಪರೀಕ್ಷಾ ಕೇಂದ್ರಗಳನ್ನು ಸ್ಥಾಪಿಸಲಾಗಿದೆ. ಪರೀಕ್ಷಾ ಕಾರ್ಯಕ್ಕಾಗಿ 366 ಅಧಿಕಾರಿ, ಸಿಬ್ಬಂದಿಗಳನ್ನು ನಿಯೋಜಿಸಲಾಗಿದೆ. ಈ ಪೈಕಿ 15 ಮುಖ್ಯ ಅಧೀಕ್ಷಕರು, ಮೂವರು ಉಪ ಅಧೀಕ್ಷಕರು, ತಲಾ 15 ಸ್ಥಾನಿಕ ಜಾಗೃತ ದಳ, ಕಸ್ಟಡಿಯನ್‌ಗಳು, 6 ಪೂರ್ಣಾವಧಿ ಅಧಿಕಾರಿಗಳು, 15 ಮೊಬೈಲ್ ಸ್ವಾಧೀನಾಧಿಕಾರಿಗಳು, 291 ಮೇಲ್ವಿಚಾರಕರು, 6 ಮಂದಿ ವಿಚಕ್ಷಣ ದಳವನ್ನು ನೇಮಕ ಮಾಡಲಾಗಿದೆ ಎಂದರು.

ಎಲ್ಲಾ ಕೇಂದ್ರಕ್ಕೂ ಸಿಸಿ ಕ್ಯಾಮರಾ: 15 ಪರೀಕ್ಷಾ ಕೇಂದ್ರಗಳಲ್ಲೂ ಸಿಸಿ ಕ್ಯಾಮರಾ ಅಳವಡಿಕೆ, ವೆಬ್ ಕಾಸ್ಟಿಂಗ್ ವ್ಯವಸ್ಥೆ ಕಲ್ಪಿಸಲಾಗಿದೆ. ಪರೀಕ್ಷಾ ಕೊಠಡಿಯಲ್ಲಿ, ಕಾರಿಡಾರ್‌ಗಳಲ್ಲಿ, ಮುಖ್ಯ ಅಧೀಕ್ಷಕರ ಕೊಠಡಿಯಲ್ಲಿ ಸಿಸಿ ಕ್ಯಾಮರಾವನ್ನು ಕಡ್ಡಾಯವಾಗಿ ಅಳವಡಿಸಲಾಗಿದ್ದು, ತಾಲೂಕಿನಾದ್ಯಂತ 300ಕ್ಕೂ ಹೆಚ್ಚು ಸಿಸಿ ಕ್ಯಾಮರಾ ಅಳವಡಿಸಲಾಗಿದೆ. ಅಲ್ಲದೇ ಪ್ರತಿ ಕೇಂದ್ರದಲ್ಲೂ ಕುಡಿಯುವ ನೀರು, ಆಸನ ವ್ಯವಸ್ಥೆ, ಪೊಲೀಸ್ ಬಂದೋಬಸ್ತ್ ಹಾಗೂ ಆರೋಗ್ಯ ಸಿಬ್ಬಂದಿ ನೇಮಕ ಮಾಡಲಾಗಿದೆ ಎಂದರು.

ಇಸಿಓ ಹಾಗೂ ಎಸ್‌ಎಸ್‌ಎಲ್‌ಸಿ ಪರೀಕ್ಷೆ ನೋಡಲ್ ಅಧಿಕಾರಿ ಹೇಮಂತ್ ಕುಮಾರ್ ಮಾತನಾಡಿ, ಕಳೆದ ಎಸ್‌ಎಸ್‌ಎಲ್‌ಸಿ ಪರೀಕ್ಷೆ ಫಲಿತಾಂಶದಲ್ಲಿ ಹುಣಸೂರು ಜಿಲ್ಲೆಗೆ 6ನೇ ಸ್ಥಾನ ಪಡೆದಿದ್ದರಿಂದ ಈ ಬಾರಿ ಮೊದಲ ಸ್ಥಾನಕ್ಕೇರುವ ಗುರಿಯೊಂದಿಗೆ ಕಳೆದ 4 ತಿಂಗಳಿಂದ ಶಿಕ್ಷಕರು ಸಾಕಷ್ಟು ಶ್ರಮಿಸಿದ್ದಾರೆ. ನವೆಂಬರ್, ಡಿಸೆಂಬರ್ ತಿಂಗಳೊಳಗೆ ವಿಷಯವಾರು ಪಾಠಗಳನ್ನು ಪೂರ್ಣಗೊಳಿಸಿ ಪುನರಾವರ್ತನೆ ಆರಂಭಿಸಲಾಗಿದೆ. ಕೆಲವು ಸರ್ಕಾರಿ ಶಾಲೆಯಲ್ಲಿ ವಾರಕ್ಕೊಮ್ಮೆ ಯೂನಿಟ್ ಟೆಸ್ಟ್ ನಡೆಸಿ ಮಕ್ಕಳನ್ನು ಹೆಚ್ಚು ಸಮಯ ವ್ಯಾಸಂಗದಲ್ಲೇ ಇರುವಂತೆ ಕ್ರಮ ವಹಿಸಲಾಗಿದೆ. ಅಲ್ಲದೇ ಶಿಕ್ಷಕರಿಗೆ 6 ಬಾರಿ ವಿಷಯವಾರು ಕಾರ್ಯಾಗಾರ ನಡೆಸಲಾಗಿದೆ ಎಂದರು.

ನಿಧಾನಗತಿಯಲ್ಲಿ ಕಲಿಯುವ ವಿದ್ಯಾರ್ಥಿಗಳಿಗೆ ವಿಶೇಷ ಕಾರ್ಯಾಗಾರದಡಿ ಬೆಳಗ್ಗೆ ವಿಶೇಷ ತರಗತಿ, 6 ಬಾರಿ ಪ್ರಶ್ನೆ ಪತ್ರಿಕೆ ಕಾರ್ಯಾಗಾರ, ಸಂಜೆ ನಂತರ ಗುಂಪು ಅಧ್ಯಯನ, ಬಿಇಓ ನೇತೃತ್ವದಲ್ಲಿ ಹೋಬಳಿ ಮತ್ತು ಶಾಲಾ ಮಟ್ಟದಲ್ಲಿ ತಾಯಂದಿರ ಸಭೆ ಆಯೋಜಿಸಿ ಮಕ್ಕಳನ್ನು ಓದಿನಲ್ಲಿ ತೊಡಗಿಸುವಂತೆ ಪ್ರೇರೇಪಿಸುವಂತೆ ಕೋರಲಾಗಿದೆ ಎಂದರು.

ಶಾಸಕರಿಂದ ಪರೀಕ್ಷಾ ಕೈಪಿಡಿ ವಿತರಣೆ: ತಾಲೂಕಿನ 4316 ವಿದ್ಯಾರ್ಥಿಗಳಿಗೆ ಶಾಸಕ ಜಿ.ಡಿ.ಹರೀಶ್‌ಗೌಡರು ಪರೀಕ್ಷಾ ಕೈಪಿಡಿ ವಿತರಿಸುವ ಮೂಲಕ ವಿದ್ಯಾರ್ಥಿಗಳ ಶೈಕ್ಷಣಿಕ ಪ್ರಗತಿಗೆ ಬೆನ್ನೆಲುಬಾಗಿ ನಿಂತಿದ್ದಾರೆ.

ಜಯಲಕ್ಷ್ಮಮ್ಮ ನಿಧನ

ಬನ್ನೂರು, ಮಾ.20– ಬನ್ನೂರಿನ ಕಂಚನಹಳ್ಳಿಯ ಶ್ರೀಪ್ರಜ್ಞಾ ಗುರುಕುಲ, ಚಿರಾಗ್ ಪದವಿ ಪೂರ್ವ ಕಾಲೇಜು ಮತ್ತು ಬುಂಡೇಗೌಡ ಮೆಮೋರಿಯಲ್ ಟ್ರಸ್ಟ್ ಸಂಸ್ಥಾಪಕ ಅಧ್ಯಕ್ಷರಾದ ಸಿದ್ದೇಗೌಡರ ತಾಯಿ ಶ್ರೀಮತಿ



ಜಯಲಕ್ಷ್ಮಿ(90) ಮಾ.18ರಂದು ಕಂಚನಹಳ್ಳಿ ಗ್ರಾಮದ ತಮ್ಮ ನಿವಾಸದಲ್ಲಿ ನಿಧನರಾದರು. ದಿವಂಗತರು ಸಿದ್ದೇಗೌಡ ಸೇರಿದಂತೆ ಐವರು ಪುತ್ರರು, ಇಬ್ಬರು ಪುತ್ರಿಯರು ಸೇರಿದಂತೆ ಅಪಾರ ಬಂಧು ಬಳಗವನ್ನು ಅಗಲಿದ್ದು, ಕಂಚನಹಳ್ಳಿ ಗ್ರಾಮದಲ್ಲಿ ಮಾ.19ರಂದು ಅಂತ್ಯಕ್ರಿಯೆ ನೆರವೇರಿಸಲಾಯಿತು ಎಂದು ಕುಟುಂಬದ ಮೂಲಗಳು ತಿಳಿಸಿದೆ.

ಮೈಸೂರು ಮಿತ್ರ

ರಂಗಾಯಣ, ಹವ್ಯಾಸಿ ರಂಗಕರ್ಮಿಗಳ ವೇದಿಕೆ ವತಿಯಿಂದ

ನಾಳೆಯಿಂದ 27ರವರೆಗೆ ವಿಶ್ವರಂಗ ಸಂಭ್ರಮ ನಾಟಕೋತ್ಸವ

ಮೈಸೂರು,ಮಾ.20(ಎಂಟಿವೈ)– ಮೈಸೂರಿನ ರಂಗಾಯಣ ಹಾಗೂ ಮೈಸೂರು ಜಿಲ್ಲಾ ಹವ್ಯಾಸಿ ರಂಗಕರ್ಮಿಗಳ ವೇದಿಕೆಯ ಸಹಯೋಗದಲ್ಲಿ ಮಾ.22ರಿಂದ 27ರವರೆಗೆ 'ವಿಶ್ವ ರಂಗ ಸಂಭ್ರಮ ನಾಟಕೋತ್ಸವ' ಆಯೋಜಿಸಲಾಗಿದೆ ಎಂದು ಜಿಲ್ಲಾ ಹವ್ಯಾಸಿ ರಂಗಕರ್ಮಿಗಳ ವೇದಿಕೆಯ ಅಧ್ಯಕ್ಷ ರಾಜೇಶ್ ಹೆಚ್.ತಲಕಾಡು ತಿಳಿಸಿದ್ದಾರೆ.

ರಂಗಾಯಣದ ಆವರಣದಲ್ಲಿರುವ ಬಿ.ವಿ. ಕಾರಂತರ ರಂಗಚಾವಡಿಯಲ್ಲಿ ಗುರುವಾರ ನಡೆದ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ವಿಶ್ವ ರಂಗ ಸಂಭ್ರಮ ನಾಟಕೋತ್ಸವದ ಅಂಗವಾಗಿ ರಂಗಾಯಣದ ಆವರಣದಲ್ಲಿ ನಾಟಕ ಪ್ರದರ್ಶನ, ವಿಚಾರ ಸಂಕಿರಣ, ಜಾನಪದ, ರಂಗಗೀತೆಗಳ ಗಾಯನ, ರಂಗ ಗೌರವ, ವಿಶ್ವ ರಂಗಭೂಮಿ ದಿನಾಚರಣೆ ರಂಗಾಯಣದ ಭೂಮಿಗೀತ ಮತ್ತು ಕಾರಂತ ರಂಗಚಾವಡಿಯಲ್ಲಿ ಜರುಗಲಿದೆ. ಏಳು ದಿನಗಳ ಕಾಲ ನಡೆಯುವ ನಾಟಕೋತ್ಸವದಲ್ಲಿ ವಿಭಿನ್ನ ನಾಟಕ ಪ್ರದರ್ಶನ ಏರ್ಪಡಿಸಲಾಗಿದೆ ಎಂದರು.

ರಂಗ ಸಂಭ್ರಮ ನಾಟಕೋತ್ಸವವನ್ನು ಮಾ.22 ರಂದು ಸಂಜೆ 6ಕ್ಕೆ ಭೂಮಿಗೀತ ಸಭಾಂಗಣದಲ್ಲಿ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ನಿರ್ದೇಶಕರಾದ ಕೆ.ಎಂ.ಗಾಯತ್ರಿ ಉದ್ಘಾಟಿಸಲಿದ್ದಾರೆ. ಶಾಸಕ ಕೆ.ಹರೀಶ್‌ಗೌಡ, ರಂಗ ನಿರ್ದೇಶಕರಾದ ಕೆ.ಆರ್. ಸುಮತಿ, ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಜಂಟಿ ನಿರ್ದೇಶಕ ವಿ.ಎನ್.ಮಲ್ಲಿಕಾರ್ಜುನಸ್ವಾಮಿ ಮುಖ್ಯ ಅತಿಥಿಗಳಾಗಿರುವರು.

ಮಾ.23ರಂದು ಬೆಳಿಗ್ಗೆ 10ಕ್ಕೆ ಕಾರಂತ ರಂಗ ಚಾವಡಿಯಲ್ಲಿ ನಡೆಯುವ ವಿಚಾರ ಸಂಕಿರಣವನ್ನು ಐಪಿಎಸ್ ಅಧಿಕಾರಿ ಧರಣಿದೇವಿ ಮಾಲಗತ್ತಿ ಉದ್ಘಾಟಿಸಲಿದ್ದು, ರಂಗ ನಿರ್ದೇಶಕ ಪ್ರೊ.ಎಸ್. ಆರ್.ರಮೇಶ್ ಅಧ್ಯಕ್ಷತೆ ವಹಿಸಲಿದ್ದಾರೆ. ಕರ್ನಾಟಕ ಸಾಹಿತ್ಯ ಅಕಾಡೆಮಿ ಅಧ್ಯಕ್ಷ ಎಲ್.ಎನ್. ಮುಕುಂದ ರಾಜ್ ಪಾಲ್ಗೊಳ್ಳಲಿದ್ದಾರೆ. ಇದೇ ವೇಳೆ ಸಿಜಿಕೆ ಅವರ ಸಾಕ್ಷ್ಯಚಿತ್ರ ಪ್ರದರ್ಶಿಸಲಾಗುತ್ತದೆ ಎಂದರು.



ಮೈಸೂರಿನ ರಂಗಾಯಣದ ರಂಗಚಾವಡಿಯಲ್ಲಿ ರಂಗಾಯಣದ ನಿರ್ದೇಶಕ ಸತೀಶ್ ತಿಪಟೂರು 'ವಿಶ್ವ ರಂಗ ಸಂಭ್ರಮ' ನಾಟಕೋತ್ಸವದ ಪೋಸ್ಟರ್ ಬಿಡುಗಡೆ ಮಾಡಿದರು.

ವಿಚಾರ ಸಂಕಿರಣದಲ್ಲಿ ಸಿಜಿಕೆ ದೃಷ್ಟಿಯಲ್ಲಿ ಆಧುನಿಕ ಕನ್ನಡ ರಂಗಭೂಮಿಯಲ್ಲಿ ತಳ ಸಮುದಾಯಗಳ ನಿರೂಪಣೆ ವಿಷಯದ ಕುರಿತು ಹೆಚ್.ಜನಾರ್ಧನ್ (ಜನ್ನಿ) ಮಾತನಾಡುವರು. ಸಂಘಟನೆ, ಸಮುದಾಯ, ಸಾಮಾಜಿಕ ಚಳವಳಿಗಳಲ್ಲಿ ಸಿಜಿಕೆ ಪಾತ್ರದ ಕುರಿತು ಗುಂಡಣ್ಣ ಚಿಕ್ಕಮಗಳೂರು ವಿಷಯ ಮಂಡಿಸಲಿದ್ದಾರೆ. ಕತ್ತಾಲೆ ಬೆಳದಿಂಗಳೊಳಗ, ಕನ್ನಡ ರಂಗಭೂಮಿಯ ಆತ್ಮಚರಿತ್ರೆಯಾಗಿ ವಿಷಯವನ್ನು ಪ್ರೊ.ಎಸ್. ಆರ್.ರಮೇಶ್ ಮಂಡಿಸುವರು ಎಂದು ಹೇಳಿದರು.

ಸಮಾರೋಪ: ಮಾ.27ರಂದು ಸಂಜೆ 6ಕ್ಕೆ ಭೂಮಿಗೀತದಲ್ಲಿ ನಡೆಯುವ ಸಮಾರೋಪ ಸಮಾರಂಭ ಹಾಗೂ ವಿಶ್ವ ರಂಗಭೂಮಿ ದಿನಾಚರಣೆ ಕಾರ್ಯಕ್ರಮದಲ್ಲಿ ಕರ್ನಾಟಕ ನಾಟಕ ಅಕಾಡೆಮಿಯ ಮಾಜಿ ಅಧ್ಯಕ್ಷೆ ಮಾಲತಿ ಸುಧೀರ್, ನಾಟಕ ಅಕಾಡೆಮಿ ಸದಸ್ಯ ಸಂಚಾಲಕರಾದ ಡಾ.ಜಾಹಿದಾ ಎಂ.ಎ., ರಂಗಾಯಣದ ಉಪ ನಿರ್ದೇಶಕರಾದ ಡಾ.ಎಂ.ಡಿ.ಸುದರ್ಶನ್ ಪಾಲ್ಗೊಳ್ಳಲಿದ್ದಾರೆ. ಇದೆ ವೇಳೆ ರಾಜ್ಯೋತ್ಸವ ಪ್ರಶಸ್ತಿ ಪುರಸ್ಕೃತರಾದ ಸರಸ್ವತಿ ಜುಲೇಖ ಬೇಗಂ, ಹೆಚ್.ಜನಾರ್ಧನ್ (ಜನ್ನಿ), ಡಿ.ರಾಮು, ನಾಟಕ ಅಕಾಡೆಮಿ ಪ್ರಶಸ್ತಿ ಪುರಸ್ಕೃತರಾದ ನೂರ್ ಅಹಮದ್ ಶೇಖ್, ಪ್ರಸಾದ್ ಕುಂದೂರು, ಚಂದ್ರಶೇಖರ್ ಆಚಾರ್, ಕುವೆಂಪು ಭಾಷಾಭಾರತಿ ಪ್ರಶಸ್ತಿ ಪುರಸ್ಕೃತರಾದ ಡಾ.ಹೆಚ್.ಎಂ.ಕುಮಾರಸ್ವಾಮಿ, ಬಯಲಾಟ ಅಕಾಡೆಮಿ ಪ್ರಶಸ್ತಿ ಪುರಸ್ಕೃತರಾದ ತಿಪ್ಪಣ್ಣ, ಸುವರ್ಣ ರಾಜ್ಯೋತ್ಸವ ಪ್ರಶಸ್ತಿ ಪುರಸ್ಕೃತರಾದ ಮಾಲತಿಶ್ರೀ, ಗೌರವ ಡಾಕ್ಟರೇಟ್ ಪದವಿಗೆ ಭಾಜನರಾದ ಡಾ.ಸಿ.ಬಸವಲಿಂಗಯ್ಯ, ಡಾ.ರಾಜಶೇಖರ ಕದಂಬ ಅವರಿಗೆ ರಂಗ ಗೌರವ ನೀಡಿ ಪುರಸ್ಕರಿಸಲಾಗುತ್ತದೆ. ಸಂಜೆ 7 ಗಂಟೆಯಿಂದ ಮೈಸೂರಿನ ಹವ್ಯಾಸಿ ರಂಗಕರ್ಮಿಗಳಿಂದ ರಂಗಗೀತೆಗಳ ಗಾಯನ ಕಾರ್ಯಕ್ರಮ ಜರುಗಲಿದೆ ಎಂದರು.

ಪ್ರಮುಖ ನಾಟಕಗಳು

ಮಾ.22ರಂದು ಸಂಜೆ 6.30ಕ್ಕೆ ಭೂಮಿಗೀತಾ ಸಭಾಂಗಣದಲ್ಲಿ ಮಹಾದೇವ ಹಡಪದ ನಿರ್ದೇಶನದಲ್ಲಿ ಧಾರವಾಡದ ಆಟ ಮಾಟ ತಂಡದಿಂದ 'ಗುಡಿಯ ನೋಡಿರಣ್ಣ', ಮಾ.23ರಂದು ಸಂಜೆ 6.30ಕ್ಕೆ ಹೆಚ್.ಕೆ. ದ್ವಾರಕನಾಥ್ ನಿರ್ದೇಶನದಲ್ಲಿ ರಂಗಾಯಣ ಹಿರಿಯ ಕಲಾವಿದರಿಂದ 'ಮಿ ಬೋಗಿಸ್' ನಾಟಕ ಪ್ರದರ್ಶನವಿದೆ

ಮಾ.24ರಂದು ಸಂಜೆ 6.30ಕ್ಕೆ ಮೈಸೂರಿನ ಅರಳಿ ರಂಗತಂಡದಿಂದ ಪಾವನ ಧನರಾಜ್ ನಿರ್ದೇಶನದಲ್ಲಿ 'ಉರುವಿ' ನಾಟಕ ಪ್ರದರ್ಶನ ಗೊಂಡರೆ, ಮಾ.25 ರಂದು ಸಂಜೆ 6.30ಕ್ಕೆ ಬೆಂಗಳೂರಿನ ಅಭಿನಯ ತರಂಗ ತಂಡದಿಂದ ಮಂಜುನಾಥ್ ಆರ್.ಬಡಿಗೇರ್ ನಿರ್ದೇಶನದಲ್ಲಿ 'ಬಂಕಾಪುರದ ಬಯಲಾಟ', ಮಾ.26ರಂದು ಸಂಜೆ 6.30ಕ್ಕೆ ನಾಗಾರ್ಜುನ ಆರಾಧ್ಯ ನಿರ್ದೇಶನದಲ್ಲಿ ಆಯಾಮ ರಂಗತಂಡ ದಿಂದ 'ಕ್ಲೈಟ್ನಮೈಸ್ಟ್ರ' ನಾಟಕ ಪ್ರದರ್ಶನವಿದೆ.

ವಿಶ್ವರಂಗಭೂಮಿ ದಿನಾಚರಣೆಯ ಅಂಗವಾಗಿ ಮಾ.27ರಂದು ಸಂಜೆ 6ಕ್ಕೆ ಗೌತಮ ಸಾಂಸ್ಕೃತಿಕ ಮತ್ತು ಶೈಕ್ಷಣಿಕ ಸೇವಾ ಟ್ರಸ್ಟ್ ಕಲಾವಿದರಿಂದ ಜಾನಪದ ಕಲೆಗಳ ಪ್ರದರ್ಶನ ಮತ್ತು ಹವ್ಯಾಸಿ ರಂಗಕರ್ಮಿಗಳಿಂದ ರಂಗ ಗೌರವ ಮತ್ತು ರಂಗಗೀತೆಗಳ ಕಾರ್ಯಕ್ರಮ ನಡೆಯಲಿದೆ. ನಾಟಕಕ್ಕೆ ಪ್ರವೇಶ ದರ 100 ರೂ. ಹಾಗೂ ಸೀಜನ್ ಟಿಕೆಟ್ ದರ 300 ರೂ. ನಿಗದಿ ಮಾಡಲಾಗಿದೆ.

ಸುದ್ದಿಗೋಷ್ಠಿಯಲ್ಲಿ ರಂಗಾಯಣ ನಿರ್ದೇಶಕ ಸತೀಶ್ ತಿಪಟೂರು, ಕರ್ನಾಟಕ ನಾಟಕ ಅಕಾಡೆಮಿಯ ಸದಸ್ಯ ಸಂಚಾಲಕರಾದ ಡಾ.ಎಂ.ಜಾಹಿದಾ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಜಂಟಿ ನಿರ್ದೇಶಕ ವಿ.ಎನ್. ಮಲ್ಲಿಕಾರ್ಜುನ ಸ್ವಾಮಿ, ಜಿಲ್ಲಾ ಹವ್ಯಾಸಿ ರಂಗಕರ್ಮಿಗಳ ವೇದಿಕೆಯ ಖಜಾಂಚಿ ಅಬ್ದುಲ್ ಕರೀಂ ಉಪಸ್ಥಿತರಿದ್ದರು.

ಮೈಸೂರು ಚಿತ್ರಮಂದಿರಗಳಲ್ಲಿ

ಪದ್ಮ ಚಿತ್ರಮಂದಿರ	(ದೂ: 2521923)
ಖಡ್ಗಂ (ತೆ)	4 ಪ್ರದರ್ಶನಗಳು
ವುಡ್‌ಲ್ಯಾಂಡ್ಸ್ ಚಿತ್ರಮಂದಿರ	(ದೂ: 2422871)
ಭೀಮ (ಕ)	4 ಪ್ರದರ್ಶನಗಳು
ಬಾಲಾಜಿ ಚಿತ್ರಮಂದಿರ	(ದೂ: 2497199)
ಬಡಾಸ್ ರವಿಕುಮಾರ್ (ಹಿಂ)	3 ಪ್ರದರ್ಶನಗಳು
ಮಹದೇಶ್ವರ ಚಿತ್ರಮಂದಿರ	(ಮೊ:9900820093)
ಮಯೂರ (ಕ)	4 ಪ್ರದರ್ಶನಗಳು
ಗಾಯಿತ್ರಿ	
ಅಪ್ಪು (ಕ)	4 ಪ್ರದರ್ಶನಗಳು
ರಾಜಕಮಲ್	
ಅಸ್ತ್ರಂ ದಿ ಸೀಕ್ರೆಟ್ (ತ)	4 ಪ್ರದರ್ಶನಗಳು
ಸಂಗಂ	
ಬರ್ಗೆಟ್ ಬಸ್ಯಾ (ಕ)	4 ಪ್ರದರ್ಶನಗಳು
ಲಿಡೋ	
ಡಾಕೂ ಮಹಾರಾಜ್(ತೆ)	4 ಪ್ರದರ್ಶನಗಳು
ತಿಬ್ಬಾದೇವಿ	
ಭಗೀರಥ (ಕ)	4 ಪ್ರದರ್ಶನಗಳು
ಪ್ರಭಾ	
ಭಗೀರಥ (ಕ)	4 ಪ್ರದರ್ಶನಗಳು

ಡಿಆರ್‌ಸಿ ಸಿನಿಮಾಸ್

ದೂ : 4240422/4241800

ಸ್ಕ್ರೀನ್ 1	ಡಿಸ್ನಿ ಸ್ನೋ ವೈಟ್ (ಇಂ): ಬೆ.9.55ಕ್ಕೆ, ಮ.12.20ಕ್ಕೆ, ಮ.2.40ಕ್ಕೆ, ಸಂ.5ಕ್ಕೆ, ದಿ ಡಿಪ್ಲೊಮೆಟ್ (ಹಿಂ): ರಾ.7.20ಕ್ಕೆ, ಯಾರಿಯನ್ (ಹಿಂ): ರಾ.10.10ಕ್ಕೆ.
ಸ್ಕ್ರೀನ್ 2	ಬರ್ಗೆಟ್ ಬಸ್ಯಾ (ಕ): ಬೆ.10.20ಕ್ಕೆ, ಅಸ್ತ್ರಂ (ತ): ಮ.1.10ಕ್ಕೆ, ಕೋರ್ಟ್ ಸ್ಟೇಟ್ V/s ಎ ನೋಬಡಿ (ತೆ): ಮ.3.55ಕ್ಕೆ, ತುಮ್ಕೊ ಮೇರಿ ಕಸಮ್ (ಹಿಂ): ರಾ.7ಕ್ಕೆ, ರಾ.10.20ಕ್ಕೆ.
ಸ್ಕ್ರೀನ್ 3	ಬಳ್ಳಾರಿ ಜಿಲ್ಲೆ ಬಳ್ಳಾರಿ ತಾಲೂಕು ಗ್ರಾಮ ಯಾಳ್ಪಿ (ಕ): ಬೆ.10.35ಕ್ಕೆ, ಡ್ರ್ಯಾಗನ್ (ತ): ಮ.1.05ಕ್ಕೆ, ಪಿಂಟು ಕಿ ಪಪ್ಪಿ (ಹಿಂ): ಸಂ.4.15ಕ್ಕೆ, ಛಾವಾ (ಹಿಂ): ರಾ.7ಕ್ಕೆ, ಘಾತಕ್ (ಹಿಂ): ಬೆ.10.15ಕ್ಕೆ.
ಸ್ಕ್ರೀನ್ 4	ಡ್ರ್ಯಾಗನ್ (ತ): ಬೆ.10.20ಕ್ಕೆ, ಅಪ್ಪು (ಕ): ಮ.1.30ಕ್ಕೆ, ಷಣ್ಮುಖ (ತೆ): ಸಂ.4.15ಕ್ಕೆ, ರಾ.9.45ಕ್ಕೆ, ಡಿಸ್ನಿ ಸ್ನೋ ವೈಟ್ (ಇಂ): ರಾ.7.05ಕ್ಕೆ.

INOX LIVE THE MOVIE – ಐನಾಕ್ಸ್ ಮೂವೀಸ್

ದೂ : 2533444 / 2433456

ಸ್ಕ್ರೀನ್ 1	ಬ್ಯಾಡ್ ನ್ಯೂಸ್ (ಹಿಂ): ಬೆ.10ಕ್ಕೆ, ಮ.1ಕ್ಕೆ, ಸಂ.4ಕ್ಕೆ, ರಾ.7ಕ್ಕೆ, ರಾ.10ಕ್ಕೆ.
ಸ್ಕ್ರೀನ್ 2	ಕಲ್ಕಿ 2898 ಎಡಿ (ಕ): ಬೆ.11.40ಕ್ಕೆ, ಸಂ.6.05ಕ್ಕೆ, ಟ್ವಿಸ್ಟರ್ಸ್ (ಇಂ): ಮ.3.20ಕ್ಕೆ, ರಾ.9.45ಕ್ಕೆ.
ಸ್ಕ್ರೀನ್ 3	ಇಂಡಿಯನ್ 2 (ತ): ಬೆ.9.40ಕ್ಕೆ, ಸಂ.4.05ಕ್ಕೆ, ಟ್ವಿಸ್ಟರ್ಸ್ (ಇಂ): ಮ.1.20ಕ್ಕೆ, ರಾ.7.45ಕ್ಕೆ, ಡಾರ್ಲಿಂಗ್ ವೈ ದಿಸ್ ಕೊಲವರಿ (ತೆ): ರಾ.10.30ಕ್ಕೆ.
ಸ್ಕ್ರೀನ್ 4	ವಿದ್ಯಾರ್ಥಿ ವಿದ್ಯಾರ್ಥಿನಿಯರೇ (ಕ): ಬೆ.11.30ಕ್ಕೆ, ಕಲ್ಕಿ 2898 ಎಡಿ (3ಡಿ)(ತೆ): ಮ.2.50ಕ್ಕೆ, ಹಿರಣ್ಯ (ಕ): ಸಂ.6.30ಕ್ಕೆ, ಕಲ್ಕಿ 2898 ಎಡಿ (ಹಿಂ): ರಾ.9.30ಕ್ಕೆ.

ಮೈಸೂರು ವಿಷನ್ ಸಿನಿಮಾ

ದೂ : 0821–2973519

ಸ್ಕ್ರೀನ್ 1	ಫಾರೆಸ್ಟ್ (ಕ): ಮ.1.45ಕ್ಕೆ, ಬಳ್ಳಾರಿ ಜಿಲ್ಲೆ ಬಳ್ಳಾರಿ ತಾಲೂಕು ಗ್ರಾಮ ಯಾಳ್ಪಿ (ಕ): ಸಂ.6.35ಕ್ಕೆ ಅಸ್ತ್ರಂ (ತ): ರಾ.7ಕ್ಕೆ, ಷಣ್ಮುಖ (ತೆ): ರಾ.9.15ಕ್ಕೆ.
ಸ್ಕ್ರೀನ್ 2	ಪಿಂಟು ಕಿ ಪಪ್ಪಿ (ಹಿಂ): ಮ.1.15ಕ್ಕೆ, ಮ.3.55ಕ್ಕೆ, ಛಾವಾ (ಹಿಂ): ಸಂ.6.30ಕ್ಕೆ, ತುಮ್ಕೊ ಮೇರಿ ಕಸಮ್ (ಹಿಂ): ರಾ.9.30ಕ್ಕೆ.
ಸ್ಕ್ರೀನ್ 3	ಡಿಸ್ನಿ ಸ್ನೋ ವೈಟ್ (ಇಂ): ಮ.1.30ಕ್ಕೆ, ಸಂ.4.05ಕ್ಕೆ, ರಾ.9.20ಕ್ಕೆ, ತುಮ್ಕೊ ಮೇರಿ ಕಸಮ್ (ಹಿಂ): ಸಂ.6.15ಕ್ಕೆ.

PVR CINEMAS – ಪಿವಿಆರ್ ಸಿನಿಮಾಸ್

ನೆಕ್ಸಸ್ ಸೆಂಟರ್‌ಸಿಟಿ ಮಾಲ್, 2ನೇ ಮಹಡಿ, ಮೊ.ನಂ: 8951357139

ಕಿಂಗ್‌ಡಮ್ ಆಫ್ ದಿ ಪ್ಲಾನೆಟ್ ಆಫ್ ದಿ ಎಪಿಸ್ (ಇಂ): ಬೆ.10ಕ್ಕೆ, ಮ.1.05ಕ್ಕೆ, ಸಂ.4.10ಕ್ಕೆ, ರಾ.7.20ಕ್ಕೆ, ರಾ.10.30ಕ್ಕೆ, ಶ್ರೀಕಾಂತ್ (ಹಿಂ): ಬೆ.10ಕ್ಕೆ, ಮ.1ಕ್ಕೆ, ಸಂ.4.25ಕ್ಕೆ, ರಾ.7ಕ್ಕೆ, ರಾ.10.15ಕ್ಕೆ, ಸ್ಟಾರ್ (ತ): ಬೆ.11.45ಕ್ಕೆ, ಮ.3.05ಕ್ಕೆ, ಸಂ.6.25ಕ್ಕೆ, ರಾ.9.45ಕ್ಕೆ, ಅರಮನೈ 4 (ತ): ಮ.12.30ಕ್ಕೆ, ಪ್ರತಿನಿಧಿ 2 (ತೆ): ಮ.12.55ಕ್ಕೆ, ರಾ.9.15ಕ್ಕೆ, ರಾಮನ ಅವತಾರ (ಕ): ಮ.3.40ಕ್ಕೆ, ಅಂಜನೀಪುತ್ರ (ಕ): ಸಂ.4ಕ್ಕೆ, ಗ್ರೇ ಗೇಮ್ಸ್ (ಕ): ಸಂ.6.35ಕ್ಕೆ, ಕೃಷ್ಣಮ್ಮ (ತೆ): ರಾ.7.25ಕ್ಕೆ, ಮಾರಿವಿಲ್ಲಿನ್ ಗೋಪುರಂಗಲ್ (ಮ): ರಾ.10ಕ್ಕೆ.

ಸೂಚನೆ : ಸಿನಿಮಾ ಮಾರ್ಗದರ್ಶಿಯಲ್ಲಿ ಮಾಹಿತಿಯನ್ನು ಪರಿಪೂರ್ಣಗೊಳಿಸಲು ನಾವು ಸಾಧ್ಯವಾದಷ್ಟೂ ಪ್ರಯತ್ನಿಸುತ್ತಿದ್ದೇವೆ. ಆದರೂ ಕೆಲವೊಮ್ಮೆ ಮಾಹಿತಿ ಅಲಭ್ಯತೆಯಿಂದ ಲೋಪಗಳು ಉಂಟಾಗುವ ಸಾಧ್ಯತೆಯಿದ್ದು, ಸಾರ್ವಜನಿಕರು ಸಹಕರಿಸಬೇಕಾಗಿ ಕಳಕಳಿ ಮನವಿ.

ಮೂರು ದಿನಗಳ ಕಮ್ಮಟ

ಮೈಸೂರು,ಮಾ.20– ಕರ್ನಾಟಕ ಸಾಹಿತ್ಯ ಅಕಾಡೆಮಿಯು ಕರ್ನಾಟಕ ಜಾನಪದ ವಿಶ್ವವಿದ್ಯಾಲಯ ಗೊಟಗೋಡಿ, ಹಾವೇರಿ ಜಿಲ್ಲೆ ಇವರ ಸಹಯೋಗದಲ್ಲಿ ಗಿರಿಜನ ಉಪ ಯೋಜನೆಯಡಿ ಕನ್ನಡ ಸಾಹಿತ್ಯ ಮತ್ತು ಸಾಂವಿಧಾನಿಕ ಮೌಲ್ಯಗಳು ಎಂಬ ಹೆಸರಿನಲ್ಲಿ ಮೂರು ದಿನಗಳ ಕಮ್ಮಟವನ್ನು ಏಪ್ರಿಲ್ 21, 22 ಮತ್ತು 23 ರಂದು ಹಾವೇರಿ ಜಿಲ್ಲೆಯ ಕರ್ನಾಟಕ ಜಾನಪದ ವಿಶ್ವವಿದ್ಯಾಲಯದ ಗೊಟಗೋಡಿಯಲ್ಲಿ ನಡೆಸಲು ಉದ್ದೇಶಿಸಲಾಗಿದ್ದು, ಅರ್ಜಿ ಆಹ್ವಾನಿಸಲಾಗಿದೆ

ಆಸಕ್ತ 20 ರಿಂದ 45 ವರ್ಷ ವಯಸ್ಸುಳ್ಳ ಪರಿಶಿಷ್ಟ ಪಂಗಡಕ್ಕೆ ಸೇರಿದ ರಾಜ್ಯದ ಎಲ್ಲಾ ಭಾಗದ ಅಭ್ಯರ್ಥಿಗಳು ಅರ್ಜಿ ಸಲ್ಲಿಸಬಹುದಾಗಿದ್ದು, ಏಪ್ರಿಲ್ 5 ಅರ್ಜಿ ಸಲ್ಲಿಸುವ ಕೊನೆಯ ದಿನವಾಗಿರುತ್ತದೆ. ಅಭ್ಯರ್ಥಿಗಳು ಕರ್ನಾಟಕ ಸಾಹಿತ್ಯ ಅಕಾಡೆಮಿಯ ವೆಬ್‌ಸೈಟ್ http://karnatakasahithyaacademy.org ಮೂಲಕ ಅರ್ಜಿ ನಮೂನೆಯನ್ನು ಹಾಗೂ ವಿವರಗಳನ್ನು ಪಡೆದುಕೊಳ್ಳಬಹುದಾಗಿದೆ ಎಂದು ಕರ್ನಾಟಕ ಸಾಹಿತ್ಯ ಅಕಾಡೆಮಿಯ ರಿಜಿಸ್ಟ್ರಾರ್ ಕರಿಯಪ್ಪ ಎನ್. ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ದ್ವಿತೀಯ ಪಿಯುಸಿ ಪರೀಕ್ಷಾ ಕೇಂದ್ರಕ್ಕೆ ಅಪರ ಜಿಲ್ಲಾಧಿಕಾರಿ ಭೇಟಿ

ಮೈಸೂರು,ಮಾ.20– ಪ್ರಸ್ತ 2024–25ನೇ ಶೈಕ್ಷಣಿಕ ವರ್ಷದ ದ್ವಿತೀಯ ಪಿ.ಯು.ಸಿ. ಪರೀಕ್ಷೆ ಇಂದು ಮುಕ್ತಾಯವಾಯಿತು. ಅಂತಿಮ ದಿನದಂದು ಊಟಿ ರಸ್ತೆಯಲ್ಲಿರುವ ಜೆಎಸ್‌ಎಸ್ ಪದವಿ ಪೂರ್ವ ಕಾಲೇಜು ಪರೀಕ್ಷಾ ಕೇಂದ್ರಕ್ಕೆ ಅಪರ ಜಿಲ್ಲಾಧಿಕಾರಿ ಪಿ ಶಿವರಾಜು ಭೇಟಿ ನೀಡಿ, ಪರಿಶೀಲನೆ ನಡೆಸಿದರು.

ಪಿಹೆಚ್.ಡಿ ಪದವಿ



ಮೈಸೂರು,ಮಾ.20– ಡಾ. ಆರ್. ಕಿರಣ್ ಅವರ ಮಾರ್ಗದರ್ಶನದಲ್ಲಿ ವಿರೂಪಾಕ್ಷಿ ವಿ ಬೆಟ್ಟಗೇರಿ ಅವರು ಸಾದರಪಡಿಸಿದ ಮಹಾಪ್ರಬಂಧವನ್ನು ನಿರ್ವಹಣೆ ವಿಜ್ಞಾನ ವಿಷಯದಲ್ಲಿ ಮೈಸೂರು ವಿಶ್ವವಿದ್ಯಾಲಯದ ಪಿಎಚ್.ಡಿ ಪದವಿಗೆ ಅಂಗೀಕರಿಸಿದೆ. ಘಟಿಕೋತ್ಸವ ವೇಳೆ ಪದವಿ ಪಡೆಯಬಹುದು.

ದಕ್ಷತೆ, ಬದ್ಧತೆ, ಕಷ್ಟ ಸಹಿಷ್ಣುತೆ ಮಹಿಳೆಯರಲ್ಲೇ ಹೆಚ್ಚು

ನಿವೃತ್ತ ನ್ಯಾಯಾಧೀಶೆ ಎಸ್.ಹೆಚ್.ಪುಷ್ಪಾಂಜಲಿ ದೇವಿ ಅಭಿಮತ

ಮೈಸೂರು,ಮಾ.20(ಪಿಎಂ)– ಪ್ರಸ್ತುತ ಯಾವುದೇ ಕ್ಷೇತ್ರವಾದರೂ ಮಹಿಳೆ ಮುಂಚೂಣಿಯಲ್ಲಿದ್ದು, ದಕ್ಷತೆ, ಬದ್ಧತೆ, ಕಷ್ಟ ಸಹಿಷ್ಣುತೆ ಮಹಿಳೆಯರಲ್ಲೇ ಹೆಚ್ಚು ಎಂದು ನಿವೃತ್ತ ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರಾದ ಎಸ್.ಹೆಚ್.ಪುಷ್ಪಾಂಜಲಿ ದೇವಿ ಅಭಿಪ್ರಾಯಪಟ್ಟರು.

ಮೈಸೂರಿನ ಜಯನಗರದ ನೇಗಿಲಯೋಗಿ ಸಭಾ ಭವನದಲ್ಲಿ ಅಧಿವಕ್ತ ಪರಿಷತ್ ಮೈಸೂರು ಶಾಖೆ ಮತ್ತು ನೇಗಿಲಯೋಗಿ ಸಮಾಜ ಸೇವಾ ಟ್ರಸ್ಟ್ ಜಂಟಿ ಆಶ್ರಯದಲ್ಲಿ ಗುರುವಾರ ಹಮ್ಮಿಕೊಂಡಿದ್ದ ಅಂತಾರಾಷ್ಟ್ರೀಯ ಮಹಿಳಾ ದಿನಾಚರಣೆ ಹಾಗೂ ಸಾಧಕ ಮಹಿಳೆಯರ ಸನ್ಮಾನ ಸಮಾರಂಭ ಉದ್ಘಾಟಿಸಿ ಮಾತನಾಡಿದರು.

ಯಾವುದೇ ಕ್ಷೇತ್ರವಾದರೂ ಮಹಿಳೆಯರು ಹೆಚ್ಚು ಶ್ರದ್ಧೆಯಿಂದ ಕೆಲಸ ಮಾಡುತ್ತಿದ್ದಾರೆ. ಹೆಣ್ಣು ಮಕ್ಕಳು ಇದ್ದರೆ ಅಲ್ಲಿ ಕೆಲಸ ಚೆನ್ನಾಗಿ ನಡೆಯುತ್ತದೆ ಎಂಬ ವಿಶ್ವಾಸ ಇಂದು ಸಮಾಜದಲ್ಲಿ ಮೂಡಿದೆ. ಸುನಿತಾ ವಿಲಿಯಮ್ಸ್ ಸ್ಪೇಸ್‌ನಲ್ಲಿ ಇದ್ದು ಯಶಸ್ವಿಯಾಗಿ ಹಿಂತಿರುಗಿ ಸಾಧನೆ ಮಾಡಿದ್ದಾರೆ. ಅತ್ಯಂತ ಕಠಿಣ ಸವಾಲು ಎದುರಿಸಿ ಬಂದರೂ ಅವರಲ್ಲಿದ್ದ ನಗು ಮುಖ ನೋಡಿ ಖುಷಿಯಾಯಿತು. ಮಹಿಳೆಯರಿಗೆ ಕಷ್ಟ ಸಹಿಷ್ಣುತೆ ದೇವರು ಕೊಟ್ಟ ವರವಿರಬೇಕು ಎಂದು ಹೇಳಿದರು.

ಪ್ರಸ್ತುತ ಬಹುತೇಕ ಮಹಿಳೆಯರು ಕುಟುಂಬ ನಿರ್ವಹಣೆಗಾಗಿ ಮನೆಯಲ್ಲೂ ದುಡಿದು, ಹೊರಗೂ ಕೆಲಸ ಮಾಡುತ್ತಿದ್ದಾರೆ. ಈ ರೀತಿ ತೊಡಗಿಸಿಕೊಳ್ಳಲು ತಾಳ್ಮೆ, ಸಮರ್ಪಣಾ ಮನೋಭಾವ, ಇಚ್ಛಾಶಕ್ತಿ ಅಗತ್ಯವಿದ್ದು, ಅಂತಹ ಗುಣಗಳು ಮಹಿಳೆಯರಲ್ಲೇ ಹೆಚ್ಚು. ನಾಲ್ಕು ಗೋಡೆ ಮಧ್ಯೆದಲ್ಲಿ ಕುಟುಂಬದವರಿಂದಲೇ ಮಹಿಳೆಯರಿಗೆ ಕಿರುಕುಳ ನಡೆಯುವುದು ಇಂದಿಗೂ ಸಾಕಷ್ಟು ಆಗುತ್ತಿದೆ. ಇದರಿಂದ ಮುಕ್ತವಾಗಲು ಮಹಿಳೆಯರಿಗೆ ಶಿಕ್ಷಣ ಅಗತ್ಯ. ಈ ನಡುವೆ ಮಹಿಳಾಪರ ಕಾನೂನುಗಳ ದುರ್ಬಳಕೆ ಆಗುತ್ತಿದ್ದು, ಈ ನಿಟ್ಟಿನಲ್ಲಿ ಜಾಗೃತಿ ಮೂಡಿಸುವ ಅಗತ್ಯವಿದೆ ಎಂದರು.

ಸ್ವಾತಂತ್ರ್ಯಪೂರ್ವಕ್ಕೆ ಹೋಲಿಸಿದರೆ ಇಂದು ಭಾರತೀಯ ಮಹಿಳೆಯರು ಎಲ್ಲಾ ಕ್ಷೇತ್ರಗಳಲ್ಲೂ ಹೆಚ್ಚಿನ ಪ್ರಮಾಣದಲ್ಲಿ ಮುಂದುವರೆದಿದ್ದಾರೆ. ಆದರೆ ಇನ್ನು ಹೆಚ್ಚಿನ ಪ್ರೋತ್ಸಾಹವೂ ಬೇಕಿದೆ. 27 ವರ್ಷಗಳ ಕಾಲ ನ್ಯಾಯಾಧೀಶೆಯಾಗಿ ಕರ್ತವ್ಯ ನಿರ್ವಹಿಸಿದ್ದೇನೆ. ನನ್ನ ಸೀನಿಯರ್ ಕೊಟ್ಟ ಶಿಕ್ಷಣವನ್ನು ನನ್ನ ಕೊನೆ ದಿನಗಳವರೆಗೆ ಮರೆಯಲು ಸಾಧ್ಯವಿಲ್ಲ. ಅವರಿಂದ ನನಗೆ ಶಿಸ್ತು, ಸಮಯಪಾಲನೆ ಹಾಗೂ ಶ್ರದ್ಧೆ ಗುಣ ಬಂದವು. ಏನೇ ಕೆಲಸ ಮಾಡಿದರೂ ಶ್ರದ್ಧೆಯಿಂದ ಮಾಡಿದರೆ ಯಶಸ್ಸು ಒಲಿದು ಬರಲಿದೆ ಎಂದು ತಿಳಿಸಿದರು.



ಮೈಸೂರಿನ ಜಯನಗರದ ನೇಗಿಲಯೋಗಿ ಸಭಾ ಭವನದಲ್ಲಿ ವಿವಿಧ ಕ್ಷೇತ್ರದ ಸಾಧಕ ಮಹಿಳೆಯರನ್ನು ಸನ್ಮಾನಿಸಲಾಯಿತು.

ಭಾರತ ಸರ್ಕಾರದ ಮಾಹಿತಿ ಮತ್ತು ಪ್ರಸಾರ ಸಚಿವಾಲಯದ ನಿವೃತ್ತ ಹಿರಿಯ ಅಧಿಕಾರಿ ಮೀನಾ ಮೈಸೂರು ಮಾತನಾಡಿ, ಕೇವಲ 8 ದಿನಗಳೆಂದು ಸ್ಪೇಸ್‌ಗೆ ಹೋಗಿದ್ದ ಸುನಿತಾ ವಿಲಿಯಮ್ಸ್, ಭೂಮಿಗೆ ಮರಳಲು ತಿಂಗಳುಗಟ್ಟಲೆ ತಡವಾಯಿತು. ಅನೇಕ ಸವಾಲುಗಳನ್ನು ಎದುರಿಸಿ ಅವರು ಭೂಮಿಗೆ ಮರಳಿ ಬಂದಿದ್ದಾರೆ. ಇದು ಮಹಿಳಾ ದಿನಾಚರಣೆಯ ಸಂಭ್ರಮವನ್ನು ಹೆಚ್ಚಿಸಿದೆ ಎಂದು ಹರ್ಷ ವ್ಯಕ್ತಪಡಿಸಿದರು.

ನಾನು ಓದುತ್ತಿದ್ದ ಕಾಲದಲ್ಲಿ ಮಹಿಳೆಯರು ಮನೆಯಿಂದ ಹೊರಬರುವುದೇ ಕಷ್ಟವಿತ್ತು. ಆದರೆ ಇಂದು ಮಹಿಳೆಯರು ಮುನ್ನೆಲೆಗೆ ಬಂದಿದ್ದು, ಅನೇಕ ಉನ್ನತ ಹುದ್ದೆಗಳನ್ನು ಅಲಂಕರಿಸಿದ್ದಾರೆ. ಈ ನಡುವೆ ಮಹಿಳಾ ಅಧಿಕಾರಿ ಕೈಕೆಳಗೆ ಕೆಲಸ ಮಾಡುವುದನ್ನು ಸಹಿಸಿಕೊಳ್ಳದ ಪರಿಸ್ಥಿತಿ ಇಂದಿಗೂ ಮುಂದುವರೆದಿದೆ. ಇಂತಹ ಸನ್ನಿವೇಶ ಬದಲಾಗಬೇಕು. ಮಹಿಳೆಯರು ಮತ್ತು ಪುರುಷರು ಪರಸ್ಪರ ಸಮಾನವಾಗಿ ಕಾಣುವ ಮನೋಭಾವ ಬೆಳೆಸಿಕೊಳ್ಳಬೇಕು ಎಂದು ಹೇಳಿದರು.

ಇದೇ ವೇಳೆ ಹೆಚ್‌ಡಿ ಕೋಟೆ ತಾಲೂಕಿನ ಯುವಚೇತನ ಫೌಂಡೇಷನ್ ಸಂಸ್ಥಾಪಕ ಅಧ್ಯಕ್ಷೆ ಎಂ.ಆಶಾ, ಪೈಲಟ್ (ಸಿಪಿಎಲ್ ಹೋಲ್ಡರ್) ಅಖಿಲಾ ಅಶೋಕ್, ಹಿರಿಯ ವಕೀಲರಾದ ಕೆ.ಪಿ.ಉಷಾ, ಟಿ.ಜಿ. ಯಶೋಧಾ, ಸಿ.ಎನ್.ಕಮಲಮ್ಮ ಅವರನ್ನು ಸನ್ಮಾನಿಸಲಾಯಿತು. ಅಧಿವಕ್ತ ಪರಿಷತ್ ಮೈಸೂರು ಶಾಖೆ ಅಧ್ಯಕ್ಷೆ ವಿ.ಶಾರದಾ, ನೇಗಿಲಯೋಗಿ ಸಮಾಜ ಸೇವಾ ಟ್ರಸ್ಟ್ ಅಧ್ಯಕ್ಷ ರವಿಕುಮಾರ್ ಮತ್ತಿತರರು ಹಾಜರಿದ್ದರು.

ಪ್ರವಾಸೋದ್ಯಮ, ಆತಿಥ್ಯ ಕ್ಷೇತ್ರದಲ್ಲಿ ಕೌಶಲಾಭಿವೃದ್ಧಿ ತರಬೇತಿ ಕಾರ್ಯಕ್ರಮ

ಮೈಸೂರು,ಮಾ.20– 2024 – 25ನೇ ಸಾಲಿನ ಪರಿಶಿಷ್ಟ ಜಾತಿ ಹಾಗೂ ಪರಿಶಿಷ್ಟ ಪಂಗಡ ಅಭ್ಯರ್ಥಿಗಳಿಗೆ ಎಸ್.ಸಿ.ಪಿ/ಟಿ.ಎಸ್.ಪಿ ಯೋಜನೆಯಡಿ ಪ್ರವಾಸೋದ್ಯಮ, ಆತಿಥ್ಯ ಕ್ಷೇತ್ರದಲ್ಲಿ ಕೌಶಲಾಭಿವೃದ್ಧಿ ತರಬೇತಿ ಕಾರ್ಯಕ್ರಮಕ್ಕೆ ಅರ್ಜಿ ಆಹ್ವಾನಿಸಲಾಗಿದೆ. ಕೇಂದ್ರ ಸರ್ಕಾರದ ಆತಿಥ್ಯ ಕ್ಷೇತ್ರದ ಸಂಸ್ಥೆಗಳಾದ food craft institude (FCI), ಹಾಗೂ institute of hotel management (IHM) ಬೆಂಗಳೂರುರವರ ಮೂಲಕ ವಸತಿ ಸಹಿತ ಕಾರ್ಯಕ್ರಮವನ್ನು ಜಾರಿಗೊಳಿಸಲು ಉದ್ದೇಶಿಸಲಾಗಿದೆ. 20 ರಿಂದ 45 ವರ್ಷದೊಳಗಿರಬೇಕು, 8ನೇ ತರಗತಿ ಪಾಸಾದವರಿಗೆ Multi cuisine cook, ಎಸ್.ಎಸ್.ಎಲ್.ಸಿ. ಪಾಸಾದವರಿಗೆ food & beverge service steward, ನೀಡಲಾಗುತ್ತದೆ. ಅರ್ಜಿ ಸಲ್ಲಿಸಲು ಏಪ್ರಿಲ್ 5 ಕೊನೆಯ ದಿನಾಂಕವಾಗಿರುತ್ತದೆ.

ಹೆಚ್ಚಿನ ಮಾಹಿತಿಗಾಗಿ: ಇಲಾಖೆಯ ಅಂತರ್ಜಾಲ ತಾಣದಲ್ಲಿ https://mysurutorism.in/notification/ ಮತ್ತು https://mysore.nic.in/en/notifications/ ಪಡೆಯಬಹುದಾಗಿರುತ್ತದೆ. ದೂ.ಸಂ: 0821–2422096 ಹಾಗೂ ಸಹಾಯಕ ನಿರ್ದೇಶಕರು, ಪ್ರವಾಸೋದ್ಯಮ ಇಲಾಖೆ, ಮೈಸೂರು ಕಚೇರಿಗೆ ಸಂಪರ್ಕಿಸಬಹುದು ಎಂದು ಜಿಲ್ಲಾ ಪ್ರವಾಸೋದ್ಯಮ ಅಭಿವೃದ್ಧಿ ಸಮಿತಿ ಅಧ್ಯಕ್ಷರು ಹಾಗೂ ಜಿಲ್ಲಾಧಿಕಾರಿಗಳಾದ ಜಿ.ಲಕ್ಷ್ಮಿಕಾಂತ್ ರೆಡ್ಡಿ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ನಾಳೆ ಕರ್ನಾಟಕ ಬಂದ್‌ಗೆ ಕರೆ: ಮೈಸೂರಲ್ಲಿ ಮಿಶ್ರ ಪ್ರತಿಕ್ರಿಯೆ ಸಾಧ್ಯತೆ

ಮೈಸೂರು, ಮಾ.20(ಆರ್‌ಕೆ)–ಬೆಳಗಾವಿ ವಿಭಾಗದ ಕೆಎಸ್‌ಆರ್‌ಟಿಸಿ ಬಸ್ ಕಂಡಕ್ಟರ್ ಮತ್ತು ಚಾಲಕರ ಮೇಲೆ ಹಲ್ಲೆ ನಡೆಸಿ ಪುಂಡಾಟ ಮೆರೆದಿರುವ ಘಟನೆ ಖಂಡಿಸಿ ಕನ್ನಡ ಚಳುವಳಿ ವಾಟಾಳ್ ಪಕ್ಷದ ಅಧ್ಯಕ್ಷ ವಾಟಾಳ್ ನಾಗರಾಜ್ ಹಾಗೂ ವಿವಿಧ ಕನ್ನಡ ಪರ ಸಂಘಟನೆಗಳು ಮಾ.22ರಂದು ಕರೆ ನೀಡಿರುವ ಕರ್ನಾಟಕ ಬಂದ್‌ಗೆ ಮೈಸೂರಲ್ಲಿ ಮಿಶ್ರ ಪ್ರತಿಕ್ರಿಯೆ ವ್ಯಕ್ತವಾಗುವ ಸಾಧ್ಯತೆ ಇದೆ.

ಶನಿವಾರ ಕರೆ ನೀಡಿರುವ ಕರ್ನಾಟಕ ಬಂದ್‌ಗೆ ಹೋಟೆಲ್ ಮಾಲೀಕರ ಬೆಂಬಲವಿಲ್ಲ ಎಂದು ಸಂಘದ ಅಧ್ಯಕ್ಷ ಸಿ.ನಾರಾಯಣಗೌಡ ತಿಳಿಸಿದರೆ, ಸೇವೆ ಮುಂದುವರೆಸಿ ಬಾಹ್ಯ ಬೆಂಬಲ ನೀಡುವುದಾಗಿ ಮೈಸೂರು ಟ್ರಾವೆಲ್ ಅಸೋಸಿಯೇಷನ್ (MTA) ಹಾಗೂ ಸಂಘ–ಸಂಸ್ಥೆಗಳ ಒಕ್ಕೂಟದ ಅಧ್ಯಕ್ಷ ಬಿ.ಎಸ್.ಪ್ರಶಾಂತ್ ತಿಳಿಸಿದ್ದಾರೆ.

ಹಲ್ಲೆ ಮಾಡಿದವರ ವಿರುದ್ಧ ಕ್ರಮಕ್ಕೆ ಆಗ್ರಹಿಸಿ ವಿಧಾನಸೌಧದ ಬಳಿ ಪ್ರತಿಭಟನೆ ಮಾಡಲಿ, ನಾವೂ ಪಾಲ್ಗೊಳ್ಳುತ್ತೇವೆ. ಆದರೆ, ಜನರಿಗೆ ತೊಂದರೆ ಆಗುವ ಬಂದ್‌ಗೆ ಬೆಂಬಲವಿಲ್ಲ ಎಂದು ಸ್ಕಾಲ್ ಇಂಟರ್‌ನ್ಯಾಷನಲ್ ಮೈಸೂರು ಚಾಪ್ಟರ್ ಅಧ್ಯಕ್ಷ ಜಯಕುಮಾರ್ ತಿಳಿಸಿದ್ದಾರೆ.

ಕರ್ನಾಟಕ ಬಂದ್‌ಗೆ ಕೈಗಾರಿಕೆಗಳು, ಉದ್ದಿಮೆಗಳ ಮಾಲೀಕರು ನೈತಿಕ ಬೆಂಬಲ ನೀಡುವರು ಎಂದು ಮೈಸೂರು ಕೈಗಾರಿಕೆಗಳ ಸಂಘ (MIA)ದ ಪ್ರಧಾನ ಕಾರ್ಯದರ್ಶಿ ಸುರೇಶ್ ಕುಮಾರ್ ಜೈನ್ ತಿಳಿಸಿದ್ದು, ಮೈಸೂರಿನ ವಿವಿಧ ಮಾರುಕಟ್ಟೆ ವರ್ತಕರ ಸಂಘಗಳ ಒಕ್ಕೂಟದ ಅಧ್ಯಕ್ಷ ಮಹದೇವ್ ಅವರು ಬಂದ್‌ಗೆ ಸಂಪೂರ್ಣ ಬೆಂಬಲ ನೀಡಲಾಗುವುದು ಎಂದರು.



ನಾಡು, ನುಡಿ, ಜಲ, ಭಾಷೆ ವಿಷಯ ಬಂದಾಗ ಆಟೋ ಮಾಲೀಕರು ಮತ್ತು ಚಾಲಕರು ಹೋರಾಟದಲ್ಲಿ ಭಾಗಿಯಾಗುತ್ತಾರೆ ಎಂದಿರುವ ಆಟೋ ಚಾಲಕರು ಮತ್ತು ಮಾಲೀಕರ ಸಂಘಗಳ ಒಕ್ಕೂಟದ ಬಿ.ನಾಗರಾಜು, ಮಾರ್ಚ್ 22ರ ಬಂದ್‌ಗೆ ಬೆಂಬಲ ನೀಡಲು ಕರೆ ಕೊಟ್ಟಿದ್ದೇವೆ ಎಂದರು.

ಬಂದ್ ಸಂಬಂಧ ತಮ್ಮ ಕೇಂದ್ರ ಕಚೇರಿಯಿಂದ ಕೈಗೊಳ್ಳಬೇಕಾದ ಮುನ್ನೆಚ್ಚರಿಕಾ ಕ್ರಮದ ಬಗ್ಗೆ ಯಾವುದೇ ನಿರ್ದೇಶನ ಬಂದಿಲ್ಲ ಎಂದು ಕೆಎಸ್‌ಆರ್‌ಟಿಸಿ ಮೈಸೂರು ನಗರ ಹಾಗೂ ಗ್ರಾಮಾಂತರ ವಿಭಾಗದ ವಿಭಾಗೀಯ ನಿಯಂತ್ರಕರು ತಿಳಿಸಿದ್ದಾರೆ.

ಖಾಸಗಿ ಬಸ್ ಮಾಲೀಕರು ನಾಳೆ ನಿಲುವು ಪ್ರಕಟಿಸಲು ನಿರ್ಧರಿಸಿದರೆ, ಲಾರಿ, ಟ್ರಕ್, ಲೋಡರ್ಸ್ ಅಸೋಸಿಯೇಷನ್ ನಿಂದಲೂ ನಿರ್ಧರಿಸಿಲ್ಲ ಎಂದು ಮೂಲಗಳು ತಿಳಿಸಿವೆ. ಶಾಲಾ–ಕಾಲೇಜು, ಸರ್ಕಾರಿ ಕಚೇರಿಗಳ ಸಂಬಂಧ ಸರ್ಕಾರದಿಂದ ಯಾವುದೇ ಸಂದೇಶ ರವಾನೆಯಾಗಿಲ್ಲ.

ಆದರೆ ಮಾರ್ಚ್ 22ರಂದು ಕರೆ ನೀಡಿರುವ ಬಂದ್ ಹಿನ್ನೆಲೆಯಲ್ಲಿ ಹೆಚ್ಚುವರಿ ಸಿಬ್ಬಂದಿಗಳನ್ನು ನಿಯೋಜಿಸಿ ಬಂದೋಬಸ್ತ್ ವ್ಯವಸ್ಥೆ ಮಾಡುವ ಮೂಲಕ ನಗರ ಮತ್ತು ಜಿಲ್ಲಾ ಪೊಲೀಸ್ ಘಟಕವು ಮುಂಜಾಗ್ರತಾ ಕ್ರಮ ಕೈಗೊಂಡಿದೆ.

ಪ್ರತಿಯೊಬ್ಬರಲ್ಲೂ ವಿಶೇಷ ಪ್ರತಿಭೆ ಇದೆ: ಅದನ್ನು ಬಳಸಿಕೊಳ್ಳಿ

ಜೆಎಸ್‌ಎಸ್ ಅಕಾಡೆಮಿ ಆಫ್ ಹೈಯರ್ ಎಜುಕೇಷನ್ ಅಂಡ್ ರಿಸರ್ಚ್ ಸಂಸ್ಥೆ ಕುಲಪತಿ ಡಾ.ಹೆಚ್.ಬಸವನಗೌಡಪ್ಪ ವಿದ್ಯಾರ್ಥಿಗಳಿಗೆ ಕಿವಿಮಾತು

ಮೈಸೂರು,ಮಾ.20(ಎಂಟಿವೈ)– ವಿದ್ಯಾರ್ಥಿಗಳು ಬದ್ಧತೆಯೊಂದಿಗೆ ವಿದ್ಯಾಭ್ಯಾಸ ಪೂರ್ಣಗೊಳಿಸಿ ಉತ್ತಮ ಉದ್ಯೋಗ ಗಿಟ್ಟಿಸಿಕೊಳ್ಳುವ ಗುರಿಯೊಂದಿಗೆ ಸಾಗಬೇಕು ಎಂದು ಜೆಎಸ್‌ಎಸ್ ಅಕಾಡೆಮಿ ಆಫ್ ಹೈಯರ್ ಎಜುಕೇಷನ್ ಅಂಡ್ ರಿಸರ್ಚ್ ಸಂಸ್ಥೆಯ ಕುಲಪತಿ ಡಾ.ಹೆಚ್. ಬಸವನಗೌಡಪ್ಪ ಸಲಹೆ ನೀಡಿದ್ದಾರೆ.

ಮೈಸೂರಿನ ಕಲಾಮಂದಿರದಲ್ಲಿ ನಡೆದ ಜೆಎಸ್‌ಎಸ್ ಮಹಿಳಾ ಪಾಲಿಟೆಕ್ನಿಕ್ ಸಂಸ್ಥೆಯ ವಿದ್ಯಾರ್ಥಿ ಸಂಘದ ವಾರ್ಷಿಕೋತ್ಸವ ಹಾಗೂ ಅಂತರರಾಷ್ಟ್ರೀಯ ಮಹಿಳಾ ದಿನಾಚರಣೆ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದ ಅವರು, ಶಾಲಾ–ಕಾಲೇಜು ವಿದ್ಯಾರ್ಥಿಗಳೇ ಭವಿಷ್ಯದ ಪ್ರಜೆಗಳಾಗಿರುವುದರಿಂದ ತಮ್ಮಲ್ಲಿರುವ ಪ್ರತಿಭೆಯನ್ನು ಅನಾವರಣಗೊಳಿಸಬೇಕಾಗಿದೆ. ಪ್ರತಿಯೊಬ್ಬರಲ್ಲೂ ವಿಶೇಷವಾದ ಪ್ರತಿಭೆ ಅಡಗಿದೆ. ಅದನ್ನು ಬಳಸಿಕೊಂಡು ಸಮಾಜಕ್ಕೆ ಕೊಡುಗೆ ನೀಡಬೇಕಾದರೆ ಪ್ರಮುಖ ಮೂರು ಅಂಶವನ್ನು ಅರಿತುಕೊಳ್ಳಬೇಕು. ಬದ್ಧತೆ, ಶಿಕ್ಷಣ, ಉದ್ಯೋಗ ಈ ಮೂರು ಜೀವನದಲ್ಲಿ ಪ್ರಮುಖ ಪಾತ್ರವಹಿಸುತ್ತದೆ. ವಿದ್ಯಾರ್ಥಿಗಳಲ್ಲಿ ಬದ್ಧತೆ ಇರಬೇಕು. ಅದರೊಂದಿಗೆ ಉತ್ತಮವಾದ ಸಂವಹನವೂ ಇರಬೇಕು. ಅದು ಸಮರ್ಪಕವಾಗಿಯೂ, ಪರಿಣಾಮಕಾರಿಯಾಗಿಯೂ ಇರಬೇಕು. ಸ್ಪರ್ಧಾತ್ಮಕ ಯುಗದಲ್ಲಿ ಯಾವುದೇ ಸವಾಲು ಎದುರಾದರೂ ಧೈರ್ಯದಿಂದ ಎದುರಿಸಬೇಕು. ಏಕೆಂದರೆ ಪ್ರತಿಯೊಂದೂ ಸವಾಲಿಗೂ ಉತ್ತರ ಇರುತ್ತದೆ. ಇದರೊಡನೆ ಶ್ರಮ ಪಡಬೇಕು. ಇದು ಕೇವಲ ವೈದ್ಯಕೀಯ ಕ್ಷೇತ್ರ ಮಾತ್ರವಲ್ಲ, ಎಲ್ಲ ಕ್ಷೇತ್ರಗಳಲ್ಲೂ ಸವಾಲುಗಳು ಎದುರಾಗುತ್ತಲೇ ಇರುತ್ತವೆ ಎಂದು ಅಭಿಪ್ರಾಯಪಟ್ಟರು.



ಮೈಸೂರಿನ ಕಲಾಮಂದಿರದಲ್ಲಿ ನಡೆದ ಜೆಎಸ್‌ಎಸ್ ಮಹಿಳಾ ಪಾಲಿಟೆಕ್ನಿಕ್ ಸಂಸ್ಥೆಯ ವಿದ್ಯಾರ್ಥಿ ಸಂಘದ ವಾರ್ಷಿಕೋತ್ಸವ ಹಾಗೂ ಅಂತರರಾಷ್ಟ್ರೀಯ ಮಹಿಳಾ ದಿನಾಚರಣೆ ಕಾರ್ಯಕ್ರಮದಲ್ಲಿ ಜೆಎಸ್‌ಎಸ್ ಅಕಾಡೆಮಿ ಆಫ್ ಹೈಯರ್ ಎಜುಕೇಷನ್ ಅಂಡ್ ರಿಸರ್ಚ್ ಸಂಸ್ಥೆಯ ಕುಲಪತಿ ಡಾ.ಹೆಚ್.ಬಸವನಗೌಡಪ್ಪ ಕಿರುಹೊತ್ತಿಗೆ ಬಿಡುಗಡೆ ಮಾಡಿದರು.

ಯಾವುದೇ ಕೆಲಸವನ್ನೂ ಹತಾಶೆಯಿಂದ ಕೈ ಬಿಡಬಾರದು. ನಿಮ್ಮ ಮೂಲ ಮರೆಯಬಾರದು. ನಿಮ್ಮ ಪೋಷಕರು ನಿಮಗಾಗಿ ತ್ಯಾಗ ಮಾಡಿದ್ದಾರೆ. ನಿಮ್ಮ ಶಿಕ್ಷಕರು, ಶಿಕ್ಷಣ ಸಂಸ್ಥೆಗಳು ಸಹ ನಿಮಗಾಗಿ ಶ್ರಮಿಸಿವೆ. ಇದೇ ವೇಳೆ ಜನರಿಗೆ ಧನ್ಯವಾದ ಹೇಳುವುದನ್ನು (ಥ್ಯಾಂಕ್ಸ್) ಮರೆಯಬೇಡಿ ಎಂದರು.

ಮಹಿಳೆಯರನ್ನು ಗೌರವಿಸಬೇಕು: ಜಗತ್ತಿನಾದ್ಯಂತ ಹಲವಾರು ಮಹಿಳೆಯರು ಸಾಕಷ್ಟು ಸಾಧನೆ ಮಾಡಿದ್ದಾರೆ. ಇವರನ್ನು ಗೌರವಿಸೋಣ. ಲಿಂಗ ಅನುಪಾತ ಸಹ ಬದಲಾಗುತ್ತಿದೆ. ಯುವತಿಯರು ಯುವಕರನ್ನು ಹಿಂದಿಕ್ಕುತ್ತಿದ್ದಾರೆ. ಇದಕ್ಕೆ ಈ ಶಿಕ್ಷಣ ಸಂಸ್ಥೆಯಲ್ಲಿ ವಿದ್ಯಾರ್ಥಿನಿಯರ ಸಂಖ್ಯೆ ಹೆಚ್ಚಾಗುತ್ತಿರುವುದೂ ಉದಾಹರಣೆಯಾಗಿದೆ. ಮಹಿಳೆಯರು ಅತೀ ಹೆಚ್ಚು ತಾಳ್ಮೆ, ಸಾಮರ್ಥ್ಯ ಹೊಂದಿದ್ದು, ಸಮಾಜಕ್ಕೆ ಕೊಡುಗೆ ನೀಡುತ್ತಿದ್ದಾರೆ. ಗಗನಯಾತ್ರಿ ಸುನೀತಾ ವಿಲಿಯಮ್ಸ್ 9 ತಿಂಗಳು ಬಾಹ್ಯಾಕಾಶದಲ್ಲಿದ್ದರು. ಅವರು ಯಾವಾಗ ವಾಪಸು ಬರುತ್ತಾರೆ ಎಂಬುದೇ ಅನಿಶ್ಚಿತವಾಗಿತ್ತು. ಇವರು ತಮ್ಮ ಉತ್ತಮ ಜೀವನವನ್ನು ತ್ಯಾಗ ಮಾಡಿ ಸಮಾಜಕ್ಕೆ, ಜಗತ್ತಿಗೆ ಕೊಡುಗೆ ನೀಡಿದಮಾಗಿದ್ದಾರೆ ಹೀಗಾಗಿ ಮಹಿಳೆಯರನ್ನು ಗೌರವಿಸಬೇಕು ಎಂದು ಸಲಹೆ ನೀಡಿದರು.

ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದ ಸಂಸ್ಕೃತಿ ಚಿಂತಕ ಶಂಕರ ದೇವನೂರು ಮಾತನಾಡಿ, ಮಹಿಳೆಯರು ಅವಕಾಶಗಳನ್ನು ಕಲ್ಪಿಸಿಕೊಂಡು ಕಠಿಣ ಪರಿಶ್ರಮದೊಂದಿಗೆ ಯಶಸ್ಸುಗಳಿಸಬೇಕು. ಸಾಧನೆಗೆ ಅತ್ಯಂತ ಅವಶ್ಯವಾದದ್ದು ಛಲ. ಹೆಣ್ಣು ಮಕ್ಕಳು ಓದಿನ ಛಲ ರೂಢಿಸಿಕೊಳ್ಳಬೇಕು. ಪಾಸ್ ಆದರೆ ಕಾಲೇಜು, ಫೇಲ್ ಆದರೆ ಮ್ಯಾರೇಜ್ ಎಂಬ ಮಾತಿದೆ. ಹಾಗೇ ಆಯ್ಕೆ ನಿಮ್ಮ ಕೈಯ್ಯಲ್ಲಿದೆ. ಸಾಧನೆಯ ಕನಸುಗಳನ್ನು ಕಟ್ಟಿ ನನಸು ಮಾಡಿಕೊಳ್ಳಬೇಕು. ಇದಕ್ಕಾಗಿ ಕಠಿಣ ಪರಿಶ್ರಮ ಹಾಕಬೇಕು. ಚಂದ್ರಯಾನ ಉಡಾವಣೆ ಯಶಸ್ವಿಗೊಳಿಸಿ ಜಗತ್ತನ್ನು ಮೆರುಗುಗೊಳಿಸಿದ ವಿಜ್ಞಾನಿಗಳಲ್ಲಿ ಎಂ.ವಿ.ರೂಪಾ ಒಬ್ಬರು. ಇವರು ಜೆಎಸ್‌ಎಸ್ ಇಂಜಿನಿಯರಿಂಗ್ ಕಾಲೇಜಿನಲ್ಲಿ ಓದಿದವರು. ಸಾಧನೆ ಮನಸ್ಸಿದ್ದರೆ ಅಸಾಧ್ಯವಾದದ್ದು ಯಾವುದೂ ಇಲ್ಲ. ಅವಕಾಶಗಳನ್ನು ಸೃಷ್ಟಿಸಿಕೊಳ್ಳಬೇಕು ಎಂದರು.

ಕಾರ್ಯಕ್ರಮದಲ್ಲಿ ಕಾಲೇಜಿನ ವಿದ್ಯಾರ್ಥಿಗಳಿಂದ ಸಾಂಸ್ಕೃತಿಕ ಕಾರ್ಯಕ್ರಮ ನಡೆಯಿತು. ಹಾಡು, ನೃತ್ಯಕ್ಕೆ ನೆರೆದಿದ್ದವರು ಮನಸೋತರು. ಜೆಎಸ್‌ಎಸ್ ಅಕಾಡೆಮಿ ಆಫ್ ಹೈಯರ್ ಎಜುಕೇಷನ್ ಅಂಡ್ ರಿಸರ್ಚ್‌ನ ಕುಲಪತಿ ಡಾ.ಎಚ್.ಬಸವನಗೌಡಪ್ಪ ಕಾಲೇಜಿನ ಪ್ರಾಂಶುಪಾಲ ಎನ್.ಬಿ. ಲೋಕೇಶ್, ವಿದ್ಯಾರ್ಥಿ ಕ್ಷೇಮಪಾಲನ ಅಧಿಕಾರಿ ವಿ.ಮೀರಾ, ಸ್ಟೂಡೆಂಟ್ ಯೂನಿಯನ್ ಮಾಜಿ ಅಧ್ಯಕ್ಷರಾದ ಸ್ಫೂರ್ತಿ, ಕಾರ್ಯದರ್ಶಿ ಕೆ.ಜೆ.ಮಯೂರಿ ಉಪಸ್ಥಿತರಿದ್ದರು.





AROHANA CENTRAL SCHOOL

Affiliated to CBSE, Delhi, Affiliation No. 831494

TEACHERS REQUIRED

We are seeking qualified and experienced Teachers for our CBSE - Affiliated School in Somanathapura.

We invite committed, inspiring and skilled Teachers to attend walk-in interview at our school premises on 24/03/2025 at 11.00am. Interested candidates are required to bring necessary documents.

Sl. No.	Subject	Qualification	No.of Vacancy
1	Montessori Teachers	Any Degree with NTT, NST	05
2	Primary Teachers for all Subjects	Any Degree with B.Ed.,	10
3	Computer Science Teacher	BCA, MCA, Dip. in Computer Science	02
4	Art & Craft Teacher	Degree / Diploma in Fine Art	01
5	Physical Education Teachers	B.P.Ed., / M.P.Ed.,	02
6	Secondary Teachers for All subjects	Degree with B.Ed.,	06
7	Marketing Manager / Office Executive	BBM, BBA	01

Requirement : • Fluency in English is mandatory

Please note that : • Pick-up and drop facilities provided within fixed distance.
• Discount on staff child tuition fees.
• ESI & EPFO Facilities

Contact us for more information : 88844 42124 / 88844 42125 / 08227-276009
Email : arohanacentralschool@gmail.com

Secretary

ನಗರಸಭಾ ಕಾರ್ಯಾಲಯ, ಹುಣಸೂರು, ಮೈಸೂರು ಜಿಲ್ಲೆ – 571105

E-mail : itstaff_ulb_hunsur@yahoo.co.in ಫೋನ್: 08222–252048

ಸಂ:ಹುನಕಾ/ತಾಂತ್ರಿಕ ಶಾಖೆ/ಜೆಇ–02/ಟೆಂ–10/2024–25 ದಿನಾಂಕ: 17.03.2025

ಟೆಂಡರ್ ಪ್ರಕಟಣೆ ಕರೆ–03 (ಕೆ.ಪಿ.ಪಿ.ಪಿ ಪೋರ್ಟಲ್ ಮುಖಾಂತರ)

ಹುಣಸೂರು ನಗರಸಭಾ ವ್ಯಾಪ್ತಿಯಲ್ಲಿ ಈ ಕೆಳಕಂಡ ಕಾಮಗಾರಿಯನ್ನು ಲೋಕೋಪಯೋಗಿ ಇಲಾಖೆಯಲ್ಲಿ ಚಾಲ್ತಿ ಸಾಲಿಗೆ ನೊಂದಾಯಿತ ಅರ್ಹ ಗುತ್ತಿಗೆದಾರರಿಂದ KW-1ರ ನಿಯಮಗಳ ಅನ್ವಯ ಹಾಗೂ 1999 ಹಾಗೂ 2000ರ ಪಾರದರ್ಶಕ ಕಾಯ್ದೆಗೆ ಒಳಪಟ್ಟು ಪ್ರತ್ಯೇಕವಾಗಿ ಕೆಪಿಪಿಪಿ ಪೋರ್ಟಲ್ ಮುಖಾಂತರ ಟೆಂಡರ್‌ರನ್ನು ಆಹ್ವಾನಿಸಲಾಗಿದೆ. ಆಸಕ್ತಿಯುಳ್ಳ ಅರ್ಹಗುತ್ತಿಗೆದಾರರು https://kppp.karnataka.gov.in ನಿಂದ ಟೆಂಡರ್ ಷರತ್ತು, ಇಎಂಡಿ ವಿವರ ಹಾಗೂ ದಸ್ತಾವೇಜನ್ನು ಡೌನ್ ಲೋಡ್ ಮಾಡಿಕೊಂಡು ಆನ್‌ಲೈನ್ ಮುಖಾಂತರ ಟೆಂಡರ್‌ಗಳನ್ನು ಸಲ್ಲಿಸಬಹುದು. ಕಾಮಗಾರಿಯ ಇಂಡೆಂಟ್ ಸಂಖ್ಯೆ: DMA/2023-24/OW/WORK_INDENT 34402/CALL-2 ಅಂದಾಜು ಮೊತ್ತ ರೂ.17.40 ಲಕ್ಷಗಳು ಮತ್ತು ಇಂಡೆಂಟ್ ಸಂಖ್ಯೆ DMA/2023-24/OW/WORK_INDENT 37230 ಅಂದಾಜು ಮೊತ್ತ ರೂ.6.45 ಲಕ್ಷಗಳು ಟೆಂಡರ್ ಆಕ್ಷೇಪಣೆಗಳನ್ನು ಸಲ್ಲಿಸುವ ಮತ್ತು ಟೆಂಡರ್ ಫಾರಂ ಡೌನ್ ಲೋಡ್ ಮಾಡಿಕೊಳ್ಳುವ ಹಾಗೂ ಭರ್ತಿ ಮಾಡಿದ ಟೆಂಡರ್‌ನ್ನು ಸಲ್ಲಿಸುವ ಕಡೆಯ ದಿ: 02.04.2025 ಹಾಗೂ ಟೆಂಡರ್ ತೆರೆಯುವ ದಿ 03.04.2025 ಹೆಚ್ಚಿನ ಮಾಹಿತಿ, ಕಾಮಗಾರಿ ನಿಭಂದನೆ ಹಾಗೂ ಷರತ್ತುಗಳಿಗೆ ಕಛೇರಿಯ ವೇಳೆಯಲ್ಲಿ ಈ ಕಛೇರಿಯ ತಾಂತ್ರಿಕ ಶಾಖೆಯನ್ನು ಸಂಪರ್ಕಿಸುವುದು.

ಸೂಚನೆ: ಕಾರಣಾಂತರಗಳಿಂದ ಮೇಲೆ ತಿಳಿಸಿದ ಟೆಂಡರ್ ದಿನಾಂಕಗಳು ಹಾಗೂ ಇತರೆ ಬದಲಾವಣೆಗಳಾದಲ್ಲಿ ದಿನಪತ್ರಿಕೆಗಳಲ್ಲಿ ಪ್ರಕಟಿಸಲಾಗುವುದಿಲ್ಲ. ಇ–ಪ್ರಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ ಸೂಚಿಸಲಾಗುವುದು. ಹೆಚ್ಚಿನ ವಿವರಗಳನ್ನು ಗುತ್ತಿಗೆದಾರರು https://kppp.karnataka.gov.in ಪೋರ್ಟಲ್‌ನಲ್ಲಿ ನೋಡಿಕೊಳ್ಳುವುದು.

(ಶ್ರೀ.ಎಸ್.ಶರವಣ) ಅಧ್ಯಕ್ಷರು,ನಗರಸಭೆ,ಹುಣಸೂರು. (ಶ್ರೀಮತಿ.ಹೆಚ್.ಡಿ.ಆಶಾ ಕೃಷ್ಣನಾಯಕ) ಉಪಾಧ್ಯಕ್ಷರು,ನಗರಸಭೆ,ಹುಣಸೂರು. (ಶ್ರೀಮತಿ.ಮಾನಸ.ಎಂ) ಪೌರಾಯುಕ್ತರು,ನಗರಸಭೆ,ಹುಣಸೂರು.

DIPR-DD-MYS/1467/KSMCA-1092/2024-25

ROSEPETAL Mysore

Presents an
EXHIBITION & SALE OF GEM STONES BEADS JEWELLERY

21st to 23rd March 2025

Time: 11 AM to 7.30 PM

At ROSEPETALS, # 225, 8th Main, A Block, Vijayanagar 3rd Stage, Mysore (Near Sangam Circle)

Avail WOMEN'S DAY & UGADI Festival Discount
Call: 94807 04775

For Tasty & Healthy Ice Cream Making Classes
Call: 94807 04775

ಭಾವಪೂರ್ಣ ಶ್ರದ್ಧಾಂಜಲಿ

ಪಿ.ಧನಶೇಖರ್

ನಂಜನಗೂಡು ಶಿವಜ್ಯೋತಿಘಟದ ಶ್ರೀ ಶನೇಶ್ವರ ಸ್ವಾಮಿ ಸೇವಾ ಸಂಸ್ಥೆಯ ಸದಸ್ಯರು ಆಗಿದ್ದ ಪಿ.ಧನಶೇಖರ್ ರವರು ದಿನಾಂಕ 11.3.2025ರಂದು ವಿಧಿವಶರಾಗಿರುತ್ತಾರೆ. ಆತ್ಮೀಯ ಧನಶೇಖರ್ ರವರ ಅಗಲಿಕೆಯಿಂದ ನಮಗೆಲ್ಲ ತುಂಬಾ ನೋವಾಗಿದೆ ಮತ್ತು ಅವರ ಕುಟುಂಬದವರಿಗೆ ಈ ದುಃಖ ಮರೆಸುವ ಶಕ್ತಿಯನ್ನು ಶ್ರೀ ಶನೇಶ್ವರ ಸ್ವಾಮಿ ನೀಡಲಿ.

ದುಃಖತಪ್ತರು: ಎಂ.ಶಿವಣ್ಣ, ಅಧ್ಯಕ್ಷರು ಹಾಗೂ ಪದಾಧಿಕಾರಿಗಳು ಶಿವಜ್ಯೋತಿ ಘಟದ ಶ್ರೀಶನೇಶ್ವರ ಸೇವಾ ಸಂಸ್ಥೆ, ನಂಜನಗೂಡು

69 projects

Designing your Dreams

SRINIVASAN LAYOUT

NEAR RING-ROAD R T Nagar
AVAILABLE PLOTS

PREMIUM & CORNER SITES

FOR MORE INFORMATION
8055-00-4400
8088-70-7707

ಉತ್ತರ ಕ್ರಿಯಾದಿ ಆಹ್ವಾನ

ನಿಧನ: 11–03–2025
ಉತ್ತರ ಕ್ರಿಯಾದಿ
ದಿ: 21–03–2025, ಶುಕ್ರವಾರ ಸಂಜೆ 4.30 ರಿಂದ 6
ಸ್ಥಳ: **ಸ್ವಗೃಹ,** ಬಂಚಳ್ಳಿಹುಂಡಿ ನಂಜನಗೂಡು ತಾ॥

ಲೇ॥ ಬಸವೇಗೌಡರ ಪತ್ನಿ
ಶ್ರೀಮತಿ ಸಾಕಮ್ಮ
ಲೇ॥ ದೊಡ್ಡಿವಿ ಮಾಲೇಗೌಡರ ಪುತ್ರಿ ಹಾಗೂ **ಬಿ.ಬಸವಣ್ಣ** (ಪಿಎಸಿಸಿ ಬ್ಯಾಂಕ್ ಮಾಜಿ ಅಧ್ಯಕ್ಷರು) ಇವರ ತಾಯಿ

ದುಃಖತಪ್ತರು: ಮಕ್ಕಳು, ಅಳಿಯಂದಿರು, ಸೊಸೆಯಂದಿರು ಮೊಮ್ಮಕ್ಕಳು, ಮರಿ ಮೊಮ್ಮಕ್ಕಳು, ಅಪಾರ ಬಂಧುವರ್ಗ, ಹಾಗೂ ಗ್ರಾಮಸ್ಥರು

ಭೋಜನ: ಸಂಜೆ 7.30ಕ್ಕೆ ಹರಿಕಥೆ : ರಾತ್ರಿ 9ಕ್ಕೆ

ಪ್ಲಾಸ್ಟಿಕ್ ಬಳಕೆ ನಿಷೇಧಿಸಿ ಪರಿಸರವನ್ನು ಕಾಪಾಡಿ

HIRING

Graphic Designer and Social Media Marketing Expert

8884001233
9620546347

ಮೈಸೂರು ಮಿತ್ರ 45
ಓದುಗರ ಗಮನಕ್ಕೆ

ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತು ಲೋಪ ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.

–ಜಾಹೀರಾತು ವ್ಯವಸ್ಥಾಪಕರು

WANTED

PART TIME
COOKS - 6pm to Close
WAITERS - 6pm to Close

Contact
BOPYS BAR & Restaurant
Near Aishwarya Petrol Bunk, Vijayanagar, Hunsur Road, Mysore

ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮ

ಚಾಮರಾಜನಗರ ವಿಭಾಗ, ಚಾಮರಾಜನಗರ

ಸಂಖ್ಯೆ: ಕರಾಸಾ/ಚಾನವಿ/ಸಂ/ವಾಣಿಜ್ಯ/2254/2024–25 ದಿ: 19.03.2025

ಇ–ಟೆಂಡರ್ / ಸಂಧಾನ ಪ್ರಕಟಣೆ ಸಂಖ್ಯೆ: 06/2024–25

ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮ, ಚಾಮರಾಜನಗರ ವಿಭಾಗದ ವ್ಯಾಪ್ತಿಯ ಚಾಮರಾಜನಗರ, ಗುಂಡ್ಲುಪೇಟೆ ಮತ್ತು ಕೊಳ್ಳೇಗಾಲ ನಗರಸಭೆಯ ಕೊಳ್ಳೇಗಾಲ ಕ.ರಾ.ರ.ಸಾ. ನಿಗಮ ಬಸ್ ನಿಲ್ದಾಣದ ಖಾಲಿಯಿರುವ ಮತ್ತು ಖಾಲಿಯಾಗಲಿರುವ ವಾಣಿಜ್ಯ ಸ್ಥಳಗಳಾದ ಶಾಶ್ವತ ಮಳಿಗೆಯಲ್ಲಿ ವಾಣಿಜ್ಯ ವ್ಯವಹಾರ ನಡೆಸಲು ಆಸಕ್ತ ಅರ್ಜಿದಾರರನ್ನು ಪರವಾನಗಿದಾರರನ್ನಾಗಿ ಆಯ್ಕೆ ಮಾಡುವ ಸಲುವಾಗಿ ಮತ್ತು ವಿಭಾಗದ ವ್ಯಾಪ್ತಿಯ ಬಸ್ ನಿಲ್ದಾಣಗಳಲ್ಲಿ ಖಾಲಿ ಇರುವ ಜಾಹೀರಾತು ಹೋರ್ಡಿಂಗ್ಸ್‌ಗಳಿಗೆ ಆಸಕ್ತ ಅರ್ಜಿದಾರರನ್ನು ಆಯ್ಕೆ ಮಾಡಲು ಇ–ಟೆಂಡರ್ / ಸಂಧಾನ ಪ್ರಕಟಣೆ ಸಂ. 06/2024–25 ದಿನಾಂಕ: 19.03.2025 ಅನ್ನು ಹೊರಡಿಸಲಾಗಿದೆ.

ಶಾಶ್ವತ ಮಳಿಗೆಗಳು ಐದು (05) ವರ್ಷಗಳ ಅವಧಿಗೆ ಎಲ್ಲದೆಯೋ ಹಾಗೂ ಯಾವ ಸ್ಥಿತಿಯಲ್ಲಿದೆಯೋ ಹಾಗೆಯೆ ಇರುವ ಆಧಾರದ ಮೇಲೆ ಪರವಾನಗಿಯನ್ನು ಇ–ಟೆಂಡರ್ ಮತ್ತು ಸಂಧಾನ ಮುಖಾಂತರ ನೀಡಲಾಗುವುದು. ಇ–ಟೆಂಡರ್ / ಸಂಧಾನದಲ್ಲಿ ಭಾಗವಹಿಸಲು ಇಚ್ಛಿಸುವ ಅರ್ಜಿದಾರರು ಷರತ್ತು ಹಾಗೂ ನಿಬಂಧನೆಗಳನ್ನು ಖಚಿತಪಡಿಸಿಕೊಂಡು ಭಾಗವಹಿಸಲು ತಿಳಿಸಿದೆ.

1. ಸಂಧಾನ ಅರ್ಜಿ ಪಡೆಯಲು ಕೊನೆಯ ದಿನಾಂಕ : 12.04.2025 ಮಧ್ಯಾಹ್ನ ಸಮಯ: 01.00 ಗಂಟೆಯವರೆಗೆ.
2. ಸಂಧಾನ ಅರ್ಜಿ & ಇ.ಎಂ.ಡಿ ಡಿ.ಡಿ ಸಲ್ಲಿಸಲು ದಿನಾಂಕ: 15.04.2025 ಸಮಯ: 16.00 ಗಂಟೆಯವರೆಗೆ.
3. ಸಂಧಾನ ಸಭೆಯ ದಿನಾಂಕ: 17.04.2025 ಸಮಯ: 12.30 ಗಂಟೆಯಿಂದ.

1. ಇ–ಟೆಂಡರ್ ವಿಚಾರಣೆಗೆ ಕೊನೆಯ ದಿನಾಂಕ : 11.04.2025 ಸಮಯ: 16.00 ಗಂಟೆಯವರೆಗೆ.
2. ಇ–ಟೆಂಡರ್‌ಗೆ ಆನ್‌ಲೈನ್‌ನಲ್ಲಿ ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ : 12.04.2025 ಸಮಯ: 16.00 ಗಂಟೆಯವರೆಗೆ.
3. ಅರ್ಜಿದಾರರು ಇ–ಟೆಂಡರ್‌ಗಾಗಿ ಕಛೇರಿಯಲ್ಲಿ ಮೂಲ ಇ.ಎಂ.ಡಿ, ಡಿ.ಡಿ ಮತ್ತು ಇತರೆ ಅಗತ್ಯ ದಾಖಲಾತಿಗಳನ್ನು ಸಲ್ಲಿಸಲು ಕೊನೆಯ ದಿನಾಂಕ: 15.04.2025 ಸಮಯ: 16:00 ಗಂಟೆಯವರೆಗೆ.
4. ಇ–ಟೆಂಡರ್ ತಾಂತ್ರಿಕ ಬಿಡ್ ತೆರೆಯುವ ದಿನಾಂಕ : 15.04.2025 ಸಮಯ: 16.30 ಗಂಟೆಗೆ.
5. ಇ–ಟೆಂಡರ್ ಆರ್ಥಿಕ ಬಿಡ್ ತೆರೆಯುವ ದಿನಾಂಕ : 17.04.2025 ಸಮಯ: ಬೆಳಿಗ್ಗೆ 11.00 ಗಂಟೆಗೆ.

ಹೆಚ್ಚಿನ ವಿವರಗಳಿಗೆ ವಿಭಾಗೀಯ ಕಛೇರಿ, ಕ.ರಾ.ರ.ಸಾ. ನಿಗಮ, ಚಾಮರಾಜನಗರ ವಿಭಾಗ (ಸಂಚಾರ ಶಾಖೆ) ರವರನ್ನು ಸಂಪರ್ಕಿಸಲು ಕೋರಲಾಗಿದೆ. (ದೂ:– 7760990302, 7760990311, 8123714362).

ಸಹಿ/–
ವಿಭಾಗೀಯ ನಿಯಂತ್ರಣಾಧಿಕಾರಿ
ಕರಾರಸಾ ನಿಗಮ, ಚಾಮರಾಜನಗರ ವಿಭಾಗ

ವಾ.ಸಾ.ಸಂ.ಇ/ವಾಪ್ರ/5809/ಆಕಾರ್/2024–25

ಶ್ರೀ ಕೃಷ್ಣರಾಜೇಂದ್ರ ಸಹಕಾರ ಬ್ಯಾಂಕ್ ನಿಯಮಿತ

ಸ್ಥಾಪನೆ: 1919 ಫೋ: 2520894, 4259665

ಎನ್.ಮಾಧವರಾವ್ ವೃತ್ತ (ಅಗ್ರಹಾರ), ಮೈಸೂರು

ಚಿನ್ನಾಭರಣ ಸಾಲದ ಮೇಳ

ದಿನಾಂಕ: 01–03–2025 ರಿಂದ 31–03–2025 ರವರೆಗೆ
(Without Processing Fees) ನಿರ್ವಹಣಾ ಶುಲ್ಕ ಇರುವುದಿಲ್ಲ

ಸದಸ್ಯರು ಮತ್ತು ಸದಸ್ಯೇತರರಿಗೆ ಚಿನ್ನಾಭರಣಗಳ ಮೇಲೆ ಬಡ್ಡಿದರ 75 ಪೈಸೆಯಂತೆ ಗ್ರಾಂ.ಗೆ ರೂ.6000/–ರಂತೆ ಶೀಘ್ರವಾಗಿ ಸಾಲ ನೀಡಲಾಗುತ್ತಿದೆ.

(ವ್ಯವಹಾರದ ವೇಳೆ: ಬೆಳಿಗ್ಗೆ 9.30 ರಿಂದ ಮಧ್ಯಾಹ್ನ 1 ರವರೆಗೆ ಸಂಜೆ 5 ರಿಂದ 7.30 ರವರೆಗೆ)

ಠೇವಣಿಗಳ ಮೇಲೆ ಗರಿಷ್ಠ 7.5% (ಹಿರಿಯ ನಾಗರಿಕರಿಗೆ 8%) ರಂತೆ ಬಡ್ಡಿಯನ್ನು ನೀಡಲಾಗುತ್ತಿದೆ. ಗ್ರಾಹಕರು ಸದುಪಯೋಗಪಡಿಸಿಕೊಳ್ಳಬೇಕಾಗಿ ಕೋರಲಾಗಿದೆ.

ಡಿ.ಬಸವರಾಜು (ಬಸಪ್ಪ) ಅಧ್ಯಕ್ಷರು | ಹೆಚ್.ಎನ್.ಸರ್ವಮಂಗಳ ಉಪಾಧ್ಯಕ್ಷರು | ಡಿ.ಅನಂತವೀರಪ್ಪ ಪ್ರ.ವ್ಯವಸ್ಥಾಪಕರು

ನಿರ್ದೇಶಕರುಗಳಾದ: ನಂಸಿದ್ದಪ್ಪ, ಜಿ.ಎಂ.ಪಂಚಾಕ್ಷರಿ, ಹೆಚ್.ವಿ.ಭಾಸ್ಕರ್, ಎಂ.ಡಿ.ಪಾರ್ಥಸಾರಥಿ, ಪ್ರತಿಧ್ವನಿಪ್ರಸಾದ್, ಟಿ.ವಿ.ಗಣೇಶಮೂರ್ತಿ, ಶ್ರೀಮತಿ ಬಿ.ನಾಗಜ್ಯೋತಿ, ಎಂ.ಎನ್.ನವೀನ್ ಕುಮಾರ್, ಎಂ.ಎಸ್.ಅರುಣ್ ಸಿದ್ದಪ್ಪ, ಹೆಚ್.ವಾಸು, ಎಂ.ಶಿವಪ್ರಕಾಶ್

